ಗುರುವಾರ, ಸೆಪ್ಟೆಂಬರ್ 4, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 245 | ಪುಟ 14
prajavani.net prajavani www.prajavani.net
ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಅಭಿಮನ್ಯುಗೆ ಭಾರ

ನಾಡಹಬ್ಬ ದಸರಾ ಮಹೋತ್ಸವ ಅಂಗವಾಗಿ ಅಂಬಾರಿ ಆನೆ 'ಅಭಿಮನ್ಯು'ಗೆ ಭಾರ ಹೊರಿಸುವ ತಾಲೀಮಿಗೂ ಮುನ್ನ ಬುಧವಾರ ಮಾವುತರು ನಮ್ದಾ ಗಾದಿ (ಮೆತ್ತನೆ ಹಾಸಿಗೆ) ಕಟ್ಟಿದರು

ಬಸ್ ಕೊಡುಗೆ

ಚೆನ್ನೈ ಮೂಲದ ಆಟೊಮೊಬೈಲ್ ಕಂಪನಿಯೊಂದು ₹1.3 ಕೋಟಿ ಮೌಲ್ಯದ ವಿದ್ಯುತ್ ಚಾಲಿತ ಬಸ್‌ಅನ್ನು ಬುಧವಾರ ತಿರುಪತಿ ಟ್ರಸ್ಟ್‌ಗೆ ಕೊಡುಗೆಯಾಗಿ ನೀಡಿದೆ

ಸೆನ್ಸೆಕ್ಸ್ 80,567 | ನಿಫ್ಟಿ 24,715 | $/₹ 88.02 | ಚಿನ್ನ (Std. 10g) ₹1,11,000 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,30,400 (ಬೆಂಗಳೂರು)

ಜಿಎಸ್‌ಟಿ ಕಡಿತ: ದಸರಾ ಉಡುಗೊರೆ

ವಿಮೆಗೆ ವಿನಾಯಿತಿ: ಹೊಸ ತೆರಿಗೆ ದರಗಳು ಸೆಪ್ಟೆಂಬರ್ 22ರಿಂದ ಜಾರಿಗೆ

ನವದೆಹಲಿ(ಪಿಟಿಐ): ಹೇರ್ ಆಯಿಲ್‌ನಿಂದ ಸೇರಿದಂತೆ ಕಾರ್ನ್‌ಫ್ಲೇಕ್ಸ್, ಟಿವಿ ಸೆಟ್‌ಗಳಿಂದ ಹಿಡಿದು ಆರೋಗ್ಯ ಮತ್ತು ಜೀವ ವಿಮೆ ಪಾಲಿಸಿ ವರೆಗಿನ ಸಾಮಾನ್ಯ ಜನರು ಬಳಸುವ ವಸ್ತುಗಳ ಮೇಲಿನ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ದರಗಳನ್ನು ಪರಿಷ್ಕರಿಸುವ ಮಹತ್ವದ ನಿರ್ಧಾರವನ್ನು ಜಿಎಸ್‌ಟಿ ಮಂಡಳಿ ಬುಧವಾರ ತೆಗೆದುಕೊಂಡಿದೆ.

ಅವಧಿ ವಿಮೆ, ಯುಲಿಪ್ ಅಥವಾ ಎಂಡೋಮೆಂಟ್ ಪಾಲಿಸಿ ಸೇರಿ ವೈಯಕ್ತಿಕ ಜೀವ ವಿಮೆ ಮತ್ತು ಆರೋಗ್ಯ ವಿಮೆ ಪಾಲಿಸಿಗಳ ಪ್ರೀಮಿಯಮ್‌ಗೆ ಜಿಎಸ್‌ಟಿಯಿಂದ ಸಂಪೂರ್ಣ ವಿನಾಯಿತಿ ನೀಡಲಾಗಿದೆ. ಹೆಚ್ಚು ಜನರಿಗೆ ವಿಮಾ ಸೌಲಭ್ಯ ತಲುಪಲಿ ಎಂಬ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ.

ಫ್ಯಾಮಿಲಿ ಫ್ಲೋಟರ್ ಪಾಲಿಸಿಗಳು, ಹಿರಿಯ ನಾಗರಿಕರ ಆರೋಗ್ಯ ವಿಮೆ ಪಾಲಿಸಿಗಳ ಪ್ರೀಮಿಯಂಗಳಿಗೆ ಜಿಎಸ್‌ಟಿಯಿಂದ ವಿನಾಯಿತಿ ನೀಡಲಾಗಿದೆ. 2017ರಲ್ಲಿ ಈ ತೆರಿಗೆ ವ್ಯವಸ್ಥೆ ಜಾರಿಗೆ ಬಂದಾಗಿನಿಂದ ಈ ವಿಮಾ ಉತ್ಪನ್ನಗಳ ಪ್ರೀಮಿಯಂ ಮೇಲೆ ಶೇ 18ರಷ್ಟು ಜಿಎಸ್‌ಟಿ ವಿಧಿಸಲಾಗುತ್ತಿತ್ತು.

ಜಿಎಸ್‌ಟಿ ವ್ಯವಸ್ಥೆಯ ಅಡಿಯಲ್ಲಿ ಈಗ ಇರುವ ನಾಲ್ಕು ತೆರಿಗೆ ಹಂತಗಳನ್ನು ಎರಡು ಹಂತಗಳಿಗೆ ತಗ್ಗಿಸುವ ಪ್ರಸ್ತಾವಕ್ಕೆ ಮಂಡಳಿಯು ಒಪ್ಪಿಗೆ ನೀಡಿದೆ.

ಜಿಎಸ್‌ಟಿ ಮಂಡಳಿ ಸಭೆಯಲ್ಲಿ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಮತ್ತು ರೆವೆನ್ಯೂ ಕಾರ್ಯದರ್ಶಿ ಅರವಿಂದ ಶ್ರೀವಾಸ್ತವ ಪಾಲ್ಗೊಂಡರು —ಪಿಟಿಐ ಚಿತ್ರ

ಈ ಎರಡು ತೆರಿಗೆ ಹಂತಗಳ (ಶೇ 5 ಮತ್ತು ಶೇ 18) ಹೊಸ ವ್ಯವಸ್ಥೆಯು ನವರಾತ್ರಿಯ ಮೊದಲ ದಿನವಾದ ಸೆಪ್ಟೆಂಬರ್ 22ರಿಂದ ಜಾರಿಗೆ ಬರಲಿದೆ. ಈ ಮೂಲಕ ದೇಶದ ಜನರಿಗೆ ಕೇಂದ್ರ ಸರ್ಕಾರ ದಸರಾ ಭರ್ಜರಿ ಉಡುಗೊರೆ ನೀಡಿದೆ.

ಮಂಡಳಿ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ವಿವರಣೆ ನೀಡಿದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, 'ಜಿಎಸ್‌ಟಿ ದರ ಪರಿಷ್ಕರಣೆ ಕುರಿತಂತೆ ಸರ್ವಾನುಮತದ ನಿರ್ಣಯ ಕೈಗೊಳ್ಳಲಾಗಿದೆ. ಯಾವ ರಾಜ್ಯವೂ ಭಿನ್ನಾಭಿಪ್ರಾಯ ವ್ಯಕ್ತಪಡಿಸಿಲ್ಲ' ಎಂದರು.

> **ಜಿಎಸ್‌ಟಿ ಕಡಿತದ ಲಾಭ ಸಾಮಾನ್ಯ ವ್ಯಕ್ತಿಗೂ ಸಿಗುವಂತೆ ವಿಮಾ ಕಂಪನಿಗಳು ಕ್ರಮ ತೆಗೆದುಕೊಳ್ಳಬೇಕು. ವಿಮೆ ಕೈಗೆಟುಕುವಂತೆ ಮಾಡಿ, ಹೆಚ್ಚು ಜನರಿಗೆ ತಲುಪಿಸಬೇಕು**
>
> **ನಿರ್ಮಲಾ ಸೀತಾರಾಮನ್,** ಕೇಂದ್ರ ಹಣಕಾಸು ಸಚಿವೆ

▶8

ಎರಡು ಹಂತದ ತೆರಿಗೆ ವ್ಯವಸ್ಥೆ

- ದಿನನಿತ್ಯದ ಬಳಕೆಯ ಆಹಾರ ಪದಾರ್ಥಗಳಿಗೆ ಜಿಎಸ್‌ಟಿ ಇಲ್ಲ.
- ಬೆಣ್ಣೆ, ತುಪ್ಪ, ಒಣಹಣ್ಣುಗಳು, ಸಾಂದ್ರೀಕರಿಸಿದ ಹಾಲು, ಸಾಸುಯೇಜ್, ಮಾಂಸ, ಸಕ್ಕರೆ ಮಿಠಾಯಿಗಳು, ಜಾಮ್, ಹಣ್ಣಿನ ಜೆಲ್ಲಿಗಳು, ಎಳನೀರು, ಕರಿದ ಪದಾರ್ಥಗಳು, 20 ಲೀ. ಬಾಟಲುಗಳಲ್ಲಿ ಸಂಗ್ರಹಿಸಿರುವ ಕುಡಿಯುವ ನೀರು, ಹಣ್ಣಿನ ತಿರುಳು ಅಥವಾ ಹಣ್ಣಿನ ರಸ, ಐಸ್‌ಕ್ರೀಂ, ಪೇಸ್ಟ್ರಿ, ಬಿಸ್ಕತ್ತುಗಳು, ಕಾರ್ನ್‌ಫ್ಲೇಕ್ಸ್‌ಗಳ ಮೇಲೆ ಈಗಿರುವ ಶೇ 18ರಷ್ಟು ಜಿಎಸ್‌ಟಿಯನ್ನು ಶೇ 5ಕ್ಕೆ ಇಳಿಸಲಾಗುತ್ತದೆ
- ಎಲ್ಲ ಬಗೆಯ ಚಪಾತಿ ಮತ್ತ ಪರಾಠಗಳಿಗೆ ಯಾವುದೇ ತೆರಿಗೆ ಇಲ್ಲ. ಈ ಮೊದಲು ಇವುಗಳ ಮೇಲೆ ಶೇ 5ರಷ್ಟು ತೆರಿಗೆ ಇತ್ತು
- ಟೂತ್‌ಪೌಡರ್, ಹಾಲುಣಿಸಲು ಬಳಸುವ ಬಾಟಲ್‌ಗಳು, ಅಡುಗೆ ಮನೆ ಸಲಕರಣೆಗಳು, ಬಂಬೂವಿನಿಂದ ತಯಾರಿಸಿದ ಫರ್ನಿಚರ್, ಹಣಿಗೆಗಳ ಮೇಲಿನ ಶೇ 12ರ ತೆರಿಗೆಯನ್ನು ಶೇ 5ಕ್ಕೆ ಇಳಿಸಲಾಗುತ್ತದೆ
- ಶಾಂಪೂ, ಟಾಲ್ಕಮ್ ಪೌಡರ್, ಟೂತ್‌ಪೇಸ್ಟ್, ಟೂತ್‌ಬ್ರಶ್, ಫೇಸ್ ಪೌಡರ್, ಸೋಪು, ಹೇರ್ ಆಯಿಲ್ ಮೇಲೆ ಶೇ 18ರ ಬದಲು ಶೇ 5ರಷ್ಟು ತೆರಿಗೆ ವಿಧಿಸಲಾಗುವುದು
- ಸಿಮೆಂಟ್‌ಗೆ ಈಗಿನ ಶೇ 28ರ ಬದಲು ಶೇ 18ರಷ್ಟು ತೆರಿಗೆ
- 1,200 ಸಿ.ಸಿಗಿಂತ ಕಡಿಮೆ ಸಾಮರ್ಥ್ಯದ ಹಾಗೂ 4 ಸಾವಿರ ಎಂ.ಎಂಗಿಂತ ಹೆಚ್ಚು ಉದ್ದ ಇರದ ಪೆಟ್ರೋಲ್, ಎಲ್‌ಪಿಜಿ ಹಾಗೂ ಸಿಎನ್‌ಜಿ ವಾಹನಗಳ ಮೇಲಿನ ಶೇ 28ರಷ್ಟು ತೆರಿಗೆ ಶೇ18ಕ್ಕೆ ಇಳಿಕೆ
- 1,500 ಸಿ.ಸಿ ವರೆಗಿನ ಹಾಗೂ 4 ಸಾವಿರ ಎಂ.ಎಂ ಉದ್ದದ ಡಿಸೇಲ್ ವಾಹನಗಳಿಗೂ ಶೇ 18ರಷ್ಟು ತೆರಿಗೆ. ಸದ್ಯ ಇವುಗಳ ಮೇಲೆಯೂ ಶೇ 28ರಷ್ಟು ತೆರಿಗೆ ಇದೆ
- 1,200 ಸಿ.ಸಿ ಗಿಂತ ಹೆಚ್ಚು ಸಾಮರ್ಥ್ಯದ ಪೆಟ್ರೋಲ್ ಕಾರುಗಳು, 1,500 ಸಿ.ಸಿಗಿಂತ ಅಧಿಕ ಸಾಮರ್ಥ್ಯದ ಡಿಸೇಲ್ ಕಾರುಗಳಿಗೆ ಶೇ 40ರಷ್ಟು ತೆರಿಗೆ
- 350 ಸಿ.ಸಿ ವರೆಗಿನ ಮೋಟರ್‌ಸೈಕಲ್‌ಗಳು, ಏರ್ ಕಂಡಿಷನರ್‌ಗಳು, ಡಿಷ್ ವಾಶರ್‌ಗಳು, ಟಿ.ವಿ ಸೇರಿದಂತೆ ಗ್ರಾಹಕ ಬಳಕೆಯ ಎಲೆಕ್ಟ್ರಾನಿಕ್ಸ್ ಸರಕುಗಳ ಮೇಲಿನ ಶೇ 28ರಷ್ಟು ತೆರಿಗೆಯನ್ನು ಶೇ18ಕ್ಕೆ ಇಳಿಸಲಾಗುವುದು

▶8

ಮೀಸಲಾತಿಗಾಗಿ ಹೋರಾಟ

ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.

ಕರ್ನಾಟಕ ಅಸ್ಪೃಶ್ಯ ಅಲೆಮಾರಿ ಸಮುದಾಯಗಳ ಮಹಾ ಒಕ್ಕೂಟ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಆಯೋಜಿಸಿದ್ದ ಪ್ರತಿಭಟನೆಯಲ್ಲಿ 'ಅಲೆಮಾರಿ ಸಮುದಾಯಗಳಿಗೆ ಶೇಕಡ 1ರಷ್ಟು ಪ್ರತ್ಯೇಕ ಒಳ ಮೀಸಲಾತಿ' ನೀಡುವಂತೆ ಹೋರಾಟಗಾರರು ಆಗ್ರಹಿಸಿದರು

ವರದಿ ಪುಟ ▶4A

ದೂರುದಾರ ಮತ್ತೆ ಎಸ್‌ಐಟಿ ವಶಕ್ಕೆ

ಧರ್ಮಸ್ಥಳ: ಮೃತದೇಹ ಹೂತು ಹಾಕಿದ ಆರೋಪದ ಪ್ರಕರಣ

ಪ್ರಜಾವಾಣಿ ವಾರ್ತೆ

ಮಂಗಳೂರು: ಧರ್ಮಸ್ಥಳ ಬೆಳವಣಿಗೆ ಕುರಿತ ಸಾಕ್ಷಿ ದೂರುದಾರನನ್ನು ಬೆಳ್ತಂಗಡಿಯ ಜೆಎಂಎಫ್‌ಸಿ ನ್ಯಾಯಾಲಯವು ಇದೇ 6ರವರೆಗೆ ವಿಶೇಷ ತನಿಖಾ ತಂಡದ (ಎಸ್‌ಐಟಿ) ವಶಕ್ಕೆ ಒಪ್ಪಿಸಿದೆ. ಸಾಕ್ಷಿ ದೂರುದಾರನನ್ನು ಎಸ್‌ಐಟಿ ಅಧಿಕಾರಿಗಳು ಬುಧವಾರ ಕೋರ್ಟ್‌ಗೆ ಹಾಜರುಪಡಿಸಿದ್ದರು. ಹೆಚ್ಚಿನ ವಿಚಾರಣೆಗೆ ಮತ್ತಷ್ಟು ದಿನ ವಶಕ್ಕೆ ಒಪ್ಪಿಸುವಂತೆ ಸರ್ಕಾರಿ ವಕೀಲರು ಬೇಡಿಕೆ ಸಲ್ಲಿಸಿದರು.

'ಸಾಕ್ಷಿ ದೂರುದಾರನ ಇನ್ನಷ್ಟು ವಿಚಾರಣೆ ಅಗತ್ಯ ಇದೆ ಎಂಬ ಕೋರಿಕೆ ಮನ್ನಿಸಿದ ನ್ಯಾಯಾಲಯವು ಸೆ. 6ರವರೆಗೆ ಆತನನ್ನು ನಮ್ಮ ವಶಕ್ಕೆ ಒಪ್ಪಿಸಿತು' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಬಳಿಕ ಸಾಕ್ಷಿ ದೂರುದಾರನನ್ನು ಅಧಿಕಾರಿಗಳು ಬೆಳ್ತಂಗಡಿಯ ಎಸ್‌ಐಟಿ ಕಚೇರಿಗೆ ಕರೆದೊಯ್ದರು. ಕೋರ್ಟ್‌ಗೆ ಕರೆತರುವಾಗ, ಕರೆದೊಯ್ಯುವಾಗ ಮುಖಕ್ಕೆ ಮುಸುಕು ಹಾಕಲಾಗಿತ್ತು.

▶5

ಮೈಸೂರಿನ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡರ ನೇತೃತ್ವದಲ್ಲಿ ಭಕ್ತರು ಧರ್ಮಸ್ಥಳಕ್ಕೆ ಬುಧವಾರ ಯಾತ್ರೆ ಕೈಗೊಂಡರು

ಉದಯ್ ಜೈನ್ ಸಹಿತ ಹಲವರ ಹೇಳಿಕೆ ದಾಖಲು

ಧರ್ಮಸ್ಥಳದ ರಿಕ್ಷಾ ಚಾಲಕ ಉದಯ್ ಜೈನ್ ಸೇರಿದಂತೆ ಅನೇಕರು ಎಸ್‌ಐಟಿಯ ಬೆಳ್ತಂಗಡಿ ಕಚೇರಿಗೆ ಬುಧವಾರ ಹಾಜರಾಗಿ ಹೇಳಿಕೆ ದಾಖಲಿಸಿದರು. ಸುದ್ದಿಗಾರರ ಜೊತೆ ಮಾತನಾಡಿದ ಉದಯ್ ಜೈನ್ 'ಕಚೇರಿಗೆ ಹಾಜರಾಗುವಂತೆ ಅಧಿಕಾರಿಯೊಬ್ಬರು ದೂರವಾಣಿ ಕರೆ ಮಾಡಿದ್ದರು. ಯಾವ ಪ್ರಕರಣದ ವಿಚಾರಣೆಗೆ ಕರೆದಿದ್ದಾರೆ ಎಂದು ಗೊತ್ತಿಲ್ಲ' ಎಂದರು. ಉದಯ್ ಹೆಸರು ಸೌಜನ್ಯಾ ಪ್ರಕರಣದಲ್ಲಿ ತಳಕು ಹಾಕಿಕೊಂಡಿತ್ತು.

ಸೌಜನ್ಯಾ ಹತ್ಯೆ ತನಿಖೆ ಇಲ್ಲ: 'ಸೌಜನ್ಯಾ ಹತ್ಯೆ ಪ್ರಕರಣದ ತನಿಖೆಯನ್ನು ನಾವು ಕೈಗೆತ್ತಿಕೊಳ್ಳುತ್ತಿಲ್ಲ. ಆ ಪ್ರಕರಣದಲ್ಲಿ ಕೋರ್ಟ್ ಈಗಾಗಲೇ ತೀರ್ಪು ನೀಡಿದೆ' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಗುಂಡು ಹೊಡೆದು ಗ್ರಾ.ಪಂ ಮಾಜಿ ಅಧ್ಯಕ್ಷನ ಕೊಲೆ

ಪ್ರಜಾವಾಣಿ ವಾರ್ತೆ

ವಿಜಯಪುರ: ಜಿಲ್ಲೆಯ ಚಡಚಣ ತಾಲ್ಲೂಕು ದೇವರನಿಂಬರಗಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಭೀಮನಗೌಡ ಬಿರಾದಾರ (40) ಅವರನ್ನು ದುಷ್ಕರ್ಮಿಗಳು ಗುಂಡು ಹಾರಿಸಿ, ಕೊಲೆ ಮಾಡಿದ್ದಾರೆ.

ಭೀಮನಗೌಡ ಕ್ಷೌರ ಅಂಗಡಿಗೆ ಹೋಗಿದ್ದಾಗ ಅಲ್ಲಿ ನುಗ್ಗಿದ ಆರೋಪಿಗಳು, ಕಣ್ಣಿಗೆ ಖಾರದಪುಡಿ ಎರಚಿ, ನಾಡ ಪಿಸ್ತೂಲಿನಿಂದ 3–4 ಸುತ್ತು ಗುಂಡುಹಾರಿಸಿದರು' ಎಂದು ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ತಿಳಿಸಿದರು.

ಭೀಮನಗೌಡ ಬಿರಾದಾರ

'ಪ್ರಕರಣ ಸಂಬಂಧ ಗ್ರಾಮದ ವಾಸಿಂ ಮಣಿಯಾರ, ರಝಿವುಲ್ಲಾ ಮಕಾಂದರ್, ಮೌಲಸಾಬ ಬೋರಗಿ ಮತ್ತು ಫಿರೋಜ ಶೇಖ್ ಅವರಾದ ಎಂಬವರನ್ನು ಬಂಧಿಸಲಾಗಿದೆ' ಎಂದು ತಿಳಿಸಿದರು.

▶4A

ಸರ್ಕಾರಿ ಹುದ್ದೆಗಳಿಗೆ ಆಯ್ಕೆಗೆ 'ಪರಿಷ್ಕೃತ ಮೀಸಲಾತಿ ರೋಸ್ಟರ್' ಪ್ರಕಟ

ನೇಮಕಾತಿಗೆ ಇನ್ನು 'ಒಳ ಮೀಸಲು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಜಾರಿಗೆ ಬಂದಿರುವ ಕಾರಣ, ಸರ್ಕಾರಿ ಹುದ್ದೆಗಳಿಗೆ ನಡೆಯುವ ನೇರ ನೇಮಕಾತಿಯ ವೇಳೆ ಅನುಸರಿಸಬೇಕಾದ 'ಪರಿಷ್ಕೃತ ಮೀಸಲಾತಿ ರೋಸ್ಟರ್' ನಿಗದಿಪಡಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಪರಿಶಿಷ್ಟ ಜಾತಿಗಳಲ್ಲಿರುವ 101 ಜಾತಿಗಳನ್ನು ಪ್ರವರ್ಗ 'ಎ', 'ಬಿ', 'ಸಿ' ಎಂದು 3 ಪ್ರವರ್ಗಗಳಾಗಿ ವರ್ಗೀಕರಿಸಿ, ಲಭ್ಯ ಶೇಕಡ 17 ಮೀಸಲಾತಿಯನ್ನು ಶಿಕ್ಷಣ ಮತ್ತು ಉದ್ಯೋಗದಲ್ಲಿ ಎಡಗೈ ಸಂಬಂಧಿತ ಜಾತಿಗಳಿರುವ ಪ್ರವರ್ಗ 'ಎ'ಗೆ ಶೇ 6, ಬಲಗೈ ಸಂಬಂಧಿತ ಜಾತಿಗಳಿರುವ ಪ್ರವರ್ಗ 'ಬಿ'ಗೆ ಶೇ 6 ಮತ್ತು ಸ್ಪೃಶ್ಯ ಮತ್ತು ಅಲೆಮಾರಿ ಜಾತಿಗಳಿರುವ 'ಸಿ' ಪ್ರವರ್ಗಕ್ಕೆ ಶೇ 5ರಂತೆ ಒಳ ಮೀಸಲಾತಿ ಹಂಚಿಕೆ ಮಾಡಿ ಆದೇಶ ಹೊರಡಿಸಲಾಗಿತ್ತು.

ಒಳ ಮೀಸಲಾತಿ ಹಂಚಿಕೆ ಆದೇಶಕ್ಕೆ ಅನುಗುಣವಾಗಿ, ಒಟ್ಟು 100 ರೋಸ್ಟರ್ ಬಿಂದುಗಳಲ್ಲಿ ಪರಿಶಿಷ್ಟ ಜಾತಿಗಳಿಗೆ ಗುರುತಿಸಿದ 17 ಬಿಂದುಗಳನ್ನು 'ಪ್ರವರ್ಗವಾರು' ಎ, ಬಿ ಮತ್ತು ಸಿ ಬಿಂದುಗಳೆಂದು ನಿಗದಿಪಡಿಸಿ ಬುಧವಾರ ಆದೇಶ ಹೊರಡಿಸಲಾಗಿದೆ.

▶4B



ಶಾಸಕ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ನನ್ನ ಕುರಿತು ಅವಹೇಳನಕಾರಿಯಾಗಿ ಮಾತನಾಡಿದ್ದಾರೆ' ಎಂದು ಆರೋಪಿಸಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಅವರು ಹರಿಹರದ ಬಿಜೆಪಿ ಶಾಸಕ ಬಿ.ಪಿ. ಹರೀಶ್ ವಿರುದ್ಧ ಇಲ್ಲಿನ ಕೆಟಿಜೆ ನಗರ ಪೊಲೀಸ್ ಠಾಣೆಯಲ್ಲಿ ಬುಧವಾರ ದೂರು ನೀಡಿದ್ದಾರೆ.

ಬಿ.ಪಿ.ಹರೀಶ್

'ದೂರು ಆಧರಿಸಿ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಸೆಕ್ಷನ್ 79 (ಮಹಿಳೆಯ ಮಾನಕ್ಕೆ ಕುಂದುಂಟು ಮಾಡುವುದು) ಹಾಗೂ 132 (ಸರ್ಕಾರಿ ನೌಕರರ ಕರ್ತವ್ಯಕ್ಕೆ ಅಡ್ಡಿ) ಅಡಿಯಲ್ಲಿ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ.

'ಶಾಮನೂರು ಕುಟುಂಬದವರು ಒಂದು ಗಂಟೆ ತಡವಾಗಿ ಭೇಟಿಯಾದರೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಾಯಿಯ ರೀತಿಯಲ್ಲಿ ಅವರ ಬಾಗಿಲಿನಲ್ಲಿ ಕಾಯುತ್ತಾರೆ' ಎಂದು ಶಾಸಕ ಬಿ.ಪಿ. ಹರೀಶ್ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಟೀಕಿಸಿದ್ದರು.

'ಶಾಸಕರು ಸಭೆ– ಸಮಾರಂಭಗಳಿಗೆ ಬಂದರೆ ಎಸ್‌ಪಿ ಮುಖ ತಿರುಗಿಸಿಕೊಂಡು ಕುಳಿತಿರುತ್ತಾರೆ. ಶಾಮನೂರು ಮನೆತನದವರು ಬಂದರೆ ನಾಯಿ ರೀತಿ ನಡೆದುಕೊಳ್ಳುತ್ತಾರೆ' ಎಂದು ಆರೋಪಿಸಿದ್ದರು.

'ಸಮಸ್ಯೆ ಆದರೆ ಹೆರಿಗೆ ಮಾಡಿಸಿಕೊಡುವೆ...' ಪತ್ರಕರ್ತೆ ಪ್ರಶ್ನೆಗೆ ದೇಶಪಾಂಡೆ ಉತ್ತರ

ಕಾರವಾರ: ಉತ್ತರಕನ್ನಡ ಜಿಲ್ಲೆಯಲ್ಲಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಸ್ಥಾಪನೆ ಕುರಿತ ಪತ್ರಕರ್ತೆಯೊಬ್ಬರು ಕೇಳಿದ ಪ್ರಶ್ನೆಗೆ ರಾಜ್ಯ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ.ದೇಶಪಾಂಡೆ ನೀಡಿದ ಪ್ರತಿಕ್ರಿಯೆಗೆ ಆಕ್ಷೇಪ ವ್ಯಕ್ತವಾಗಿದೆ. 'ಆಸ್ಪತ್ರೆ ಸ್ಥಾಪನೆಗೆ ಕ್ರಮವಹಿಸುತ್ತೀರಾ? ಹೆರಿಗೆಗೂ ಸಮಸ್ಯೆ ಇದೆ' ಎಂದು ಪತ್ರಕರ್ತೆಯು ಸೆ. 1ರಂದು ಜೊಯಿಡಾ ತಾಲ್ಲೂಕಿನ ಸೂಪಾ ಜಲಾಶಯದ ಬಳಿ ದೇಶಪಾಂಡೆ ಅವರು ಸುದ್ದಿಗಾರರ ಜೊತೆ ಮಾತನಾಡುವಾಗ ಪ್ರಶ್ನಿಸಿದ್ದರು.

ಇದಕ್ಕೆ 'ನಿನಗೆ ಹೆರಿಗೆಗೆ ಸಮಸ್ಯೆಯಾದರೆ ಹಳಿಯಾಳದಲ್ಲಿ ಹೆರಿಗೆ ಮಾಡಿಸಿಕೊಡುವೆ' ಎಂದು ದೇಶಪಾಂಡೆ ಪ್ರತಿಕ್ರಿಯಿಸಿದರು. ಸದ್ಯ, ಈ ಕುರಿತ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೆ ಆಗುತ್ತಿದೆ.

ಕ್ಷಮೆಗೆ ಆಗ್ರಹ

ಬೆಂಗಳೂರು: 'ಹೆರಿಗೆ ಆಸ್ಪತ್ರೆ ಕಟ್ಟಿಸುವ ಬಗ್ಗೆ ಪತ್ರಕರ್ತೆ ಕೇಳಿದ ಪ್ರಶ್ನೆಗೆ ಆರ್.ವಿ.ದೇಶಪಾಂಡೆ ಅವರು, 'ನಿನಗೆ ಹೆರಿಗೆ ಆಗುವಾಗ ಕಟ್ಟಿಸುತ್ತೇನೆ' ಎಂದಿರುವುದು ಅತ್ಯಂತ ಬೇಜವಾಬ್ದಾರಿಯುತ ಹೇಳಿಕೆ. ಅವರು ಕ್ಷಮೆ ಕೇಳಬೇಕು' ಎಂದು ಕರ್ನಾಟಕ ಪತ್ರಕರ್ತೆಯರ ಸಂಘವು ಆಗ್ರಹಿಸಿದೆ.

ಪತ್ರಿಕಾ ಪ್ರಕಟಣೆ ನೀಡಿರುವ ಸಂಘವು, 'ಆರ್.ವಿ.ದೇಶಪಾಂಡೆ ಅವರು ಹಿರಿಯರಾಗಿ, ಮಾಜಿ ಸಚಿವರಾಗಿ, ಜವಾಬ್ದಾರಿಯುತ ಸ್ಥಾನದಲ್ಲಿ ಇದ್ದುಕೊಂಡು ಇಂತಹ ಉಡಾಫೆಯ ಹೇಳಿಕೆ ನೀಡಬಾರದಾಗಿತ್ತು. ಸಮಾಜದ ಪರವಾಗಿ ಪ್ರಶ್ನೆಯನ್ನು ಎತ್ತಿದ ಪತ್ರಕರ್ತೆಗೆ ಜವಾಬ್ದಾರಿಯಿಂದ ಉತ್ತರಿಸಬೇಕಿತ್ತು. ಅವರ ಈ ನಡೆಯನ್ನು ಸಂಘವು ತೀವ್ರವಾಗಿ ಖಂಡಿಸುತ್ತದೆ' ಎಂದಿದೆ.

▶4B

ಅಶ್ಲೀಲ ಮಾತು–ಕಾನ್‌ಸ್ಟೆಬಲ್ ಸೆರೆ

ಮೂಡುಬಿದಿರೆ (ದಕ್ಷಿಣ ಕನ್ನಡ): ದೂರುದಾರ ಮಹಿಳೆಗೆ ಪದೇ ಪದೇ ಕರೆ ಮಾಡಿ ಅಶ್ಲೀಲವಾಗಿ ಮಾತನಾಡಿದ್ದ ಮೂಡುಬಿದಿರೆ ಠಾಣೆ ಕಾನ್‌ಸ್ಟೆಬಲ್ ಒಬ್ಬರನ್ನು ಅದೇ ಠಾಣೆ ಪೊಲೀಸರು ಬಂಧಿಸಿದ್ದಾರೆ.

▶4B

ಚಿನಕುರುಳಿ ಪ್ರಕಾಶ್ ಶೆಟ್ಟಿ



ಉಕ್ಕು ಸಚಿವಾಲಯದ ಅಧಿಕಾರಿಗಳೊಂದಿಗೆ ಎಚ್‌ಡಿಕೆ ಚರ್ಚೆ

ವಿಐಎಸ್‌ಎಲ್ ಮರುಜೀವಕ್ಕೆ ಡಿಪಿಆರ್

ಪ್ರಜಾವಾಣಿ ವಾರ್ತೆ

ನವದೆಹಲಿ: ಭದ್ರಾವತಿಯ ಸರ್. ಎಂ. ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ ಪುನರುಜ್ಜೀವನಗೊಳಿಸಲು ಕೇಂದ್ರ ಉಕ್ಕು ಸಚಿವಾಲಯವು ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಿದೆ.

ಎಚ್.ಡಿ. ಕುಮಾರಸ್ವಾಮಿ

ಕಾಲಮಿತಿಯೊಳಗೆ ಉಕ್ಕು ಕಾರ್ಖಾನೆ ಪುನರುಜ್ಜೀವನಗೊಳಿಸಲು ಕೇಂದ್ರ ಉಕ್ಕು ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಸಚಿವಾಲಯದ ಉನ್ನತ ಅಧಿಕಾರಿಗಳೊಂದಿಗೆ ಬುಧವಾರ ಇಲ್ಲಿ ಸಭೆ ನಡೆಸಿದರು. ಕಾರ್ಖಾನೆಯನ್ನು ಹಂತ ಹಂತವಾಗಿ ಆಧುನೀಕರಣಗೊಳಿಸುವ ಬಗ್ಗೆ ಚರ್ಚಿಸಲಾಯಿತು.

ಕಾರ್ಖಾನೆಗೆ ಹೊಸ ರೂಪ ನೀಡಲು ₹15 ಸಾವಿರ ಕೋಟಿ ಬೇಕಾಗಲಿದೆ ಎಂದು ಅಂದಾಜಿಸಲಾಗಿದೆ.

ಕಾರ್ಖಾನೆಯು (ವಿಐಎಸ್‌ಎಲ್) ಸಂಡೂರಿನ ರಾಮಗಢ ಅರಣ್ಯ ವಲಯದಲ್ಲಿ ಗಣಿ ಪಡೆಯಲು ಪ್ರಯತ್ನ ನಡೆಸಿದೆ. ಒಂದು ವೇಳೆ ಈ ಗಣಿ ಲಭ್ಯವಾಗದಿದ್ದರೆ ಜಾರ್ಖಂಡ್ ಅಥವಾ ಛತ್ತೀಸಗಢದಿಂದ ಎನ್‌ಎಂಡಿಸಿಯ ಅದಿರು ಪಡೆಯುವ ಬಗ್ಗೆಯೂ ಸಮಾಲೋಚನೆ ನಡೆಸಲಾಯಿತು.

ವಿಸ್ತೃತ ಯೋಜನಾ ವರದಿಯನ್ನು ನೀತಿ ಆಯೋಗ ಪರಿಶೀಲನೆ ನಡೆಸಲಿದೆ. ಬಳಿಕ ಪ್ರಧಾನಿ ಸಚಿವಾಲಯ ಪರಾಮರ್ಶೆ ನಡೆಸಲಿದೆ. ಆ ನಂತರ, ಕಾರ್ಖಾನೆಯ ಪುನರುಜ್ಜೀವನದ ಪ್ಯಾಕೇಜ್‌ಗೆ ಕೇಂದ್ರ ಸಚಿವ ಸಂಪುಟದಿಂದ ಅನುಮೋದನೆ ಸಿಗಬೇಕಿದೆ.

ವಿಐಎಸ್‌ಎಲ್ ಖಾಸಗೀಕರಣ ಮಾಡಲು ಕೇಂದ್ರ ಸಚಿವ ಸಂಪುಟವು 2016ರಲ್ಲಿ ಅನುಮೋದನೆ ನೀಡಿತ್ತು. ಸಂಸ್ಥೆಯನ್ನು ಸಂಪೂರ್ಣವಾಗಿ ಮಾರಾಟ ಮಾಡಲು ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣಾ ಇಲಾಖೆಯು (ಡಿಐಪಿಎಎಂ) ಈ ಹಿಂದೆ ಬಿಡ್ ಆಹ್ವಾನಿಸಿತ್ತು. ಬಿಡ್‌ದಾರರು ಆಸಕ್ತಿ ವಹಿಸದ ಕಾರಣಕ್ಕೆ ಕಾರ್ಖಾನೆಯನ್ನು ಖಾಸಗೀಕರಣ ಮಾಡುವ ಪ್ರಕ್ರಿಯೆಯನ್ನು ಕೇಂದ್ರ ಸರ್ಕಾರ 2022ರ ನವೆಂಬರ್‌ನಲ್ಲಿ ಕೈಬಿಟ್ಟಿತ್ತು. ನಂತರ ಸರ್ಕಾರವು ಕಾರ್ಖಾನೆಯನ್ನು ಮುಚ್ಚುವ ಪ್ರಕ್ರಿಯೆ ಆರಂಭಿಸಿತ್ತು. ಕೇಂದ್ರ ಉಕ್ಕು ಸಚಿವವಾಗಿ ಅಧಿಕಾರ ಸ್ವೀಕರಿಸಿದ ಬೆನ್ನಲ್ಲೇ ಕುಮಾರಸ್ವಾಮಿ, ಸಂಸ್ಥೆಯ ಪುನರುಜ್ಜೀವನದ ಸಾಧ್ಯಾಸಾಧ್ಯತೆಗಳ ಪರಿಶೀಲನೆ ನಡೆಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದರು. ವರ್ಷಾಂತ್ಯದೊಳಗೆ ಕಾರ್ಖಾನೆಯ ಪುನರುಜ್ಜೀವನಕ್ಕೆ ಪ್ರಧಾನಿ ನರೇಂದ್ರ ಮೋದಿ ಅಡಿಗಲ್ಲು ಹಾಕಲಿದ್ದಾರೆ ಎಂದು ಕುಮಾರಸ್ವಾಮಿ ಈ ಹಿಂದೆ ಹೇಳಿದ್ದರು



ಹೃದಯಾಘಾತವು ನಿಮ್ಮ ಕುಟುಂಬವನ್ನು ಕೆಡಿಸದಿರಲಿ?

ಇಂದು ಸರಳವಾದ ತಪಾಸಣೆ ನಾಳೆಯ ನೋವುಗಳಿಂದ ರಕ್ಷಿಸಬಹುದು!

ವಿಶ್ವ ಹೃದಯ ದಿನದ ವಿಶೇಷ!

65%

ವರೆಗೆ ಉಳಿತಾಯ
ಹೃದಯ ಆರೋಗ್ಯ ಪ್ಯಾಕೇಜುಗಳಲ್ಲಿ

Offer Valid Upto 7th September 2025

Free Smart Report

Heart Health Basic — 60% OFF

77 Tests

Core Heart Panel

- Lipid Profile — Assess Cholesterol and triglyceride levels
- Apolipoprotein B — Measures bad cholesterol accurately
- Hs CRP — Detects inflammation (silent risk factor)

Full-Body Wellness

- Sugar(F), HbA1c
- Kidney Function Tests (Urea, Creatinine, Uric Acid)
- Thyroid Function Tests
- Liver Function Tests
- Complete Blood Count
- Complete Urine Analysis

P11083

Free Home Collection Available

~~₹3750~~ ₹1500

Heart Health Advanced — 65% OFF

82 Tests

All Tests in Heart Health Basic
+

- CT Calcium Scoring — For Heart attack risk
- PFT — For Lungs function test
- ECG — For Heart rhythm abnormalities
- Xray - Chest
- Blood pressure Check

P11084

~~₹12857~~ ₹4500

ಉದ್ಘಾಟನಾ ಆಫರ್

ಮಹಾ ಉದ್ಘಾಟನೆ

Sugar	~~₹80~~ ₹20	Lipid Profile	~~₹750~~ ₹99
Thyroid	~~₹500~~ ₹99	HbA1c	~~₹650~~ ₹99

ಉದ್ಘಾಟನಾ ಆಫರ್ (ಕೇವಲ ಹೊಸ ಶಾಖೆಗಳಲ್ಲಿ ಮಾತ್ರ)

ಇನ್ಫ್ಯಾಂಟ್ರಿ ರೋಡ್ (ಶಿವಾಜಿನಗರ) · ವೈಟ್‌ಫೀಲ್ಡ್ · ಬನ್ನೇರ್ಘಟ್ಟ ರಸ್ತೆ · ಯಶವಂತಪುರ

1.7 ಕೋಟಿಗೂ ಹೆಚ್ಚು ಜನರ ವಿಶ್ವಾಸ

70224 70224

Cashless Facility for CGHS & ECHS

ಜಯ ನಗರ · ಇಂದಿರಾ ನಗರ · ರಾಜಾಜಿನಗರ · ಪದ್ಮನಾಭ ನಗರ · ಕೋರಮಂಗಲ
ಮಾರತಹಳ್ಳಿ · ಜೆಪಿ ನಗರ · ಕೆ.ಆರ್ . ಪುರಂ · ಹೆಬ್ಬಾಳ · ಇನ್ ಪ್ಯಾಂಟ್ರಿ ರೋಡ್ (ಶಿವಾಜಿನಗರ)
ಹೆಣ್ಣೂರು · ನಾಗರಭಾವಿ · ವೈಟ್ ಫೀಲ್ಡ್ · ಬನ್ನೇರುಘಟ್ಟ ರಸ್ತೆ · ಯಲಹಂಕ

For Franchise Enquiry - 99401 10520

ಆರ್ತಿ ಸ್ಕ್ಯಾನ್ಸ್ & ಲ್ಯಾಬ್ಸ್
Ethical & Affordable Diagnostics

ಬೆಂಗಳೂರು ಮುಂಬೈ ನವ ದೆಹಲಿ ಚೆನ್ನೈ ಹೈದರಾಬಾದ್ ಕೋಲ್ಕತ್ತಾ ಗುರ್ಗಾಂವ್ ಪುಣೆ ಅಹಮದಾಬಾದ್ ತಿರುವನಂತಪುರ ಪಾಂಡಿಚೇರಿ

ಅಂದ ಕಳೆದುಕೊಳ್ಳುತ್ತಿರುವ ಕಲಾಕೃತಿಗಳು

ವೆಂಕಟಪ್ಪ ಚಿತ್ರಶಾಲೆಯಲ್ಲಿನ ಅಪರೂಪದ ಕಲಾಕೃತಿಗಳ ಮೇಲೆ ಶಿಲೀಂಧ್ರ • ಹವಾನಿಯಂತ್ರಣ ವ್ಯವಸ್ಥೆ ಅಳವಡಿಕೆ ಬಳಿಕ ಸಮಸ್ಯೆ

• ವರುಣ ಹೆಗಡೆ

ಬೆಂಗಳೂರು: ವೆಂಕಟಪ್ಪ ಚಿತ್ರಶಾಲೆಯಲ್ಲಿರುವ ಲಕ್ಷಾಂತರ ರೂಪಾಯಿ ಮೌಲ್ಯದ ಅಪರೂಪದ ಕೆ.ವೆಂಕಟಪ್ಪ ಹಾಗೂ ಕೆ.ಕೆ. ಹೆಬ್ಬಾರ್ ಅವರ ವರ್ಣ ಕಲಾಕೃತಿಗಳ ಮೇಲೆ ಶಿಲೀಂಧ್ರ ಕಾಣಿಸಿಕೊಳ್ಳುತ್ತಿದೆ. ಇದರಿಂದಾಗಿ ಈ ಕಲಾಕೃತಿಗಳು ಅಂದ ಕಳೆದುಕೊಳ್ಳುತ್ತಿದ್ದು, ಕಲಾ ಪ್ರಪಂಚದಿಂದ ದೂರವಾಗುವ ಬಗ್ಗೆ ಕಲಾವಿದರ ವಲಯದಲ್ಲಿ ಕಳವಳ ವ್ಯಕ್ತವಾಗಿದೆ.

ಕಸ್ತೂರಬಾ ರಸ್ತೆಯಲ್ಲಿರುವ ಈ ಚಿತ್ರಶಾಲೆಯು ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿದೆ. 'ಸ್ಮಾರಕ ದತ್ತು' ಯೋಜನೆಯಡಿ ಬ್ರಿಗೇಡ್ ಫೌಂಡೇಷನ್ ಇಲಾಖೆ ಜತೆಗೆ ಒಪ್ಪಂದ ಮಾಡಿಕೊಂಡು, ಸುಮಾರು ₹ 10 ಕೋಟಿ ವೆಚ್ಚದಲ್ಲಿ ಈ ಕಟ್ಟಡವನ್ನು ನವೀಕರಣ ಮಾಡಿದೆ. ನವೀಕೃತ ಕಟ್ಟಡವನ್ನು ಇದೇ ಜೂನ್‌ನಲ್ಲಿ ಉದ್ಘಾಟಿಸಲಾಗಿದೆ. ಪ್ರದರ್ಶನಕ್ಕೆ ಅಳವಡಿಸಲಾದ 'ಕಲಾತಪಸ್ವಿ' ಕೆ. ವೆಂಕಟಪ್ಪ ಹಾಗೂ ಕಲಾವಿದ ಕೆ.ಕೆ. ಹೆಬ್ಬಾರ್ ಅವರ ಅಪರೂಪದ ಕಲಾಕೃತಿಗಳ ಮೇಲೆ ಶಿಲೀಂಧ್ರ ಕಾಣಿಸಿಕೊಂಡಿದೆ. ನವೀಕೃತ ಕಟ್ಟಡದಲ್ಲಿ ಮೂರು ತಿಂಗಳು ಕಳೆಯುವುದರೊಳಗೆ ಕಲಾಕೃತಿಗಳು ಈ ಸ್ಥಿತಿಗೆ ತಲುಪಿರುವುದು ಕಲಾವಿದರ ಅಸಮಾಧಾನಕ್ಕೆ ಕಾರಣವಾಗಿದೆ.

ಮೂಲಸೌಕರ್ಯ ಕೊರತೆ ಎದುರಿಸುತ್ತಿದ್ದ ವೆಂಕಟಪ್ಪ ಚಿತ್ರಶಾಲೆ (ಆರ್ಟ್ ಗ್ಯಾಲರಿ) ಈಗ ಆಧುನಿಕತೆಗೆ ತೆರೆದುಕೊಂಡಿದೆ. ಅತ್ಯಾಧುನಿಕ ಬೆಳಕಿನ ವಿನ್ಯಾಸ, ಕೇಂದ್ರೀಕೃತ ಹವಾನಿಯಂತ್ರಣ ವ್ಯವಸ್ಥೆ, ಸುಸಜ್ಜಿತ ಸಭಾಂಗಣ, ಚರ್ಚಾ ಕೊಠಡಿ ಸೇರಿ ಹಲವು ಸೌಲಭ್ಯಗಳನ್ನು ಇಲ್ಲಿ ಹೊಸದಾಗಿ ಒದಗಿಸಲಾಗಿದೆ. ಈ ಚಿತ್ರಶಾಲೆ ಬೆಳಿಗ್ಗೆ 10ರಿಂದ ಸಂಜೆ 5 ಗಂಟೆವರೆಗೆ ಕಾರ್ಯನಿರ್ವಹಿಸಲಿದೆ. ಈ ಅವಧಿಯಲ್ಲಿ ಕೇಂದ್ರೀಕೃತ ಹವಾನಿಯಂತ್ರಣ ಹಾಗೂ ಬೆಳಕಿನ ವ್ಯವಸ್ಥೆ ಚಾಲನೆಯಲ್ಲಿ ಇರಲಿದ್ದು, ಬಳಿಕ ಬಂದ್ ಮಾಡಲಾಗುತ್ತದೆ. ಇದರಿಂದಾಗಿ ತಾಪಮಾನದಲ್ಲಿ ವ್ಯತ್ಯಾಸವಾಗಿ, ಕಲಾಕೃತಿಗಳ ಮೇಲೆ ಶಿಲೀಂಧ್ರ ಕಾಣಿಸಿಕೊಳ್ಳುತ್ತಿದೆ.

ಹಳೆಯ ಕಲಾಕೃತಿ: ಕೆ.ವೆಂಕಟಪ್ಪ ಅವರು ನಿಧನರಾದ ಬಳಿಕ ಅವರ ಸಹೋದರ ಸಂಬಂಧಿ ರಾಮರಾಜು ಅವರು, ವೆಂಕಟಪ್ಪ ಅವರ ಕಲಾಕೃತಿಗಳನ್ನು ಸರ್ಕಾರಕ್ಕೆ ದಾನವಾಗಿ ನೀಡಿದ್ದರು. ಕಬ್ಬನ್ ಉದ್ಯಾನದ ಸರ್ಕಾರಿ ವಸ್ತು ಸಂಗ್ರಹಾಲಯದ ಆವರಣದಲ್ಲಿರುವ ಈ ಚಿತ್ರಶಾಲೆಯು 1975ರಲ್ಲಿ ಉದ್ಘಾಟನೆಗೊಂಡು, ಸಾರ್ವಜನಿಕರ ಪ್ರವೇಶಕ್ಕೆ ಮುಕ್ತವಾಗಿತ್ತು. ಅಂದಿನಿಂದ ಈ ಚಿತ್ರಶಾಲೆಯಲ್ಲಿ ವೆಂಕಟಪ್ಪ ಮತ್ತು ಕೆ.ಕೆ. ಹೆಬ್ಬಾರ್ ಅವರ ಕಲಾಕೃತಿಗಳನ್ನು ಪ್ರದರ್ಶನಕ್ಕೆ ಇರಿಸಲಾಗಿದೆ. ಈ ಕಲಾಕೃತಿಗಳು ನೂರು ವರ್ಷಗಳಿಗಿಂತ ಹಳೆಯದಾಗಿವೆ.

'ಕಲಾಕೃತಿಗಳ ಮುಂಭಾಗದಲ್ಲೇ ಅಧಿಕ ಪ್ರಮಾಣದಲ್ಲಿ ಶಿಲೀಂಧ್ರ ಕಾಣಿಸಿಕೊಳ್ಳುತ್ತಿದೆ. ಕಲಾಕೃತಿಗಳ ಹಿಂಭಾಗದಲ್ಲಿ ಇನ್ನಷ್ಟು ಶಿಲೀಂಧ್ರ ಬೆಳೆದಿರುವ ಸಾಧ್ಯತೆಯಿದೆ. ಕಟ್ಟಡ ನವೀಕರಣಗೊಂಡು ಮೂರು ತಿಂಗಳಲ್ಲೇ ಶಿಲೀಂಧ್ರ ಕಾಣಿಸಿಕೊಂಡು, ಕೆಡುವ ಪರಿಸ್ಥಿತಿಗೆ ತಲುಪಿ ರುವುದಕ್ಕೆ ನಿರ್ವಹಣೆ ಮಾಡುತ್ತಿ ರುವವರ ನಿರ್ಲಕ್ಷ್ಯವೇ ಕಾರಣ' ಎಂದು ದೃಶ್ಯ ಕಲಾವಿದ ಗಣಪತಿ ಅಗ್ನಿಹೋತ್ರಿ ಬೇಸರ ವ್ಯಕ್ತಪಡಿಸಿದರು.

'ಕಲಾಕೃತಿಗಳ ಸಂರಕ್ಷಣೆಗೆ ಕ್ರಮ'

ಎ.ದೇವರಾಜು

'ಕಲಾಕೃತಿಗಳ ಮೇಲೆ ಶಿಲೀಂಧ್ರ ಬೆಳೆದಿರುವುದು ಗಮನಕ್ಕೆ ಬಂದಿದ್ದು, ಸಂರಕ್ಷಣೆಗೆ ಈಗಾಗಲೇ ಕ್ರಮವಹಿಸಲಾಗಿದೆ. ಈ ಸಂಬಂಧ ಇಂಟ್ಯಾಕ್ ಸಂಸ್ಥೆ ಜತೆಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಈ ಸಂಸ್ಥೆಯು ಆಧುನಿಕ ಸಂರಕ್ಷಣಾ ವಿಧಿ-ವಿಧಾನಗಳಿಗೆ ಅನುಸಾರವಾಗಿ ಸಂರಕ್ಷಣಾ ಕಾರ್ಯವನ್ನು ಕೈಗೊಳ್ಳಲಿದೆ. ಕೇಂದ್ರೀಕೃತ ಹವಾನಿಯಂತ್ರಣ ವ್ಯವಸ್ಥೆ, ನಿರಂತರ ಮಳೆಯಿಂದಾಗಿ ಕಟ್ಟಡದೊಳಗಿನ ತಾಪಮಾನದಲ್ಲಿ ವ್ಯತ್ಯಾಸವಾಗಿದೆ. ಇದರಿಂದಾಗಿ ಕಲಾಕೃತಿಗಳ ಮೇಲೆ ಶಿಲೀಂಧ್ರ ಕಾಣಿಸಿಕೊಂಡಿದೆ. ಈ ಅಪರೂಪದ ಕಲಾಕೃತಿಗಳು ಹಾಳಾಗದಂತೆ ಸಂರಕ್ಷಿಸಲಾಗುತ್ತಿದೆ' ಎಂದು ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಆಯುಕ್ತ ಎ.ದೇವರಾಜು ತಿಳಿಸಿದರು.

ವೆಂಕಟಪ್ಪ ಅವರ ಕಲಾಕೃತಿ ಮೇಲೆ ಶಿಲೀಂಧ್ರ ಬೆಳೆದಿರುವುದು

ಪುರಾತತ್ವ ಇಲಾಖೆ ಅಧಿಕಾರಿಗಳಿಗೆ ಕಲೆಯ ಬಗ್ಗೆ ಜ್ಞಾನ ಇಲ್ಲದಿರುವುದೇ ಈ ರೀತಿ ಆಗಲು ಕಾರಣ. ಕಲಾಕೃತಿಗಳ ಸಂರಕ್ಷಣೆಗೆ ತಜ್ಞರ ಅಭಿಪ್ರಾಯವನ್ನೂ ಅಧಿಕಾರಿಗಳು ಪಡೆಯುತ್ತಿಲ್ಲ

ಚಿ.ಸು.ಕೃಷ್ಣಸೆಟ್ಟಿ
ಕಲಾ ವಿಮರ್ಶಕ

ವೆಂಕಟಪ್ಪ, ಹೆಬ್ಬಾರ್ ಅವರ ಕಲಾಕೃತಿಗಳ ಸ್ಥಿತಿ ನೋಡಿದರೆ ಸಂಕಟ ಆಗುತ್ತದೆ. ಇವು ಸಾಂಸ್ಕೃತಿಕ ಆಸ್ತಿಯಾಗಿದ್ದು, ಅವುಗಳನ್ನು ಸಂರಕ್ಷಿಸಬೇಕು. ನಿರ್ಲಕ್ಷ್ಯ ಸರಿಯಲ್ಲ

ಶೀಲಾ ಗೌಡ
ಕಲಾವಿದೆ

2 ಮಹಡಿಗಳಲ್ಲಿ ಕಲಾಕೃತಿಗಳು

ಕಟ್ಟಡದ ನೆಲ ಮಹಡಿಯಲ್ಲಿ ಮೂರು ಗ್ಯಾಲರಿ ಗಳಿವೆ. ಮೊದಲ-ಮಹಡಿಯಲ್ಲಿ ಕೆ.ವೆಂಕಟಪ್ಪ ಅವರ 29 ಜಲವರ್ಣ ಕಲಾಕೃತಿಗಳು, ಪೆನ್ಸಿಲ್‌ನಿಂದ ರಚಿಸಿದ 31 ಚಿತ್ರಗಳು, ಶಾಹಿಯಿಂದ ರಚಿಸಿದ 12 ಚಿತ್ರಗಳು, ಐವರಿ ಫಲಕದ ಮೇಲೆ ರಚಿಸಿದ 3 ಚಿತ್ರಕೃತಿಗಳು, 8 ಉಬ್ಬು ಶಿಲ್ಪಗಳು, ಅವರು ನುಡಿಸುತ್ತಿದ್ದ 6 ವೀಣೆಗಳು, ಅವರು ಬಳಸುತ್ತಿದ್ದ ವಸ್ತುಗಳನ್ನು ಪ್ರದರ್ಶಿಸಲಾಗಿದೆ. 2ನೇ ಮಹಡಿಯಲ್ಲಿ ಕೆ.ಕೆ. ಹೆಬ್ಬಾರ್ ಅವರ 48 ಕಲಾಕೃತಿಗಳು, ಅವರು ಅಧ್ಯಯನ ಮಾಡಿದ 13 ಪುಸ್ತಕಗಳನ್ನು ಪ್ರದರ್ಶನದಲ್ಲಿ ಇಡಲಾಗಿದೆ.

ಚಿಟಿಕೆ ಸುದ್ದಿ

'ಚೀನಾ–ಜಪಾನ್ ಜತೆಗೆ ಮಾತುಕತೆ ಉತ್ತಮ ನಡೆ'

ಬೆಂಗಳೂರು: 'ಅಮೆರಿಕವು ಭಾರತದ ಮೇಲೆ ಸಾರಿರುವ ಸುಂಕ ಸಮರದ ವಿರುದ್ಧ ಪ್ರಧಾನಿ ನರೇಂದ್ರ ಮೋದಿ ಅವರು ಚೀನಾ ಮತ್ತು ಜಪಾನ್ ಜತೆಗೆ ವ್ಯಾಪಾರ ವೃದ್ಧಿಗೆ ಮಾತುಕತೆ ನಡೆಸಿರುವುದು ಉತ್ತಮ ನಡೆ' ಎಂದು ರಾಜ್ಯಸಭಾ ಸದಸ್ಯ ಎಚ್.ಡಿ. ದೇವೇಗೌಡ ಹೇಳಿದ್ದಾರೆ.

ಈ ಸಂಬಂಧ ಪ್ರಧಾನಿ ಮೋದಿಗೆ ಪತ್ರ ಬರೆದಿರುವ ಅವರು, 'ಅಮೆರಿಕವು ಅವಿವೇಕದ ಮತ್ತು ಅನ್ಯಾಯದ ಸುಂಕ ಸಮರದ ನಂತರ ನೀವು ಪರ್ಯಾಯ ಮಾರ್ಗೋಪಾಯಗಳನ್ನು ಕಂಡುಕೊಳ್ಳಲು ಹೊರಟಿರುವುದು ಎಲ್ಲ ಭಾರತೀಯರಂತೆ ನನಗೆ ಸಮಾಧಾನ ತಂದಿದೆ. ಎರಡೂ ದೇಶಗಳ ನಿಮ್ಮ ಭೇಟಿ ಅತ್ಯಂತ ಯಶಸ್ವಿಯಾಯಿತು' ಎಂದಿದ್ದಾರೆ.

'ಉಕ್ರೇನ್ ಯುದ್ಧವನ್ನು ನಿಲ್ಲಿಸುವ ಬಗ್ಗೆ ನೀವು, ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಜತೆಗೆ ಮಾತನಾಡಿದ್ದೀರಿ. ಈ ವಿಚಾರದಲ್ಲಿ ಭಾರತದ ನಿಲುವನ್ನು ಜಗತ್ತಿನ ಇತರ ದೇಶಗಳು ಈ ಹಿಂದೆಂದಿಗಿಂತ ಈಗ ಹೆಚ್ಚು ಪರಿಗಣಿಸುತ್ತವೆ ಎಂದು ನಾನು ನಿರೀಕ್ಷಿಸಿದ್ದೇನೆ. ನಿಮ್ಮ ಈ 'ಬಹುಮೈತ್ರಿ' ನಿಲುವು, ನಮ್ಮ ಈ ಹಿಂದಿನ 'ಅಲಿಪ್ತ ನೀತಿ'ಗಿಂತ ಭಿನ್ನವಾಗಿದೆ ಮತ್ತು ಹೆಚ್ಚು ಪರಿಣಾಮಕಾರಿಯಾಗಿರಲಿದೆ' ಎಂದಿದ್ದಾರೆ.

ಚಂದ್ರಗ್ರಹಣ: ರಸಪ್ರಶ್ನೆ ಸ್ಪರ್ಧೆಗೆ ಆಹ್ವಾನ

ಬೆಂಗಳೂರು: ಪೂರ್ಣ ಚಂದ್ರಗ್ರಹಣ ಸೆಪ್ಟೆಂಬರ್ 7ರಂದು ನಡೆಯಲಿದ್ದು, ಈ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿಯಿಂದ ಸೆಪ್ಟೆಂಬರ್ 5ರಂದು ರಾಜ್ಯಮಟ್ಟದ ಆನ್‌ಲೈನ್ ರಸಪ್ರಶ್ನೆ ಸ್ಪರ್ಧೆಯನ್ನು ಆಯೋಜಿಸಿದೆ.

ಆಸಕ್ತ ವಿದ್ಯಾರ್ಥಿಗಳು, ನೌಕರರು, ಸಾರ್ವಜನಿಕರು ಸೆ.5ರ ಸಂಜೆ 5ಗಂಟೆಯೊಳಗೆ ಹೆಸರು ನೋಂದಣಿ ಮಾಡಿಕೊಳ್ಳಬಹುದು.

ಸ್ಪರ್ಧೆಯಲ್ಲಿ ವಿಜೇತರಾದವರಿಗೆ ನಗದು ಬಹುಮಾನ ಹಾಗೂ ಪ್ರಶಸ್ತಿ ಪತ್ರ ನೀಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಕಾರ್ಯದರ್ಶಿ, ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ, ನಂ. 435, ಮೂರನೇ ಸಿ. ಮುಖ್ಯರಸ್ತೆ, ಒಂದನೇ ಹಂತ, ಎರಡನೇ ಸ್ಟೇಜ್, ಮಂಜುನಾಥನಗರ, ಬೆಂಗಳೂರು–560010.
ಮಾಹಿತಿಗೆ: 9448957666.

9 ಸಾವಿರ ಕೆ.ಜಿ ಏಕ ಬಳಕೆ ಪ್ಲಾಸ್ಟಿಕ್ ವಶ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯಲ್ಲಿ ಒಂಬತ್ತು ಸಾವಿರ ಕೆ.ಜಿ ಏಕ ಬಳಕೆಯ ಪ್ಲಾಸ್ಟಿಕ್ ವಶಪಡಿಸಿಕೊಂಡು, ₹7.38 ಲಕ್ಷ ದಂಡ ವಸೂಲಿ ಮಾಡಲಾಗಿದೆ ಎಂದು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕರೀಗೌಡ ತಿಳಿಸಿದರು.

ಕಾರ್ಯಕ್ರಮದಲ್ಲಿ ಶಿವ ಮಹೇಶ್ ತಂಗುತುರು ಅವರನ್ನು ಗೌರವಿಸಲಾಯಿತು. ಭಾನುಶ್ರೀ, ಎನ್. ದ್ವಾರಕನಾಥ್, ಸಿ. ಯುವರಾಜ್, ಪ್ರದೀಪ್ ಕುಮಾರ್ ಇದ್ದರು

'ಆವಿಷ್ಕಾರಗಳಿಗೆ ಅಡಿಪಾಯ ಹಾಕಿ'

ಬೆಂಗಳೂರು: 'ಹೊಸ ತಂತ್ರಜ್ಞಾನಗಳ ಬಗ್ಗೆ ಅರಿತು, ಹೊಸ ಆವಿಷ್ಕಾರಗಳಿಗೆ ಅಡಿಪಾಯ ಹಾಕಬೇಕು' ಎಂದು ಇಂಟರ್‌ನ್ಯಾಷನಲ್ ಸ್ಟಾರ್ಟ್‌ಅಪ್ ಫೌಂಡೇಷನ್ ಸಹ ಸಂಸ್ಥಾಪಕ ಮತ್ತು ನಿರ್ದೇಶಕ ಶಿವ ಮಹೇಶ್ ತಂಗುತುರು ಹೇಳಿದರು.

ಮದನಪಲ್ಲಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಆ್ಯಂಡ್ ಸೈನ್ಸ್ (ಎಂಐಟಿಎಸ್) ಡೀಮ್ಡ್ ವಿಶ್ವವಿದ್ಯಾಲಯದಲ್ಲಿ ಪ್ರಥಮ ವರ್ಷದ ಎಂಬಿಎ, ಎಂಸಿಎ, ಎಂ.ಟೆಕ್ ತರಗತಿ ಬುಧವಾರ ಪ್ರಾರಂಭವಾದವು.

ಎಂಐಟಿಎಸ್ ಹಮ್ಮಿಕೊಂಡಿದ್ದ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮ ಉದ್ಘಾಟಿಸಿದ ಶಿವ ಮಹೇಶ್, 'ವಿದ್ಯಾರ್ಥಿಗಳು ಉದ್ಯಮಿಗಳಾಗಬೇಕು' ಎಂದರು.

ವಿಶ್ವವಿದ್ಯಾಲಯದ ಕುಲಪತಿ ಸಿ. ಯುವರಾಜ್, ಕುಲಾಧಿಪತಿ ಎನ್. ದ್ವಾರಕನಾಥ್, ಕುಲಸಚಿವ ಪ್ರದೀಪ್ ಕುಮಾರ್, ಡೀನ್ ಶ್ರೀಮಂತ ಬಸು, ಎಂಬಿಎ ವಿಭಾಗದ ಮುಖ್ಯಸ್ಥೆ ಭಾನುಶ್ರೀ, ಎಂಸಿಎ ವಿಭಾಗದ ಮುಖ್ಯಸ್ಥ ನವೀನ್ ಇದ್ದರು.

ರಸ್ತೆಗಳಲ್ಲಿ ನಿಂತ ನೀರು • ನಿಧಾನಗತಿಯಲ್ಲಿ ಸಾಗಿದ ವಾಹನಗಳು

ನಗರದ ಹಲವೆಡೆ ಭಾರಿ ಮಳೆ: ಸಂಚಾರ ಅಸ್ತವ್ಯಸ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವೆಡೆ ಬುಧವಾರ ಮಧ್ಯಾಹ್ನದಿಂದ ರಾತ್ರಿವರೆಗೆ ಭಾರಿ ಮಳೆಯಾಯಿತು.

ಮುಖ್ಯ ರಸ್ತೆಗಳಲ್ಲಿ ಮಳೆ ನೀರು ನಿಂತು ಸಂಚಾರ ಅಸ್ತವ್ಯಸ್ತಗೊಂಡಿತ್ತು.

ರಾಜಭವನ ರಸ್ತೆಯಲ್ಲಿ ಮರ ಬಿದ್ದಿರುವುದರಿಂದ ಚಾಲುಕ್ಯ ಸರ್ಕಲ್ ಕಡೆಗೆ ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿತ್ತು.

ನಾಗಾರ್ಜುನ ಜಂಕ್ಷನ್ ಕಡೆಯಿಂದ ಜಿಡಿ ಮಾರ ಜಂಕ್ಷನ್, ರೂಪೇನ ಅಗ್ರಹಾರ ಕಡೆಯಿಂದ ಬೊಮ್ಮನಹಳ್ಳಿ, ಬೆಳ್ಳಂದೂರು ಜಂಕ್ಷನ್ ಕಡೆಯಿಂದ ಎಚ್‌ಎಸ್‌ಆರ್ ಲೇಔಟ್, ಅನಿಲ್ ಕುಂಬ್ಳೆ ವೃತ್ತ, ಕ್ವೀನ್ಸ್ ಜಂಕ್ಷನ್ ಕಡೆಯಿಂದ ಅನಿಲ್ ಕುಂಬ್ಳೆ ವೃತ್ತ, ಕಂಟೋನ್ಮೆಂಟ್ ರೈಲ್ವೆ ಅಂಡರ್‌ಪಾಸ್ ಕಡೆಯಿಂದ ಜಯಮಹಲ್ ರಸ್ತೆ, ಹೆಬ್ಬಾಳ ನಿಲ್ದಾಣ, ದೇವಿನಗರ ಕಡೆಯಿಂದ ಡೌನ್‌ರ್‍ಯಾಂಪ್ ಕಡೆಯಿಂದ ವಿಮಾನ ಕುವೆಂಪು ನಗರ, ಕೆಎಸ್‌ಐಟಿ ಕಾಲೇಜು ಹತ್ತಿರ ನೀರು ನಿಂತು ನೈಸ್ ರಸ್ತೆ ಕಡೆಗೆ ವಾಹನ ಸಂಚಾರ ನಿಧಾನಗತಿಯಲ್ಲಿತ್ತು.

ನಗರದ ರಾಜಭವನ ರಸ್ತೆಯಲ್ಲಿ ಧರೆಗುರುಳಿದ್ದ ಬೃಹತ್ ಗಾತ್ರದ ಮರವನ್ನು ಕಾರ್ಮಿಕರು ತೆರವುಗೊಳಿಸಿದರು —ಪ್ರಜಾವಾಣಿ ಚಿತ್ರ

ಮಳೆ: ಎಲ್ಲಿ, ಎಷ್ಟು (ಸೆಂಟಿ ಮೀಟರ್‌ಗಳಲ್ಲಿ)	
ಕೋಣನಕುಂಟೆ	4.7
ರಾಜರಾಜೇಶ್ವರಿ ನಗರ	4
ಗೊಟ್ಟಿಗೆರೆ	3.7
ಹೆಮ್ಮಿಗೆಪುರ, ದೊರೆಸಾನಿಪಾಳ್ಯ, ಗೊಲ್ಲಹಳ್ಳಿ	3.5
ಹಂಪಿನಗರ, ಬಾಣಸವಾಡಿ, ವಿ. ನಾಗೇನಹಳ್ಳಿ, ಅಂಜನಾಪುರ	3
ಬಿಳೇಕಹಳ್ಳಿ, ಗರುಡಾಚಾರ್ಯ ಪಾಳ್ಯ, ವಿದ್ಯಾಪೀಠ, ಮಾರುತಿ ಮಂದಿರ, ಪುಲಕೇಶಿನಗರ,	2.5
ಮಹದೇವಪುರ, ಹಗದೂರು, ಸಂಪಂಗಿರಾಮ ನಗರ, ಬಸವೇಶ್ವರ ನಗರ, ಕಾಟನ್ ಪೇಟೆ, ಶೆಟ್ಟಿಹಳ್ಳಿ ನಾಗಪುರ	2

ರಾಜರಾಜೇಶ್ವರಿ ಎಂಜಿನಿಯರಿಂಗ್ ಕಾಲೇಜಿನ 16ನೇ ಪದವಿ ಪ್ರದಾನ ಕಾರ್ಯಕ್ರಮ ಬುಧವಾರ ನಡೆಯಿತು

'ಆತ್ಮವಿಶ್ವಾಸದಿಂದ ಸವಾಲು ಎದುರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸವಾಲುಗಳನ್ನು ಆತ್ಮವಿಶ್ವಾಸದಿಂದ ಎದುರಿಸಬೇಕು. ಅಡೆತಡೆಗಳನ್ನು ಅವಕಾಶಗಳನ್ನಾಗಿ ಪರಿವರ್ತಿಸಬೇಕು ಎಂದು ರಾಜರಾಜೇಶ್ವರಿ ಎಂಜಿನಿಯರಿಂಗ್ ಕಾಲೇಜಿನ ಅಧ್ಯಕ್ಷ ಎ.ಸಿ. ಷಣ್ಮುಗಂ ತಿಳಿಸಿದರು.

ಬುಧವಾರ ನಡೆದ ರಾಜರಾಜೇಶ್ವರಿ ಎಂಜಿನಿಯರಿಂಗ್ ಕಾಲೇಜಿನ 16ನೇ ಪದವಿ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕ್ರಿಯಾತ್ಮಕ ಜಗತ್ತಿನಲ್ಲಿ ನಿರಂತರ ಕಲಿಕೆ, ನೈತಿಕ ನಾಯಕತ್ವ ಅಗತ್ಯ. ವೈಯಕ್ತಿಕ ಮತ್ತು ವೃತ್ತಿಪರ ಜೀವನದಲ್ಲಿ ಶ್ರೇಷ್ಠತೆಗಾಗಿ ಶ್ರಮಿಸಬೇಕು ಎಂದು ಸಲಹೆ ನೀಡಿದರು.

ಬೆಂಗಳೂರು ದಕ್ಷಿಣ ಜಿಲ್ಲಾಧಿಕಾರಿ ಯಶವಂತ್ .ವಿ ಗುರುಕರ್ ಮಾತನಾಡಿ, 'ಜ್ಞಾನ ಮತ್ತು ಕೌಶಲಗಳನ್ನು ತೃಪ್ತಿಕರ ವೃತ್ತಿಜೀವನ ನಡೆಸಲಷ್ಟೇ ಸೀಮಿತಗೊಳಿಸದೇ ಸಮಾಜಕ್ಕೆ ಅರ್ಥಪೂರ್ಣ ಕೊಡುಗೆ ನೀಡಲು ಬಳಸಬೇಕು.

ಜವಾಬ್ದಾರಿ, ಸೇವೆ ಮತ್ತು ನಾಯಕತ್ವದ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ಯುವ ಪದವೀಧರರು ರಾಷ್ಟ್ರದ ಪ್ರಗತಿ ಮತ್ತು ಸಮಗ್ರ ಭವಿಷ್ಯವನ್ನು ರೂಪಿಸುವಲ್ಲಿ ಸಕ್ರಿಯ ಪಾತ್ರ ವಹಿಸಬೇಕು' ಎಂದು ಹೇಳಿದರು.

ನಟಿ ರಾಧಿಕಾ ನಾರಾಯಣ್ ಮಾತನಾಡಿ, 'ಉತ್ಸಾಹ, ಪರಿಶ್ರಮ ಮತ್ತು ಸೃಜನಶೀಲತೆ ಇದ್ದಾಗ ಯಶಸ್ಸನ್ನು ಸಾಧಿಸಲು ಸಾಧ್ಯ. ವಿದ್ಯಾರ್ಥಿಗಳು ತಮ್ಮ ಮೇಲೆ ತಾವು ನಂಬಿಕೆ ಇಡಬೇಕು. ಆತ್ಮವಿಶ್ವಾಸದಿಂದ ಸವಾಲುಗಳನ್ನು ಸ್ವೀಕರಿಸಬೇಕು. ಶಿಸ್ತು ಮತ್ತು ಸಮರ್ಪಣೆಯ ಮೌಲ್ಯಗಳನ್ನು ಮುಂದುವರಿಸಬೇಕು' ಎಂದು ಸಲಹೆ ನೀಡಿದರು.

ಎಸಿಎಸ್ ಅಧ್ಯಕ್ಷ ಅರುಣ್ ಕುಮಾರ್, ಎಂಸಿಇಟಿ ಅಧ್ಯಕ್ಷೆ ಲಲಿತಾ ಲಕ್ಷ್ಮಿ, ಕಾರ್ಯನಿರ್ವಾಹಕ ನಿರ್ದೇಶಕ ಎಸ್. ವಿಜಯಾನಂದ್, ಪ್ರಾಂಶುಪಾಲ ಆರ್. ಬಾಲಕೃಷ್ಣ, ಸಿಇಒ ಸಿ.ಎನ್. ಸೀತಾರಾಮ್ ಉಪಸ್ಥಿತರಿದ್ದರು.

'ಮಕ್ಕಳಾಗದ ದಂಪತಿಯನ್ನು ನೋಡುವ ರೀತಿ ಬದಲಾಗಲಿ'

ಆಕ್ಸಾನ್ ಚೈಲ್ಡ್ ಡೆವಲಪ್ಮೆಂಟ್ ಸೆಂಟರ್ ಅನ್ನು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಉದ್ಘಾಟಿಸಿದರು. ಡಾ. ದೇವಿಕಾ ಗುಣಶೀಲ, ವೈದ್ಯರು ಹಾಗೂ ಪೋಷಕರು ಉಪಸ್ಥಿತರಿದ್ದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಕ್ಕಳಾಗದ ದಂಪತಿಗಳನ್ನು ಸಮಾಜ ನೋಡುವ ರೀತಿ ಬದಲಾಗಬೇಕು. ಆಧುನಿಕ ಚಿಕಿತ್ಸೆಗಳಿಂದ ಬಂಜೆತನ ನಿವಾರಣೆ ಸಾಧ್ಯವಾಗುತ್ತಿರುವುದು ಆಶಾದಾಯಕ ಬೆಳವಣಿಗೆ' ಎಂದು ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಗುಣಶೀಲ ಆಸ್ಪತ್ರೆ ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ 'ಸಂತಾನ ಸಾಫಲ್ಯ ಚಿಕಿತ್ಸೆಯಲ್ಲಿ 50 ವರ್ಷಗಳ ಸಾರ್ಥಕ ಸಂಭ್ರಮ' ಕಾರ್ಯಕ್ರಮದಲ್ಲಿ ಆಸ್ಪತ್ರೆಯ ಹೊಸ ಸ್ವರೂಪ ಮತ್ತು 'ಆಕ್ಸಾನ್ ಚೈಲ್ಡ್ ಡೆವಲಪ್ಮೆಂಟ್ ಸೆಂಟರ್' ಉದ್ಘಾಟಿಸಿ, ಮಾತನಾಡಿದರು.

'ಬಂಜೆತನ ನಿವಾರಣೆ ಚಿಕಿತ್ಸೆಗಳು ನಗರ ಪ್ರದೇಶಕ್ಕೆ ಸೀಮಿತವಾಗದೆ ಗ್ರಾಮೀಣ ಭಾಗಕ್ಕೂ ತಲುಪುವಂತಾಗಬೇಕು' ಎಂದು ಹೇಳಿದರು.

ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕಿ ಡಾ. ದೇವಿಕಾ ಗುಣಶೀಲ, '50 ವರ್ಷಗಳ ಹಿಂದೆ ನನ್ನ ತಾಯಿ ಡಾ. ಸುಲೋಚನಾ ಗುಣಶೀಲ ಅವರು ಆರಂಭಿಸಿದ ಈ ಆಸ್ಪತ್ರೆ, ಸಾವಿರಾರು ಕುಟುಂಬಗಳ ಭವಿಷ್ಯವನ್ನೇ ಬದಲಿಸಿದೆ. ದಕ್ಷಿಣ ಭಾರತದ ಮೊದಲ ಪ್ರನಾಳ ಶಿಶು ಜನಿಸಿದ್ದು ಕೂಡ ಇದೇ ಆಸ್ಪತ್ರೆಯಲ್ಲಿ. ಬಂಜೆತನ ಹೊಂದಿರುವ ಪ್ರತಿಯೊಂದು ದಂಪತಿಗೂ ಮಗು ಹೊಂದಲು ಚಿಕಿತ್ಸೆ ನೀಡುತ್ತಿದ್ದೇವೆ' ಎಂದರು.

ಸ್ಪೃಶ್ಯ- ಅಸ್ಪೃಶ್ಯ ಪದ ಕೈಬಿಡಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಳಮೀಸಲಾತಿಗೆ ಸಂಬಂಧಿಸಿದಂತೆ ನ್ಯಾ. ಎಚ್.ಎನ್. ನಾಗಮೋಹನದಾಸ್ ಅವರು ನೀಡಿರುವ ವರದಿಯಲ್ಲಿ ಬಳಸಿರುವ ಸ್ಪೃಶ್ಯ- ಅಸ್ಪೃಶ್ಯ ಪದಗಳನ್ನು ತಕ್ಷಣ ಕೈ ಬಿಡಬೇಕು ಎಂದು ಬಂಜಾರ ಮುಖಂಡರು ಆಗ್ರಹಿಸಿದ್ದಾರೆ.

ಈ ಬಗ್ಗೆ ಕರ್ನಾಟಕ ಪ್ರದೇಶ ಬಂಜಾರ (ಲಂಬಾಣಿ) ಸೇವಾ ಸಂಘದ ನೇತೃತ್ವದಲ್ಲಿ ಬಂಜಾರರ ವಿವಿಧ ಸಂಘ ಸಂಸ್ಥೆಗಳು ಹಾಗೂ ಸರ್ವ ಪಕ್ಷಗಳ ಮುಖಂಡರ ಸಭೆ ನಡೆಸಲಾಯಿತು. '13 ಇಲಾಖೆಗಳು ಆಯೋಗಕ್ಕೆ ಅಂಕಿಅಂಶವನ್ನೇ ನೀಡದೇ ಇರುವುದರಿಂದ ವರದಿ ಅವೈಜ್ಞಾನಿಕ' ಎಂದು ಸಭೆಯಲ್ಲಿ ತಿಳಿಸಲಾಯಿತು.

ಬಂಜಾರ, ಕೊರಚ, ಕೊರಮ, ಅಲೆಮಾರಿ ಸಮುದಾಯಗಳಿಗೆ ಜನಸಂಖ್ಯೆವಾರು ಹೆಚ್ಚು ಮೀಸಲು ನಿಗದಿ ಪಡಿಸಬೇಕು. ಈ ಪಟ್ಟಿಯಲ್ಲಿರುವ ಬಲಿಷ್ಠ ಸಮುದಾಯವಾದ ಬೇಡಜಂಗಮರನ್ನು ಕೈಬಿಡಬೇಕು. ಶಿಕ್ಷಣ, ಆರ್ಥಿಕ ಪ್ರಗತಿ, ಉದ್ಯೋಗಕ್ಕೆ ಸಂಬಂಧಿಸಿ ಪ್ರಸಕ್ತ ಸಾಲಿನ ಅಂಕಿ ಅಂಶ ಮಾತ್ರ ತೆಗೆದುಕೊಂಡಿರುವುದು ಅವೈಜ್ಞಾನಿಕ. ಇದನ್ನು ಕೈಬಿಟ್ಟು, 50 ವರ್ಷದ ಅಂಕಿ ಅಂಶವನ್ನು ಪರಿಗಣಿಸಬೇಕು. ಕೇಂದ್ರ ಸರ್ಕಾರ ಕೈಗೊಳ್ಳಲಿರುವ ಜನಗಣತಿಯ ನಂತರ ಈ ಎಲ್ಲ ಅಂಶಗಳನ್ನು ಸರಿಪಡಿಸಿ, ಮತ್ತೊಮ್ಮೆ ಪರಾಮರ್ಶಿಸಿ ಒಳಮೀಸಲು ಜಾರಿಗೊಳಿಸಬೇಕು ಎಂದು ಆಗ್ರಹಿಸಲಾಯಿತು.

ಸಂಘದ ಅಧ್ಯಕ್ಷ ಎನ್.ಆರ್. ನಾಯಕ್, ಪ್ರಧಾನ ಕಾರ್ಯದರ್ಶಿ ಎಚ್.ಬಿ. ಸಿದ್ಯಾನಾಯಕ್, ವಿಧಾನಸಭೆಯ ಉಪ ಸಭಾಧ್ಯಕ್ಷ ರುದ್ರಪ್ಪ ಮಾನಪ್ಪ ಲಮಾಣಿ ಭಾಗವಹಿಸಿದ್ದರು.

ವಿಎಸ್‌ಕೆಯು ಘಟಿಕೋತ್ಸವ ಇಂದು

ಬಳ್ಳಾರಿ: ಬಳ್ಳಾರಿ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ 13ನೇ ಘಟಿಕೋತ್ಸವ ಗುರುವಾರ (ಸೆ.4) ನಡೆಯಲಿದ್ದು, ಮೂವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಗುತ್ತದೆ.

'ಪ್ರೆಸ್ಟೀಜ್ ಗ್ರೂಪ್‌ನ ಗೌರವ ಅಧ್ಯಕ್ಷ ಇರ್ಫಾನ್ ರಜಾಕ್, ಗಣಿ ಉದ್ಯಮಿ ಬಾವಿಹಳ್ಳಿ ನಾಗನಗೌಡ, ಸಾಹಿತಿ ಡಾ. ವಸುಂಧರಾ ಭೂಪತಿ ಅವರಿಗೆ ಡಾಕ್ಟರೇಟ್ ಪ್ರದಾನಮಾಡಲಾಗುತ್ತಿದೆ.

ನಗರದಲ್ಲಿ ಇಂದು

ಎಫ್‌ಕೆಸಿಸಿಐ ಇಂಡಿಯಾ ಸಿಎಸ್‌ಆರ್ ಆ್ಯಂಡ್ ಸಸ್ಟೈನೆಬಲ್ ಕಾನ್ಫಿರೆನ್ಸ್ ಅವಾರ್ಡ್ಸ್–2025: ಅತಿಥಿಗಳು: ರತ್ನೇಶ್, ಎನ್. ಅಶೋಕ್ ಬಾಬು, ಅಧ್ಯಕ್ಷತೆ: ಎಂ.ಜಿ. ಬಾಲಕೃಷ್ಣ, ಆಯೋಜನೆ: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ, ಸ್ಥಳ: ಸರ್ ಎಂ.ವಿ. ಸಭಾಂಗಣ, ಎಫ್‌ಕೆಸಿಸಿಐ, ಕೆ.ಜಿ. ರಸ್ತೆ, ಬೆಳಿಗ್ಗೆ 10

ಪದವಿ ಪ್ರದಾನ ದಿನ: ಅತಿಥಿಗಳು: ರಾಮಲಿಂಗಾರೆಡ್ಡಿ, ಮಹಮ್ಮದ್ ರಿಜ್ವಾನ್ ನವಾಬ್, ಅಧ್ಯಕ್ಷತೆ: ಫಾರೂಕ್ ಮಹಮ್ಮದ್, ಆಯೋಜನೆ ಮತ್ತು ಸ್ಥಳ: ಅಬ್ಬಾಸ್ ಖಾನ್ ಕಾಲೇಜ್ ಫಾರ್ ವುಮೆನ್, ಕಬ್ಬನ್ ಪೇಟೆ, ಬೆಳಿಗ್ಗೆ 11.30

ಸಮಾಜ ಸೇವಕರಿಗೆ, ಸಾಹಿತಿಗಳಿಗೆ, ದಕ್ಷ ಪ್ರತಿಭಾವಂತ ಅಧಿಕಾರಿಗಳಿಗೆ, ಮಾಜಿ ಸೈನಿಕರಿಗೆ, ಕಲಾವಿದರಿಗೆ ಅಭಿನಂದನಾ ಸಮಾರಂಭ: ಸಾನ್ನಿಧ್ಯ: ಸೌಮ್ಯನಾಥ ಸ್ವಾಮೀಜಿ, ಶಿವರುದ್ರ ಸ್ವಾಮೀಜಿ, ಆರೂಢ ಭಾರತೀ ಸ್ವಾಮೀಜಿ, ಉದ್ಘಾಟನೆ: ಸಿ. ಸೋಮಶೇಖರ್, ವೂಡೇ ಪಿ. ಕೃಷ್ಣ, ಪಿ.ಸಿ. ಮೋಹನ್, ಆಯೋಜನೆ: ಸಂದೇಶ್ ಯುವ ವೇದಿಕೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5

ಭ್ರಷ್ಟಾಚಾರ ರಹಿತ ಭಾರತದಲ್ಲಿ ಯುವ ಸಮುದಾಯದ ಪಾತ್ರ: ಅತಿಥಿ: ಎನ್. ಸಂತೋಷ್ ಹೆಗ್ಡೆ, ಅಧ್ಯಕ್ಷತೆ: ಆರ್. ಉಪೇಂದ್ರ ಶೆಟ್ಟಿ, ಆಯೋಜನೆ ಮತ್ತು ಸ್ಥಳ: ಯುನಿವರ್ಸಲ್ ಸ್ಕೂಲ್ ಆಫ್ ಅಡ್ಮಿನಿಸ್ಟ್ರೇಷನ್, ಕೋಳೂರು, ತಾವರೆಕೆರೆ, ಸಂಜೆ 5

ಭರತನಾಟ್ಯ ಪ್ರದರ್ಶನ: ಕಲಾ ಸಂಸ್ಕೃತಿ ಅಕಾಡೆಮಿಯ ವಿದ್ಯಾರ್ಥಿಗಳ ತಂಡ, ನಿರ್ದೇಶನ: ಬಿ.ಯು. ಓಜಸ್ವಿನಿ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಜಯನಗರ ಐದನೇ ಬಡಾವಣೆ, ಸಂಜೆ 5.15

ದಾಸ ವೈಭವ: ಸ್ರೋತಸ್ವಿನಿ ಹೊಸಹಳ್ಳಿ, ಕೀ–ಬೋರ್ಡ್: ಅಮಿತ್ ಶರ್ಮಾ, ತಬಲಾ: ಅನಂತಕೃಷ್ಣ ಪ್ಯಾಟಿ, ಆಯೋಜನೆ ಮತ್ತು ಸ್ಥಳ: ಪವಮಾನಪುರದ ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಪವಮಾನಪುರ, ಬನಶಂಕರಿ ಆರನೇ ಹಂತ, ಸಂಜೆ 7

'ಚಿತ್ರಪಟ' ನಾಟಕ ಪ್ರದರ್ಶನ: ರಚನೆ: ಎಚ್.ಎಸ್. ವೆಂಕಟೇಶಮೂರ್ತಿ, ನಿರ್ದೇಶನ: ಮಂಜುನಾಥ ಎಲ್. ಬಡಿಗೇರ್, ಸಂಗೀತ: ಗಜಾನನ ಹೆಗಡೆ, ಆಯೋಜನೆ: ಸಮಷ್ಟಿ, ಸ್ಥಳ: ರಂಗಶಂಕರ, ಜೆ.ಪಿ. ನಗರ, ಸಂಜೆ 7.30

ಸದ್ಗುರು ಜಗ್ಗಿವಾಸುದೇವ್ ಅವರೊಂದಿಗೆ ಸಂವಾದ:
ಆಯೋಜನೆ: ನ್ಯಾಷನಲ್ ಹಿಲ್ ವೀವ್ ಪಬ್ಲಿಕ್ ಸ್ಕೂಲ್, ಸ್ಥಳ: ಗ್ಲೋಬಲ್ ಅಕಾಡೆಮಿ ಆಫ್ ಟೆಕ್ನಾಲಜಿ ಕ್ರಿಕೆಟ್ ಮೈದಾನ, ರಾಜರಾಜೇಶ್ವರಿನಗರ, ಸಂಜೆ 4

ಸದ್ಗುರು ಜಗ್ಗಿವಾಸುದೇವ್



ಹಣದ ಮೇಲೆ ನಾವು ನಿಯಂತ್ರಣ ಸಾಧಿಸಿದರೆ, ಶ್ರೀಮಂತ ಮತ್ತು ಸ್ವತಂತ್ರರಾಗುತ್ತೇವೆ. ಹಣವು ನಮ್ಮನ್ನು ನಿಯಂತ್ರಿಸಿದರೆ ನಾವು ನಿಜಕ್ಕೂ ಬಡವರಾಗುತ್ತೇವೆ
ಎಡ್ಮಂಡ್ ಬರ್ಕ್, ಹಣಕಾಸು ತಜ್ಞ

ದುಡ್ಡಿನಂಥಾ ಮಾತು

ಷೇರು ಹೂಡಿಕೆದಾರರ ಪಾಲಿಗೆ ‘ಮುಂದೇನು...?’

• ಚಿಂತನ್ ಹಾರಿಯಾ

‘ಮುಂದೇನು...?’ ಇದು ನಾವು ಜೀವನದಲ್ಲಿ ಮತ್ತೆ ಮತ್ತೆ ಕೇಳಿಕೊಳ್ಳುವ, ಕೇಳಿಸಿಕೊಳ್ಳುವ ಪ್ರಶ್ನೆ. ಜೀವನದಲ್ಲಿ ಮುಂದಕ್ಕೆ ಸಾಗಬೇಕಿರುವ ಬಹುತೇಕ ಸಂದರ್ಭಗಳಲ್ಲಿ ಈ ಪ್ರಶ್ನೆ ನಮ್ಮನ್ನು ಎದುರಾಗುತ್ತದೆ. ಪ್ರಮುಖ ಶೈಕ್ಷಣಿಕ ಪರೀಕ್ಷೆಯೊಂದರಲ್ಲಿ ಉತ್ತೀರ್ಣ ಆದ ನಂತರ, ವೃತ್ತಿಯ ಸ್ಥಳದಲ್ಲಿ ಬಡ್ತಿ ಪಡೆದ ನಂತರ, ಆರೋಗ್ಯದ ವಿಚಾರದಲ್ಲಿ ಮೈಲಿಗಲ್ಲೊಂದನ್ನು ದಾಟಿದ ನಂತರದಲ್ಲಿ... ಇಂತಹ ಸಂದರ್ಭಗಳಲ್ಲೆಲ್ಲ ಈ ಪ್ರಶ್ನೆ ಎದುರಾಗುತ್ತದೆ.

ಈ ಪ್ರಶ್ನೆ ಏಕೆ ಹೀಗೆ ಎದುರಾಗುತ್ತ ಇರುತ್ತದೆಯೆಂದರೆ, ನಾವು ಪ್ರಗತಿ ಮತ್ತು ಬೆಳವಣಿಗೆಯ ಜೊತೆ ಬೆಸೆದುಕೊಂಡಿದ್ದೇವೆ. ಮುಂದಿನ ಸವಾಲನ್ನು ನಾವು ಎದುರುನೋಡುತ್ತ ಇರುತ್ತೇವೆ, ಮುಂದೆ ಹೊಸ ಅವಕಾಶ ಎಲ್ಲಿ ಸಿಗಬಹುದು ಎಂಬುದನ್ನು ಅರಸುತ್ತ ಇರುತ್ತೇವೆ, ವೈಯಕ್ತಿಕ ಹಾಗೂ ವೃತ್ತಿ ಬದುಕಿನಲ್ಲಿ ಮುಂದಿನ ಹಂತದ ಬೆಳವಣಿಗೆ ಎಲ್ಲಿ ಶುರುವಾಗಬಹುದು ಎಂಬುದನ್ನು ಹುಡುಕುತ್ತ ಇರುತ್ತೇವೆ.

ಈಕ್ವಿಟಿ ಹೂಡಿಕೆದಾರರ ವಿಚಾರದಲ್ಲಿ, ‘ಮುಂದೇನು’ ಎಂಬ ಪ್ರಶ್ನೆಯು ಈಗ ದೇಶದ ಆರ್ಥಿಕ ಪ್ರಗತಿ ಹಾಗೂ ಷೇರುಪೇಟೆಗಳಿಗೆ ಅನ್ವಯವಾಗುತ್ತದೆ. ವಿಶ್ವದಲ್ಲಿ ಅತ್ಯಂತ ವೇಗದ ಬೆಳವಣಿಗೆಯನ್ನು ಕಾಣುತ್ತಿರುವ ಪ್ರಮುಖ ಅರ್ಥ ವ್ಯವಸ್ಥೆಗಳು ಹಾಗೂ ಷೇರುಪೇಟೆಗಳ ಸಾಲಿನಲ್ಲಿ ಭಾರತವು ತನ್ನ ಸ್ಥಾನ ಉಳಿಸಿಕೊಂಡಿದೆ. ಇದರ ನೇರ ಪ್ರಯೋಜನವನ್ನು ಷೇರುಪೇಟೆ ಹೂಡಿಕೆದಾರರು ಈಚಿನ ವರ್ಷಗಳಲ್ಲಿ ಕಂಡಿದ್ದಾರೆ. ಷೇರುಪೇಟೆಯಲ್ಲಿ, ಬೃಹತ್ ಗಾತ್ರದ ಉದ್ದಿಮೆಗಳಿಗೆ ಹೋಲಿಸಿದರೆ ಸಣ್ಣ ಹಾಗೂ ಮಧ್ಯಮ ಗಾತ್ರದ ಉದ್ದಿಮೆಗಳು ಹೆಚ್ಚಿನ ಲಾಭವನ್ನು ಕಂಡಿವೆ.

ಮುಂದಿನ ದಿನಗಳಲ್ಲಿ ಆರ್ಥಿಕ ಬೆಳವಣಿಗೆಯ ವೇಗ ಕಡಿಮೆ ಆಗುವ ಸಾಧ್ಯತೆ ಇದೆ. ಲಾರ್ಜ್‌ಕ್ಯಾಪ್ ವಲಯದ ಷೇರುಗಳ ಬೆಲೆಯು ಸಮರ್ಥನೀಯ ಮಟ್ಟದಲ್ಲಿ ಇರುವುದು ಆರ್ಥಿಕತೆಯ ಬೆಳವಣಿಗೆಯ ವೇಗಕ್ಕೆ ಸರಿಹೊಂದುವಂತೆ ಇದೆ. ಅರ್ಥ ವ್ಯವಸ್ಥೆ ಹಾಗೂ ಜಾಗತಿಕ ಮಾರುಕಟ್ಟೆಯಲ್ಲಿನ ಅನಿಶ್ಚಿತತೆಯ ಸಂದರ್ಭದಲ್ಲಿ, ದೇಶಿ ಹಾಗೂ ಜಾಗತಿಕ ಹೂಡಿಕೆದಾರರ ಆದ್ಯತೆಯು, ಸಣ್ಣ ಕಂಪನಿಗಳಿಗಿಂತಲೂ ಹೆಚ್ಚಾಗಿ ಸ್ಥಿರವಾದ ಲಾರ್ಜ್‌ಕ್ಯಾಪ್ ಕಂಪನಿಗಳೇ ಆಗಿರಬಹುದು.

ಲಾರ್ಜ್‌ಕ್ಯಾಪ್ ಕಂಪನಿಗಳಲ್ಲಿ ಹೂಡಿಕೆ ಮಾಡುವ ಹೆಚ್ಚಿನವರಿಗೆ ನಿಫ್ಟಿ–50 ಸೂಚ್ಯಂಕದ ಮೇಲಿನ ಹೂಡಿಕೆಯು ಮೊದಲ ಆಯ್ಕೆಯಾಗಿರುತ್ತದೆ. ಆದರೆ ದೇಶದ 50 ಅತಿದೊಡ್ಡ ಕಂಪನಿಗಳಲ್ಲಿ (ನಿಫ್ಟಿ 50 ಸೂಚ್ಯಂಕದಲ್ಲಿ ಇರುವ ಕಂಪನಿಗಳು) ಹೂಡಿಕೆ ಮಾಡಿದ ನಂತರ, ‘ಮುಂದೇನು’ ಎಂಬ ಪ್ರಶ್ನೆ ಸಹಜವಾಗಿ ಎದುರಾಗುತ್ತದೆ. ಇದಕ್ಕೆ ಉತ್ತರ, ಈ 50 ಅತಿದೊಡ್ಡ ಕಂಪನಿಗಳ ಆಚೆಗಿನ ದೊಡ್ಡ 50 ಕಂಪನಿಗಳು. ಮಾರುಕಟ್ಟೆ ಪಾಲನ್ನು ಹೆಚ್ಚಿಸಿಕೊಳ್ಳುವ ಹಾಗೂ ಲಾಭದ ಪ್ರಮಾಣವನ್ನು ಜಾಸ್ತಿ ಮಾಡಿಕೊಳ್ಳುವ ಸಾಮರ್ಥ್ಯವಿರುವ ಕಂಪನಿಗಳು ಇವು. ಇವು ಒಳ್ಳೆಯ ರೀತಿಯಲ್ಲಿ ನೆಲೆಯೂರಿರುವ ಕಂಪನಿಗಳು, ಗಟ್ಟಿಯಾದ ವಹಿವಾಟು ಹೊಂದಿರುವ ಕಂಪನಿಗಳು, ಹೊಸ ಬದಲಾವಣೆಗಳಿಂದಾಗಿ ಲಾಭ ಮಾಡಿಕೊಳ್ಳುವ ಸಾಮರ್ಥ್ಯ ಇರುವಂಥವು ಇವು. ಈ ಕಂಪನಿ ಹೂಡಿಕೆದಾರರಿಗೆ ಸ್ಥಿರತೆಯನ್ನೂ, ಬೆಳವಣಿಗೆಯ ಅವಕಾಶವನ್ನೂ ಒಟ್ಟಿಗೇ ನೀಡುತ್ತವೆ.

ಕಂಪನಿಗಳ ಮಾರುಕಟ್ಟೆ ಬಂಡವಾಳದ ಲೆಕ್ಕದಲ್ಲಿ ಇವು 51ರಿಂದ 100ರವರೆಗಿನ ಸ್ಥಾನವನ್ನು ಪಡೆದಿವೆ. ಇವು ‘ನಿಫ್ಟಿ ನೆಕ್ಸ್ಟ್–50’ ಸೂಚ್ಯಂಕದಲ್ಲಿರುವ ಕಂಪನಿಗಳು. ದೇಶದ ಆರ್ಥಿಕತೆಯ ಮುಂದಿನ ಹಂತದ ಬೆಳವಣಿಗೆಯಲ್ಲಿ ಭಾಗಿಯಾಗಲು ಈ ಸೂಚ್ಯಂಕ, ಈ ಕಂಪನಿಗಳು ಉತ್ತಮ ಆಯ್ಕೆಯಾಗಬಲ್ಲವು. ನಿಫ್ಟಿ–50 ಹಾಗೂ ನಿಫ್ಟಿ ನೆಕ್ಸ್ಟ್–50 ಸೂಚ್ಯಂಕಗಳಲ್ಲಿನ ಕಂಪನಿಗಳ ಮೇಲಿನ ಹೂಡಿಕೆಯು, ಲಾರ್ಜ್‌ಕ್ಯಾಪ್ ಕಂಪನಿಗಳ ಮೇಲಿನ ಹೂಡಿಕೆಯನ್ನು ಪರಿಪೂರ್ಣ ಆಗಿಸಬಲ್ಲದು.

ಭಾರಿ ಸಾಮರ್ಥ್ಯ ಇರುವ ಈ ಕಂಪನಿಗಳ ಮೇಲೆ ಹೂಡಿಕೆದಾರರು ಎರಡು ಬಗೆಗಳಲ್ಲಿ ಹಣ ತೊಡಗಿಸಬಹುದು. ಹೂಡಿಕೆದಾರರು ತಾವಾಗಿಯೇ ಈ ಕಂಪನಿಗಳ ಷೇರುಗಳನ್ನು ಖರೀದಿಸಬಹುದು ಅಥವಾ ಮ್ಯೂಚುವಲ್ ಫಂಡ್‌ಗಳ ಮೂಲಕ ಇಲ್ಲಿ ಹಣ ವಿನಿಯೋಗಿಸಬಹುದು. ಅಲ್ಲದೆ, ಪ್ಯಾಸಿವ್ ಮಾರ್ಗದ ಮೂಲಕವೂ ಈ ಕಂಪನಿಗಳಲ್ಲಿ ಹಣ ತೊಡಗಿಸಬಹುದು. ಇದಕ್ಕೆ ನಿಫ್ಟಿ ನೆಕ್ಸ್ಟ್–50 ಸೂಚ್ಯಂಕವನ್ನು ಆಧರಿಸಿದ ಇಟಿಎಫ್ ಸೂಕ್ತ ಆಯ್ಕೆಯಾಗುತ್ತದೆ. ಈ ಇಟಿಎಫ್ ಮೂಲಕ ಹಣ ತೊಡಗಿಸಿದಾಗ, ಈ ಸೂಚ್ಯಂಕದ ಕಂಪನಿಗಳಲ್ಲಿ ಕಡಿಮೆ ವೆಚ್ಚಕ್ಕೆ ಹೂಡಿಕೆ ಮಾಡಲು ಆಗುತ್ತದೆ.

ನಿಫ್ಟಿ ನೆಕ್ಸ್ಟ್–50 ಇಟಿಎಫ್‌ಗಳು ನಿಫ್ಟಿ ನೆಕ್ಸ್ಟ್–50 ಸೂಚ್ಯಂಕದಲ್ಲಿನ ಕಂಪನಿಗಳ ಮೇಲೆ, ಅವುಗಳಿಗೆ ಆ ಸೂಚ್ಯಂಕದಲ್ಲಿ ಇರುವ ಆದ್ಯತೆಗೆ ಅನುಗುಣವಾಗಿ ಹಣ ತೊಡಗಿಸುತ್ತವೆ. ಈ ಬಗೆಯ ಇಟಿಎಫ್‌ಗಳಲ್ಲಿ ಹಣ ತೊಡಗಿಸುವ ಮೂಲಕ ಸೀಮಿತ ಬಂಡವಾಳ ಬಳಸಿಯೂ, ವೈವಿಧ್ಯಮಯ ಕಂಪನಿಗಳಲ್ಲಿ ಹಣ ತೊಡಗಿಸಲು ಸಾಧ್ಯವಾಗುತ್ತದೆ. ಈ ಇಟಿಎಫ್‌ನಲ್ಲಿ ತೊಡಗಿಸಿದ ಹಣಕ್ಕೆ ಸಿಗುವ ಲಾಭದ ಪ್ರಮಾಣವು, ನಿಫ್ಟಿ ನೆಕ್ಸ್ಟ್–50 ಸೂಚ್ಯಂಕದ ಏರಿಕೆಯ ಪ್ರಮಾಣಕ್ಕೆ ತೀರಾ ಹತ್ತಿರದಲ್ಲಿರುತ್ತದೆ.

ಇಟಿಎಫ್‌ಗಳಲ್ಲಿ ಹೂಡಿಕೆ ಮಾಡುವುದು ಹಾಗೂ ಷೇರುಗಳಲ್ಲಿ ಹೂಡಿಕೆ ಮಾಡುವುದು ಬಹುತೇಕ ಒಂದೇ ಬಗೆಯಲ್ಲಿ ಇರುತ್ತದೆ. ಇಟಿಎಫ್ ಯೂನಿಟ್‌ಗಳನ್ನು ಷೇರುಪೇಟೆಯ ಮೂಲಕ ಖರೀದಿಸಬಹುದು, ಮಾರಾಟ ಮಾಡಬಹುದು. ಆದರೆ ಇದಕ್ಕೆ ಡಿಮ್ಯಾಟ್ ಖಾತೆಯ ಅಗತ್ಯ ಇದೆ.

ನಿಫ್ಟಿ ನೆಕ್ಸ್ಟ್ 50 ಸೂಚ್ಯಂಕ ಹಾಗೂ ನಿಫ್ಟಿ ನೆಕ್ಸ್ಟ್ 50 ಇಟಿಎಫ್‌ಗಳು ಈಗಿನ ಸಂದರ್ಭದಲ್ಲಿ ಹೆಚ್ಚು ಆಕರ್ಷಕವಾಗಿ ಕಾಣುತ್ತಿವೆ. ಏಕೆಂದರೆ ಈ ಸೂಚ್ಯಂಕದಲ್ಲಿ ಜಾಗತಿಕ ಮಾರುಕಟ್ಟೆಯ ಮೇಲೆ, ರಫ್ತು ಆಧಾರಿತ ವಲಯಗಳ ಮೇಲೆ ಅವಲಂಬಿತವಾಗಿರುವ ಕಂಪನಿಗಳು ಕಡಿಮೆ ಇವೆ. ಜಾಗತಿಕ ಬೆಳವಣಿಗೆಗಳು, ಜಾಗತಿಕ ರಾಜಕೀಯ ವಿದ್ಯಮಾನಗಳು, ಕರೆನ್ಸಿ ಮಾರುಕಟ್ಟೆಯಲ್ಲಿನ ಏರಿಳಿತಗಳಿಗೆ ಸ್ಪಂದಿಸುವ ಮಾಹಿತಿ ತಂತ್ರಜ್ಞಾನದಂತಹ ವಲಯಗಳಿಗೆ ಈ ಸೂಚ್ಯಂಕದಲ್ಲಿ ಆದ್ಯತೆ ಕಡಿಮೆ ಇದೆ.

(ಲೇಖಕ ಐಸಿಐಸಿಐ ಪ್ರುಡೆನ್ಶಿಯಲ್ ಎಎಂಸಿ ಕಂಪನಿ ಹೂಡಿಕೆ ಕಾರ್ಯತಂತ್ರದ ಮುಖ್ಯಸ್ಥ)



ಜಾಗತಿಕ ಅನಿಶ್ಚಿತತೆಗಳು ಹೆಚ್ಚಾಗಿರುವ ಈ ಹೊತ್ತಿನಲ್ಲಿ ವಿದೇಶಿ ಮಾರುಕಟ್ಟೆಗಳ ಮೇಲೆ ಹೆಚ್ಚಿನ ಅವಲಂಬನೆ ಇರುವ ಹೂಡಿಕೆಗಳು ಹೆಚ್ಚಿನ ಲಾಭ ನೀಡುತ್ತಿಲ್ಲ. ಆದರೆ ವಿದೇಶಗಳ ಮೇಲೆ ಅವಲಂಬನೆ ಕಡಿಮೆ ಇರುವ ಹಾಗೂ ಬೇರೆ ಆಯಾಮಗಳಿಂದ ಸ್ಥಿರವಾಗಿಯೂ ಇರುವ ಕೆಲವು ಕಂಪನಿಗಳ ಮೇಲಿನ ಹೂಡಿಕೆಯು ಈ ಸಂದರ್ಭಕ್ಕೆ ಹೆಚ್ಚು ಸೂಕ್ತವಾಗಬಹುದು ಎಂಬ ಅನಿಸಿಕೆ ತಜ್ಞರದ್ದು.

ಮಹಿಳೆಯರು ಮತ್ತು ಎಸ್‌ಐಪಿ: ಹೇಗಿದೆ ಟ್ರೆಂಡ್?



(ಇದು ಮಹಿಳೆಯರು ಎಸ್‌ಐಪಿ ಮೂಲಕ ಮ್ಯೂಚುವಲ್ ಫಂಡ್‌ಗಳಲ್ಲಿ ತೊಡಗಿಸಿರುವ, ನಿರ್ವಹಣೆಯಲ್ಲಿರುವ ಹಣದ ಮೊತ್ತ)

2024ರ ಮಾರ್ಚ್‌ವರೆಗಿನ ದತ್ತಾಂಶದ ಅನ್ವಯ, ವಿವಿಧ ಆಸ್ತಿ ನಿರ್ವಹಣಾ ಕಂಪನಿಗಳು ನಿರ್ವಹಿಸುತ್ತಿರುವ ಎಸ್‌ಐಪಿ ಹೂಡಿಕೆ ಮೊತ್ತದಲ್ಲಿ ಮಹಿಳೆಯರಿಂದ ಎಸ್‌ಐಪಿ ಮೂಲಕ ಬಂದಿರುವ ಮೊತ್ತದ ಪಾಲು ಶೇ 30.5ಕ್ಕಿಂತ ಹೆಚ್ಚಿದೆ.

319.3%
2019ರ ಮಾರ್ಚ್‌ನಿಂದ 2024ರ ಮಾರ್ಚ್ ನಡುವಿನ ಅವಧಿಯಲ್ಲಿ ಮಹಿಳೆಯರಿಂದ ಆಗುವ ಎಸ್‌ಐಪಿಗಳ ಮೊತ್ತವು ಶೇಕಡ 319.3ರಷ್ಟು ಹೆಚ್ಚಳ ಕಂಡಿದೆ. ಅಂದರೆ ಮಹಿಳೆಯರು ಶಿಸ್ತುಬದ್ಧವಾಗಿ ಎಸ್‌ಐಪಿ ಮೂಲಕ ಹಣ ಹೂಡಿಕೆ ಮಾಡುತ್ತಿದ್ದಾರೆ.

ತಾಳ್ಮೆ ಹೆಚ್ಚು
ಮಹಿಳೆಯರು ಹೂಡಿಕೆ ಮಾಡಿದ ಹಣವನ್ನು ತಕ್ಷಣಕ್ಕೆ ಹಿಂಪಡೆಯದೆ ಇರುವ ಪ್ರವೃತ್ತಿ ಹೆಚ್ಚುತ್ತಿದೆ. ಮಹಿಳೆಯರು ಐದು ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಗೆ ತೊಡಗಿಸಿರುವ ಹಣದ ಪ್ರಮಾಣವು ಶೇ 21.3ರಷ್ಟು ಇದೆ. ಪುರುಷರ ಪೈಕಿ ಐದು ವರ್ಷಕ್ಕಿಂತ ಹೆಚ್ಚಿನ ಅವಧಿಗೆ ತೊಡಗಿಸಿರುವ ಹಣದ ಪ್ರಮಾಣವು ಶೇ 19.9ರಷ್ಟು ಮಾತ್ರ.

ಬ್ರೋಕರೇಜ್ ಮಾತು

ಅಪೋಲೊ ಹಾಸ್ಪಿಟಲ್ಸ್

ದೇಶದ ಆರೋಗ್ಯಸೇವಾ ವಲಯದ ಪ್ರಮುಖ ಕಂಪನಿಗಳ ಪೈಕಿ ಒಂದಾಗಿರುವ ಅಪೋಲೊ ಹಾಸ್ಪಿಟಲ್ಸ್ ಎಂಟರ್‌ಪ್ರೈಸ್ ಕಂಪನಿಯ ಷೇರುಬೆಲೆಯು ₹9,300ಕ್ಕೆ ತಲುಪಬಹುದು ಎಂದು ಬ್ರೋಕರೇಜ್ ಸಂಸ್ಥೆ ಪ್ರಭುದಾಸ್ ಲೀಲಾಧರ್ ಅಂದಾಜು ಮಾಡಿದೆ.

ಆರೋಗ್ಯಸೇವಾ ವಲಯದ ಇತರ ಕೆಲವು ಷೇರುಗಳಿಗೆ ಹೋಲಿಕೆ ಮಾಡಿದರೆ ಅಪೋಲೊ ಹಾಸ್ಪಿಟಲ್ ಎಂಟರ್‌ಪ್ರೈಸ್‌ನ ಷೇರುಮೌಲ್ಯವು 2023–24ನೇ ಹಣಕಾಸು ವರ್ಷದಲ್ಲಿ ಹೆಚ್ಚು ಉತ್ತಮ ಗಳಿಕೆ ನೀಡಿಲ್ಲ ಎಂದು ಪ್ರಭುದಾಸ್ ಲೀಲಾಧರ್ ಹೇಳಿದೆ.

2024–25ರಿಂದ 2027–28ನೇ ಹಣಕಾಸು ವರ್ಷದವರೆಗೆ ಕಂಪನಿಯ ಗಳಿಕೆಯ (ಎಬಿಟ್‌ಡಾ) ಸಂಯುಕ್ತ ವಾರ್ಷಿಕ ಬೆಳವಣಿಗೆ ದರವು ಶೇ 26ರಷ್ಟು ಇರಲಿದೆ ಎಂದು ಅಂದಾಜು ಮಾಡಲಾಗಿದೆ. ಮುಂದಿನ 12 ತಿಂಗಳುಗಳಲ್ಲಿ ಕಂಪನಿಯು ಬೆಂಗಳೂರು, ಕೋಲ್ಕತ್ತ, ಪುಣೆ, ದೆಹಲಿಯಂತಹ ಪ್ರಮುಖ ನಗರಗಳಲ್ಲಿ ಒಟ್ಟು ಏಳು ಆಸ್ಪತ್ರೆಗಳ ಕಾರ್ಯಾಚರಣೆ ಆರಂಭಿಸಲಿದೆ. ಇವೆಲ್ಲವುಗಳ ಪ್ರಯೋಜನವು 2026–27 ಹಾಗೂ 2027–28ರ ದ್ವಿತೀಯಾರ್ಧದಲ್ಲಿ ಕಾಣಸಿಗಲಿದೆ ಎಂದು ಬ್ರೋಕರೇಜ್ ಸಂಸ್ಥೆ ಹೇಳಿದೆ. ಬುಧವಾರದ ವಹಿವಾಟಿನ ಅಂತ್ಯಕ್ಕೆ ಕಂಪನಿಯ ಷೇರು ಮೌಲ್ಯವು ₹7,745 ಆಗಿತ್ತು.

ಫೀನಿಕ್ಸ್ ಮಿಲ್ಸ್

ಫೀನಿಕ್ಸ್ ಮಿಲ್ಸ್‌ನ ಷೇರುಮೌಲ್ಯವು ₹2,044ಕ್ಕೆ ತಲುಪಬಹುದು ಎಂದು ಬ್ರೋಕರೇಜ್ ಸಂಸ್ಥೆ ಮೋತಿಲಾಲ್ ಓಸ್ವಾಲ್ ಹೇಳಿದೆ.

ಲಖನೌ, ಇಂದೋರ್, ಅಹಮದಾಬಾದ್, ಪುಣೆ ಮತ್ತು ಬೆಂಗಳೂರಿನಲ್ಲಿ ಹೊಸ ಮಾಲ್‌ಗಳನ್ನು ನಿರ್ಮಿಸಿ ಕಂಪನಿಯು ತನ್ನ ನೆಲೆಯನ್ನು ವಿಸ್ತರಿಸಿದೆ. ಅಲ್ಲದೆ, ಐಎಸ್‌ಎಂಡಿಪಿಎಲ್ (ಐಲ್ಯಾಂಡ್ ಸ್ಟಾರ್ ಮಾಲ್ ಡೆವಲಪರ್ಸ್) ಕಂಪನಿಯನ್ನು ಸ್ವಾಧೀನಪಡಿಸಿಕೊಂಡಿದೆ. ಈ ಉಪಕ್ರಮಗಳು ಫೀನಿಕ್ಸ್ ಮಿಲ್ಸ್ ಕಂಪನಿಯ ಪೋರ್ಟ್‌ಫೋಲಿಯೊ ಗಾತ್ರವನ್ನು 2029–30ನೇ ಹಣಕಾಸು ವರ್ಷದ ಹೊತ್ತಿಗೆ ದುಪ್ಪಟ್ಟುಗೊಳಿಸಲಿವೆ ಎಂದು ಮೋತಿಲಾಲ್ ಓಸ್ವಾಲ್ ಅಂದಾಜು ಮಾಡಿದೆ.

ಫೀನಿಕ್ಸ್ ಮಿಲ್ಸ್‌ನ ಕಚೇರಿ ಸ್ಥಳದ ಪೋರ್ಟ್‌ಫೋಲಿಯೊ 2026–27ನೇ ಹಣಕಾಸು ವರ್ಷಕ್ಕೆ ಮೊದಲು ನಾಲ್ಕು ಪಟ್ಟು ಹೆಚ್ಚಳ ಕಾಣುವ ನಿರೀಕ್ಷೆಯನ್ನು ಕಂಪನಿಯ ಆಡಳಿತದ ಚುಕ್ಕಾಣಿ ಹಿಡಿದವರು ಹೊಂದಿದ್ದಾರೆ. ಅಂದರೆ ವರಮಾನದ ವಾರ್ಷಿಕ ಸಂಯುಕ್ತ ಬೆಳವಣಿಗೆ ದರವು (ಸಿಎಜಿಆರ್) 2024–25ರಿಂದ 2026–27ರವರೆಗೆ ಶೇ 71ರಷ್ಟು ಇರಲಿದೆ. ಬುಧವಾರದ ವಹಿವಾಟಿನ ಅಂತ್ಯಕ್ಕೆ ಕಂಪನಿಯ ಷೇರುಮೌಲ್ಯವು ₹1,515.50 ಆಗಿತ್ತು.

(ಬ್ರೋಕರೇಜ್ ಕಂಪನಿಗಳು ನೀಡುವ ಮಾಹಿತಿ, ವಿವರಗಳಿಗೆ ಪತ್ರಿಕೆ ಹೊಣೆಯಲ್ಲ)

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಸಮಾಜ ವಿಜ್ಞಾನ

ಅಧ್ಯಾಯ – 3 ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

6) ‘ದ್ವಿ ಸರ್ಕಾರ ಪದ್ಧತಿ’ ಎಂದರೆ?
ಎ) ನಾಗರಿಕ ಮತ್ತು ಅಪರಾಧ ನ್ಯಾಯ ನಿರ್ವಹಣಾ ವ್ಯವಸ್ಥೆಯನ್ನು ಭಾರತೀಯ ಅಧಿಕಾರಿಗಳಿಗೆ ನೀಡಲಾಯಿತು. ಮತ್ತು ಕಂದಾಯ ವಸೂಲಾತಿ, ವಸೂಲಾದ ಕಂದಾಯದ ನಿರ್ವಹಣಾ ಆಡಳಿತವನ್ನು ಬ್ರಿಟಿಷರು ತಮ್ಮ ಬಳಿಯೇ ಇಟ್ಟುಕೊಂಡರು.
ಬಿ) ಕಂದಾಯ ವಸೂಲಾತಿ, ವಸೂಲಾದ ಕಂದಾಯದ ನಿರ್ವಹಣಾ ಆಡಳಿತವನ್ನು ಭಾರತೀಯ ಅಧಿಕಾರಿಗಳಿಗೆ ನೀಡಲಾಯಿತು. ಮತ್ತು ನಾಗರಿಕ ಮತ್ತು ಅಪರಾಧ ನ್ಯಾಯ ನಿರ್ವಹಣಾ ವ್ಯವಸ್ಥೆಯನ್ನು ಬ್ರಿಟಿಷರು ತಮ್ಮ ಬಳಿಯೇ ಇಟ್ಟುಕೊಂಡರು.
ಸಿ) ಕಂದಾಯ ವಸೂಲಾತಿ, ನಾಗರಿಕ ಮತ್ತು ಅಪರಾಧ ನ್ಯಾಯ ನಿರ್ವಹಣೆ, ವಸೂಲಾದ ಕಂದಾಯದ ನಿರ್ವಹಣಾ ಆಡಳಿತವನ್ನು ಬ್ರಿಟಿಷರು ತಮ್ಮ ಬಳಿಯೇ ಇಟ್ಟುಕೊಂಡು ಸಮಗ್ರ ಆಡಳಿತವನ್ನು ನಡೆಸುವುದು.
ಡಿ) ಮೇಲಿನ ಯಾವುದೂ ಅಲ್ಲ
ಉತ್ತರ:– ಎ

7) 1772ರಲ್ಲಿ ಗವರ್ನರ್ ಆಗಿ ಅಧಿಕಾರ ವಹಿಸಿಕೊಂಡ ವಾರನ್ ಹೇಸ್ಟಿಂಗ್ಸ್‌ನು ಜಾರಿಗೆ ತಂದ ಹೊಸ ಯೋಜನೆಯ ಪ್ರಕಾರ ಪ್ರತಿ ಜಿಲ್ಲೆಯು ಎಷ್ಟು ಬಗೆಯ ನ್ಯಾಯಾಲಯಗಳನ್ನು ಹೊಂದಿರಬೇಕಿತ್ತು?
ಎ) ಮೂರು ಬಿ) ನಾಲ್ಕು
ಸಿ) ಒಂದು ಡಿ) ಎರಡು
ಉತ್ತರ:– ಡಿ

8) ‘ದಿವಾನಿ ಅದಾಲತ್’ ಯಾವುದಕ್ಕೆ ಸಂಬಂಧಿಸಿದೆ?
ಎ) ನಾಗರಿಕ(ಸಿವಿಲ್) ನ್ಯಾಯಾಲಯಗಳು
ಬಿ) ಅಪರಾಧ ನ್ಯಾಯಾಲಯಗಳು
ಸಿ) ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯಾಲಯ
ಡಿ) ಮೇಲಿನ ಯಾವುದೂ ಅಲ್ಲ
ಉತ್ತರ:– ಎ

9) ಬ್ರಿಟಿಷರ ಕಾಲದಲ್ಲಿ ನಾಗರಿಕ ನ್ಯಾಯಾಲಯಗಳು (ಸಿವಿಲ್) .... ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದವು.
ಎ) ಯೂರೋಪಿನ ಬಿ) ಭಾರತೀಯ
ಸಿ) ಮುಸ್ಲಿಂ ಡಿ) ಪಾರ್ಸಿ
ಉತ್ತರ:– ಎ

10) ಪ್ರಥಮತಃ ವ್ಯವಸ್ಥಿತವಾದ ಪೊಲೀಸ್ ವಿಭಾಗವನ್ನು ಅಸ್ತಿತ್ವಕ್ಕೆ ತಂದನು. ಇವನು ‘ಸೂಪರಿಟೆಂಡೆಂಟ್ ಆಫ್ ಪೊಲೀಸ್’ (SP) ಎನ್ನುವ ಹೊಸ ಹುದ್ದೆಯನ್ನು ಸೃಷ್ಟಿಸಿದನು ಹಾಗಾದರೆ ಅವನು ಯಾರು?
ಎ) ಲಾರ್ಡ್ ಮಿಂಟೋ ಬಿ) ಲಾರ್ಡ್ ಕರ್ಜನ್
ಸಿ) ಲಾರ್ಡ್ ಕಾರ್ನ್ ವಾಲೀಸನು
ಡಿ) ಲಾರ್ಡ್ ಮೌಂಟ್ ಬ್ಯಾಟನ್
ಉತ್ತರ:– ಸಿ

11) ಲಾರ್ಡ್ ಕಾರ್ನ್‌ವಾಲೀಸನು 1793ರಲ್ಲಿ ಪ್ರತಿ ಜಿಲ್ಲೆಯನ್ನು ‘ಠಾಣೆ’ಗಳನ್ನಾಗಿ ವಿಭಜಿಸಿ ಪ್ರತಿ ಠಾಣೆಯನ್ನು ‘ಕೊತ್ವಾಲ’ರ ಅಧೀನದಲ್ಲೂ, ಹಳ್ಳಿಗಳು ....ಅಧೀನದಲ್ಲೂ ಇರುವಂತೆ ಮಾಡಿದನು.
ಎ) ‘ಚೌಕಿದಾರ’ರ ಬಿ) ನ್ಯಾಯಾಧೀಶ
ಸಿ) ಖಾಜಿ ಡಿ) ಮೇಲಿನ ಯಾರೂ ಅಲ್ಲ
ಉತ್ತರ:– ಎ

12) ಇಡೀ ಪೊಲೀಸ್ ವ್ಯವಸ್ಥೆಯನ್ನು ಬ್ರಿಟಿಷ್ ಅಧಿಕಾರಿಗಳ ಅಧೀನಕ್ಕೊಳಪಡಿಸಲಾಯಿತು. ಹಾಗೂ ಬ್ರಿಟಿಷ್ ಮ್ಯಾಜಿಸ್ಟ್ರೇಟ್‌ಗಳನ್ನು ನೇಮಕ ಮಾಡುವ ಪದ್ಧತಿ ಜಾರಿಗೊಂಡಿತು. ಹಾಗಾದರೆ ಇದು ಜಾರಿಗೊಂಡ ವರ್ಷ ಯಾವುದು?
ಎ) 1791 ಬಿ) 1781
ಸಿ) 1800 ಡಿ) 1761
ಉತ್ತರ:– ಬಿ

13) 1861ರಲ್ಲಿ ‘ಪೊಲೀಸ್ ಕಾಯ್ದೆ’ಯನ್ನು ಜಾರಿಗೊಳಿಸಲಾಯಿತು. ಈ ಕಾಯ್ದೆಯೇ ಕಾನೂನು ಮತ್ತು ಸುವ್ಯವಸ್ಥೆ ಆಡಳಿತಕ್ಕೆ ಮುಖ್ಯ ಅಡಿಪಾಯವಾಯಿತು. ಆದರೆ ಅದರಲ್ಲಿದ್ದ ಪ್ರಮುಖ ದೋಷ ಯಾವುದಾಗಿತ್ತು?
ಎ) ಪೊಲೀಸ್ ಅಧಿಕಾರಿಗಳ ನೇಮಕಾತಿಯಲ್ಲಿ ಭಾರತೀಯರಿಗೆ ಅವಕಾಶವಿರಲಿಲ್ಲ.
ಬಿ) ಈ ಕಾಯ್ದೆ ಮುಸ್ಲಿಂರಿಗೆ ಮಾತ್ರ ಅನ್ವಯಿಸುತಿತ್ತು.
ಸಿ) ಇದು ಕೇವಲ ಹಿಂದುಗಳಿಗೆ ಮಾತ್ರ ಅನ್ವಯವಾಗುತಿತ್ತು
ಡಿ) ಮೇಲಿನ ಯಾವುದೂ ಅಲ್ಲ
ಉತ್ತರ:– ಎ

14) ಬ್ರಿಟಿಷರ ಕಾಲದಲ್ಲಿ ಭಾರತೀಯರಿಗೆ ಸೈನ್ಯದಲ್ಲಿ ಲಭಿಸುತ್ತಿದ್ದ ಅತ್ಯುನ್ನತ ಹುದ್ದೆಯೆಂದರೆ ಯಾವುದು?
ಎ) ಸುಬೇದಾರ್ ಬಿ) ಕಾರಕೂನ್
ಸಿ) ಲೆಫ್ಟಿನೆಂಟ್ ಡಿ) ಮೇಲಿನ ಎಲ್ಲವೂ
ಉತ್ತರ:– ಎ

15) ಬ್ರಿಟಿಷರು ಬಂಗಾಳ ಪ್ರಾಂತ್ಯವನ್ನು ತಮ್ಮ ಕೇಂದ್ರವಾಗಿಟ್ಟುಕೊಂಡರು. ಈಸ್ಟ್ ಇಂಡಿಯಾ ಕಂಪೆನಿಯು ಬ್ರಿಟಿಷ್ ಸರ್ಕಾರಕ್ಕೆ ವಾರ್ಷಿಕವಾಗಿ ಎಷ್ಟು ಪೌಂಡ್‌ಗಳನ್ನು ಪಾವತಿಸಬೇಕಿತ್ತು.
ಎ) ಹತ್ತು ಲಕ್ಷ ಬಿ) ಇಪ್ಪತ್ತು ಲಕ್ಷ
ಸಿ) ಒಂದು ಲಕ್ಷ ಡಿ) ನಾಲ್ಕು ಲಕ್ಷ
ಉತ್ತರ:– ಡಿ

16) ವಾರ್ಷಿಕವಾಗಿ ನಿರ್ದಿಷ್ಟ ಕಂದಾಯದ ಹಣವನ್ನು ಪಡೆಯಲು ಲಾರ್ಡ್ ಕಾರ್ನ್‌ವಾಲೀಸನು 1793ರಲ್ಲಿ ಬಂಗಾಳ ಮತ್ತು ಬಿಹಾರ ಪ್ರಾಂತ್ಯಗಳಲ್ಲಿ ಹೊಸ ಕಂದಾಯ ಪದ್ಧತಿಯನ್ನು ಜಾರಿಗೊಳಿಸಿದನು. ಇದನ್ನು ಏನೆಂದು ಕರೆಯಲಾಯಿತು?
ಎ) ರೈತವಾರಿ ಪದ್ಧತಿ ಬಿ) ಮಹಲ್‌ವಾರಿ ಪದ್ಧತಿ
ಸಿ) ಖಾಯಂ ಜಮೀನ್ದಾರಿ ಪದ್ಧತಿ ಡಿ) ಪ್ರಗತಿವಾದಿ ಪದ್ಧತಿ
ಉತ್ತರ:– ಸಿ

17) ಬ್ರಿಟಿಷ್ ಭೂಕಂದಾಯ ನೀತಿಗಳಿಂದ “ಭಾರತದ ರೈತರು ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಬದುಕಿ, ಸಾಲದಲ್ಲೇ ಸತ್ತರು”. ಎಂದು ಯಾರೂ ಹೇಳಿದ್ದರು?
ಎ) ಚಾರ್ಲ್ಸ್ ಮೆಟಕಾಫ್ ಬಿ) ಲಾರ್ಡ್ ಮಿಂಟೋ
ಸಿ) ಆರ್‌ಸಿ ಮುಜುಮದಾರ್ ಡಿ) ಆರ್‌ಸಿ ದತ್
ಉತ್ತರ:– ಎ

18) ರೈತವಾರಿ ಪದ್ಧತಿಯನ್ನು ಮೊದಲಿಗೆ ಒಂದು ಪ್ರಯೋಗವಾಗಿ ಎಲ್ಲಿ ಜಾರಿಗೊಳಿಸಲಾಗಿತ್ತು?
ಎ) ಕರ್ನಾಟಕ ಬಿ) ಬಾರಮಹಲ್
ಸಿ) ಜಮ್ಮು ಡಿ) ತಮಿಳುನಾಡು
ಉತ್ತರ:– ಬಿ

19) ಥಾಮಸ್ ಮನ್ರೊ ಮದರಾಸು ಮತ್ತು ಮೈಸೂರು ಪ್ರಾಂತ್ಯಗಳಲ್ಲಿ 1801ರ ನಂತರ ಜಾರಿಗೊಳಿಸಿದ ಕಂದಾಯ ಪದ್ಧತಿ ಯಾವುದು?
ಎ) ರೈತವಾರಿ. ಬಿ) ಮಹಲವಾರಿ
ಸಿ) ಕಾಯಂ ಜಮೀನ್ದಾರಿ ಡಿ) ಮೇಲಿನ ಯಾವುದೂ ಅಲ್ಲ.
ಉತ್ತರ:– ಎ

20) ಕೆಳಗಿನವುಗಳನ್ನು ಗಮನಿಸಿ
1) ಭೂಮಿ ಉಳುಮೆ ಮಾಡುತ್ತಿದ್ದವನನ್ನು ಅದರ ಮಾಲೀಕನೆಂದು ಸರ್ಕಾರ ಮಾನ್ಯ ಮಾಡಿತು.
2) ಅವನೇ ನೇರವಾಗಿ ತಾನು ಕೃಷಿ ಭೂಮಿಯಲ್ಲಿ ಪಡೆದ ಉತ್ಪನ್ನದ ಶೇಕಡ 50ರಷ್ಟು ಭಾಗವನ್ನು ಕಂದಾಯದ ರೂಪದಲ್ಲಿ ಸರ್ಕಾರಕ್ಕೆ ಸಲ್ಲಿಸಬೇಕಾಯಿತು.
3) ಕಂದಾಯವನ್ನು 30 ವರ್ಷಗಳ ಅವಧಿಗೆ ಎಂದು ನಿರ್ಧರಿಸಲಾಯಿತು. ನಂತರ ಅದನ್ನು ಪರಾಮರ್ಶೆಗೂ ಒಳಪಡಿಸಬಹುದಾಗಿತ್ತು.

(ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

Chemistry

The d- and f-Block Elements

28.Along the period of each transition series, density increases. Give reason.
Ans:This is because decrease in metallic radius due to increase in effective nuclear charge.

29.Explain the variations of ionization enthalpies in d-block elements.
Ans: The ionization enthalpy of 3d series increase as we move across a period. This is due to the increase in effective nuclear charge which accompanies the filling of the inner d orbitals. The second ionization energies of the 3d series also increases with the increase in atomic number. But this trend is not regular and there are some irregular variations.

1.Second ionization enthalpy of Cr and Cu are sufficiently higher than their neighbours. This is due to their stable electronic configuration (d^5 in Cr and d^{10} in Cu).

2.The first ionization enthalpy of chromium is lower because removal of one electron produces extra stable d^5 configuration and that of zinc is higher because the removal of electron takes place from fully filled 4s orbital.

$$Cr = 3d^5 4s^1 \longrightarrow Cr^+ = 3d^5$$
$$Zn = 3d^{10} 4s^2 \longrightarrow Zn^{2+} = 3d^{10}$$

3. The second ionization enthalpy of Zn is less than second ionization enthalpy of Cu. This is because removal of second electron in Zn produces stable d^{10} configuration while the removal of second electron in Cu disrupts the d^{10} configuration with a considerable loss in exchange energy to form less stable d^9 configuration.

4.Second ionization enthalpy of Mn (Z = 25) is less than that of Fe (Z = 26). This is because removal of second electron from Mn disrupts stable d^5 configuration but in Fe produces d^6 (less stable than d^5).

5.Third ionization enthalpy of Mn is more than that of Fe. This is because removal of third electron from Mn disrupts stable d^5 configuration but in Fe removal of third electron forms stable d^5 configuration.

6.Third ionization energy of copper, nickel and zinc is very high. Because it is difficult to obtain oxidation state greater than two for these elements.

30.What is the reason for irregular variation of ionization enthalpies (first and second) in the first series (3d) of the transition elements?
Ans: The irregular variation of ionization enthalpies is due to varying degree of stability of different configurations.

31. 3d-series transition metals exhibit +2 as the most common oxidation state(except Sc) why?
Ans: The +2 oxidation state arises from the loss of two 4s electrons. This means that after scandium d-orbitals becomes more stable than the s-orbital. Hence 3d-series transition metals exhibit +2 as the most common oxidation state (except Sc).

32. Name the element of 3d series which shows maximum or highest oxidation state.
Ans: Manganese (Mn). O.S. = +7.

33. Name a transition element which does not exhibit variable oxidation states.
Ans: Zinc (Z = 30, O.S. = +2).

34.Which of the 3d series of the transition metals exhibits the largest number of oxidation states and why?
Ans: Manganese (Mn). The oxidation states of Mn are +2, +3, +4, +5, +6 and +7. Mn exhibits largest number of oxidation states due to the presence of maximum number of unpaired 3d electrons.

35. Why Cr^{2+} is reducing and Mn^{3+} oxidizing when both have d^4 configuration?
Ans: Cr^{2+} is reducing because its configuration changes from d^4 to d^3, the later has half filled t_{2g} level. Mn^{3+} is oxidizing because the configuration changes from Mn^{2+} to Mn^{3+} results in the half filled (d^5) configuration which has extra stability.

36.Why is the highest oxidation state of a metal exhibited in its oxide or fluoride only?
Ans: Both oxygen and fluorine are highly electronegative and have a very small size. Due to these properties, they are able to oxidize the metal to its highest oxidation state.

37. How does ionic character of metal oxides vary with oxidation number?
Ans: Lower the oxidation state of metal oxide higher the ionic character.

38. Between MnO and Mn_2O_7 which one of these has more covalent character?
Ans: Mn_2O_7 (Higher oxidation state will show covalent character).

39. What is meant by 'disproportionation' of an oxidation state? Give an example.
Ans: When a particular oxidation state becomes less stable relative to other oxidation states, one lower, one higher it is said to undergo disproportionation. For example, manganese (VI) becomes unstable relative to manganese (VII) and manganese (IV) in acidic solution.

$$3Mn^{VI}O_4^{2-} + 4H^+ \longrightarrow 2Mn^{VII}O_4^- + Mn^{IV}O_2 + 2H_2O$$

40. Arrange Cr_2O_3, CrO_3, CrO in increasing order of their acid character.
Ans: Higher oxidation state shows more acidic character.
Hence $CrO < Cr_2O_3 < CrO_3$

(Contd…….)

ಭೂ ಸ್ವಾಧೀನಕ್ಕೆ ನ್ಯಾಯಯುತ ಪರಿಹಾರ

ಯೋಜನೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಉಪಮುಖ್ಯಮಂತ್ರಿ ಭರವಸೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಮೂರು ದಿನಗಳಲ್ಲಿ ರೈತರಿಗೆ ನೀಡುವ ಪರಿಹಾರ ನಿಗದಿ
- ಕೇಂದ್ರ ಜಲಶಕ್ತಿ ಸಚಿವರು ಸಭೆ ಕರೆಯುವ ಭರವಸೆ
- ಯೋಜನಾ ವೆಚ್ಚ ಏರಿಕೆ ಸಾಧ್ಯತೆ

ಕೃಷ್ಣಾ ಮೇಲ್ದಂಡೆ

ಬೆಂಗಳೂರು: ಕೃಷ್ಣಾ ಮೇಲ್ದಂಡೆ ಯೋಜನೆಯ ಮೂರನೇ ಹಂತದ ಅನುಷ್ಠಾನಕ್ಕೆ ಅಗತ್ಯವಿರುವ ಭೂ ಸ್ವಾಧೀನಕ್ಕೆ ತ್ವರಿತ ಕ್ರಮ ಕೈಗೊಳ್ಳಲಾಗುವುದು. ಭೂಮಿ ಕಳೆದುಕೊಳ್ಳುವ ರೈತರಿಗೆ ಮೂರು ದಿನಗಳಲ್ಲಿ ನ್ಯಾಯಯುತ ಪರಿಹಾರ ನಿಗದಿ ಮಾಡಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಯೋಜನೆ ಅನುಷ್ಠಾನ ಕುರಿತು ಬುಧವಾರ ನಡೆದ ಸಭೆ ನಂತರ ಸುದ್ದಿಗಾರರ ಜತೆ ಮಾತನಾಡಿದ ಅವರು, ಯೋಜನೆ ಅನುಷ್ಠಾನಕ್ಕೆ ಸಹಕಾರ ನೀಡುವಂತೆ ಕೇಂದ್ರ ಜಲಶಕ್ತಿ ಸಚಿವರಿಗೂ ಮನವಿ ಮಾಡಲಾಗಿದೆ. ಸಭೆ ಕರೆಯುವ ಭರವಸೆ ನೀಡಿದ್ದಾರೆ. ಸೆ.4ರ ಸಚಿವ ಸಂಪುಟ ಸಭೆಯಲ್ಲೂ ಯೋಜನೆ ಅನುಷ್ಠಾನ ಕುರಿತು ಚರ್ಚೆ ನಡೆಸಲಾಗುವುದು ಎಂದು ಮಾಹಿತಿ ನೀಡಿದರು.

'ಭೂಸ್ವಾಧೀನ, ಭೂ ಪರಿಹಾರದ ಬಗ್ಗೆ ಈಗಾಗಲೇ ಹಲವು ಸುತ್ತು ಚರ್ಚೆ ನಡೆಸಲಾಗಿದೆ. ಹಿಂದಿನ ಸರ್ಕಾರದ ಸಂಪುಟ ಸಭೆ ಹಾಗೂ ಸಂಪುಟ ಉಪಸಮಿತಿ ಸಭೆಯಲ್ಲಿ ಪ್ರತಿ ಎಕರೆ ನೀರಾವರಿ ಜಮೀನಿಗೆ ₹24 ಲಕ್ಷ, ಒಣ ಭೂಮಿಗೆ ₹20 ಲಕ್ಷ ನಿಗದಿ ಮಾಡಿದ್ದರು. ಆದರೆ, ರೈತರು ಈ ಪರಿಹಾರವನ್ನು ಒಪ್ಪದೆ ಹೋರಾಟ ನಡೆಸಿದ್ದರು. ಈ ಕುರಿತು ಬೆಳಗಾವಿಯಲ್ಲೂ ಸಭೆ ನಡೆಸಿದ್ದೆವು. ಪರಿಹಾರ ಮೊತ್ತದ ವಿಚಾರವಾಗಿ ನ್ಯಾಯಾಲಯಗಳಲ್ಲೂ ವ್ಯತಿರಿಕ್ತ ತೀರ್ಪು ಬಂದಿವೆ. ಹೆಚ್ಚು ಪರಿಹಾರ ನೀಡಲು ಸಾಧ್ಯವಿಲ್ಲ. ರೈತರು ಸೇರಿದಂತೆ ಎಲ್ಲಾ ಪಕ್ಷಗಳ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ನ್ಯಾಯಯುತ ದರ ನಿಗದಿ ಮಾಡಲಾಗುವುದು' ಎಂದರು.

'ಯೋಜನಾ ವೆಚ್ಚ ₹75 ಸಾವಿರ ಕೋಟಿಯಿಂದ ₹1 ಲಕ್ಷ ಕೋಟಿಗೆ ಹೆಚ್ಚಳವಾಗಿದೆ. ಎಲ್ಲಾ ಸರ್ಕಾರಗಳು ಭರವಸೆ ನೀಡುತ್ತಲೇ ಬಂದಿವೆ. ಭೂಸ್ವಾಧೀನದ ವೆಚ್ಚಗಳಿಂದ ಇನ್ನಷ್ಟು ಏರಿಕೆಯಾಗುವ ಸಾಧ್ಯತೆ ಇದೆ' ಎಂದು ಮಾಹಿತಿ ನೀಡಿದರು.

ಡಿಕೆಶಿ–ತಿಮ್ಮಾಪುರ ಮಾತಿನ ಚಕಮಕಿ

ಕೃಷ್ಣಾ ಮೇಲ್ದಂಡೆ ಯೋಜನೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ ಅವರ ನಡುವೆ ಮಾತಿನ ಚಕಮಕಿ ನಡೆಯಿತು.

ಭೂ ಪರಿಹಾರ, ನ್ಯಾಯಾಲಯಗಳಲ್ಲಿ ಹೆಚ್ಚುವರಿ ಪರಿಹಾರ ಕೋರಿ ದಾಖಲಿಸಿರುವ ಪ್ರಕರಣಗಳ ಕುರಿತು ಚರ್ಚೆ ನಡೆಯುವಾಗ, ಪ್ರತಿ ಎಕರೆಗೆ ₹40 ಲಕ್ಷದಿಂದ ₹50 ಲಕ್ಷದವರೆಗೆ ನೀಡುವಂತೆ ಸಚಿವ ತಿಮ್ಮಾಪುರ ಕೋರಿದರು. ಅದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಡಿ.ಕೆ.ಶಿವಕುಮಾರ್, 'ಸಂಪುಟ ಸಚಿವರಾಗಿ ಈ ರೀತಿ ಹೇಳುವುದು ಸರಿಯಲ್ಲ. ಹಿಂದಿನ ಸರ್ಕಾರ ನಿಗದಿ ಮಾಡಿದ ದರ, ನ್ಯಾಯಾಲಯದ ತೀರ್ಪುಗಳನ್ನು ನೋಡಿಕೊಂಡು ನ್ಯಾಯಯುತ ದರ ನಿಗದಿ ಮಾಡೋಣ' ಎಂದರು.

'ಜನರ ಅಭಿಪ್ರಾಯಗಳನ್ನು ಗಮನಕ್ಕೆ ತರುವುದು ನನ್ನ ಜವಾಬ್ದಾರಿ. ಆ ಕೆಲಸ ಮಾಡಿದ್ದೇನೆ. ನಿಮ್ಮ ಅನುಭವ ಹಾಗೂ ಸರ್ವಸಮ್ಮತದ ಆಧಾರದಲ್ಲಿ ನಿರ್ಧಾರ ತೆಗೆದುಕೊಳ್ಳಿ' ಎಂದು ತಿಮ್ಮಾಪುರ ಪ್ರತಿಕ್ರಿಯಿಸಿದರು.

'ನೀವು ಸಚಿವರಾಗಿ ಇಂತಹ ವೇದಿಕೆಯಲ್ಲಿ ಈ ರೀತಿ ಮಾತನಾಡಬಾರದು. ಯೋಜನಾ ವೆಚ್ಚ ಏರಿಕೆಯಾಗುತ್ತಲೇ ಇದೆ' ಎಂದು ಶಿವಕುಮಾರ್ ಅಸಮಾಧಾನ ವ್ಯಕ್ತಪಡಿಸಿದರು.

ಸಾಹಿತಿ ಹಿರೇಮಠಗೆ 'ಶ್ರೀಚೆನ್ನರೇಣುಕ ಬಸವ' ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ (ಬೀದರ್ ಜಿಲ್ಲೆ): ಕಲಬುರಗಿ ಜಿಲ್ಲೆಯ ಸಾಹಿತಿ ಎಸ್.ಎಂ. ಹಿರೇಮಠ ಅವರು ಹಾರಕೂಡ ಹಿರೇಮಠ ಸಂಸ್ಥಾನದ ಪ್ರಸಕ್ತ ಸಾಲಿನ 'ಶ್ರೀಚೆನ್ನರೇಣುಕ ಬಸವ' ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಎಸ್. ಎಂ. ಹಿರೇಮಠ

ಪ್ರಶಸ್ತಿ ₹1 ಲಕ್ಷ ನಗದು, ಎರಡು ತೊಲೆ ಚಿನ್ನದ ಪದಕ, ಫಲಕ ಒಳಗೊಂಡಿದೆ.

'ಹಿರೇಮಠ ಅವರು 300ಕ್ಕೂ ಅಧಿಕ ಗ್ರಂಥ ರಚಿಸಿದ್ದಾರೆ. ಸಾಹಿತ್ಯ, ಶಿಕ್ಷಣ ಮತ್ತು ಸಂಶೋಧನಾ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆ ಪರಿಗಣಿಸಿ ಅವರಿಗೆ ಪ್ರಶಸ್ತಿ ನೀಡಲಾಗುತ್ತಿದೆ' ಎಂದು ಹಿರೇಮಠದ ಪೀಠಾಧಿಪತಿ ಚನ್ನವೀರ ಶಿವಾಚಾರ್ಯರು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಅಕ್ಟೋಬರ್ 1ರಂದು ಮಠದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಹೇಳಿದರು.

ಸಂತೋಷ ಸಾಂಕ್ರಾಮಿಕ: ಬಾನು

ದಸರಾ: ಮೈಸೂರು ಜಿಲ್ಲಾಡಳಿತದಿಂದ ಅಧಿಕೃತ ಆಹ್ವಾನ

ಪ್ರಜಾವಾಣಿ ವಾರ್ತೆ

ಲೇಖಕಿ ಬಾನು ಮುಷ್ತಾಕ್ ಅವರಿಗೆ ಮೈಸೂರು ಜಿಲ್ಲಾಧಿಕಾರಿ ಲಕ್ಷ್ಮಿಕಾಂತ್ ರೆಡ್ಡಿ ಅವರು ಬುಧವಾರ ಅಧಿಕೃತ ಆಹ್ವಾನ ನೀಡಿದರು

ಹಾಸನ: ಲೇಖಕಿ ಬಾನು ಮುಷ್ತಾಕ್ ಅವರಿಗೆ ನಗರದ ಅವರ ನಿವಾಸದಲ್ಲಿ ಬುಧವಾರ ಶಾಲು ಹೊದಿಸಿ, ಮೈಸೂರು ಪೇಟ ತೊಡಿಸಿ ಸನ್ಮಾನಿಸಿದ ಮೈಸೂರು ಜಿಲ್ಲಾಡಳಿತ, ನಾಡಹಬ್ಬ ದಸರಾ ಉತ್ಸವವನ್ನು ಉದ್ಘಾಟಿಸಲು ಅಧಿಕೃತವಾಗಿ ಆಹ್ವಾನಿಸಿತು.

ದಸರಾ ವಿಶೇಷಾಧಿಕಾರಿಯೂ ಆದ ಮೈಸೂರು ಜಿಲ್ಲಾಧಿಕಾರಿ ಲಕ್ಷ್ಮಿಕಾಂತ್ ರೆಡ್ಡಿ ದಸರಾ ಉತ್ಸವದ ಆಹ್ವಾನ ಪತ್ರಿಕೆಯನ್ನು ನೀಡಿದರು.

ಈ ವೇಳೆ ಮಾತನಾಡಿದ ಲೇಖಕಿ, 'ಇದೊಂದು ರೀತಿ ಸಾಂಕ್ರಾಮಿಕ ಸಂತೋಷ. ಎಲ್ಲೆಡೆ ಸಂಭ್ರಮವಿದೆ. ಆಹ್ವಾನವನ್ನು ನೀಡಿದ ನಾಡಿನ ಸಮಸ್ತ ಕನ್ನಡಿಗರಿಗೆ, ರಾಜ್ಯ ಸರ್ಕಾರ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಮೈಸೂರು ಜಿಲ್ಲಾಡಳಿತಕ್ಕೆ ಧನ್ಯವಾದ ಸಲ್ಲಿಸುತ್ತೇನೆ' ಎಂದರು.

'ಸೆ.22ಕ್ಕೂ ಮೊದಲು ಮೈಸೂರಿಗೆ ತೆರಳುವ ಕುರಿತು ಚಿಂತಿಸಿಲ್ಲ. ದಸರಾ ಉದ್ಘಾಟನೆಗೆ ಮುನ್ನ ವಿದೇಶ ಪ್ರವಾಸಕ್ಕೆ ತೆರಳಬೇಕು. ಬಳಿಕ ಮೈಸೂರು ಜಿಲ್ಲಾಡಳಿತದೊಂದಿಗೆ ಮಾತನಾಡಿ ತಿಳಿಸುವೆ' ಎಂದರು.

ಲಕ್ಷ್ಮಿಕಾಂತ್ ರೆಡ್ಡಿ ಮಾತನಾಡಿ, 'ಮುಖ್ಯಮಂತ್ರಿ ಅವರ ನಿರ್ದೇಶನದಂತೆ ಆಹ್ವಾನಿಸಲಾಗಿದೆ. ದಸರಾ ಉದ್ಘಾಟಿಸಲು ಸಂತಸದಿಂದ ಒಪ್ಪಿದ್ದಾರೆ. ಮೈಸೂರಿಗೆ ಬರುವಾಗಲೂ ಜಿಲ್ಲಾಡಳಿತ ಗೌರವಪೂರ್ವಕವಾಗಿ ಸ್ವಾಗತಿಸಲಿದೆ' ಎಂದು ಹೇಳಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಶಿವರಾಜ್, ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಂ.ಜೆ. ರೂಪಾ, ಮೈಸೂರು ಜಿಲ್ಲಾ ಪಂಚಾಯಿತಿ ಸಿಇಒ ಯುಕೇಶ್ ಕುಮಾರ್, ಪಾಲಿಕೆ ಆಯುಕ್ತ ತನ್ವಿರ್ ಆಸಿಫ್, ಬಾನು ಮುಷ್ತಾಕ್ ಅವರ ಪತಿ ಮೊಹಿಯುದ್ದೀನ್ ಮುಷ್ತಾಕ್ ಇದ್ದರು.

ಈದ್‌ಗೆ ಝಗಮಗ...

–ಪ್ರಜಾವಾಣಿ ಚಿತ್ರ
ಲವ ಕೆ.

ಈದ ಮಿಲಾದ್ ಹಬ್ಬ ಆಚರಣೆಗೆ ಹೊಸಪೇಟೆ ಸಜ್ಜಾಗಿದ್ದು, ಕೌಲ್‌ಪೇಟೆಯ ಹಜರತ್ ಸೈಯದ್ ಮೊಹಮ್ಮದ್ ಷಾ ಖಾದ್ರಿ ಜಾಮಿಯಾ ಮಸೀದಿ ವಿದ್ಯುತ್ ದೀಪಗಳೊಂದಿಗೆ ಝಗಮಗಿಸುತ್ತಿದೆ

ಗುಂಡು ಹೊಡೆದು ಗ್ರಾ.ಪಂ ಮಾಜಿ ಅಧ್ಯಕ್ಷನ ಕೊಲೆ

ಒಂದನೇ ಪುಟದಿಂದ...

'ಹಣಕಾಸು ವ್ಯವಹಾರ, ರಾಜಕೀಯ ಮತ್ತು ವೈಯಕ್ತಿಕ ವೈಷಮ್ಯ ಕಾರಣವಿರಬಹುದು. ಭೀಮಾತೀರದ ಅಪರಾಧ ಪ್ರಕರಣಗಳಿಗೂ ಇದಕ್ಕೂ ಸಂಬಂಧವಿದೆಯೇ ಎಂದೂ ತನಿಖೆ ನಡೆಸಿದ್ದೇವೆ' ಎಂದರು.

'ಬಿರಾದಾರ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿದ್ದ ವೇಳೆ ಆಶ್ರಯ ಯೋಜನೆ ಮನೆ ಕೊಡಿಸುವುದಾಗಿ ₹1 ಲಕ್ಷ ಹಣ ತೆಗೆದುಕೊಂಡಿದ್ದರು. ಆದರೆ, ಮನೆ ಕೊಡಿಸಲಿಲ್ಲ ಮತ್ತು ಹಣ ವಾಪಸ್ ಕೊಡಲಿಲ್ಲ ಎಂಬ ಕಾರಣಕ್ಕೆ ಕೊಲೆ ಮಾಡಲಾಗಿದೆಯೆಂದು ಆರೋಪಿಯೊಬ್ಬ ವಿಚಾರಣೆ ವೇಳೆ ತಿಳಿಸಿದ್ದಾನೆ' ಎಂದರು.

'2023ರಲ್ಲಿ ಗ್ರಾಮದ ಪಿಡಿಒ ಠಾರೋಡ ಜೊತೆಗೆ ಆರೋಪಿಗಳು ಕೆಲಸದ ವಿಷಯವಾಗಿ ಜಗಳವಾಡಿದ್ದರು. ಆಗ ಆರೋಪಿಗಳ ವಿರುದ್ಧ ಜಾತಿ ನಿಂದನೆ ದೂರು ದಾಖಲಾಗಿದ್ದು, ಜಾಕೀರ್ ಮಣಿಯಾರ ಎಂಬಾತ ಜೈಲಿಗೆ ಹೋಗಿ ಬಂದಿದ್ದ. ಈ ಪ್ರಕರಣದಲ್ಲೂ ಭೀಮನಗೌಡ ಬಿರಾದಾರನ ಪಾತ್ರ ಇದೆ ಎಂದು ಆರೋಪಿಸಿ ಈ ಹಿಂದೆ ಗಲಾಟೆ ಮಾಡಿ, ಜೀವ ಬೆದರಿಕೆ ಹಾಕಿದ್ದರು ಎಂದು ಆರೋಪಿಸಿ ಕೊಲೆಯಾದ ಬಿರಾದಾರ ಅವರ ಪತ್ನಿ ರಾಜಶ್ರೀ ಬಿರಾದಾರ ದೂರು ನೀಡಿದ್ದಾರೆ' ಎಂದರು.

ನಾನೇಕೆ ಬಿಜೆಪಿ ಸೇರಲಿ?: ರಾಜಣ್ಣ

ಪ್ರಜಾವಾಣಿ ವಾರ್ತೆ

ಕೊಡಿಗೇನಹಳ್ಳಿ (ತುಮಕೂರು): 'ಬಿಜೆಪಿ ಸೇರುವವರು ಸೇರುತ್ತಾರೆ. ನಾನೇಕೆ ಬಿಜೆಪಿ ಸೇರಲಿ? ನಾನೇಕೆ ಪಕ್ಷ ಬಿಡಬೇಕು? ಪಕ್ಷ ನನಗೆ ಏನು ತೊಂದರೆ ಮಾಡಿದೆ' ಎಂದು ಶಾಸಕ ಕೆ.ಎನ್. ರಾಜಣ್ಣ ಪ್ರಶ್ನಿಸಿದ್ದಾರೆ.

ಬಿಜೆಪಿ ಸೇರಲಿದ್ದಾರೆ ಎಂಬ ವದಂತಿಗೆ ಕೊಡಿಗೇನಹಳ್ಳಿಯಲ್ಲಿ ಬುಧವಾರ ಜನಸ್ಪಂದನ ಸಭೆಯಲ್ಲಿ ಪ್ರತಿಕ್ರಿಯಿಸಿದ ಅವರು, 'ಯಾವುದೇ ಕಾರಣಕ್ಕೂ ಪಕ್ಷ ತೊರೆಯುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

'ಯಾವ ಪಕ್ಷದಿಂದ ಚುನಾವಣೆಗೆ ಸ್ಪರ್ಧಿಸಿದರೂ, ಪಕ್ಷೇತರನಾಗಿ ನಿಂತರೂ ಗೆಲ್ಲುತ್ತೇನೆ. ಜಿಲ್ಲೆಯ ಪ್ರತಿ ಕ್ಷೇತ್ರದಲ್ಲೂ ಯಾರನ್ನಾದರೂ ಗೆಲ್ಲಿಸುವ ಇಲ್ಲವೇ ಸೋಲಿಸುವ ಶಕ್ತಿ ನನಗಿದೆ' ಎಂದು ಹೇಳಿದರು.

'ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿರುವ ತನಕ, ಪಕ್ಷದ ನೇತೃತ್ವ ವಹಿಸಿರುವವರೆಗೆ ನನ್ನ ಭವಿಷ್ಯಕ್ಕೆ ತೊಂದರೆ ಇಲ್ಲ. ಅವರು ಪಕ್ಷದಲ್ಲಿ ಇರುವವರೆಗೆ ಪ್ರೀತಿ, ವಿಶ್ವಾಸ ಉಳಿಸಿಕೊಳ್ಳುತ್ತೇನೆ' ಎಂದರು.

'ಮತಕಳವು ವಿರುದ್ಧ ರಾಹುಲ್ ಗಾಂಧಿ ಅವರ ಹೋರಾಟವನ್ನು ಬೆಂಬಲಿಸುತ್ತೇನೆ. ನನಗೆ ಮತ್ತೆ ಸಚಿವ ಸ್ಥಾನ ನೀಡುವಂತೆ ಒತ್ತಾಯಿಸಲು ದೆಹಲಿಗೆ ಹೋಗುವ ಬಗ್ಗೆ ಚರ್ಚೆಗಳು ನಡೆಯುತ್ತಿವೆ' ಎಂದು ಅವರು ಹೇಳಿದರು.

ಅನ್ಯಾಯ ಸರಿಪಡಿಸಿ, ಸಂವಿಧಾನಬದ್ಧ ಸೌಲಭ್ಯ ಕಲ್ಪಿಸಲು ಒತ್ತಾಯ

ಶೇ 1 ಒಳ ಮೀಸಲಿಗೆ ಆಗ್ರಹ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಸ್ವಾತಂತ್ರ್ಯ ಉದ್ಯಾನದಲ್ಲಿ ಅನಿರ್ದಿಷ್ಟಾವಧಿ ಪ್ರತಿಭಟನೆ ಆರಂಭ
- ಬೇಡಿಕೆ ಈಡೇರಿಸದೆ ಇದ್ದರೆ ಬೆಳಗಾವಿ ಅಧಿವೇಶನಕ್ಕೂ ಮುತ್ತಿಗೆ

ಬೆಂಗಳೂರು: ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಬರುವ ಅಲೆಮಾರಿ ಸಮುದಾಯಗಳಿಗೆ ಪ್ರತ್ಯೇಕವಾಗಿ ಶೇಕಡ 1ರಷ್ಟು ಒಳ ಮೀಸಲಾತಿ ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ಅಸ್ಪೃಶ್ಯ ಅಲೆಮಾರಿ ಸಮುದಾಯಗಳ ಮಹಾ ಒಕ್ಕೂಟದ ಸದಸ್ಯರು ಬುಧವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಅನಿರ್ದಿಷ್ಟಾವಧಿ ಪ್ರತಿಭಟನೆ ಆರಂಭಿಸಿದರು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಅಲೆಮಾರಿ ಸಮುದಾಯಗಳ ಸಾವಿರಾರು ಮಂದಿ ರಾಜ್ಯ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು.

ಒಳ ಮೀಸಲಾತಿ ಜಾರಿ ಮಾಡುವ ಒತ್ತಡದಲ್ಲಿದ್ದ ಸರ್ಕಾರ 101 ಪರಿಶಿಷ್ಟ ಜಾತಿಗಳಿಗೆ ಸೂಕ್ತ ಪ್ರಾತಿನಿಧ್ಯ ಕಲ್ಪಿಸುವ ನಿಟ್ಟಿನಲ್ಲಿ ಮೀಸಲಾತಿ ಪ್ರಮಾಣವನ್ನು ಎಚ್ಚರಿಕೆಯಿಂದ ನಿಗದಿಪಡಿಸಬೇಕಿತ್ತು. ಅದರಲ್ಲೂ ದನಿ ಇಲ್ಲದ ಅಲೆಮಾರಿಗಳಂತಹ ಸಮುದಾಯಗಳ ವಿಷಯದಲ್ಲಿ ಸರ್ಕಾರ ಸೂಕ್ತ ನಿರ್ಧಾರ ತೆಗೆದುಕೊಂಡಿಲ್ಲ' ಎಂದು ಪ್ರತಿಭಟನಕಾರರು ಬೇಸರ ವ್ಯಕ್ತಪಡಿಸಿದರು.

'ನಾಗಮೋಹನದಾಸ್ ಆಯೋಗವು ವೈಜ್ಞಾನಿಕವಾಗಿ ಒಳ ಮೀಸಲಾತಿ ಹಂಚಿಕೆ ಮಾಡಿ, ಸರ್ಕಾರಕ್ಕೆ ವರದಿ ಸಲ್ಲಿಸಿತ್ತು. ಇದರಲ್ಲಿ ಅಲೆಮಾರಿ ಸಮುದಾಯಗಳಿಗೆ ಶೇ 1ರಷ್ಟು ಒಳ ಮೀಸಲಾತಿ ನೀಡುವಂತೆ ಶಿಫಾರಸು ಮಾಡಿತ್ತು. ಆ ಪ್ರಕಾರ ಶೇ 1ರಷ್ಟು ಪ್ರತ್ಯೇಕ ಮೀಸಲಾತಿ ಕಲ್ಪಿಸಬೇಕು' ಎಂದು ಒತ್ತಾಯಿಸಿದರು.

'ಪರಿಶಿಷ್ಟ ಜಾತಿಗಳಿಗೆ ಬಜೆಟ್‌ನಲ್ಲಿ ಮೀಸಲಿಟ್ಟಿರುವ ಅನುದಾನದಲ್ಲಿ ಶೇ 1ರಷ್ಟನ್ನು ಅಲೆಮಾರಿ ಸಮುದಾಯಗಳ ಸಬಲೀಕರಣಕ್ಕೆ ಮೀಸಲಿಡಬೇಕು. ಕೊರಮ, ಕೊರಚ ಸಮುದಾಯಗಳನ್ನು ಹೊರಗಿಟ್ಟು ಅಸ್ಪೃಶ್ಯ ಅಲೆಮಾರಿ ಸಮುದಾಯಗಳ ಅಭಿವೃದ್ಧಿಗೆ ಪ್ರತ್ಯೇಕ ನಿಗಮ ಸ್ಥಾಪಿಸಿ, ಹೆಚ್ಚು ಅನುದಾನ ಒದಗಿಸಬೇಕು. ನಮ್ಮ ಹೋರಾಟ ಪಕ್ಷಾತೀತವಾಗಿದೆ' ಎಂದು ಹೇಳಿದರು.

'ಸಂವಿಧಾನ ಬದ್ಧವಾಗಿ ನಮಗೆ ಸಿಗಬೇಕಾದ ಶೇ 1ರಷ್ಟು ಒಳ ಮೀಸಲಾತಿ ಸಿಗುವವರೆಗೂ ಬೆಂಗಳೂರು ಬಿಟ್ಟು ಹೋಗುವುದಿಲ್ಲ. ನಮ್ಮ ಬೇಡಿಕೆ ಈಡೇರಿಸುವವರೆಗೂ ಈ ಹೋರಾಟ ಮುಂದುವರಿಯಲಿದೆ. ಈ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ, ಪ್ರವರ್ಗ 'ಎ'ನಲ್ಲಿ ಶೇ 1ರಷ್ಟು ಪ್ರತ್ಯೇಕ ಒಳ ಮೀಸಲಾತಿ ಹಂಚಿಕೆ ಮಾಡಬೇಕು. ಇಲ್ಲದಿದ್ದರೆ ಬೆಳಗಾವಿಯಲ್ಲಿ ನಡೆಯುವ ಚಳಿಗಾಲದ ಅಧಿವೇಶನಕ್ಕೆ ಮುತ್ತಿಗೆ ಹಾಕುತ್ತೇವೆ' ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ಸಾಹಿತಿ ಬಂಜಗೆರೆ ಜಯಪ್ರಕಾಶ್, ಅಂಕಣಕಾರ ಶಿವಸುಂದರ್, ಅಲೆಮಾರಿ ಸಮುದಾಯಗಳ ಮುಖಂಡರಾದ ಡಿ. ಗೋಪಾಲ್, ಬಾಲ ಗುರುಮೂರ್ತಿ, ವಡ್ಡಗೆರೆ ನಾಗರಾಜಯ್ಯ, ನಟ ಚೇತನ್, ಅಂಬಣ್ಣ ಅರೋಲಿಕರ್, ಶೇಷಪ್ಪ, ಹೆಣ್ಣೂರು ಶ್ರೀನಿವಾಸ್ ಉಪಸ್ಥಿತರಿದ್ದರು.

ಭೂಕುಸಿತ: ಸಂಚಾರ ಸ್ಥಗಿತ

ಪ್ರಜಾವಾಣಿ ವಾರ್ತೆ

ಹೆತ್ತೂರು (ಹಾಸನ): ಹೋಬಳಿ ವ್ಯಾಪ್ತಿಯ ಪಶ್ಚಿಮ ಘಟ್ಟದ ಅಂಚಿನ ಗ್ರಾಮಗಳಲ್ಲಿ ಧಾರಾಕಾರ ಮಳೆ ಸುರಿದಿದ್ದು, ರಾಜ್ಯ ಹೆದ್ದಾರಿ -85ರಲ್ಲಿ ಬಿಸಿಲೆ ಘಾಟ್‌ನ ಅಡ್ಡಹೊಳೆ ಸಮೀಪ ಭೂಕುಸಿತ ಸಂಭವಿಸಿದೆ.

ಭಾರೀ ಪ್ರಮಾಣದ ಮಣ್ಣು, ಕಲ್ಲುಗಳು 7 ಗಂಟೆ ವೇಳೆಗೆ ರಸ್ತೆಗೆ ಬಿದ್ದಿದ್ದು, ಸಂಚಾರ ಸ್ಥಗಿತಗೊಂಡಿತ್ತು. ಬಿಸಿಲೆ –ಕುಕ್ಕೆ ಸುಬ್ರಹ್ಮಣ್ಯ ಮಾರ್ಗದಲ್ಲಿ ಎರಡು ಗಂಟೆ ಕಾಲ ಸಂಚಾರ ಸ್ಥಗಿತವಾಗಿತ್ತು.

ಲೋಕೋಪಯೋಗಿ, ಅರಣ್ಯ ಇಲಾಖೆ ಸಿಬ್ಬಂದಿಯು ಸ್ಥಳೀಯರ ಸಹಾಯದಿಂದ ತುರ್ತು ಕಾರ್ಯಾಚರಣೆ ನಡೆಸಿ, ಮಣ್ಣು ತೆರವುಗೊಳಿಸಿ, ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ಕೊಡಗು– ಮಳೆ ಬಿರುಸು; ಮಡಿಕೇರಿ ವರದಿ: ಕೊಡಗು ಜಿಲ್ಲಾ ಕೇಂದ್ರ, ನಾಪೋಕ್ಲು, ಸಂಪಾಜೆ, ಶಾಂತಳ್ಳಿ ಸೇರಿದಂತೆ ಘಟ್ಟ ಪ್ರದೇಶಗಳಲ್ಲಿ ಬುಧವಾರ ಬಿರುಸಿನ ಮಳೆಯಾಗಿದೆ. ಸಂಪಾಜೆಯಲ್ಲಿ 8.5 ಸೆಂ.ಮೀ, ಭಾಗಮಂಡಲ 5.8, ಶಾಂತಳ್ಳಿ 4.7, ಮಡಿಕೇರಿ 3.7, ಸೋಮವಾರಪೇಟೆಯಲ್ಲಿ 3.5 ಸೆಂ.ಮೀ.ನಷ್ಟು ಮಳೆಯಾಗಿದೆ.

ಭೂಕುಸಿತದಿಂದ ಬಿಸಿಲೆ ಘಾಟ್‌ನ ಅಡ್ಡಹೊಳೆ ಸಮೀಪ ಬುಧವಾರ ರಸ್ತೆಗೆ ಮಣ್ಣು ಕುಸಿದು ಸಂಚಾರ ಸ್ಥಗಿತವಾಗಿತ್ತು

ಮುಳ್ಳಯ್ಯನಗಿರಿ ಪ್ರವಾಸ ಸದ್ಯ ಬೇಡ; ಚಿಕ್ಕಮಗಳೂರು ವರದಿ: ಮುಳ್ಳಯ್ಯನಗಿರಿ ಮತ್ತು ಶ್ರೀಗುರು ದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾಕ್ಕೆ ತೆರಳುವ ರಸ್ತೆಯಲ್ಲಿ ವಿವಿಧೆಡೆ ಮಣ್ಣು ಕುಸಿದಿದ್ದು, ಸೆ.14ರವರೆಗೆ ಪ್ರವಾಸಿಗರು ಭೇಟಿ ನೀಡದಂತೆ ಜಿಲ್ಲಾಡಳಿತ ಸಲಹೆ ನೀಡಿದೆ.

'ವಾಹನಗಳ ಸಂಖ್ಯೆ ಹೆಚ್ಚಾದರೆ ಮತ್ತಷ್ಟು ಭೂಕುಸಿತದ ಸಾಧ್ಯತೆ ಇದೆ. ಪ್ರವಾಸಿಗರ ಸುರಕ್ಷತೆ ದೃಷ್ಟಿಯಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ' ಎಂದು ಜಿಲ್ಲಾಧಿಕಾರಿ ಮೀನಾ ನಾಗರಾಜ್ ಹೊರಡಿಸಿರುವ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೋಂಸ್ಟೇ, ರೆಸಾರ್ಟ್‌ಗಳಲ್ಲಿ ಕೊಠಡಿ ಕಾಯ್ದಿರಿಸಿರುವ ಪ್ರವಾಸಿಗರಿಗೆ, ಸ್ಥಳೀಯರಿಗೆ ವಿನಾಯಿತಿ ನೀಡಲಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಮಳೆಯಿಂದ ಬೆಳೆ ಹಾನಿ, ರೈತರು ಸಂಕಷ್ಟದಲ್ಲಿ: ನಿಖಿಲ್ ಕುಮಾರಸ್ವಾಮಿ

'ಹೆಕ್ಟೇರ್‌ಗೆ ₹25 ಸಾವಿರ ಪರಿಹಾರ ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಧಾರಾಕಾರ ಮಳೆಯಿಂದ ಮಲೆನಾಡು ಮತ್ತು ಕಲ್ಯಾಣ ಕರ್ನಾಟಕದ ಹಲವೆಡೆ ಬೆಳೆ ನಾಶವಾಗಿದೆ. ಸರ್ಕಾರವು ಹೆಕ್ಟೇರ್‌ಗೆ ₹25,000–₹30,000 ಪರಿಹಾರ ಘೋಷಿಸಬೇಕು' ಎಂದು ಜೆಡಿಎಸ್ ಯುವಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಒತ್ತಾಯಿಸಿದ್ದಾರೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಜ್ಯ ಸರ್ಕಾರಕ್ಕೆ ರೈತರು ಮತ್ತು ಜನರ ಬಗ್ಗೆ ಕಾಳಜಿಯೇ ಇಲ್ಲ. ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಅವರು ತಾವು ಓಡಾಡಲು ₹80 ಕೋಟಿಯ ಹೆಲಿಕಾಪ್ಟರ್ ಹಾಗೂ ₹150 ಕೋಟಿ ವೆಚ್ಚದಲ್ಲಿ ವಿಮಾನ ಖರೀದಿಸಲು ಮುಂದಾಗಿದ್ದಾರೆ. ಆದರೆ, ಅವರಿಗೆ ಮಳೆ ಸಂತ್ರಸ್ತರ ಬಗ್ಗೆ ಮಾತನಾಡಲು ಸಮಯವಿಲ್ಲ' ಎಂದರು.

'ಈ ಬಗ್ಗೆ ಸರ್ಕಾರದ ಗಮನ ಸೆಳೆಯುವ ಉದ್ದೇಶದಿಂದ ನೆರೆ ಪೀಡಿತ ಪ್ರದೇಶಗಳಿಗೆ ಇದೇ 9ರಿಂದ ಪ್ರವಾಸ ಕೈಗೊಳ್ಳಲಿದ್ದೇವೆ. ಸರ್ಕಾರವು ರೈತರ ಬೆಳೆ ಸಾಲ ಮನ್ನಾ ಮಾಡಬೇಕು ಎಂದು ಸರ್ಕಾರವನ್ನು ಒತ್ತಾಯಿಸುತ್ತೇವೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'₹250 ಬೆಲೆಯ ಗೊಬ್ಬರಕ್ಕೆ ₹1,000 ಕೊಟ್ಟು ರೈತರು ಖರೀದಿಸಿದ್ದಾರೆ. ಆದರೆ ಈ ಬಗ್ಗೆ ತಮಗೆ ಮಾಹಿತಿಯೇ ಇಲ್ಲ ಎಂದು ಕೃಷಿ ಸಚಿವರು ಹೇಳಿದ್ದಾರೆ. ಅವರು ರೈತರ ಪರವಾಗಿ ಹೇಗೆ ಕೆಲಸ ಮಾಡಬಹುದು ಎಂಬುದು ಈ ಮಾತಿನಿಂದ ಗೊತ್ತಾಗುತ್ತದೆ' ಎಂದು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

ಬಿಜೆಪಿ ಪ್ರವಾಸ

'ಬಿಜೆಪಿ ಜಿಲ್ಲಾ ಘಟಕಗಳ ಎಲ್ಲ ಅಧ್ಯಕ್ಷರೂ ತಮ್ಮ ಜಿಲ್ಲೆಗಳಲ್ಲಿ ಸಂಭವಿಸಿರುವ ಮಳೆ ಹಾನಿ ಪ್ರದೇಶಗಳಿಗೆ ಭೇಟಿ ನೀಡಬೇಕು. ಹಾನಿಯ ಕುರಿತು ಸಂಗ್ರಹಿಸಿದ ಪ್ರತ್ಯಕ್ಷ ವರದಿಯನ್ನು ಸೆ. 8ರ ಒಳಗೆ ರಾಜ್ಯ ಕಾರ್ಯಾಲಯಕ್ಕೆ ಸಲ್ಲಿಸಬೇಕು' ಎಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ ವಿಜಯೇಂದ್ರ ಪತ್ರ ಬರೆದಿದ್ದಾರೆ.

'ಹಲವು ದಿನಗಳಿಂದ ರಾಜ್ಯದಲ್ಲಿ ವ್ಯಾಪಕವಾಗಿ ಮಳೆಯಾಗುತ್ತಿದೆ. ಅಪಾರ ಪ್ರಮಾಣದಲ್ಲಿ ಬೆಳೆ ಹಾನಿಯಾಗಿದ್ದು, ಜನಜೀವನ ಅಸ್ತವ್ಯಸ್ತವಾಗಿದೆ. ಆದರೂ, ರಾಜ್ಯ ಸರ್ಕಾರ ಸೂಕ್ತ ಪರಿಹಾರ ಕಾರ್ಯಗಳನ್ನು ಕೈಗೊಂಡಿಲ್ಲ. ಸಾಂತ್ವನ ಹೇಳುವ ಕೆಲಸ ಮಾಡಿಲ್ಲ. ಈ ಸರ್ಕಾರ ರೈತರು, ಬಡಜನರ ಬಗ್ಗೆ ನಿರ್ಲಕ್ಷ್ಯ ತೋರುತ್ತಿದೆ' ಎಂದು ದೂರಿದ್ದಾರೆ.

'ಸಂಕಷ್ಟದ ಸಮಯದಲ್ಲಿ ಮೈಮರೆತು ಗಾಢ ನಿದ್ರೆಯಲ್ಲಿರುವ ಸರ್ಕಾರವನ್ನು ಪ್ರತಿ ಪಕ್ಷ ಬಿಜೆಪಿ ಎಚ್ಚರಿಸುವ ಕೆಲಸ ಮಾಡಬೇಕು. ಮಳೆ ಹಾನಿ ಪ್ರದೇಶಗಳಿಗೆ ತೆರಳಿ ಜನರ ಸಂಕಷ್ಟವನ್ನು ಆಲಿಸಬೇಕು. ಹಾನಿಗೊಳಗಾದ ಬೆಳೆ, ಸಾವು–ನೋವು, ರಸ್ತೆಗಳ ಸ್ಥಿತಿ ಸೇರಿದಂತೆ ಎಲ್ಲ ವಿವರಗಳನ್ನು ಚಿತ್ರಸಹಿತ ಪಟ್ಟಿ ಮಾಡಿ ವರದಿ ಸಿದ್ಧಪಡಿಸಬೇಕು' ಎಂದು ಸೂಚಿಸಿದ್ದಾರೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	124.04	14,704	14,171
ಹಾರಂಗಿ	2,859	2,858.56	5,101	4,333
ಕಬಿನಿ	2,284.00	2,283.97	9,524	9,171
ಹೇಮಾವತಿ	2,922	2,921.90	8,630	7,460
ಲಿಂಗನಮಕ್ಕಿ	1,819	1,817.80	32,342	19,712
ಸೂಪಾ (ಮೀ)	564	559.82	14,632	4,424.24
ಮಾಣಿ	595	594.23	4,991	647
ತುಂಗಭದ್ರಾ	1,633	1,625.65	38,511	36,173
ಮಲಪ್ರಭಾ	2,079.5	2,079.45	5,714	4,094
ಘಟಪ್ರಭಾ	2175	2,174.88	8,336	7,688
ಭದ್ರಾ *	186	184	8,223	9,415
ಆಲಮಟ್ಟಿ (ಮೀ)	519.6	519.56	56,927	52,865
ನಾರಾಯಣಪುರ (ಮೀ)	492.25	492.10	54,000	62,430

* ನೆಲಮಟ್ಟದಿಂದ

ಕ್ಷಮೆ ಕೇಳಿದ 'ಲೋಕಾ' ತಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರಿನಲ್ಲಿ ವಾಸಿಸುವ ಹುಡುಗಿಯರ ಬಗ್ಗೆ ಸಿನಿಮಾದಲ್ಲಿನ ಅವಹೇಳನಕಾರಿ ಸಂಭಾಷಣೆಯೊಂದಕ್ಕೆ ಸಂಬಂಧಿಸಿದಂತೆ ಕರ್ನಾಟಕ ಜನರ ಕ್ಷಮೆಯನ್ನು ಮಲಯಾಳದ 'ಲೋಕಾ–ಚಾಪ್ಟರ್ 1: ಚಂದ್ರ' ಚಿತ್ರತಂಡ ಕೇಳಿದೆ. ಆ ಸಂಭಾಷಣೆಯನ್ನು ಶೀಘ್ರದಲ್ಲೇ ತೆಗೆಯುವುದಾಗಿ ತಂಡ ತಿಳಿಸಿದೆ.

ಈ ಸಿನಿಮಾವನ್ನು ಕರ್ನಾಟಕದಲ್ಲಿ ನಟ ರಾಜ್ ಬಿ.ಶೆಟ್ಟಿ ಅವರ ಲೈಟರ್ ಬುದ್ಧ ಫಿಲ್ಮ್ಸ್ ವಿತರಣೆ ಮಾಡಿದೆ. ಡಾಮಿನಿಕ್ ಅರುಣ್ ನಿರ್ದೇಶನದ ಈ ಚಿತ್ರವನ್ನು ನಟ ದುಲ್ಕರ್ ಸಲ್ಮಾನ್ ಅವರ ವೇಫರರ್ ಫಿಲ್ಮ್ಸ್ ನಿರ್ಮಾಣ ಮಾಡಿದೆ. ಸಿನಿಮಾ ಬೆಂಗಳೂರು ಸೇರಿದಂತೆ ಕೇರಳದಲ್ಲಿ ಹೌಸ್‌ಫುಲ್ ಪ್ರದರ್ಶನಗಳನ್ನು ಕಾಣುತ್ತಿದೆ.

ವಿವಾದದ ಬೆನ್ನಲ್ಲೇ ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಹಾಕಿರುವ ನಿರ್ಮಾಣ ಸಂಸ್ಥೆ, 'ಸಿನಿಮಾದಲ್ಲಿನ ಸಂಭಾಷಣೆಯೊಂದು ಕರ್ನಾಟಕ ಜನರ ಭಾವನೆಗಳಿಗೆ ನೋವುಂಟು ಮಾಡಿದೆ. ಇದು ಉದ್ದೇಶಪೂರ್ವಕವಲ್ಲ. ಎಲ್ಲವುದಕ್ಕಿಂತ ಜನರೇ ಮುಖ್ಯ. ನಮ್ಮ ಕಣ್ತಪ್ಪಿನಿಂದಾದ ಈ ತಪ್ಪಿಗೆ ಕ್ಷಮೆಯಾಚಿಸುತ್ತೇವೆ. ಶೀಘ್ರದಲ್ಲೇ ಈ ಸಂಭಾಷಣೆಯನ್ನು ತೆಗೆಯುತ್ತೇವೆ. ನೋವುಂಟು ಮಾಡಿರುವುದಕ್ಕೆ ಕ್ಷಮೆ ಇರಲಿ. ನಮ್ಮ ಕ್ಷಮೆಯನ್ನು ಸ್ವೀಕರಿಸಿ' ಎಂದು ಉಲ್ಲೇಖಿಸಿದೆ.

ಸಿನಿಮಾದಲ್ಲಿ ಉಲ್ಲೇಖಿಸಿರುವ ವಿಷಯಗಳ ಬಗ್ಗೆಯೂ ನಿರ್ದೇಶಕ ಮಂಸೋರೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ. 'ಕನ್ನಡದ 'ಭೀಮ', ಮಲಯಾಳದ 'ಆಫೀಸರ್ ಆನ್ ಡ್ಯೂಟಿ', 'ಆವೇಶಂ', 'ಲೋಕಾ'ದಲ್ಲಿ ಬೆಂಗಳೂರನ್ನು ಮಾದಕ ವಸ್ತು ಮತ್ತು ಅಪರಾಧದ ರಾಜಧಾನಿ ಎಂಬಂತೆ ಬಿಂಬಿಸಲಾಗುತ್ತಿದೆ. ಹಿಂದೆಲ್ಲಾ ಬೆಂಗಳೂರನ್ನು ಸುಂದರವಾದ ನಗರ ಎಂದು ಬಿಂಬಿಸಲಾಗುತ್ತಿತ್ತು. ಇದೀಗ ಅನಿಯಂತ್ರಿತ ವಲಸೆಯಿಂದಾಗಿ ಈ ಸ್ಥಿತಿ ತಲುಪಿದೆ' ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಅಪಘಾತ ಸಂತ್ರಸ್ತರಿಗೆ ₹2 ಲಕ್ಷ ಪರಿಹಾರ ಸುಪ್ರೀಂ ಕೋರ್ಟ್‌ಗೆ ಕೇಂದ್ರ ಪ್ರಸ್ತಾವ

ನವದೆಹಲಿ: ಅಪಘಾತದಲ್ಲಿ ಮೃತಪಟ್ಟವರ ಕುಟುಂಬಕ್ಕೆ ₹2 ಲಕ್ಷ ಹಾಗೂ ಗಾಯಗೊಂಡವರಿಗೆ ₹1 ಲಕ್ಷ ಪರಿಹಾರ ನೀಡಲು ಕೇಂದ್ರ ಹೆದ್ದಾರಿ ಹಾಗೂ ಭೂಸಾರಿಗೆ ಸಚಿವಾಲಯ ಪ್ರಸ್ತಾವ ಸಿದ್ಧಪಡಿಸಿದೆ.

ಅಪಘಾತ ಸಂತ್ರಸ್ತರಿಗೆ ಪರಿಹಾರ ನೀಡಲು ಮೋಟಾರು ವಾಹನ ಕಾಯ್ದೆಗೆ ತಿದ್ದುಪಡಿ ಮಾಡಲು ಸಂಸತ್ 2022ರ ಏಪ್ರಿಲ್‌ನಲ್ಲಿ ಒಪ್ಪಿಗೆ ನೀಡಿತ್ತು. ಈ ಕಾನೂನು ಜಾರಿಯಾಗಿಲ್ಲ ಎಂದು ಆಕ್ಷೇಪಿಸಿ ವಕೀಲ ಕಿಶನ್ ಚಂದ್ ಜೈನ್ ಎಂಬವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಕೇಂದ್ರ ಸರ್ಕಾರದ ವಿಳಂಬ ಧೋರಣೆಯನ್ನು ನ್ಯಾಯಮೂರ್ತಿ ಜೆ.ಬಿ.ಪಾರ್ದೀವಾಲಾ ನೇತೃತ್ವದ ಪೀಠವು ಏಪ್ರಿಲ್‌ನಲ್ಲಿ ತರಾಟೆಗೆ ತೆಗೆದುಕೊಂಡಿತ್ತು. ಪರಿಹಾರ ಯೋಜನೆಗೆ ನಾಲ್ಕು ತಿಂಗಳಲ್ಲಿ ಅಂತಿಮ ರೂಪ ನೀಡಬೇಕು ಎಂದು ನ್ಯಾಯಪೀಠವು ಗಡುವು ವಿಧಿಸಿತ್ತು. ವಿಮಾ ಕಂಪನಿಗಳಿಂದ ಅಪಘಾತ ಸಂತ್ರಸ್ತರಿಗೆ ಪರಿಹಾರ ನೀಡುವ ಪ್ರಸ್ತಾವವನ್ನು ಸಚಿವಾಲಯ ಸಿದ್ಧಪಡಿಸಿದೆ. ಈ ಸಂಬಂಧ ಸುಪ್ರೀಂ ಕೋರ್ಟ್‌ಗೆ ಆಗಸ್ಟ್ 29ರಂದು ಪ್ರಮಾಣಪತ್ರ ಸಲ್ಲಿಸಿದೆ.

ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಪೀಠವು, ಈ ಪ್ರಸ್ತಾವ ಪರಿಶೀಲಿಸಲು ಜೈನ್ ಹಾಗೂ ಅಮಿಕಸ್ ಕ್ಯೂರಿ ಗೌರವ್ ಅಗರವಾಲ್ ಅವರಿಗೆ ಕಾಲಾವಕಾಶ ನೀಡಿತು. ವಿಚಾರಣೆಯನ್ನು ಅಕ್ಟೋಬರ್‌ಗೆ ಮುಂದೂಡಿತು.

ಈ ಕರಡು ಬಗ್ಗೆ ಅಭಿಪ್ರಾಯ ತಿಳಿಸುವಂತೆ ಹಣಕಾಸು ಸಚಿವಾಲಯ, ಕಾನೂನು ಸಚಿವಾಲಯ ಮತ್ತು ಭಾರತೀಯ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರವನ್ನು ಹೆದ್ದಾರಿ ಸಚಿವಾಲಯ ಕೋರಿದೆ.

ಅಂಕಿ ಅಂಶಗಳು

4.60 ಲಕ್ಷ ದೇಶದಲ್ಲಿ 2024ರಲ್ಲಿ ಸಂಭವಿಸಿದ ಅಪಘಾತಗಳು

1.06 ಲಕ್ಷ ಮೃತಪಟ್ಟವರು

2.02 ಲಕ್ಷ ಗಂಭೀರ ಗಾಯಗೊಂಡವರು

ನೇಮಕಾತಿಗೆ ಇನ್ನು 'ಒಳ ಮೀಸಲು'

ಒಂದನೇ ಪುಟದಿಂದ...

2022ರ ಡಿ. 28ರಂದು ಹೊರಡಿಸಿದ್ದ ಆದೇಶದಲ್ಲಿ ಶೇ 17ರ ಮೀಸಲಾತಿ ಅನ್ವಯಿಸಿ, 100 ರೋಸ್ಟರ್ ಬಿಂದುಗಳಲ್ಲಿ 17 ಬಿಂದುಗಳನ್ನು ಪರಿಶಿಷ್ಟ ಜಾತಿಯವರಿಗೆ ಮೀಸಲಿಡಲಾಗಿತ್ತು.

ಪರಿಷ್ಕೃತ ಆದೇಶದಲ್ಲಿ ಒಳ ಮೀಸಲಾತಿಯ ಅನ್ವಯ ಬಿಂದುಗಳನ್ನು ಗುರುತಿಸಲಾಗಿದೆ. ಪರಿಷ್ಕೃತ ಆದೇಶ ತಕ್ಷಣದಿಂದಲೇ ಜಾರಿಗೆ ಬರಲಿದೆ.

ಯಾವುದಾದರೂ ವೃಂದದ ಹುದ್ದೆಗೆ 2022ರ ಡಿ. 28ರ ಆದೇಶದ ಪ್ರಕಾರ ರಿಕ್ತ ಸ್ಥಾನಗಳನ್ನು ವರ್ಗೀಕರಣ ಮಾಡಿ ಈಗಾಗಲೇ ನೇಮಕಾತಿ ಪ್ರಕ್ರಿಯೆ ಆರಂಭಿಸಿದ್ದರೆ, ರೋಸ್ಟರಿನ ಯಾವ ಬಿಂದುವಿನವರೆಗೆ ಜಾರಿಗೊಳಿಸಲಾಗಿದೆಯೋ ಆ ನಂತರದ ರೋಸ್ಟರ್ ಬಿಂದುವಿನಿಂದ ಪರಿಷ್ಕೃತ ಆದೇಶದ ಪ್ರಕಾರ ರೋಸ್ಟರ್ ಬಿಂದುಗಳನ್ನು ಅನುಸರಿಸಿ ಮುಂದಿನ ನೇಮಕಾತಿ ಪ್ರಕ್ರಿಯೆ ನಡೆಸಬೇಕು ಎಂದೂ ಆದೇಶದಲ್ಲಿ ಸ್ಪಷ್ಟವಾಗಿ ವಿವರಿಸಲಾಗಿದೆ.

ಪರಿಷ್ಕೃತ ಮೀಸಲಾತಿ ರೋಸ್ಟರ್ ಪ್ರಕಟಗೊಂಡಿರುವ ಕಾರಣ, ಸರ್ಕಾರಿ ಹುದ್ದೆಗಳಿಗೆ ನೇರ ನೇಮಕಾತಿ ಪ್ರಕ್ರಿಯೆ ಆರಂಭಿಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಕ್ರಮ ವಹಿಸಲು ಅವಕಾಶ ಆಗಲಿದೆ. ಎಲ್ಲ ಇಲಾಖೆಗಳು ಮತ್ತು ಅವುಗಳ ಅಧೀನದ ಎಲ್ಲ ನಿಗಮ, ಮಂಡಳಿ, ಸಂಸ್ಥೆಗಳಲ್ಲಿ ಮುಂಬಡ್ತಿ ಪ್ರಕ್ರಿಯೆಯನ್ನೂ ಮುಂದುವರಿಸಬಹುದಾಗಿದೆ.

ಒಳ ಮೀಸಲಾತಿ ಕಲ್ಪಿಸಲು ರಚಿಸಿದ್ದ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ನೇತೃತ್ವದ ಆಯೋಗವು ಪರಿಶಿಷ್ಟ ಜಾತಿಗಳನ್ನು 'ಎ', 'ಬಿ', 'ಸಿ', 'ಡಿ', 'ಇ' ಎಂದು ಐದು ಪ್ರವರ್ಗಗಳಾಗಿ ವಿಂಗಡಿಸಿ ಮೀಸಲಾತಿ ಹಂಚಿಕೆ ಮಾಡಿ ಶಿಫಾರಸು ಮಾಡಿತ್ತು. ಈ ಶಿಫಾರಸುಗಳನ್ನು ಕೆಲವು ಬದಲಾವಣೆಗಳೊಂದಿಗೆ ಅನುಷ್ಠಾನಗೊಳಿಸಲು, ಆಗಸ್ಟ್ 19ರಂದು ನಡೆದಿದ್ದ ಸಚಿವ ಸಂಪುಟದ ವಿಶೇಷ ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳಲಾಗಿತ್ತು.

'ಪರಿಷ್ಕೃತ ಮೀಸಲಾತಿ ರೋಸ್ಟರ್'ಗೆ ಆಕ್ಷೇಪ

'ಪರಿಷ್ಕೃತ ಮೀಸಲಾತಿ ರೋಸ್ಟರ್'ಗೆ ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘ ಆಕ್ಷೇಪ ವ್ಯಕ್ತಪಡಿಸಿದೆ. 2022ರ ಡಿ. 28ರ ಆದೇಶದಲ್ಲಿ 100 ರೋಸ್ಟರ್ ಬಿಂದುಗಳಲ್ಲಿ 1,7,14,21,25,27,34, 40,47,54,60,67,73,76,80,87,93ನೇ ಬಿಂದುಗಳನ್ನು (ಒಟ್ಟು 17) ಪರಿಶಿಷ್ಟ ಜಾತಿಯವರಿಗೆ ನಿಗದಿಪಡಿಸಲಾಗಿತ್ತು. ಹೊಸ ಆದೇಶದಲ್ಲಿ 1,9,15,23,27,33,41, 46,49,53,59,67,75,81,89,93,96ನೇ ಬಿಂದುಗಳನ್ನು ನಿಗದಿಪಡಿಸಲಾಗಿದೆ. ಈ ರೀತಿ ನಿಗದಿಪಡಿಸಿರುವುದರಿಂದ ಎಸ್‌ಸಿ ಮತ್ತು ಎಸ್‌ಟಿಯವರಿಗೆ ಅನ್ಯಾಯ ಆಗಲಿದೆ. ಪರಿಶಿಷ್ಟ ಜಾತಿಯವರಿಗೆ ನೇರ ನೇಮಕಾತಿ ಮತ್ತು ಬಡ್ತಿ ನೀಡುವ ಸಂದರ್ಭದಲ್ಲಿ ಆರಂಭದಲ್ಲಿ ಮೀಸಲಾತಿ ದೊರೆಯದಂತೆ ಹಾಗೂ ಈ ವರ್ಗದವರು ಮುಖ್ಯವಾಹಿನಿಗೆ ಬರುವುದನ್ನು ತಡೆಯುವ ಉದ್ದೇಶದಿಂದ ಈ ರೀತಿ ರೋಸ್ಟರ್ ಬಿಂದುಗಳನ್ನು ನಿಗದಿಪಡಿಸಲಾಗಿದೆ. ತಕ್ಷಣ ಈ ಆದೇಶವನ್ನು ಹಿಂಪಡೆಯಬೇಕು. ಹಿಂಪಡೆಯದಿದ್ದರೆ ರಾಜ್ಯದಾದ್ಯಂತ ಹೋರಾಟ ಹಮ್ಮಿಕೊಳ್ಳಲಾಗುವುದು' ಎಂದು ಸಂಘ ಎಚ್ಚರಿಕೆ ನೀಡಿದೆ.

ಅಶ್ಲೀಲ ಮಾತು– ಕಾನ್‌ಸ್ಟೆಬಲ್ ಸೆರೆ

ಒಂದನೇ ಪುಟದಿಂದ...

ಶಾಂತಪ್ಪ (28) ಬಂಧಿತ ಕಾನ್‌ಸ್ಟೆಬಲ್. ಕೋರ್ಟ್ ಆತನಿಗೆ ಜಾಮೀನು ನೀಡಿದೆ. ಬಂಧನದ ಹಿಂದೆಯೇ ಅವರನ್ನು ಪೊಲೀಸ್ ಕಮಿಷನರ್ ಅಮಾನತು ಗೊಳಿಸಿದ್ದಾರೆ. ಕೌಟುಂಬಿಕ ದೌರ್ಜನ್ಯ ಕುರಿತು ಪತಿ ವಿರುದ್ಧ ದೂರು ನೀಡಲು ಆ.25ರಂದು ಮಹಿಳೆ ಠಾಣೆಗೆ ಬಂದಿದ್ದರು. ಆಗ ಕರ್ತವ್ಯದಲ್ಲಿದ್ದ ಶಾಂತಪ್ಪ, ಮಹಿಳೆಯ ಮೊಬೈಲ್ ಸಂಖ್ಯೆಯನ್ನು ಬರೆದಿಟ್ಟಿದ್ದರು. ಇನ್‌ಸ್ಪೆಕ್ಟರ್ ಅವರು ಠಾಣೆಗೆ ದಂಪತಿಯನ್ನು ಕರೆಸಿ ವಿಚಾರಣೆ ನಡೆಸಿ ಕಳುಹಿಸಿದ್ದರು. ಆ ನಂತರ ಶಾಂತಪ್ಪ ಮೂರು ಸಲ ಮಹಿಳೆಗೆ ಕರೆ ಮಾಡಿ ಅಶ್ಲೀಲವಾಗಿ ಮಾತನಾಡಿದ್ದ ಎಂದು, ಕರೆ ದಾಖಲೆ ಪುರಾವೆ ಸಮೇತ ದೂರು ನೀಡಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಶಾಂತಪ್ಪ 2022ರಲ್ಲಿ ಪೊಲೀಸ್ ಕಾನ್‌ಸ್ಟೆಬಲ್ ಆಗಿ ಉದ್ಯೋಗಕ್ಕೆ ಸೇರಿದ್ದರು.

ದೇಶಪಾಂಡೆ ಕ್ಷಮೆಗೆ ಆಗ್ರಹ

ಒಂದನೇ ಪುಟದಿಂದ...

'ಹೆಣ್ಣು ಮಕ್ಕಳ ಮೂಲಸೌಕರ್ಯದ ಕೊರತೆಯನ್ನು ಗಂಭೀರವಾಗಿ ಪರಿಗಣಿಸಬೇಕಿತ್ತು. ರಾಜಕಾರಣಿಗಳು ಪತ್ರಕರ್ತೆಯರನ್ನು ಹಗುರವಾಗಿ ಪರಿಗಣಿಸಬಾರದು ಮತ್ತು ಹೆಣ್ಣು ಮಕ್ಕಳ ಮೂಲಸೌಕರ್ಯದ ಬಗ್ಗೆ ಉಡಾಫೆಯ ಮಾತು ಸಲ್ಲದು' ಎಂದು ಸಂಘವು ಹೇಳಿದೆ.

ಕ್ಷಮೆಗೆ ಆಗ್ರಹ: 'ಹೆರಿಗೆ ಆಸ್ಪತ್ರೆಯ ಸೌಲಭ್ಯ ದೊರಕಿಸಲು ವಿಫಲರಾಗಿರುವ ದೇಶಪಾಂಡೆ ಅವರು ಪತ್ರಕರ್ತರ ಮತ್ತು ಹೆಣ್ಣುಮಕ್ಕಳ ಘನತೆಗೆ ಧಕ್ಕೆ ಆಗುವ ರೀತಿಯ ಮಾತನಾಡಿರುವುದು ಸರಿಯಲ್ಲ. ಕೂಡಲೇ ಅವರು ಕ್ಷಮೆ ಕೇಳಬೇಕು' ಎಂದು ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ ಒತ್ತಾಯಿಸಿದೆ.

ಶಿಶು ಮಾರಾಟ: ವೈದ್ಯ ಸೇರಿ ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಉಡುಪಿ: ಅತ್ಯಾಚಾರ ಸಂತ್ರಸ್ತೆ ಶಿಶು ಮಾರಾಟ ಮಾಡಿದ್ದ ಪ್ರಕರಣ ಸಂಬಂಧಿಸಿ ವೈದ್ಯ ಸೋಮೇಶ್ ಸೊಲೊಮನ್ ಸೇರಿ ಮೂವರನ್ನು ಪೊಲೀಸರು ಬಂಧಿಸಿದ್ದಾರೆ.

ಕಾಪು ತಾಲ್ಲೂಕು ಕಲ್ಯಾಣದಲ್ಲಿಯ ನಿವಾಸಿ ಪ್ರಭಾವತಿ – ರಮೇಶ್ ಮೂಲ್ಯ ದಂಪತಿ ಅಂಗನವಾಡಿಗೆ ಶಿಶುವನ್ನು ಕರೆದುಕೊಂಡು ಬಂದಿದ್ದರು. ಶಿಶು ದಂಪತಿಯದ್ದಲ್ಲ ಎಂಬ ಶಂಕೆ ಅಂಗನವಾಡಿ ಕಾರ್ಯಕರ್ತೆಗೆ ಬಂದಿದೆ. ವಿಚಾರಿಸಿದಾಗ, ಮಂಗಳೂರಿನಲ್ಲಿ ಶಿಶು ಖರೀದಿಸಿದ್ದಾಗಿ ತಿಳಿಸಿದ್ದಾರೆ. ಈ ಸಂಬಂಧ ಶಿರ್ವ ಪೊಲೀಸ್ ಠಾಣೆಗೆ ಮಾಹಿತಿ ನೀಡಲಾಗಿತ್ತು. ಪೊಲೀಸರು ಪ್ರಭಾವತಿಯವರ ಮನೆಗೆ ಭೇಟಿ ನೀಡಿ ವಿಚಾರಿಸಿದಾಗ, ಮಂಗಳೂರಿನ ಕೊಲಾಸೊ ಆಸ್ಪತ್ರೆಯ ವೈದ್ಯರಿಗೆ ₹4.5 ಲಕ್ಷ ಹಣ ನೀಡಿ ಶಿಶು ಪಡೆದು ಕೊಂಡಿದ್ದಾರೆ ಎಂಬ ಮಾಹಿತಿ ಲಭಿಸಿದೆ ಎಂದು ದೂರಿನಲ್ಲಿ ಹೇಳಲಾಗಿದೆ. 'ಮಗು ಅತ್ಯಾಚಾರ ಸಂತ್ರಸ್ತೆಯದ್ದು ಎಂದು ಗೊತ್ತಾಗಿದ್ದು, ಆರೋಪಿ ನವನೀತ್ ನಾರಾಯಣನನ್ನು ಬಂಧಿಸಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹರಿರಾಮ್ ಶಂಕರ್ ತಿಳಿಸಿದ್ದಾರೆ.

ದೂರುದಾರ ಮತ್ತೆ ಎಸ್‌ಐಟಿ ವಶಕ್ಕೆ

ಒಂದನೇ ಪುಟದಿಂದ...

ತಾನು ಹೂತುಹಾಕಿದ್ದ ಮೃತದೇಹದ ಬುರುಡೆ ಎಂದು ಹೇಳಿಕೊಂಡಿದ್ದ ಸಾಕ್ಷಿ ದೂರುದಾರ, ತಲೆಬುರುಡೆ ಒಪ್ಪಿಸಿದ್ದ. 'ಆ ತಲೆಬುರುಡೆ ನಾನು ಹೂತು ಹಾಕಿದ್ದ ಮೃತದೇಹದ್ದಲ್ಲ' ಎಂದು ನಂತರ ವಿಚಾರಣೆಯಲ್ಲಿ ತಿಳಿಸಿದ್ದ.

ವಕೀಲರ ತಂಡದ ವಿರುದ್ಧ ದೂರು: 'ಸಾಕ್ಷಿ ದೂರುದಾರನಿಗೆ ಕಾನೂನು ನೆರವು ಒದಗಿಸಿದ್ದ ವಕೀಲರ ತಂಡವೂ ಧರ್ಮಸ್ಥಳ ಕ್ಷೇತ್ರದ ಹೆಸರು ಕೆಡಿಸುವ ಷಡ್ಯಂತ್ರದಲ್ಲಿ ಭಾಗಿಯಾಗಿದ್ದು, ಅವರನ್ನೂ ತನಿಖೆಗೆ ಒಳಪಡಿಸಬೇಕು' ಎಂದು ಒತ್ತಾಯಿಸಿ ಸ್ಥಳೀಯರು ಕಲ್ಲಂಜ ಗ್ರಾಮದ ರಾಜೇಂದ್ರ ಅಜ್ಜಿ ನೇತೃತ್ವದಲ್ಲಿ ಎಸ್‌ಐಟಿಗೆ ದೂರು ನೀಡಿದ್ದಾರೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ

ಆರೋಗ್ಯ ಸೌಧ, 4ನೇ ಮಹಡಿ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು–560 023
ದೂರವಾಣಿ: 080-2955 7021, ಇ–ಮೇಲ್: pdksaps@gmail.com

ಸಂಖ್ಯೆ : ಕೆಎಸ್‌ಎಪಿಎಸ್/ಬಿಎಸ್‌ಸಿ/01/2025–ಬಿಎಸ್ ದಿನಾಂಕ:02.09.2025

ಇ–ಸಂಗ್ರಹಣ ವೇದಿಕೆ ಮೂಲಕ ಟೆಂಡರ್ ಆಹ್ವಾನ ಪ್ರಕಟಣೆ

HIV Kits with Dot Immuno Assay Principle ಗಳನ್ನು ಸರಬರಾಜು ಮಾಡುವ ಸಂಬಂಧ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ (ದ್ವಿ ಲಕೋಟೆ ಯಲ್ಲಿ) ಕರೆಯಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **24.09.2025 ರ ಸಂಜೆ 5.30 ಗಂಟೆಯವರೆಗೆ.** ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ವೆಬ್‌ಸೈಟ್. **https://kppp.karnataka.gov.in**

ಸಹಿ/– ಯೋಜನಾ ನಿರ್ದೇಶಕರು
ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ

ವಾಸಾಸಂಇ/ವಾಪ್ರ/ಜಿಎ/2612/2025–26

ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ

ಕುದೇರು ಗ್ರಾಮ ಮತ್ತು ಅಂಚೆ, ಸಂತೇಮರಹಳ್ಳಿ ಹೋಬಳಿ, ಚಾಮರಾಜನಗರ - 571 316
ದೂರವಾಣಿ :08226-234848, E-mail: purchamul@gmail.com

ಟೆಂಡರ್ ಪ್ರಕಟಣೆ (ಇ–ಟೆಂಡರ್ ಮುಖಾಂತರ)

ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟವು Firewood ಹಾಗೂ Caustic Soda Lye ಗಳನ್ನು ಖರೀದಿಸುವ ಸಂಬಂಧ ಮತ್ತು ಚಾಮುಲ್ ಕೇಂದ್ರ ಕಛೇರಿ ಕುದೇರು, ರಲ್ಲಿ ಲಭ್ಯವಿರುವ ಅನುಪಯುಕ್ತ ವಸ್ತುಗಳನ್ನು ವಿಲೇವಾರಿ ಮಾಡುವ ಸಂಬಂಧ ನಿಗದಿ ಪಡಿಸಲಾದ ಷರತ್ತುಗಳನೊಳಗೊಂಡ ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖೇನ ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ **www.kppp.karnataka.gov.in** ಈ ವೆಬ್‌ಸೈಟ್‌ನಲ್ಲಿ ಪಡೆದು ಕೆಳಗಿನ ವಿವರದಂತೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ.

ಕ್ರ.ಸಂ	ಸರಕುಗಳ ವಿವರ	ಐ.ಎಫ್.ಟಿ ಸಂಖ್ಯೆ	ಟೆಂಡರ್ ಸಲ್ಲಿಸುವ ದಿನಾಂಕ ಮತ್ತು ಕೊನೆಯ ದಿನಾಂಕ
01	Supply of Firewood on Annual Rate Contract basis	KMF/2025-26/ IND1629	ದಿನಾಂಕ: 04.09.2025 ರಿಂದ 17.09.2025 ರವರೆಗೆ
02	Supply of Caustic Soda Lye in Returnable Carboys on Annual Rate Contract basis	KMF/2025-26/ IND1630	
03	Disposal of Scrap/Waste items available at CHAMUL, Kuderu on Annual Rate Contract basis	KMF/2025-26/ IND1631	

ಹೆಚ್ಚಿನ ಮಾಹಿತಿಗಾಗಿ ವ್ಯವಸ್ಥಾಪಕರು (ಖರೀದಿ–ಮೊ.ಸಂ: 8867915047) ರವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ಸರಕಾರ

ಜಿಲ್ಲಾ ನಗರಾಭಿವೃದ್ಧಿ ಕೋಶ, ಉತ್ತರ ಕನ್ನಡ, ಕಾರವಾರ–581301

DISTRICT URBAN DEVELOPMENT CELL, D.C. OFFICE
UTTARA KANNADA DISTRICT, KARWAR-581301
Ph/Fax: 08382-221170 ಇ–ಮೇಲ್: ka.uttarakannada.dudc@gmail.com

ನಂ. ಡಿಯುಡಿಸಿ 4/ಸಿಆರ್/2025–26 ದಿನಾಂಕ: 02–09–2025

ಟೆಂಡರು ಪ್ರಕಟಣೆ

ಉತ್ತರ ಕನ್ನಡ ಜಿಲ್ಲೆಯ 13 ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ 15 ನೇ ಹಣಕಾಸು ಯೋಜನೆಯಡಿ ಆರೋಗ್ಯ ಇಲಾಖೆಯಿಂದ "ನಮ್ಮ ಕ್ಲಿನಿಕ್" ಗಳಿಗೆ ಅವಶ್ಯ ಇರುವ ಉಪಕರಣ/ಸಾಮಗ್ರಿಗಳನ್ನು ಖರೀದಿಸಿ ಪೂರೈಸುವ ಕುರಿತು ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಉತ್ತರ ಕನ್ನಡ ಜಿಲ್ಲೆ ಇವರು ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ **(http:/kppp.karnataka.gov.in)** ಟೆಂಡರ್‌ನ್ನು ಸಲ್ಲಿಸುವುದು. **Indent No. DMA/2025-26/IND5334,** ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಪ್ರಾರಂಭಿಕ ದಿನಾಂಕ: **03–09–2025 ರಂದು 11.00 ಗಂಟೆ,** ಆಕ್ಷೇಪಣೆ ಸಲ್ಲಿಸಲು ಹಾಗೂ ಪೂರ್ವಭಾವಿ ಸಭೆಯ ಕೊನೆಯ ದಿನಾಂಕ: **10–09–2025 ರಂದು 11.00 ಗಂಟೆ,** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **17–09–2025 ರಂದು 17.00 ಗಂಟೆ,** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **18–09–2025 ರಂದು 17.30 ಗಂಟೆ,** ಆರ್ಥಿಕ ಬಿಡ್ ತೆರೆಯುವ ದಿನಾಂಕ: **22–09–2025 ರಂದು 11.00 ಗಂಟೆ.**

ಸಹಿ/– ಯೋಜನಾ ನಿರ್ದೇಶಕರು,
ಜಿಲ್ಲಾ ನಗರಾಭಿವೃದ್ಧಿ ಕೋಶ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಉತ್ತರ ಕನ್ನಡ, ಕಾರವಾರ

DIPR/KWR/KSMCA/447/ 25-26 dt.03.09.2025

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಇಂಜಿನಿಯರಿಂಗ್ ಘಟಕ

ಮುಖ್ಯ ಇಂಜಿನಿಯರ್‌ರವರ ಕಛೇರಿ, ಆರೋಗ್ಯ ಸೌಧ, 3ನೇ ಮಹಡಿ, ಕುಷ್ಠರೋಗ ಆಸ್ಪತ್ರೆ ಆವರಣ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು–560 023.
ದೂ: 080–29557023, ಇ–ಮೇಲ್: **cekhsdrp@gmail.com**

ಸಂಖ್ಯೆ:ಆಕುಕ/ಇಂಘ/ಮುಇಂ/ತಾಸ–2/ಸಇಂ–1&8/ಟಿಎನ್‌ಡಿ/15th Finance/2025–26/1866
ದಿನಾಂಕ:02.09.2025

ಅಲ್ಪಾವಧಿ ಟೆಂಡರ್ ಪ್ರಕಟಣೆ (ಎರಡನೇ ಕರೆ)

ಮುಖ್ಯ ಇಂಜಿನಿಯರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಘಟಕ, ಬೆಂಗಳೂರು ರವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿನ 15th Finance ಕಾಮಗಾರಿಗಳ ಒಟ್ಟು ಅಂದಾಜು ಮೊತ್ತ **ರೂ. 1693.70 ಲಕ್ಷಗಳಿಗೆ** ವಿದ್ಯುನ್ಮಾನ ಸಂಗ್ರಹಣೆ ವೇದಿಕೆ (KPP-portal) ಮೂಲಕ ದ್ವಿಟೆಂಡರ್ ದಸ್ತಾವೇಜು ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಕೆಪಿಪಿ–ಪೋರ್ಟಲ್ ಅನ್ನು ಪರಿಶೀಲಿಸುವುದು.

ಟೆಂಡರ್ ಪ್ರಕ್ರಿಯೆಗಳ ದಿನಾಂಕಗಳು: (1) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ:**20.09.2025 ರಂದು 16.00 ಗಂಟೆಯವರೆಗೆ** (2) ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್): **22.09.2025 ರಂದು 16.01 ಗಂಟೆಗೆ.** ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ **(Through KPPP Platform) www.kppp.karnataka.gov.in** ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಪ್ರಕ್ರಿಯೆ ಶುಲ್ಕವನ್ನು **www.kppp.karnataka.gov.in** ನಲ್ಲಿ ವಿದ್ಯುನ್ಮಾನ (electronic) ವಿಧಾನದಲ್ಲಿ ಪಾವತಿಸಬಹುದಾಗಿರುತ್ತದೆ. ಆಸಕ್ತಿಯುಳ್ಳ ಗುತ್ತಿಗೆದಾರರು ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ (KPPP Platform) ನೊಂದಾಯಿಸುವ ಅಗತ್ಯ ಇದೆ.

ಟಿಪ್ಪಣಿ: 1. ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2.ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/– ಮುಖ್ಯ ಇಂಜಿನಿಯರ್, ಆ&ಕುಕಇ, ಇಂಜಿನಿಯರಿಂಗ್ ಘಟಕ, ಬೆಂಗಳೂರು

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್, ಬಳ್ಳಾರಿ.
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ.

ಸಂ: ಕಾನಿಇಂ/ಪಂ.ರಾ.ಇಂ.ವಿ/ಬ/ಎಇ–1 /ವಿ.ವಿ.ಶೆ/ ಟೆಂಡರು /2025–26/891
ದಿನಾಂಕ 02–09–2025

ಟೆಂಡರು ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಪಂ.ರಾ.ಇಂ. ವಿಭಾಗ, ಬಳ್ಳಾರಿ ವ್ಯಾಪ್ತಿಯ 2024–25 ನೇ ಸಾಲಿನ ಮುಖ್ಯ ಮಂತ್ರಿಗಳ ವಿಶೇಷ ಅನುದಾನ, 2017–18 ನೇ ಸಾಲಿನ ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆ, 2024–25 ನೇ ಸಾಲಿನ ಕೆ.ಕೆ.ಆರ್.ಡಿ.ಬಿ ಯೋಜನೆ ಒಟ್ಟು 06 ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ (ಕೆ.ಪಿ.ಪಿ.ಪಿ. ಪೋರ್ಟಲ್) ಮುಖಾಂತರ ಐಟಂವಾರು ದರಗಳಲ್ಲಿ ಟೆಂಡರು ಅಹ್ವಾನಿಸಿದೆ. ಸದರಿ ಕಾಮಗಾರಿಗಳಲ್ಲಿ **ಪರಿಶಿಷ್ಟ ಜಾತಿ ಗುತ್ತಿಗೆದಾರರಿಗೆ 00, ಪರಿಶಿಷ್ಟ ಪಂಗಡ ಗುತ್ತಿಗೆದಾರರಿಗೆ 00 ಕೆಟಗರಿ II A 00 ಮತ್ತು ಕೆಟಗರಿ I 00** ಕಾಮಗಾರಿಗಳನ್ನು ಕಾಯ್ದಿರಿಸಲಾಗಿದೆ.

ಕಾಮಗಾರಿಗಳ ಇಂಡೆಂಟ್ ಸಂಖ್ಯೆ–
1.RDPR/2025-26/BD/WORK_INDENT18298
2.RDPR/2025-26/RD/WORK_INDENT18596
3.RDPR/2025-26/IND11065
4.RDPR/2025-26/IND11063
5.RDPR/2025-26/IND11062
6.RDPR/2025-26/IND11064

ಟೆಂಡರ್ ನಮೂನೆಗಳನ್ನು **https://kppp.karnataka.gov.in** ಅಂತರ್ಜಾಲದಲ್ಲಿ **ದಿನಾಂಕ 02–09–2025** ರಿಂದ **ದಿನಾಂಕ 16–09–2025** ರಂದು **ಸಂಜೆ 4.30** ಗಂಟೆವರೆಗೆ ಡೌನ್ ಲೋಡ್ ಮಾಡಿಕೊಂಡು ಅವಶ್ಯ ಮಾಹಿತಿ ಹಾಗೂ ನಿಗಧಿತ ಇ.ಎಂ.ಡಿ. ಯೊಂದಿಗೆ **ದಿನಾಂಕ: 16–09–2025 ರ 16.30** ಗಂಟೆಯವರೆಗೆ ಸ್ವೀಕರಿಸಲಾಗುವುದು. ಕಾಮಗಾರಿಯ ತಾಂತ್ರಿಕ ಬಿಡ್ನ್ನು ಆನ್ ಲೈನ್‌ನಲ್ಲಿ **ದಿನಾಂಕ: 17–09–2025 ರಂದು 17.30** ಗಂಟೆಗೆ ತೆರೆಯಲಾಗುವುದು. ಈ ಕುರಿತು ತಿದ್ದುಪಡಿಗಳೇನಾದರೂ ಇದ್ದಲ್ಲಿ ತಿದ್ದುಪಡಿಯನ್ನು **(https://kppp.karnataka.gov.in)** ವೆಬ್ ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿ ವೇಳೆಯಲ್ಲಿ ಖುದ್ದಾಗಿ ಪಡೆಯಬಹುದಾಗಿರುತ್ತದೆ. ಕಛೇರಿ ದೂರವಾಣಿ ಸಂಖ್ಯೆ 08392–266173.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/425/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ

ನಗರ ಭೂ ಸಾರಿಗೆ ನಿರ್ದೇಶನಾಲಯ, ನಗರಾಭಿವೃದ್ಧಿ ಇಲಾಖೆ
ಆಯುಕ್ತರ ಕಾರ್ಯಾಲಯ ನಗರ ಭೂ ಸಾರಿಗೆ

ಬಿಎಂಟಿಸಿ, ಟಿಟಿಎಂಸಿ, 'ಬಿ' ಬ್ಲಾಕ್ (ಬಸ್ ಸ್ಟ್ಯಾಂಡ್ ಮೇಲ್ಭಾಗ), 4ನೇ ಮಹಡಿ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು–560027, ದೂ.: 080–22226627/6628, ಫ್ಯಾಕ್ಸ್ : 080–22226630,
ಇ–ಮೇಲ್ : dultbangalore@gmail.com, dult@karnataka.gov.in, Website: https://dult.karnataka.gov.in

ಸಂಖ್ಯೆ: **DULT-TECH/30/2024/629** ದಿನಾಂಕ: 04.09.2025

ಟೆಂಡರ್ ಪ್ರಕಟಣೆ

ನಗರ ಭೂ ಸಾರಿಗೆ ನಿರ್ದೇಶನಾಲಯ, ಕರ್ನಾಟಕದಲ್ಲಿನ ಒಂಭತ್ತು (09) ನಗರಗಳಿಗೆ ಸಮಗ್ರ ಮೊಬಿಲಿಟಿ ಯೋಜನೆ (CMP) ತಯಾರಿಕೆಗಾಗಿ ಅರ್ಹವುಳ್ಳ ಸಮಾಲೋಚಕರ ಸೇವೆ ಪೂರೈಸಲು ಪ್ರತ್ಯೇಕ ಟೆಂಡರ್‌ಗಳು (ಇ–ಬಿಡ್‌ಗಳನ್ನು) ಆಹ್ವಾನಿಸಿದ್ದು, ಬಿಡ್ಡುದಾರರು **https://kppp.karnataka.gov.in** ಡೌನ್‌ಲೋಡ್ ಮಾಡಬಹುದಾಗಿದೆ. ಟೆಂಡರ್ ಸ್ವೀಕರಿಸಲು ಕೊನೆಯ **ದಿನಾಂಕ: 10.10.2025, ಸಂಜೆ 5.30 ರೊಳಗೆ.**

ಸದರಿ ಟೆಂಡರ್ ನಂಬರ್‌ಗಳು: **(1)** Hubli Dharwad: DULT/2025-26/SE0022, **(2)** Mangaluru: DULT/2025-26/SE0028, **(3)** Kalaburagi: DULT/2025-26/SE0026, **(4)** Belagavi: DULT/2025-26/SE0021, **(5)** Ballari: DULT/2025-26/SE0020, **(6)** Vijayapura: DULT/2025-26/SE0024, **(7)** Davanagere: DULT/2025-26/SE0023, **(8)** Shivamogga: DULT/2025-26/SE0025, **(9)** Tumakuru: DULT/2025-26/SE0027.

ಸಹಿ/–
ಆಡಳಿತಾಧಿಕಾರಿ
ನಗರ ಭೂ ಸಾರಿಗೆ ನಿರ್ದೇಶನಾಲಯ
ನಗರಾಭಿವೃದ್ಧಿ ಇಲಾಖೆ, ಬೆಂಗಳೂರು.

ವಾಸಾಸಂಇ/ವಾಪ್ರ/2619/ಎಸ್‌ಎಸ್‌ಸಿ/2025–26

ಗ್ರೇಟರ್ ಬೆಂಗಳೂರು ಪ್ರಾಧಿಕಾರ

ಕಾರ್ಯಪಾಲಕ ಅಭಿಯಂತರರು (ಯೋಜನೆ ಮತ್ತು ಸಮನ್ವಯ)ರವರ ಕಛೇರಿ, ನೆಲಮಹಡಿ, ಅನೆಕ್ಸ್ ಕಟ್ಟಡ–1, ಎನ್.ಆರ್. ಚೌಕ, ಬೆಂಗಳೂರು–560002.

ನಂ.: ಜಿಬಿಎ/ಕಾಪಾಅ/ಇಒಐ/1/2025–26 ದಿನಾಂಕ: 03.09.2025

ಆಸಕ್ತಿ ವ್ಯಕ್ತಪಡಿಸುವಿಕೆ (ಇಒಐ)

ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಮತ್ತು ಐದು ಹೊಸದಾಗಿ ರಚಿಸಲಾದ ನಗರ ಪಾಲಿಕೆಗಳಿಗೆ (ಕೇಂದ್ರ, ಪೂರ್ವ, ಪಶ್ಚಿಮ, ದಕ್ಷಿಣ, ಉತ್ತರ) ಲೋಗೋ ಮತ್ತು ಧ್ವಜವನ್ನು ವಿನ್ಯಾಸಗೊಳಿಸಲು ಅರ್ಹ ವೃತ್ತಿಪರ ವಿನ್ಯಾಸಕರು/ವಿನ್ಯಾಸ ಏಜೆನ್ಸಿಗಳಿಂದ ಆಸಕ್ತಿ ವ್ಯಕ್ತಪಡಿಸುವಿಕೆಯನ್ನು (ಇಒಐ) ಆಹ್ವಾನಿಸಲಾಗಿದೆ.
ವಿನ್ಯಾಸಗಳು ಆಯಾ ಪಾಲಿಕೆಗಳ ನೀತಿ, ಗುರುತು ಮತ್ತು ಆಕಾಂಕ್ಷೆಗಳನ್ನು ಪ್ರತಿಬಿಂಬಿಸಬೇಕು ಮತ್ತು ಬಹು ಅಪ್ಲಿಕೇಶನ್‌ಗಳಿಗೆ (ಮುದ್ರಣ, ಡಿಜಿಟಲ್, ಧ್ವಜಗಳು, ಇತ್ಯಾದಿ) ಸರಳತೆ, ಸ್ವಂತಿಕೆ ಮತ್ತು ಸ್ಕೇಲೆಬಿಲಿಟಿಯನ್ನು ಖಚಿತಪಡಿಸಿಕೊಳ್ಳಬೇಕು.

ಅರ್ಹತಾ ಮಾನದಂಡಗಳು:
- ಬ್ರ್ಯಾಂಡಿಂಗ್, ಲೋಗೋ ರಚನೆ ಮತ್ತು ವಿಷುವಲ್ ಐಡೆಂಟಿಟಿ ವಿನ್ಯಾಸದಲ್ಲಿ ಅನುಭವ ಹೊಂದಿರುವ ವೈಯಕ್ತಿಕ ವಿನ್ಯಾಸಕರು, ವೃತ್ತಿಪರ ಸಂಸ್ಥೆಗಳು ಅಥವಾ ವಿನ್ಯಾಸ ಸಂಸ್ಥೆಗಳು ಅರ್ಹವಾಗಿವೆ.
- ಅರ್ಜಿದಾರರು ಒದಗಿಸಬೇಕಾದ ದಾಖಲೆಗಳು: (1) ಹಿಂದಿನ ಕೆಲಸದ ಪೋರ್ಟ್‌ಫೋಲಿಯೊ (ಲೋಗೋಗಳು/ಬ್ರ್ಯಾಂಡಿಂಗ್). (2) ಏಜೆನ್ಸಿ ಅಥವಾ ವ್ಯಕ್ತಿಯ ನೋಂದಣಿ/ದಾಖಲೆಗಳು. (3) ಸಂಬಂಧಿತ ಕ್ಷೇತ್ರದಲ್ಲಿ ಕನಿಷ್ಠ 3 ವರ್ಷಗಳ ಅನುಭವ.

ಸಲ್ಲಿಕೆಯ ಅವಶ್ಯಕತೆಗಳು:
ಆಸಕ್ತಿ ಹೊಂದಿರುವ ಅರ್ಜಿದಾರರು ಈ ಕೆಳಗಿನವುಗಳನ್ನು ಸಲ್ಲಿಸಬೇಕು: (1) ಅರ್ಜಿದಾರರ ವಿವರಗಳೊಂದಿಗೆ ಆಸಕ್ತಿ ಪತ್ರ (ವ್ಯಕ್ತಿ/ಏಜೆನ್ಸಿ). (2) ಇದೇ ರೀತಿಯ ವಿನ್ಯಾಸ ಕೆಲಸಗಳ ಪೋರ್ಟ್‌ಫೋಲಿಯೊ. (3) ಲೋಗೋ ಮತ್ತು ಧ್ವಜವನ್ನು ವಿನ್ಯಾಸಗೊಳಿಸಲು ತಾಂತ್ರಿಕ ಪ್ರಸ್ತಾವನೆಯನ್ನು ವಿವರಿಸುವ ರೂಪುರೇಷೆಯ ವಿಧಾನ ಮತ್ತು ವಿವರಣೆ.

ಆಯ್ಕೆ ಪ್ರಕ್ರಿಯೆ:
(1) ಅನುಭವ, ಸೃಜನಶೀಲತೆ, ಹಿಂದಿನ ಕೆಲಸ ಮತ್ತು ಪ್ರಸ್ತಾವಿತ ವಿಧಾನದ ಆಧಾರದ ಮೇಲೆ ಇಒಐಗಳನ್ನು ಮೌಲ್ಯಮಾಪನ ಮಾಡಲಾಗುತ್ತದೆ. (2) ಆಯ್ಕೆಗೊಂಡ ಅರ್ಜಿದಾರರನ್ನು ಮೌಲ್ಯಮಾಪನ ಸಮಿತಿಯ ಮುಂದೆ ಪ್ರಸ್ತುತಿಗಾಗಿ ಆಹ್ವಾನಿಸಲಾಗುವುದು. (3) ಅಂತಿಮ ಆಯ್ಕೆಯನ್ನು ಮೌಲ್ಯಮಾಪನ ಸಮಿತಿಯು ನಿರ್ಧರಿಸುತ್ತದೆ ಮತ್ತು ಅಂತಿಮಗೊಳಿಸಿದ ವಿನ್ಯಾಸಕ್ಕೆ ನಗದು ಬಹುಮಾನ ನೀಡಲಾಗುತ್ತದೆ.

ಕಾಲಮಿತಿ:
(1) ಇಒಐ ಸಲ್ಲಿಸಲು ಕೊನೆಯ ದಿನಾಂಕ: **15.09.2025**. (2) ಆಯ್ಕೆ ಮಾಡುವುದು ಮತ್ತು ಪ್ರಸ್ತುತಿಪಡಿಸುವುದು: ಸಲ್ಲಿಕೆಯ ಅಂತಿಮ ದಿನಾಂಕದ ನಂತರ 5 ದಿನಗಳಲ್ಲಿ.
ಪ್ರಸ್ತಾವನೆಯನ್ನು **ಇ–ಮೇಲ್: eeplgcordgba@gmail.comಗೆ ಸಲ್ಲಿಸಬೇಕು ಮತ್ತು ಹಾರ್ಡ್‌ಕಾಪಿಯನ್ನು ಮುಚ್ಚಿದ ಲಕೋಟೆಯಲ್ಲಿ ಕೆಳಗಿನ ವಿಳಾಸಕ್ಕೆ ಸಲ್ಲಿಸಬೇಕು: ಕಾರ್ಯಪಾಲಕ ಅಭಿಯಂತರರು, ಯೋಜನೆ ಮತ್ತು ಸಮನ್ವಯರವರ ಕಛೇರಿ, ನೆಲಮಹಡಿ, ಅನೆಕ್ಸ್ ಕಟ್ಟಡ–2, ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ), ಬೆಂಗಳೂರು–560002.**
ನಿಯಮಗಳು ಮತ್ತು ಷರತ್ತುಗಳು: (1) ಯಾವುದೇ ಕಾರಣವನ್ನು ನೀಡದೆ ಯಾವುದೇ ಅಥವಾ ಎಲ್ಲಾ ಅರ್ಜಿಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಜಿಬಿಎ ಕಾಯ್ದಿರಿಸಿದೆ. (2) ಅಂತಿಮಗೊಳಿಸಿದ ವಿನ್ಯಾಸಗಳ ಎಲ್ಲಾ ಬೌದ್ಧಿಕ ಆಸ್ತಿ ಹಕ್ಕುಗಳು ಜಿಬಿಎ ಹಕ್ಕಾಗಿರುತ್ತದೆ. (3) ಇಒಐ ಸಿದ್ಧಪಡಿಸುವಲ್ಲಿ ಅರ್ಜಿದಾರರು ಮಾಡುವ ಯಾವುದೇ ವೆಚ್ಚವನ್ನು ಮರುಪಾವತಿಸಲಾಗುವುದಿಲ್ಲ.

ಸಹಿ/–, ಕಾರ್ಯಪಾಲಕ ಅಭಿಯಂತರರು,
ಯೋಜನೆ ಮತ್ತು ಸಮನ್ವಯ, ಗ್ರೇಟರ್ ಬೆಂಗಳೂರು ಪ್ರಾಧಿಕಾರ

ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ KEONICS

ISO 9001 : 2008
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನಂ. 59, 1ನೇ ಮಹಡಿ, ಕುಮಾರ ಪಾರ್ಕ್ ಪಶ್ಚಿಮ, ರೈಲ್ವೆ ಪ್ಯಾರಲಲ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು 560020

ಸಂಖ್ಯೆ: KSEDCL/ITS/GOODS-006/2025-26 ದಿನಾಂಕ: 03.09.2025

ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾದ ಮೆ: ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (ಕಿಯೋನಿಕ್ಸ್), **1.** Tender for Empanelment of Vendors for Supply, Installation, Testing, Commissioning and Warranty of Desktops and Laptops at Karnataka State Electronics Development Corporation Limited (KEONICS) for a period of 01 Year (Call-2) **2.** Tender for Empanelment of Vendors for Supply, Installation, Testing, Commissioning and Warranty of Tablets at Karnataka State Electronics Development Corporation Limited (KEONICS) for a period of 01 Year (Call-2), **3.**Tender for Empanelment of Vendors for Supply, Installation, Testing, Commissioning and Warranty of Hard Disks at Karnataka State Electronics Development Corporation Limited (KEONICS) for a period of 01 Year ಗಾಗಿ ಸಂಸ್ಥೆಗಳನ್ನು ಆಯ್ಕೆ ಮಾಡಲು 20 ದಿನಗಳ ಅವಧಿಗೆ ಓಪನ್ ಇ–ಟೆಂಡರ್ ಪ್ರಕಟಣೆಯನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಬಿಡ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **http://kppp.karnataka.gov.in**ನಲ್ಲಿ ವಿವರವನ್ನು ಪಡೆಯಬಹುದು, ಹೆಚ್ಚಿನ ಮಾಹಿತಿಗಾಗಿ ಕಿಯೋನಿಕ್ಸ್ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದು **(ದೂರವಾಣಿ ಸಂಖ್ಯೆ: 080 – 2222 5645)**

ಕ್ರ. ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ	ಟೆಂಡರ್ ವಿವರ	ಟೆಂಡರ್‌ನಲ್ಲಿ ಭಾಗವಹಿಸಲು ಕೊನೆಯ ದಿನಾಂಕ
1	KEONICS/ 2025-26/ IND0298	Tender for Empanelment of Vendors for Supply, Installation, Testing, Commissioning and Warranty of Hard Disks at KEONICS for a period of 01 Year	**20.09.2025**
2	KEONICS/ 2025-26/ IND0297	Tender for Empanelment of Vendors for Supply, Installation, Testing, Commissioning and Warranty of Tablets at KEONICS for a period of 01 Year Call-2	**20.09.2025**
3	KEONICS/ 2025-26/ IND0296	Tender for Empanelment of Vendors for Supply, Installation, Testing, Commissioning and Warranty of Desktops and Laptops at KEONICS for a period of 01 Year Call-2	**20.09.2025**

DIPR/CP/2625/SA/2025-26 ಸಹಿ/– ನಿರ್ದೇಶಕರು (ಹಣಕಾಸು)

ಬನ್ನೇರುಘಟ್ಟ ಜೈವಿಕ ಉದ್ಯಾನವನ

ಕಾರ್ಯನಿರ್ವಾಹಕ ನಿರ್ದೇಶಕರ ಕಛೇರಿ, ಬನ್ನೇರುಘಟ್ಟ ಜೈವಿಕ ಉದ್ಯಾನವನ, ಬೆಂಗಳೂರು – 560083. ಫೋನ್: 080–29776466 / 29776467
ಇ–ಮೇಲ್: ed@bannerughattabiopark.org

ಸಂಖ್ಯೆ:ಎ3/ಬಜಪಾ/ಟೆಂಡರ್/ಸಿವಿಲ್ ಕಾಮಗಾರಿ/ಸಿಆರ್–02/2025–26 ದಿನಾಂಕ: 28–08–2025

ಟೆಂಡರ್ ಪ್ರಕಟಣೆ

ಬನ್ನೇರುಘಟ್ಟ ಜೈವಿಕ ಉದ್ಯಾನವನ, ಬೆಂಗಳೂರು ವ್ಯಾಪ್ತಿಯಲ್ಲಿ ಆಯೋಜಿಸಿರುವ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅರ್ಹ ಪಿಡಬ್ಲ್ಯೂಡಿ / ಸಿಪಿಡಬ್ಲ್ಯೂಡಿ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಇ–ಟೆಂಡರ್‌ನ್ನು ಕರೆಯಲಾಗಿರುತ್ತದೆ. ವಿವರವಾದ ಟೆಂಡರ್ ಅಧಿಸೂಚನೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಿಂದ ದಿನಾಂಕ: **02–09–2025 ರ ನಂತರ** ಡೌನ್‌ಲೋಡ್ ಮಾಡಿಕೊಳ್ಳಬಹುದು. ಬಿಡ್ ಪೂರ್ವಭಾವಿ ಸಭೆ ದಿನಾಂಕ: **10–09–2025 ರಂದು ಬೆಳಿಗ್ಗೆ 11.30 ಗಂಟೆಗೆ.** ಟೆಂಡರ್‌ನ ವಿಚಾರಣೆಗಳು ಮತ್ತು ಸ್ಪಷ್ಟೀಕರಣಕ್ಕಾಗಿ ಕೊನೆಯ ದಿನಾಂಕ: **17–09–2025.** ನಿಗಧಿತ ಇ.ಎಂ.ಡಿ ಹಾಗೂ ಟೆಂಡರ್ ಪ್ರೊಸೆಸ್ಸಿಂಗ್ ಫೀ ಯೊಂದಿಗೆ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: **18–09–2025 ರಂದು ಸಂಜೆ 4.00 ಗಂಟೆವರೆಗೆ.** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **20–09–2025 ರಂದು ಬೆಳಿಗ್ಗೆ 11.30 ಗಂಟೆಗೆ.** ಆರ್ಥಿಕ ಬಿಡ್ ತೆರೆಯುವ ದಿನಾಂಕ: **22–09–2025 ರಂದು ಬೆಳಿಗ್ಗೆ 11.30 ಗಂಟೆಯ ನಂತರ.**

ಸಹಿ/–
ಕಾರ್ಯನಿರ್ವಾಹಕ ನಿರ್ದೇಶಕರು

ವಾಸಾಸಂಇ/ವಾ.ಪ್ರ/2614/ಅಡ್ವಟೋರ್/2025–26

ಕರ್ನಾಟಕ ಮುನಿಸಿಪಲ್ ಡಾಟಾ ಸೊಸೈಟಿ (ನೋಂ)

6ನೇ ಮಹಡಿ, #1–4, ಐಟಿ ಪಾರ್ಕ್, ರಾಜಾಜಿನಗರ ಇಂಡಸ್ಟ್ರಿಯಲ್ ಎಸ್ಟೇಟ್, ಬೆಂಗಳೂರು–560010.

No: E50646 KMDS/TECH/OTHE/19/2023 Date: 03.09.2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆಎಂಡಿಎಸ್ ಡೇಟಾ ಕೇಂದ್ರಕ್ಕೆ ಅಗತ್ಯವಿರುವ ಈ ಕೆಳಗಿನ ಸೇವೆಗಾಗಿ ಅಲ್ಪಾವಧಿಯ ಟೆಂಡರ್ ನ್ನು ಇ –ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು https://kppp.karnataka.gov.in ಗೆ ಭೇಟಿನೀಡಿ.

ಟೆಂಡರ್ ವಿವರಗಳು

ಟೆಂಡರ್ ಸಂಖ್ಯೆ : DMA/2025-26/SE6129
ಟೆಂಡರ್ ಹೆಸರು : The Supply of Redhat Enterprise Linux, Redhat Network Services and JBOSS licenses for a period of one Year
ಟೆಂಡರ್ ನ ಪೂರ್ವಭಾವಿ ಸಭೆಯ ದಿನಾಂಕ ಮತ್ತು ಸಮಯ : 06.09.2025, ಮಧ್ಯಾಹ್ನ 3.30 ಗಂಟೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : 15.09.2025, ಬೆಳಿಗ್ಗೆ 11.00 ಗಂಟೆಗೆ
ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : 17.09.2025, ಬೆಳಿಗ್ಗೆ 11.00 ಗಂಟೆಗೆ
ಟೆಂಡರ್ ಪ್ರಕಟಣೆ ದಿನಾಂಕ : 04.09.2025.
ಟೆಂಡರ್‌ನ್ನು ಸ್ವೀಕರಿಸಲು ಕೊನೆಯ ದಿನಾಂಕ : 12.09.2025, ಸಂಜೆ 5.30 ಗಂಟೆ ವರೆಗೆ

ಸಹಿ/–
ಜಂಟಿ ನಿರ್ದೇಶಕರು (ಸು), ಕರ್ನಾಟಕ ಮುನಿಸಿಪಲ್ ಡಾಟಾ ಸೊಸೈಟಿ, ಬೆಂಗಳೂರು.

DIPR/CP/2632/2025-26

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ಸಂಖ್ಯೆ 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052. ಫೋನ್: 080–22268677/78/79, ಫ್ಯಾಕ್ಸ್: 080–22268667
ಇಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in

ನಂ: ಕವಿನಿಆ/ಎಫ್–34/ವಾ–16/835 ದಿನಾಂಕ: 03.09.2025

ಸಾರ್ವಜನಿಕ ವಿಚಾರಣೆ ಬಗ್ಗೆ ಸೂಚನೆ

ವಿಷಯ: "ನಿಯಂತ್ರಣ ಅವಧಿ 2026ಕ್ಕೆ, ಮುನಿಸಿಪಲ್ ಘನ ತ್ಯಾಜ್ಯ ಆಧಾರಿತ ವಿದ್ಯುತ್ ಉತ್ಪಾದನಾ ಘಟಕಗಳಿಂದ ವಿದ್ಯುತ್ ಖರೀದಿಗಾಗಿ ಮಾನದಂಡನಗಳ ನಿರ್ಧರಣೆ ಹಾಗೂ ದರ ಪರಿಷ್ಕರಣೆ " – ಸಾರ್ವಜನಿಕ ವಿಚಾರಣೆ ಬಗ್ಗೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಈ ಮೇಲಿನ ವಿಷಯದ ಬಗ್ಗೆ ಚರ್ಚಾಪತ್ರವನ್ನು ಹೊರಡಿಸಿದ್ದು, ಅದು ಆಯೋಗದ ಅಂತರ್ಜಾಲ ತಾಣ: **https://kerc.karnataka.gov.in**ಯಲ್ಲಿ ಲಭ್ಯವಿರುತ್ತದೆ.
ಆಯೋಗವು ಈ ವಿಷಯದ ಬಗ್ಗೆ ಭಾಗೀದಾರರ ಅಭಿಪ್ರಾಯ ಪಡೆಯಲು **ಮಂಗಳವಾರ ದಿನಾಂಕ: 16.09.2025 ರಂದು ಮಧ್ಯಾಹ್ನ 3:30 ಗಂಟೆಗೆ, ಆಯೋಗದ ಕೋರ್ಟ್ ಹಾಲ್‌ನ, ಒಂದನೆಯ ಮಹಡಿ, ನಂ. 16ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052 ಇಲ್ಲಿ ಸಾರ್ವಜನಿಕ ವಿಚಾರಣೆಯನ್ನು ನಿಗದಿಪಡಿಸಿದೆ.**
ಆಸಕ್ತರು ಸಾರ್ವಜನಿಕ ವಿಚಾರಣೆಯಲ್ಲಿ ಭಾಗವಹಿಸಿ ತಮ್ಮ ಅನಿಸಿಕೆ/ಅಭಿಪ್ರಾಯ/ ಸಲಹೆಗಳನ್ನು ಆಯೋಗದ ಮುಂದೆ ಸಲ್ಲಿಸಲು ಕೋರಲಾಗಿದೆ.

ಸಹಿ/– ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ

DIPR/CP/2618/2025-26

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ಸಂಖ್ಯೆ 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052. ಫೋನ್: 080–22268677/78/79, ಫ್ಯಾಕ್ಸ್: 080–22268667
ಇಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in

ನಂ: ಕವಿನಿಆ/ಎಫ್–34/ವಾ–18/836 ದಿನಾಂಕ: 03.09.2025

ಸಾರ್ವಜನಿಕ ವಿಚಾರಣೆ ಬಗ್ಗೆ ಸೂಚನೆ

ವಿಷಯ: "ನಿಯಂತ್ರಣ ಅವಧಿ 2026ಕ್ಕೆ ಸೌರಶಕ್ತಿಯೊಂದಿಗೆ ಅಥವಾ ಸೌರ ಶಕ್ತಿ ಹೊರತಾದ ಮೇಲ್ಛಾವಣಿ ಏರೋ ಟರ್ಬೈನ್‌ನಿಂದ ವಿದ್ಯುತ್ ಖರೀದಿಗಾಗಿ ಮಾನದಂಡನಗಳ ನಿರ್ಧರಣೆ ಹಾಗೂ ದರ ಪರಿಷ್ಕರಣೆ" – ಸಾರ್ವಜನಿಕ ವಿಚಾರಣೆ ಬಗ್ಗೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಈ ಮೇಲಿನ ವಿಷಯದ ಬಗ್ಗೆ ಚರ್ಚಾಪತ್ರವನ್ನು ಹೊರಡಿಸಿದ್ದು, ಅದು ಆಯೋಗದ ಅಂತರ್ಜಾಲ ತಾಣ: **https://kerc.karnataka.gov.in**ಯಲ್ಲಿ ಲಭ್ಯವಿರುತ್ತದೆ.
ಆಯೋಗವು ಈ ವಿಷಯದ ಬಗ್ಗೆ ಭಾಗೀದಾರರ ಅಭಿಪ್ರಾಯ ಪಡೆಯಲು **ಮಂಗಳವಾರ ದಿನಾಂಕ: 16.09.2025ರಂದು ಮಧ್ಯಾಹ್ನ 3:00 ಗಂಟೆಗೆ, ಆಯೋಗದ ಕೋರ್ಟ್ ಹಾಲ್‌ನ, ಒಂದನೆಯ ಮಹಡಿ, ನಂ. 16ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052 ಇಲ್ಲಿ ಸಾರ್ವಜನಿಕ ವಿಚಾರಣೆಯನ್ನು ನಿಗದಿಪಡಿಸಿದೆ.**
ಆಸಕ್ತರು ಸಾರ್ವಜನಿಕ ವಿಚಾರಣೆಯಲ್ಲಿ ಭಾಗವಹಿಸಿ ತಮ್ಮ ಅನಿಸಿಕೆ/ಅಭಿಪ್ರಾಯ/ ಸಲಹೆಗಳನ್ನು ಆಯೋಗದ ಮುಂದೆ ಸಲ್ಲಿಸಲು ಕೋರಲಾಗಿದೆ.

ಸಹಿ/– ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ

DIPR/CP/2616/2025-26

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)

ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಚಿಕ್ಕೋಡಿ

ನಂ.ಲೋ.ಇ/ಚಿ.ವಿ/ಸ.ಇಂ–1/ಟೆಂಡರ/2025–26/3097 ದಿನಾಂಕ: 02.09.2025

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2025–26ನೇ ಸಾಲಿನ ಲೆಕ್ಕ ಶಿರ್ಷಿಕೆ 3054–ರಾಜ್ಯ ಹೆದ್ದಾರಿ ನಿರ್ವಹಣೆ ಅಡಿ 6 ಕಾಮಗಾರಿಗಳು ಮತ್ತು ಲೆಕ್ಕ ಶೀರ್ಷಿಕೆ 3054–ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ ಅಡಿ 10 ಕಾಮಗಾರಿಗಳು, ಹೀಗೆ ಒಟ್ಟು 16 ಕಾಮಗಾರಿಗಳು ಇದ್ದು ಗುತ್ತಿಗೆಗೆ ಇಟ್ಟ ಕನಿಷ್ಠ ಮೊತ್ತ ರೂ. 4.80 ಲಕ್ಷ ಹಾಗೂ ಗರಿಷ್ಠ ಮೊತ್ತ ರೂ. 58.80 ಲಕ್ಷ ಇರುವ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.

ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1. **ಆಕ್ಷೇಪಣೆ – ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ: 10.09.2025 (ಸಾಯಂಕಾಲ 5.30 ಗಂಟೆಯವರೆಗೆ)**
2. **ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 12.09.2025 (ಸಾಯಂಕಾಲ 5.00ಗಂಟೆಯವರೆಗೆ)**
3. **ತಾಂತ್ರಿಕ ಬಿಡ್‌ನ್ನು ತೆರೆಯುವ (Two Cover System) ದಿನಾಂಕ: 15.09.2025 (ಸಾಯಂಕಾಲ 4.30 ಗಂಟೆಗೆ)**
4. **ಹಣಕಾಸು ಬಿಡ್‌ನ್ನು ತೆರೆಯುವ (Two Cover System) ದಿನಾಂಕ "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ"**
5. **ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ–ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.**

ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ **kppp.karnataka.gov.in** ನ್ನು ಮತ್ತು ಟೆಂಡರ ಪ್ರಕಟಣೆಗಾಗಿ **www.kpwd.gov.in** ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜನೀಯರರು
ಲೋಕೋಪಯೋಗಿ ಇಲಾಖೆ,
ವಿಭಾಗ ಚಿಕ್ಕೋಡಿ.

DIPR/BGM/RO.NO 934/2025-26

ಕರ್ನಾಟಕ ಗ್ರಾಮೀಣ ಬ್ಯಾಂಕ್ ನೌಕರರ ಪತ್ತಿನ ಸಹಕಾರ ಸಂಘ (ನಿ.)

(Regd. No. UBC/UOG/149/17320/90-91 dt. 14.08.1990)
234/ಬಿ, ಕನಕದುರ್ಗಮ್ಮ ಬಡಾವಣೆ, ಗಾಂಧೀನಗರ, ಬಳ್ಳಾರಿ – 583103. ದೂ: 08392–254016

ಸಂಘದ ವಾರ್ಷಿಕ ಮಹಾಸಭೆಯ ನೋಟೀಸು

ಸಂಘದ 2024–25ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ 21.09.2025 ಭಾನುವಾರ ಬೆಳಿಗ್ಗೆ 11.30 ಗಂಟೆಗೆ ಸಂಘದ ಸಮುದಾಯ ಭವನದ ಸಭಾಂಗಣದಲ್ಲಿ (234/ಬಿ, ಕನಕದುರ್ಗಮ್ಮ ಬಡಾವಣೆ, ಗಾಂಧೀನಗರ, ಬಳ್ಳಾರಿ) ಸಂಘದ ಅಧ್ಯಕ್ಷರಾದ ಶ್ರೀ ಶ್ರೀನಿವಾಸಮೂರ್ತಿ.ಕೆ ಇವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಸಭೆಯ ನೋಟೀಸು ಹಾಗೂ ವಿವರಗಳನ್ನು ಎಲ್ಲಾ ಸದಸ್ಯ ಬಾಂಧವರಿಗೆ ಈಗಾಗಲೇ ಅಂಚೆ ಮೂಲಕ ಕಳುಹಿಸಲಾಗಿದೆ.

ಕಾರಣ ಸಂಘದ ಸರ್ವ ಸದಸ್ಯರು ಸಕಾಲಕ್ಕೆ ಆಗಮಿಸಿ ಸಂಘದ ವಾರ್ಷಿಕ ಮಹಾಸಭೆಯನ್ನು ಯಶಸ್ವಿಗೊಳಿಸಬೇಕೆಂದು ಕೋರಲಾಗಿದೆ.

ಸ್ಥಳ : ಬಳ್ಳಾರಿ
ದಿನಾಂಕ : 03.09.2025

ಆಡಳಿತ ಮಂಡಳಿಯ ಪರವಾಗಿ
ನಾಗರಾಜ .ಟಿ, ಮುಖ್ಯ ಕಾರ್ಯನಿರ್ವಾಹಕರು (ಪ್ರ)

ಆಯುಕ್ತರ ಕಛೇರಿ

ಮಹಾನಗರಪಾಲಿಕೆ
ಬಳ್ಳಾರಿ–583101.

ದೂರವಾಣಿ ಸಂಖ್ಯೆ : 08392–273479 /278168
ಫ್ಯಾಕ್ಸ್ : 08392–273477
ವೆಬ್‌ಸೈಟ್ : www.bellarycity.gov.in
ಇ–ಮೇಲ್: bellarycommissioner@yahoo.co.in
ಗಡಿಗಿ ಚೆನ್ನಪ್ಪ ವೃತ್ತ (ರಾಯಲ್ ಸರ್ಕಲ್) ಬಳ್ಳಾರಿ–583101

ಸಂ:ಮನಪಾಬ/ತಾಶಾ/ವಿ/15ನೇ/01/2024–25/2025–26 ದಿನಾಂಕ:–02.09.2025

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಬಳ್ಳಾರಿ ಮಹಾನಗರಪಾಲಿಕೆಯವತಿಯಿಂದ 15ನೇ ಹಣಕಾಸು 2024–25ನೇ ಸಾಲಿನ ಮತ್ತು ಪಾಲಿಕೆಯ ಸಾಮಾನ್ಯ ಅನುದಾನದಲ್ಲಿ ಇಂಡೆಂಟ್ ಸಂಖ್ಯೆ DMA/2025-26/EL/WORK_INDENT48744, DMA/2025-26/OW/WORK_INDENT48753, DMA/2025-26/OW/WORK_INDENT48754 ಮತ್ತು DMA/2025-26/IND5332 ಕಾಮಗಾರಿಗಳ ಟೆಂಡರನ್ನು ದಿನಾಂಕ: 18.09.2025 ರಂದು ಸಂಜೆ 5.00 ಗಂಟೆಯೊಳಗಾಗಿ ಸಲ್ಲಿಸಬಹುದು. ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 19.09.2025 ಸಾಯಂಕಾಲ 5.30 ಗಂಟೆಗೆ ಮತ್ತು ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: 23.09.2025ರ ಬೆಳಿಗ್ಗೆ 10.00 ಗಂಟೆಗೆ ಕಾಮಗಾರಿಗಳ ಎಲ್ಲಾ ವಿವರಗಳಿಗಾಗಿ ವೆಬ್‌ಸೈಟ್ http://kppp.karnataka.gov.in/#/portal/portal-home ಅನ್ನು ಮತ್ತು www.ballaricity.mrc.gov.in ಗಮನಿಸಲು ಹಾಗೂ ಬಳ್ಳಾರಿ ಮಹಾನಗರಪಾಲಿಕೆಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದು.

ಆಯುಕ್ತರು,
ಬಳ್ಳಾರಿ ಮಹಾನಗರಪಾಲಿಕೆ,ಬಳ್ಳಾರಿ

ಡಾ. ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಯೂನಿವರ್ಸಿಟಿ, ಬೆಂಗಳೂರು

No. BASEU/DPE Appt/2023-24 Date: 03-09-2025

ಅಧಿಸೂಚನೆ

ವಿಷಯ : ಡಾ. ಬಿ.ಆರ್.ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾನಿಲಯ, ಬೆಂಗಳೂರು ಇಲ್ಲಿ Computer Science ಸಹಾಯಕ ಪ್ರಾಧ್ಯಾಪಕರು (Ad-hoc basis) ಮತ್ತು ಗುತ್ತಿಗೆ ಆಧಾರದ ಮೇಲೆ ದೈಹಿಕ ಶಿಕ್ಷಣ ಕೋ–ಆರ್ಡಿನೇಟರ್ ನೇಮಕಾತಿ ಬಗ್ಗೆ.

ಡಾ. ಬಿ.ಆರ್.ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾನಿಲಯ, ಬೆಂಗಳೂರು ಇಲ್ಲಿ **"Computer Science ಸಹಾಯಕ ಪ್ರಾಧ್ಯಾಪಕರು (Ad-hoc basis) ಮತ್ತು ಗುತ್ತಿಗೆ ಆಧಾರದ ಮೇಲೆ ದೈಹಿಕ ಶಿಕ್ಷಣ ಕೋ–ಆರ್ಡಿನೇಟರ್"** ಆಗಿ ಕೆಲಸ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಹೆಚ್ಚಿನ ವಿವರಗಳಿಗಾಗಿ ಅಂದರೆ, ವಿದ್ಯಾರ್ಹತೆಗಳು, ಅನುಭವ, ಕರ್ತವ್ಯಗಳ ಸ್ವರೂಪ, ಕ್ರೋಢೀಕೃತ ವೇತನ, ಒಪ್ಪಂದದ ಅವಧಿ ಇತ್ಯಾದಿಗಳಿಗಾಗಿ ವಿಶ್ವವಿದ್ಯಾನಿಲಯದ ವೆಬ್‌ಸೈಟ್ **www.base.ac.in** ಗೆ ಭೇಟಿ ನೀಡಿ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದಾಗಿದೆ.
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **12–09–2025ರ ಸಂಜೆ 5.00 ಗಂಟೆವರೆಗೆ.**

ಸಹಿ/–
ಕುಲಸಚಿವರು

DIPR/CP/YC/2617/2025-26

ಸಂಪರ್ಕಿಸಿ: ಜ್ಞಾನ ಭಾರತಿ ಮುಖ್ಯ ರಸ್ತೆ, ನಾಗರಭಾವಿ ಅಂಚೆ, ಬೆಂಗಳೂರು, ಕರ್ನಾಟಕ – 560072 ಸಹಾಯವಾಣಿ: 080–29557767 ಇ–ಮೇಲ್: info@base.ac.in

---

ನಗರಸಭಾ ಕಾರ್ಯಾಲಯ ಹೊಸಪೇಟೆ.

ಕ್ರಸಂ/ನಸಹೊ/ತಾಂ.ಶಾ/ಟೆಂಡರ್/15ನೇ ಹಣಕಾಸು(ಅನ್‌ಟೈಡ್)2025–26
ದಿನಾಂಕ: 30.08.2025

ಟೆಂಡರ್ ಪ್ರಕಟಣೆ(ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ)

2024–25ನೇ ಸಾಲಿನ 15ನೇ ಹಣಕಾಸು ಉಳಿತಾಯ ಮೊತ್ತದ ಅನುದಾನದಲ್ಲಿ ಈ ಕೆಳಗಿನಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮಾವಳಿಯಂತೆ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಸರಬರಾಜುದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು www.eproc.karnataka.govt.in ವೆಬ್ ಸೈಟ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಬಹುದು.
1.ಟೆಂಡರ್‌ನ್ನು ಸ್ವೀಕರಿಸುವ ಕೊನೆಯ ದಿನಾಂಕ: **15.09.2025ಸಂಜೆ 5.00 ಗಂಟೆ ವರೆಗೆ.** 2.ಟೆಂಡರ್‌ನ್ನು ತೆರೆಯುವ ದಿನಾಂಕ: **16.09.2025 ಸಂಜೆ 5:10 ಗಂಟೆಗೆ, ಟೆಂಡರ್‌ಗಳನ್ನು ತೆರೆಯುವ ಸ್ಥಳ ನಗರಸಭೆ ಹೊಸಪೇಟೆ.**
ಕಾಮಗಾರಿ ವಿವರ : DMA/2025/OW/WORK_INDENT 48065. ಟೆಂಡರ್ ಗಿಟ್ಟ ಅಂದಾಜು ಮೊತ್ತ ಲಕ್ಷಗಳಲ್ಲಿ : 56.00
ಟೆಂಡರ್ ಪ್ರೋಸೆಸ್ಸಿಂಗ್ ಫೀ, ಇ–ಪ್ರೋಕ್ಯೂರ್‌ಮೆಂಟ್ ನಿಗಧಿ ಪಡಿಸಿದಂತೆ, ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ತಾಂತ್ರಿಕ ಶಾಖೆಯನ್ನು ಸಂಪರ್ಕಿಸಬಹುದು.

ಸಹಿ/–ಸಹಾಯಕ ಕಾರ್ಯಪಾಲಕ ಅಭಿಯಂತರರು, ನಗರಸಭೆ ಹೊಸಪೇಟೆ.
ಸಹಿ/–ಪೌರಾಯುಕ್ತರು, ನಗರಸಭೆ ಹೊಸಪೇಟೆ.

ವಾ.ಸಾ.ಸಂ.ಇ/ವಿಜಯನಗರ/2025–26/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/231

ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಕಂಪನಿ ನಿಯಮಿತ

ಉಪ ಪ್ರಧಾನ ವ್ಯವಸ್ಥಾಪಕರು–1 ರವರ ಕಛೇರಿ, ಬಿಎಸ್‌ಡಬ್ಲ್ಯೂಎಂಎಲ್, 1ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು–560 052.

ಸಂಖ್ಯೆ: ಉಪ್ರವ್ಯ–1/(ಬಿಎಸ್‌ಡಬ್ಲ್ಯೂಎಂಎಲ್)/ಪಿಆರ್/203/2025–26 ದಿನಾಂಕ: 03.09.2025

ತಿದ್ದುಪಡಿ – 2

ವಿಷಯ: ಟೆಂಡರ್ ಅಧಿಸೂಚನೆಯ ವೇಳಾ ಪಟ್ಟಿಯಲ್ಲಿ ಬದಲಾವಣೆ
ಉಲ್ಲೇಖ: 1. ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ: ಉಪ್ರವ್ಯ–1/ಬಿಎಸ್‌ಡಬ್ಲ್ಯೂಎಂಎಲ್/ಟೆಂಡರ್/08/2025–26 ದಿನಾಂಕ: 30.07.2025.
2. ತಿದ್ದುಪಡಿ–1 ಸಂಖ್ಯೆ: ಉಪ್ರವ್ಯ–1/(ಬಿಎಸ್‌ಡಬ್ಲ್ಯೂಎಂಎಲ್)/ಪಿಆರ್/183/25–26 ದಿನಾಂಕ: 18.08.2025.

******

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಮೇಲಿನ ಟೆಂಡರ್ ಪ್ರಕಟಣೆಯ ವೇಳಾ ಪಟ್ಟಿಯನ್ನು ತಾಂತ್ರಿಕ ಕಾರಣಗಳಿಂದಾಗಿ ವಿಸ್ತರಿಸಲಾಗಿದೆ. ಬದಲಾದ ವೇಳಾ ಪಟ್ಟಿಯನ್ನು ಕೆಳಗಿನ ಕೋಷ್ಟಕದಲ್ಲಿ ಸೂಚಿಸಲಾಗಿದೆ.

ನಿಗದಿತ ಅವಧಿ / ವೇಳಾ ಪಟ್ಟಿ

ಕ್ರಮ ಸಂಖ್ಯೆ		ಟೆಂಡರ್ ಪ್ರಕಟಣೆ/ ತಿದ್ದುಪಡಿ–1 ರ ಪ್ರಕಾರ	ವಿಸ್ತರಿಸಲಾದ ದಿನಾಂಕಗಳನ್ನು ಓದಿಕೊಳ್ಳುವುದು
1	ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ	15.09.2025 ರಂದು 16:00 ಗಂಟೆಯವರೆಗೆ	20.09.2025 ರಂದು 16:00 ಗಂಟೆಯವರೆಗೆ
2	ಬಿಡ್ ತೆರೆಯುವುದು	16.09.2025 ರಂದು 16:30 ಗಂಟೆಯ ನಂತರ	22.09.2025 ರಂದು 10:30 ಗಂಟೆಯ ನಂತರ

ಹೆಚ್ಚಿನ ವಿವರಗಳಿಗಾಗಿ ಜಿಓಕೆ ಕೆಪಿಪಿ ಪೋರ್ಟಲ್ ವೆಬ್‌ಸೈಟ್ **www.kppp.karnataka.gov.in** ಗೆ ಭೇಟಿ ನೀಡಿ

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–1,
ಬಿಎಸ್‌ಡಬ್ಲ್ಯೂಎಂಎಲ್

ವಾಸಾಸಂಇ/ವಾಪ್ರ/2633/ಆಕಾರ್/2025–26

ನಗರಸಭಾ ಕಾರ್ಯಾಲಯ, ಹುಣಸೂರು

ಮೈಸೂರು ಜಿಲ್ಲೆ – 571105, ದೂ: 08222–252048
ಇ–ಮೇಲ್: ka.hunsur.cmc@gmail.com

ಸಂಖ್ಯೆ: ಹುನಕಾ/ಜೆಇ/03/15ನೇ ಹ.ಕಾ.ಯೋ.ಉಳಿತಾಯ/ಟೆಂ–01/2025–26 **ದಿನಾಂಕ:** 29.08.2025

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ)

ಹುಣಸೂರು ನಗರಸಭಾ ವ್ಯಾಪ್ತಿಯಲ್ಲಿ 2025–26ನೇ ಸಾಲಿನ ಎಸ್.ಎಫ್.ಸಿ ಹಾಗೂ 15ನೇ ಹಣಕಾಸು ಯೋಜನೆಯಡಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆಯಲ್ಲಿ ಚಾಲ್ತಿ ಸಾಲಿಗೆ ನೊಂದಾಯಿತ ಗುತ್ತಿಗೆದಾರರಿಂದ KW-1ರ KW-2ರ ನಿಯಮಗಳ ಅನ್ವಯ ಹಾಗೂ 1999 ಹಾಗೂ 2000ರ ಪಾರದರ್ಶಕ ಕಾಯ್ದೆಗೆ ಒಳಪಟ್ಟು ಪ್ರತ್ಯೇಕವಾಗಿ ಇ–ಪೋರ್ಟಲ್ ಮುಖಾಂತರ ಟೆಂಡರ್‌ರನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಗುತ್ತಿಗೆದಾರರು http://kppp.karnataka.gov.in ನಿಂದ ಟೆಂಡರ್ ಷರತ್ತು, ಇಎಂಡಿ ಹಾಗೂ ದಸ್ತಾವೇಜನ್ನು ಡೌನ್ ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು. ಕಾಮಗಾರಿಯ ವಿವರ : **1)** DMA/2025-26/OW/WORK_INDENT48492, **02)** INDENT 48444, **3)** INDENT48533, **4)** INDENT48446, **5)**INDENT48535, **6)** INDENT48493, **7)**INDENT47516, **8)**INDENT47520, **9)** INDENT47521, **10)** INDENT47522 **11)** INDENT47575, **12)**INDENT47518, **13)** INDENT-SE5254/CALL-4, **14)** INDENT-SE 6052, **15)** INDENT-SE5988, **16)**INDENT-IND5209 ಆಕ್ಷೇಪಣೆಗಳನ್ನು ಸಲ್ಲಿಸುವ, ಭರ್ತಿ ಮಾಡಿದ ಟೆಂಡರ್‌ನ್ನು ಆನ್‌ಲೈನ್ ಮುಖಾಂತರ ಸಲ್ಲಿಸುವ ಕಡೆಯ **ದಿನಾಂಕ: 15.09.2025 ಸಂಜೆ 5:30 ಗಂಟೆಯವರೆಗೆ.** ಟೆಂಡರ್ ತೆರೆಯುವ **ದಿನಾಂಕ: 17.09.2025 ಬೆಳಗ್ಗೆ 11.00 ಗಂಟೆಗೆ**

ಸಹಿ/– ಅಧ್ಯಕ್ಷರು, ನಗರಸಭೆ, ಹುಣಸೂರು
ಸಹಿ/– ಉಪಾಧ್ಯಕ್ಷರು, ನಗರಸಭೆ, ಹುಣಸೂರು
ಸಹಿ/– ಸ್ಥಾಯಿಸಮಿತಿ ಅಧ್ಯಕ್ಷರು, ನಗರಸಭೆ, ಹುಣಸೂರು
ಸಹಿ/– ಪೌರಾಯುಕ್ತರು, ನಗರಸಭೆ ಹುಣಸೂರು

DIPR/MYS/899/SA/2025-26

ಸೂರ್ಯೋದಯ: 6:09 ಸೂರ್ಯಾಸ್ತ : 6:30 | ಚಂದ್ರೋದಯ: ಮ. 3:10 ಚಂದ್ರಾಸ್ತ: ರಾ. 1:45 | ಬುಧವಾರದ ಉಷ್ಣಾಂಶ : ಗರಿಷ್ಠ 27° ಕನಿಷ್ಠ 20°

ಗುರುವಾರದ ಉಷ್ಣಾಂಶ 27° ಗರಿಷ್ಠ 20° ಕನಿಷ್ಠ | ಶುಕ್ರವಾರ 27° : 20° | ಶನಿವಾರ 27° : 20° | ಭಾನುವಾರ 27 : 20°

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಗುಡುಗು-ಮಿಂಚು ಸಹಿತ ಮಳೆಯಾಗಲಿದೆ.

₹55 ಕೋಟಿ ಮೊತ್ತದ ಠೇವಣಿ ಮುಟ್ಟುಗೋಲು

ಆನ್‌ಲೈನ್ – ಆಫ್‌ಲೈನ್ ಬೆಟ್ಟಿಂಗ್ ಪ್ರಕರಣ
ಶಾಸಕ ಕೆ.ಸಿ.ವೀರೇಂದ್ರ ವಿರುದ್ಧ ತನಿಖೆ ನಡೆಸುತ್ತಿರುವ ಇ.ಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನ್‌ಲೈನ್ ಮತ್ತು ಆಫ್‌ಲೈನ್ ಬೆಟ್ಟಿಂಗ್ ಪ್ರಕರಣದಲ್ಲಿ ಚಿತ್ರದುರ್ಗದ ಕಾಂಗ್ರೆಸ್ ಶಾಸಕ ಕೆ.ಸಿ.ವೀರೇಂದ್ರ (ಪಪ್ಪಿ) ಅವರಿಗೆ ಸೇರಿದ ₹55 ಕೋಟಿ ಮೊತ್ತದ ಠೇವಣಿಗಳನ್ನು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಮುಟ್ಟುಗೋಲು ಹಾಕಿಕೊಂಡಿದ್ದಾರೆ.

ಕೆ.ಸಿ.ವೀರೇಂದ್ರ

ಈ ಪ್ರಕರಣದಲ್ಲಿ ತಮ್ಮ ಕಸ್ಟಡಿಯಲ್ಲಿ ಇರುವ ವೀರೇಂದ್ರ ಅವರು ನೀಡಿದ ಮಾಹಿತಿಯ ಆಧಾರದಲ್ಲಿ ಮಂಗಳವಾರ ಹಲವೆಡೆ ಶೋಧ ನಡೆಸಲಾಗಿತ್ತು. ಈ ವೇಳೆ ವಿರೇಂದ್ರ ಅವರ ಹೆಸರಿನಲ್ಲಿರುವ 9 ಬ್ಯಾಂಕ್ ಖಾತೆಗಳು ಮತ್ತು 1 ಡಿಮ್ಯಾಟ್ ಖಾತೆಗಳ ದಾಖಲೆ ದೊರೆತಿತ್ತು. ಜತೆಗೆ 262 ಬೇನಾಮಿ ಖಾತೆಗಳ ಮಾಹಿತಿಯೂ ದೊರೆತಿತ್ತು ಎಂದು ಇ.ಡಿ ತಿಳಿಸಿದೆ.

ವೀರೇಂದ್ರ ಅವರ ಖಾತೆಗಳಲ್ಲಿ ಒಟ್ಟು ₹40.69 ಕೋಟಿ ಮತ್ತು ಬೇನಾಮಿ ಖಾತೆಗಳಲ್ಲಿ ₹14.46 ಕೋಟಿ ಠೇವಣಿ ಇತ್ತು. ಅವೆಲ್ಲವನ್ನೂ ಮುಟ್ಟುಗೋಲು ಹಾಕಿಕೊಂಡು, ಖಾತೆಗಳನ್ನು ಸ್ಥಗಿತಗೊಳಿಸಲಾಗಿದೆ ಎಂದು ಇ.ಡಿ ಮಾಹಿತಿ ನೀಡಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಈಚೆಗೆ ದೇಶದ 31 ಕಡೆ ದಾಳಿ ನಡೆಸಿದ್ದ ಇ.ಡಿ ಅಧಿಕಾರಿಗಳು, ₹12 ಕೋಟಿ ನಗದು, ಚಿನ್ನಾಭರಣ ಮತ್ತು ಐದು ಐಷಾರಾಮಿ ಕಾರುಗಳನ್ನು ವಶಕ್ಕೆ ಪಡೆದಿದ್ದರು. ವೀರೇಂದ್ರ ಅವರನ್ನು ಸಿಕ್ಕಿಂನಲ್ಲಿ ಬಂಧಿಸಿ, ಬೆಂಗಳೂರಿಗೆ ಕರೆತಂದಿದ್ದರು. ಅವರ ಕಸ್ಟಡಿ ಅವಧಿ ಗುರುವಾರ ಅಂತ್ಯವಾಗಲಿದೆ.

ಮುಖ್ಯಾಂಶಗಳು

- ದೇಶದ 31 ಕಡೆ ದಾಳಿ ನಡೆಸಿದ್ದ ಇ.ಡಿ ಅಧಿಕಾರಿಗಳು
- ಶಾಸಕ ವೀರೇಂದ್ರ ಹೆಸರಿನ 9 ಖಾತೆ, 262 ಬೇನಾಮಿ ಖಾತೆ ಪತ್ತೆ
- ಈ ಖಾತೆಗಳಲ್ಲಿದ್ದ ಠೇವಣಿ, ಹೂಡಿಕೆ ಮುಟ್ಟುಗೋಲು

ಆದಾಯ ಮೀರಿದ ಆಸ್ತಿ ಆರೋಪ: 'ಲೋಕಾ' ಪೊಲೀಸರ ತನಿಖೆ
ದಾಖಲೆ ನೀಡಿದ ಕೆಜಿಎಫ್ ಬಾಬು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಸತಿ ಸಚಿವ ಜಮೀರ್ ಅಹಮದ್ ಖಾನ್ ವಿರುದ್ಧದ ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ ಪ್ರಕರಣದಲ್ಲಿ ಕೆಜಿಎಫ್ ಬಾಬು ಅವರು ಲೋಕಾಯುಕ್ತ ತನಿಖಾಧಿಕಾರಿಗಳ ಎದುರು ಬುಧವಾರ ಹಾಜರಾಗಿ ದಾಖಲೆಗಳನ್ನು ಸಲ್ಲಿಸಿದರು.

ಈ ಪ್ರಕರಣದಲ್ಲಿ ಬಾಬು ಅವರಿಗೆ ಆಗಸ್ಟ್ 22ರಂದು ಲೋಕಾಯುಕ್ತ ಪೊಲೀಸರು ನೋಟಿಸ್ ನೀಡಿದ್ದರು. ರೆಡ್ಡಿ ಸ್ಟ್ರಕ್ಚರ್ಸ್ ಮತ್ತು ಸ್ಕಾಟ್ಸ್ ಗಾರ್ಮೆಂಟ್ಸ್ ಲಿಮಿಟೆಡ್‌ನಲ್ಲಿ ಹೂಡಿಕೆ ಮಾಡಿರುವ ಸಂಬಂಧ ದಾಖಲೆಗಳನ್ನು ನೀಡಿ ಎಂದು ಬಾಬು ಅವರಿಗೆ ಸೂಚಿಸಿದ್ದರು.

ಬುಧವಾರ ಮಧ್ಯಾಹ್ನ ತನಿಖಾಧಿಕಾರಿಗಳ ಎದುರು ಹಾಜರಾದ ಬಾಬು ಅವರು, ದಾಖಲೆಗಳನ್ನು ಸಲ್ಲಿಸಿದರು. ಜಮೀರ್ ಅವರಿಗೆ ಹಣ ನೀಡಿರುವುದಕ್ಕೆ ಸಂಬಂಧಿಸಿದ ದಾಖಲೆ ಪತ್ರ ಒದಗಿಸಿದರು ಎಂದು ಮೂಲಗಳು ಮಾಹಿತಿ ನೀಡಿವೆ.

ಲೋಕಾಯುಕ್ತ ಕಚೇರಿಯಿಂದ ಹೊರಬಂದ ಬಾಬು ಅವರು, '2013ರಲ್ಲಿ ಮನೆ ಖರೀದಿಸುವ ಸಂದರ್ಭದಲ್ಲಿ ಸಾಲ ನೀಡುವಂತೆ ಜಮೀರ್ ಅವರು ಕೋರಿದ್ದರು. ನಾನು ₹3.50 ಕೋಟಿ ಸಾಲ ನೀಡಿದ್ದೆ. ಅದನ್ನು ಹಲವು ಬಾರಿ ವಾಪಸ್ ಕೇಳಿದ್ದೆ, ಅವರಿನ್ನೂ ನೀಡಿಲ್ಲ. ಸಾಲ ನೀಡಿದ್ದಕ್ಕೆ ಸಂಬಂಧಿಸಿದ ವಿವರಗಳನ್ನು ನಾನು ಮತ್ತು ಜಮೀರ್ ಇಬ್ಬರೂ ಆದಾಯ ತೆರಿಗೆ ರಿಟರ್ನ್ಸ್‌ನಲ್ಲಿ ಉಲ್ಲೇಖಿಸಿದ್ದೇವೆ' ಎಂದರು.

ಕೆಜಿಎಫ್ ಬಾಬು

'ಈ ಪ್ರಕರಣದ ತನಿಖೆಯನ್ನು ಮೊದಲು ಇ.ಡಿ (ಜಾರಿ ನಿರ್ದೇಶನಾಲಯ) ನಡೆಸುತ್ತಿತ್ತು. ಅವರಿಗೆ ಎಲ್ಲ ದಾಖಲೆ ನೀಡಿದ್ದೆ. ಈಗ ಪ್ರಕರಣ ಲೋಕಾಯುಕ್ತಕ್ಕೆ ವರ್ಗಾವಣೆ ಆಗಿದೆ. ಅವರೂ ದಾಖಲೆ ಕೇಳಿದ್ದಾರೆ, ನೀಡಿದ್ದೇನೆ' ಎಂದು ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಜಮೀರ್ ಮತ್ತು ನನ್ನ ಮಧ್ಯೆ ಯಾವುದೇ ವ್ಯಾವಹಾರಿಕ ಸಂಬಂಧವಿಲ್ಲ. ಸಾಲದ ಹೊರತಾಗಿ ಹಣಕಾಸು ವ್ಯವಹಾರ ಇಲ್ಲ. ಅವರಿಗೆ ಸಾಲ ನೀಡಿದ್ದರಿಂದ ತನಿಖೆ ಎದುರಿಸಬೇಕಾಗಿದೆ. ನನಗೇನೂ ಬೇಸರವಿಲ್ಲ' ಎಂದರು.

ನಟಿ ರಾಧಿಕಾಗೆ ನೋಟಿಸ್

ಇದೇ ಪ್ರಕರಣದ ವಿಚಾರವಾಗಿ ತನಿಖಾಧಿಕಾರಿಗಳು ನಟಿ ಮತ್ತು ನಿರ್ಮಾಪಕಿ ರಾಧಿಕಾ ಅವರಿಗೆ ನೋಟಿಸ್ ನೀಡಿದ್ದರು. ಜಮೀರ್ ಅವರಿಗೆ ₹2 ಕೋಟಿ ಸಾಲ ನೀಡಿದ್ದರ ಬಗ್ಗೆ ದಾಖಲೆಗಳನ್ನು ಒದಗಿಸಿ ಎಂದು ಸೂಚಿಸಿದ್ದರು. ಕಳೆದ ವಾರವಷ್ಟೇ ತನಿಖಾಧಿಕಾರಿಗಳ ಎದುರು ಹಾಜರಾಗಿದ್ದ ರಾಧಿಕಾ ಅವರು, ದಾಖಲೆಗಳನ್ನು ಒದಗಿಸಲು ಸಮಯ ನೀಡುವಂತೆ ಕೋರಿದ್ದರು.

ಸುದ್ದಿ 2 ನಿಮಿಷ

ಕೇತಗಾನಹಳ್ಳಿ–ಎಸ್‌ಐಟಿ ರಚನೆಗೆ ತಡೆ: ಮೇಲ್ಮನವಿ

ಬೆಂಗಳೂರು: 'ರಾಮನಗರ ತಾಲ್ಲೂಕು ಬಿಡದಿ ಹೋಬಳಿಯ ಕೇತಗಾನಹಳ್ಳಿ ವ್ಯಾಪ್ತಿಯಲ್ಲಿನ ಸರ್ಕಾರಿ ಜಮೀನುಗಳ ಒತ್ತುವರಿ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ, ಎಸ್‌ಐಟಿ)ರಚಿಸಿರುವ ರಾಜ್ಯ ಸರ್ಕಾರದ ಆದೇಶಕ್ಕೆ ನೀಡಲಾಗಿರುವ ಮಧ್ಯಂತರ ತಡೆ ಆದೇಶವನ್ನು ಪ್ರಶ್ನಿಸಿ ರಾಜ್ಯ ಸರ್ಕಾರ ವಿಭಾಗೀಯ ನ್ಯಾಯಪೀಠದಲ್ಲಿ ಮೇಲ್ಮನವಿ ಸಲ್ಲಿಸಿದೆ.

ಎಸ್‌ಐಟಿ ರಚನೆ ಪ್ರಶ್ನಿಸಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಮಾಜಿ ಸಚಿವ ಡಿ.ಸಿ.ತಮ್ಮಣ್ಣ, ಅವರ ಪತ್ನಿ ಕೆ.ಜಿ.ಪ್ರಮೀಳಾ, ಪುತ್ರ ಡಿ.ಟಿ. ಸಂತೋಷ್, ಸುನಂದಾ ಸಲ್ಲಿಸಿರುವ ಅರ್ಜಿಗಳನ್ನು ನ್ಯಾಯಮೂರ್ತಿ ಇ.ಎಸ್.ಇಂದಿರೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ಹಾಜರಾಗಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಕಿರಣ್ ವಿ.ರೋಣ ಅವರು ಮೇಲ್ಮನವಿಗೆ ಸಂಬಂಧಿಸಿದಂತೆ ನ್ಯಾಯಪೀಠಕ್ಕೆ ಮೆಮೊ ಸಲ್ಲಿಸಿದರು. ಈ ಅಂಶವನ್ನು ದಾಖಲಿಸಿಕೊಂಡ ನ್ಯಾಯಪೀಠ ವಿಚಾರಣೆಯನ್ನು ಅ.8ಕ್ಕೆ ಮುಂದೂಡಿತು.

ಪ್ರಕರಣವೇನು?: 'ಎಚ್.ಡಿ.ಕುಮಾರಸ್ವಾಮಿ ಮತ್ತು ಅವರ ಸಂಬಂಧಿಗಳು ಕೇತಗಾನಹಳ್ಳಿಯಲ್ಲಿ ಸರ್ಕಾರಿ ಜಮೀನು ಒತ್ತುವರಿ ಮಾಡಿರುವ ಆರೋಪಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ವರದಿಯ ಅನುಸಾರ ಕ್ರಮ ಕೈಗೊಳ್ಳಬೇಕು ಎಂದು 2020ರಲ್ಲಿ ಹೈಕೋರ್ಟ್ ಆದೇಶಿಸಿತ್ತು. ಅರ್ಜಿದಾರರ ಪರ ಹೈಕೋರ್ಟ್ ವಕೀಲರಾದ ಎ.ವಿ.ನಿಶಾಂತ್ ಮತ್ತು ಟಿ.ಸುನಿಲ್ ರಾವ್ ಹಾಜರಿದ್ದರು. ಆದರೆ, 'ಈ ಆದೇಶವನ್ನು ಜಾರಿಗೊಳಿಸಿಲ್ಲ' ಎಂದು ಆರೋಪಿಸಿ ಸಮಾಜ ಪರಿವರ್ತನಾ ಸಮುದಾಯ, ರಾಜ್ಯ ಸರ್ಕಾರದ ವಿರುದ್ಧ ಹೈಕೋರ್ಟ್‌ನಲ್ಲಿ ಸಿವಿಲ್ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಿದೆ. ಈ ಹಿನ್ನೆಲೆಯಲ್ಲಿ ಎಸ್‌ಐಟಿ ರಚಿಸಿ ಸರ್ಕಾರ 2025ರ ಜನವರಿ 28ರಂದು ಆದೇಶಿಸಿತ್ತು. ಇದಕ್ಕೆ ಏಕಸದಸ್ಯ ಪೀಠ ತಡೆ ನೀಡಿತ್ತು.

ವಿಷ್ಣು ಸ್ಮಾರಕ: 10 ಗುಂಟೆ ಜಮೀನಿಗೆ ಮನವಿ

ಬೆಂಗಳೂರು: ನಟ ವಿಷ್ಣುವರ್ಧನ್ ಸ್ಮಾರಕ ನಿರ್ಮಾಣಕ್ಕೆ ಅಭಿಮಾನ್ ಸ್ಟುಡಿಯೊದಲ್ಲಿ 10 ಗುಂಟೆ ಜಾಗ ನೀಡಬೇಕು ಎಂದು ನಟಿ ಭಾರತಿ ವಿಷ್ಣುವರ್ಧನ್ ಮತ್ತು ಅಳಿಯ ಅನಿರುದ್ಧ ಜತ್ಕರ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದರು.

ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಮನವಿ ಪತ್ರ ಸಲ್ಲಿಸಿದ ಅವರು, 'ಅಭಿಮಾನ್ ಸ್ಟುಡಿಯೊ ಅರಣ್ಯ ಇಲಾಖೆಗೆ ಸೇರಿದೆ ಎಂದು ಸರ್ಕಾರ ಘೋಷಿಸಿದೆ. ಈ ಹಿನ್ನೆಲೆಯಲ್ಲಿ ಸ್ಟುಡಿಯೊ ವ್ಯಾಪ್ತಿಯಲ್ಲಿ 10 ಗುಂಟೆ ಜಾಗವನ್ನು ಮೀಸಲಿಟ್ಟು, ವಿಷ್ಣುವರ್ಧನ್ ಸ್ಮಾರಕಕ್ಕೆ ಅನುಮತಿ ನೀಡಬೇಕು. ಇದರಿಂದ ಅಭಿಮಾನಿಗಳ ಭಾವನೆಗಳಿಗೆ ನ್ಯಾಯ ದೊರಕಿಸಿದಂತಾಗುತ್ತದೆ ಎಂದರು. ಅಲ್ಲದೇ, ವಿಷ್ಣುವರ್ಧನ್ ಅವರಿಗೆ 'ಕರ್ನಾಟಕ ರತ್ನ' ಪ್ರಶಸ್ತಿ ನೀಡಬೇಕು ಎಂದೂ ಮನವಿ ಮಾಡಿದರು.

ನಂತರ ಸುದ್ದಿಗಾರರ ಜತೆ ಮಾತನಾಡಿದ ಅನಿರುದ್ಧ, 'ನಮ್ಮ ಬೇಡಿಕೆ ಪರಿಶೀಲಿಸಿ, ಕ್ರಮ ತೆಗೆದುಕೊಳ್ಳುವುದಾಗಿ ಮುಖ್ಯಮಂತ್ರಿ ಅವರು ಭರವಸೆ ನೀಡಿದ್ದಾರೆ. ಸರ್ಕಾರವು ಶೀಘ್ರವೇ ಜಮೀನು ಒದಗಿಸುವ ನಿರೀಕ್ಷೆ ಇದೆ' ಎಂದರು.

ಶಾರ್ಟ್ ಸರ್ಕಿಟ್ ಮಗು ಸಾವು

ಬೆಂಗಳೂರು: ಸ್ಯಾಂಕಿ ರಸ್ತೆಯ ಸಮ್ಮಿಟ್ ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್‌ನಲ್ಲಿ ಬುಧವಾರ ರಾತ್ರಿ ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಹೊತ್ತಿಕೊಂಡು ಮಗು ಮೃತಪಟ್ಟಿದೆ.

ನೇಪಾಳ ಮೂಲದ ಪುಷ್ಕರ್ ಕುಮಾರ್- ಜ್ಯೋತಿಕುಮಾರಿ ದಂಪತಿಯ 18 ತಿಂಗಳ ಪುತ್ರಿ ಅನು ಮೃತ ಮಗು. ಎಂಟು ವರ್ಷಗಳ ಹಿಂದೆ ನಗರಕ್ಕೆ ದಂಪತಿ ಬಂದಿದ್ದರು. ಕೆಲಸದ ನಿಮಿತ್ತ ದಂಪತಿ ಹೊರಕ್ಕೆ ಹೋಗಿದ್ದಾಗ ಅವಘಡ ಸಂಭವಿಸಿದೆ ಎಂದು ಹೈಗ್ರೌಂಡ್ ಠಾಣೆ ಪೊಲೀಸರು ಹೇಳಿದರು. ಮೇಲ್ನೋಟಕ್ಕೆ ವಿದ್ಯುತ್ ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಹೊತ್ತಿಕೊಂಡಿರುವಂತೆ ಕಂಡು ಬಂದಿದೆ ಎಂದು ಪೊಲೀಸರು ಹೇಳಿದರು.

ಮಧ್ಯಂತರ ಆದೇಶ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಮೂಹಿಕ ಅತ್ಯಾಚಾರ ಆರೋಪದಡಿ ರಾಜರಾಜೇಶ್ವರಿ ನಗರ ಕ್ಷೇತ್ರದ ಶಾಸಕ ಮುನಿರತ್ನ ವಿರುದ್ಧ ಆರ್.ಎಂ.ಸಿ.ಯಾರ್ಡ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಮುನಿರತ್ನ ಅವರನ್ನು ಬಂಧಿಸಬಾರದು' ಎಂದು ಈ ಹಿಂದೆ ನೀಡಿದ್ದ ಮಧ್ಯಂತರ ತಡೆ ಆದೇಶವನ್ನು ಹೈಕೋರ್ಟ್ ವಿಸ್ತರಿಸಿದೆ.

ಮುನಿರತ್ನ

ಪ್ರಕರಣ ರದ್ದುಪಡಿಸುವಂತೆ ಕೋರಿ ಮುನಿರತ್ನ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ಐ.ಅರುಣ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಮುನಿರತ್ನ ಪರ ವಕೀಲರು, 'ಅರ್ಜಿದಾರರ ವಿರುದ್ಧದ ಆರೋಪ ಸಾಬೀತಾಗಿಲ್ಲ ಎಂದು ವಿಶೇಷ ತನಿಖಾ ತಂಡ (ಎಸ್‌ಐಟಿ) ವಿಚಾರಣಾ ನ್ಯಾಯಾಲಯಕ್ಕೆ ಈಗಾಗಲೇ ಬಿ ಅಂತಿಮ ವರದಿ ಸಲ್ಲಿಸಿದೆ' ಎಂದು ನ್ಯಾಯಪೀಠಕ್ಕೆ ತಿಳಿಸಿದರು.

ಇದಕ್ಕೆ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಸಿ.ಎಸ್. ಪ್ರದೀಪ್, 'ಎಸ್‌ಐಟಿ ವಿಚಾರಣಾ ನ್ಯಾಯಾಲಯಕ್ಕೆ ಬಿ ಅಂತಿಮ ವರದಿ ಸಲ್ಲಿಸಿರುವುದೇನೊ ಸರಿ. ಆದರೆ, ನ್ಯಾಯಾಲಯ ಅದನ್ನು ಇನ್ನೂ ಅಂಗೀಕರಿಸಿಲ್ಲ' ಎಂದು ವಿವರಿಸಿದರು. ಇದನ್ನು ಪರಿಗಣಿಸಿದ ನ್ಯಾಯಪೀಠ ಮಧ್ಯಂತರ ತಡೆ ಆದೇಶ ವಿಸ್ತರಿಸಿ ವಿಚಾರಣೆ ಮುಂದೂಡಿತು.

ಪಟಾಕಿ ಸ್ಫೋಟ: ಬಾಲಕ ಸಾವು

ದೊಡ್ಡಬಳ್ಳಾಪುರ: ನಗರದ ಮುತ್ತೂರಿನಲ್ಲಿ ಶುಕ್ರವಾರ ಗಣೇಶ ವಿಸರ್ಜನೆ ಮೆರವಣಿಗೆ ವೇಳೆ ಪಟಾಕಿ ಸ್ಫೋಟದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಬಾಲಕ ಯೋಗೇಶ್ (15) ಮಂಗಳವಾರ ರಾತ್ರಿ ಚಿಕಿತ್ಸೆಗೆ ಸ್ಪಂದಿಸದೆ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾನೆ.

ಇದರೊಂದಿಗೆ ಪಟಾಕಿ ಸ್ಫೋಟದಲ್ಲಿ ಮೃತಪಟ್ಟವರ ಸಂಖ್ಯೆ ಎರಡಕ್ಕೇರಿದೆ. ಘಟನೆ ನಡೆದ ದಿನ ಧನುಷ್ ರಾವ್ (15) ಮೃತಪಟ್ಟಿದ್ದ.

ಪ್ರತ್ಯೇಕ ಅಪಘಾತ: ಮೂವರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜ್ಞಾನಭಾರತಿ, ಕುಮಾರಸ್ವಾಮಿ ಲೇಔಟ್ ಹಾಗೂ ಸಿಟಿ ಮಾರುಕಟ್ಟೆ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮಂಗಳವಾರ ರಾತ್ರಿ ಹಾಗೂ ಬುಧವಾರ ಬೆಳಿಗ್ಗೆ ಸಂಭವಿಸಿದ ಪ್ರತ್ಯೇಕ ಅಪಘಾತಗಳಲ್ಲಿ ಮೂವರು ಮೃತಪಟ್ಟಿದ್ದಾರೆ.

ಜ್ಞಾನಭಾರತಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಟಾಟಾ ಏಸ್, ಬೈಕ್ ಮತ್ತು ಬಸ್ ನಡುವೆ ಸಂಭವಿಸಿದ ಅಪಘಾತದಲ್ಲಿ ತಮಿಳುನಾಡಿನ ಮನಿಗೊಂಡನ್(45) ಮೃತಪಟ್ಟಿದ್ದಾರೆ. ನಿಂಗಪ್ಪ(46) ಅವರು ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇಬ್ಬರೂ ಪೇಯಿಂಟಿಂಗ್ ಕೆಲಸ ಮಾಡುತ್ತಿದ್ದರು.

ಬುಧವಾರ ಬೆಳಿಗ್ಗೆ ಸೊನ್ನೇನಹಳ್ಳಿ ಬಸ್ ನಿಲ್ದಾಣ ಬಳಿ ದುರ್ಘಟನೆ ನಡೆದಿದೆ. ಟಾಟಾಏಸ್ ವಾಹನದ ಚಾಲಕ ಗಂಗಾಧರ್(36) ಅವರನ್ನು ವಶಕ್ಕೆ ಪಡೆಯಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು. ಪೇಟಿಂಗ್ ಕೆಲಸ ಮಾಡುವ ಮನಿಗೊಂಡನ್ ಅವರು ತಮ್ಮ ಸಹಾಯಕ ನಿಂಗಪ್ಪ ಅವರ ಜತೆಗೆ ಬೈಕ್‌ನಲ್ಲಿ ದೊಡ್ಡಬಸ್ತಿ ಮುಖ್ಯರಸ್ತೆ ಮಾರ್ಗವಾಗಿ ಸೊನ್ನೇನಹಳ್ಳಿ ಕಡೆಗೆ ಹೋಗುತ್ತಿದ್ದರು. ಹಿಂದಿನಿಂದ ಬಂದ ಟಾಟಾಏಸ್ ವಾಹನವು ಬೈಕ್‌ಗೆ ಡಿಕ್ಕಿ ಹೊಡೆದಿದೆ. ನಿಯಂತ್ರಣ ತಪ್ಪಿದ ಬೈಕ್, ನಿಂತಿದ್ದ ಬಿಎಂಟಿಸಿ ಬಸ್‌ಗೆ ಡಿಕ್ಕಿ ಹೊಡೆದಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಬಸ್ ಡಿಕ್ಕಿ- ವೃದ್ಧ ಸಾವು: ಕುಮಾರಸ್ವಾಮಿ ಲೇಔಟ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬೈಕ್ ಹಾಗೂ ಕೆಎಸ್‌ಆರ್‌ಟಿಸಿ ಬಸ್ ನಡುವೆ ಅಪಘಾತ ಸಂಭವಿಸಿದ್ದು, ಜರಗನಹಳ್ಳಿಯ ನಿವಾಸಿ ಗಂಗಾಧರಯ್ಯ(67) ಮೃತಪಟ್ಟಿದ್ದಾರೆ. ಬುಧವಾರ ಬೆಳಿಗ್ಗೆ 8.45ರ ಸುಮಾರಿಗೆ ಗಂಗಾಧರಯ್ಯ ಬೈಕ್‌ನಲ್ಲಿ ತೆರಳುತ್ತಿದ್ದರು.

ವ್ಯಾಪಾರಿ ಸಾವು: ಸಿಟಿ ಮಾರುಕಟ್ಟೆ ಸಂಚಾರಿ ಠಾಣೆ ವ್ಯಾಪ್ತಿಯಲ್ಲಿ ಚಲಿಸುತ್ತಿದ್ದ ಬಸ್‌ನಿಂದ ಕೆಳಕ್ಕೆ ಬಿದ್ದು ತಳ್ಳು ಗಾಡಿ ವ್ಯಾಪಾರಿ, ಗೋವಿಂದಪುರದ ನಿವಾಸಿ ನಜೀರ್ ಖಾನ್ (52) ಮೃತಪಟ್ಟಿದ್ದಾರೆ.

ಮಂಗಳವಾರ ರಾತ್ರಿ 8 ಗಂಟೆ ಸುಮಾರಿಗೆ ಕೆಲಸ ಮುಗಿಸಿ ಸಿಟಿ ಮಾರುಕಟ್ಟೆಯ ಮೇಲ್ಸೇತುವೆ ಕೆಳಗೆ ನಿಂತಿದ್ದ ಬಿಎಂಟಿಸಿ ಬಸ್ ಹತ್ತಲು ಹೋದಾಗ, ಮುಂದಕ್ಕೆ ಸಾಗಿದ ಬಸ್ ಕೆಳಕ್ಕೆ ಬಿದ್ದ ಅವರ ಮೇಲೆಯೇ ಹರಿದಿದೆ.

17 ಕೆ.ಜಿ ಗಾಂಜಾ ಜಪ್ತಿ: ನಾಲ್ವರು ಆರೋಪಿಗಳ ಬಂಧನ

ಬೆಂಗಳೂರು: ಜಾಲಹಳ್ಳಿ ಹಾಗೂ ವಿವೇಕನಗರ ಠಾಣೆಯ ಪೊಲೀಸರು ತಮ್ಮ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸಿ 17 ಕೆ.ಜಿ ಗಾಂಜಾ ಜಪ್ತಿ ಮಾಡಿದ್ದು, ನಾಲ್ವರನ್ನು ಬಂಧಿಸಿದ್ದಾರೆ. ಗಾಂಜಾದ ಮೌಲ್ಯ ₹10 ಲಕ್ಷ ಎಂದು ಅಂದಾಜಿಸಲಾಗಿದೆ.

ಎಚ್‌ಎಂಟಿ ಫ್ಯಾಕ್ಟರಿ ರಸ್ತೆಯ ಕಾಳಿಂಗರಾವ್ ವೃತ್ತದ ಬಳಿ ಆರೋಪಿಗಳು ಗಾಂಜಾ ಮಾರಾಟ ಮಾಡುತ್ತಿರುವ ಬಗ್ಗೆ ಬಾತ್ಮೀದಾರರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಆ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿದ ಪೊಲೀಸರು ಇಬ್ಬರನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

'ಒಡಿಶಾದ ಅಪರಿಚಿತ ವ್ಯಕ್ತಿಯಿಂದ ಕಡಿಮೆ ಬೆಲೆಗೆ ಗಾಂಜಾವನ್ನು ಖರೀದಿಸಿ ನಗರಕ್ಕೆ ತಂದು ಕಾಲೇಜು ವಿದ್ಯಾರ್ಥಿಗಳು ಹಾಗೂ ಪೇಯಿಂಗ್ ಗೆಸ್ಟ್‌ನಲ್ಲಿ ನೆಲಸಿದ್ದ ಖರೀದಿದಾರರಿಗೆ ಮಾರಾಟ ಮಾಡುತ್ತಿರುವುದಾಗಿ ಆರೋಪಿಗಳು ತಪ್ಪೊಪ್ಪಿಕೊಂಡಿದ್ದಾರೆ' ಎಂದು ಪೊಲೀಸರು ಹೇಳಿದರು.

ವಿವೇಕನಗರ ಠಾಣೆಯ ಪೊಲೀಸರು, ಒಡಿಶಾದ ವ್ಯಕ್ತಿಯನ್ನು ವಶಕ್ಕೆ ಪಡೆದುಕೊಂಡು 11 ಕೆ.ಜಿ ಗಾಂಜಾವನ್ನು ಜಪ್ತಿ ಮಾಡಿಕೊಂಡಿದ್ದಾರೆ. ನಗರದ ಪೆಡ್ಲರ್‌ಗಳಿಂದ ಗಾಂಜಾ ಖರೀದಿಸಿ ಗ್ರಾಹಕರಿಗೆ ಪೂರೈಸುತ್ತಿದ್ದ. ವಿವೇಕನಗರ ಠಾಣೆಯ ಪೊಲೀಸರು ನೀಲಸಂದ್ರದ ಪಾರ್ಕ್‌ನಲ್ಲಿ ಕಾರ್ಯಾಚರಣೆ ನಡೆಸಿ ಡ್ರಗ್ಸ್ ಮಾರಾಟ ಮಾಡುತ್ತಿದ್ದ ಮತ್ತೊಬ್ಬ ಆರೋಪಿಯನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಬಂಧಿತನಿಂದ 2 ಕೆ.ಜಿ 270 ಗ್ರಾಂ ಗಾಂಜಾವನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕಾರ್ಮಿಕ ಸಾವು: ಮೂವರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಜಾಲ ಪೊಲೀಸ್ ಠಾಣಾ ವ್ಯಾಪ್ತಿಯ ಬೆಟ್ಟಹಲಸೂರು ಬಳಿಯ ಜಸ್ಟ್‌ಬೇಕ್ ಕೇಕ್ ಫ್ಯಾಕ್ಟರಿಯಲ್ಲಿ ಹೈಡ್ರಾಲಿಕ್ ಲಿಫ್ಟ್‌ನಲ್ಲಿ ತೆರಳುವಾಗ ಕಾರ್ಮಿಕರೊಬ್ಬರ ತಲೆಗೆ ಮಹಡಿ (ಆರ್‌ಸಿಸಿ ಚಾವಣಿ) ತಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಭೂಪೇಂದ್ರ ಚೌಧರಿ(19) ಮೃತ ಕಾರ್ಮಿಕ. ಭೂಪೇಂದ್ರ ಚೌಧರಿ ಅವರ ಸಂಬಂಧಿ ಮುಕೇಶ್ ಕುಮಾರ್ ಚೌಧರಿ ಅವರು ನೀಡಿದ ದೂರು ಆಧರಿಸಿ ಕಂಪನಿ ಮಾಲೀಕ, ಹೈಡ್ರಾಲಿಕ್ ಲಿಫ್ಟ್ ಆಪರೇಟರ್ ಬಿ.ಕೆ.ಲಕ್ಷ್ಮಿ, ಫ್ಯಾಕ್ಟರಿ ಉಸ್ತುವಾರಿ ರಾಜಶೇಖರ್ ಅವರ ವಿರುದ್ಧ ನಿರ್ಲಕ್ಷ್ಯ ಆರೋಪದ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

'ಭೂಪೇಂದ್ರ ಹಾಗೂ ಮುಕೇಶ್ ಇಬ್ಬರೂ ಕೇಕ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದರು. ಫ್ಯಾಕ್ಟರಿಯ ಎರಡನೇ ಮಹಡಿಗೆ ವಸ್ತುಗಳನ್ನು ಕೊಂಡೊಯ್ಯಲು ಹೈಡ್ರಾಲಿಕ್ ಲಿಫ್ಟ್ ವ್ಯವಸ್ಥೆಯಿದೆ. ಮಂಗಳವಾರ ಮಧ್ಯರಾತ್ರಿ ಭೂಪೇಂದ್ರ ಅವರು ಎರಡನೇ ಮಹಡಿಗೆ ವಸ್ತುಗಳನ್ನು ಸಾಗಣೆ ಮಾಡುತ್ತಿದ್ದರು. ಆಗ ಎರಡನೇ ಮಹಡಿಯ ಆರ್‌ಸಿಸಿ ಭೂಪೇಂದ್ರ ಅವರ ತಲೆಗೆ ತಗುಲಿದೆ. ಗಂಭೀರವಾಗಿ ಗಾಯಗೊಂಡಿದ್ದ ಅವರು ಸ್ಥಳ ದಲ್ಲಿಯೇ ಮೃತಪಟ್ಟಿದ್ದಾರೆ' ಎಂದು ಪೊಲೀಸರು ಹೇಳಿದರು. ಚಿಕ್ಕಜಾಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE
General Public are hereby notified that my client **Haribabu Chevuturi,** son of Sri. Koteswararao Chevuturi Residing at: No.22, 11th 'A' Cross, Abbaiah Reddy layout, Kaggadasapura Main Road, C V Raman Nagara, Bengaluru. Mobile No:9663499625 have entered into Agreement to purchase the schedule property from respective owner of Sri, Venugopalan Balakrishnan @ B. Venugopalan Nair s/o Late P.V.Balakrishnanan Nambiar.
Any person or institutions or Banks having any right, title, interest or lien over the schedule property or objecting to purchase by my clients, shall lodge such objections, if any, with the undersigned with supporting documents within 15 days from the date of this publication. Objections received thereafter will not be considered and my clients will proceed with the completion of purchase of schedule property deeming that there are no objections.
SCHEDULE
All that piece and parcel of the portion of the Property bearing Site No.7, HASB Khata No.164/2, New Khatha No.323/76/ 4/7, BBMP EPID No.7402220426, Property No.76/4, Situated at KAGGADASPURA Village, K.R.Puram Hobli, Bangalore East Taluk, Measuring East to west 40 Feet and North to south 46 feet, in total measuring 1840 Sqft, and bounded on: **East by:** site no.6, **West by**: site no.8, **North by**: site no.10, **South by:** Road
For any further quires, please contact the **Haribabu Chevuturi,** Mobile No: 9663499625
VEDAMURTHY.H.S
No.202, 2nd Main Jalshambhavu Complex, Gandhinagar, Blr-09.
advocatedhanushgowda@gmail.com
Date:04-09-2025 Bangalore

PUBLIC NOTICE
ACURA HOSPITAL
No 105, 17th C Main, 5 Block Kormangala
NOTICE - DISPOSAL OF MEDICAL RECORDS
In-patient medical records from **December-2003 to December 2018** will be discarded permanently from our MRD. Anyone who wishes to claim any medical records from the given dates can contact the Medical record department within one month of the notice date.
Note: Not applicable for Medico legal cases, birth, death and paediatric medical cases,also we do not hold any duplicate or soft copy of any records.

ದಿ ಏರ್‌ಕ್ರಾಫ್ಟ್ ಎಂಪ್ಲಾಯೀಸ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.
ಸ್ಥಾಪನೆ: 1954
[ರಿ.ನಂ. ಜೆಆರ್‌ಬಿ/ಆರ್‌ಜಿಎನ್/ವಿಭಜನೆ/45/44632/2014-15]
ಹಳೇ ಎಸ್.ಬಿ.ಐ. ಕಟ್ಟಡ, ಸುರಂಜನ್‌ದಾಸ್ ರಸ್ತೆ, ವಿಮಾನಪುರ, ಹೆಚ್.ಎ.ಎಲ್, ಬೆಂಗಳೂರು-17.
11ನೇ ಸರ್ವಸದಸ್ಯರ ಸಭೆಯ ನೋಟಿಸು
ಸಂಘದ 11ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆಯು ಎಸ್.ಜೆ.ಪಿ ಕಲ್ಯಾಣ ಮಂಟಪ, ... 14/09/2025ರ ಭಾನುವಾರ ಬೆಳಗ್ಗೆ 10:00 ಗಂಟೆಗೆ ...
ಸ್ಥಳ: ಬೆಂಗಳೂರು
ದಿನಾಂಕ: 04/09/2025

CIN: U67120KA1999PLC025860
cs@bfsl.co.in; www.bfsl.co.in
...
ಪುಸ್ತಕ ಮುಚ್ಚಿರುವ/ಕಟಾಫ್ ದಿನಾಂಕ: ವಾರ್ಷಿಕ ಸರ್ವ ಸದಸ್ಯರ ಸಭೆಯ ಉದ್ದೇಶಕ್ಕಾಗಿ ಸದಸ್ಯರ ನೋಂದಣಿ ಮತ್ತು ಷೇರು ವರ್ಗಾವಣೆ ಪುಸ್ತಕವನ್ನು ಶನಿವಾರ 20-09-2025ರಿಂದ ಶನಿವಾರ 27-09-2025ರವರೆಗೆ (ಎರಡು ದಿನಗಳೂ ಸೇರಿ) ಮುಚ್ಚಲಾಗುತ್ತದೆ. ಮತ್ತು ಸದಸ್ಯರ ಮತದಾನದ ಹಕ್ಕುಗಳು ಕಟಾಫ್ ದಿನಾಂಕದಂದು (ಅಂದರೆ ಶುಕ್ರವಾರ, 19ನೇ ಸೆಪ್ಟೆಂಬರ್ 2025) ಕಂಪನಿಯ ಪಾವತಿಸಿದ ಇಕ್ವಿಟಿ ಷೇರು ಬಂಡವಾಳದಲ್ಲಿನ ಅವರ ಷೇರುಗಳ ಅನುಪಾತದಲ್ಲಿರುತ್ತದೆ.
ಸ್ಥಳ: ಬೆಂಗಳೂರು
ದಿನಾಂಕ: 19/08/2025
ನಿರ್ದೇಶಕರ ಮಂಡಲಿಯ ಆದೇಶದ ಮೇರೆಗೆ ಸಹಿ/- (ಪ್ರಮೋದ್ ಗೌತಮಚಂದ್ ಜೈನ್) ಪೂರ್ಣಾವಧಿ ನಿರ್ದೇಶಕರು

PUBLIC NOTICE
Our Client has filed a suit for Specific Performance against Sri. N. Sriram Reddy and others in O.S No.98/2021 in respect of an Agricultural Property more fully described in the schedule hereunder (Schedule Property) before the Hon'ble III Addl. Senior Civil Judge at Bengaluru Rural. The Hon'ble Senior Civil Judge at Bengaluru Rural has granted an **Interim Order dated 16-01-2021,** restraining the Defendant No.1 thereon (Sri. N. Sriram Reddy) from alienating to any person changing the nature and creating third party interest on the Suit Schedule Property.
The general public are hereby cautioned not to enter into any agreement to sell or sale deed in respect of Schedule Property with Sri. N. Sriram Reddy and Smt. Muneera Begum W/o. Late Mohammed Akramulla. Failing which, my client will take necessary action/initiate proper action for the disobedience of the **Interim Order dated 16-01-2021** at your cost consequences.
SCHEDULE PROPERTY
All that piece and parcel of the agricultural property bearing Sy. No. 453 (new), old Sy. No. 46/P140, (Sy. No. 46), measuring 1 (ONE) acre of Kaggalipura Village Uttarahalli Hobli, Bangalore South Taluk and bounded on:-
East by : Private Property
West by : Property belonging to Basappa
North by : Road
South by: Property belonging to Javaraiah
Address
Jayanth H. Poojary, Advocate
No. 107, 3rd Floor, 8th C Main, Opp. Jain Temple, 4th Block, Jayanagar (West) Bangalore-560011, Mob No: 9741190333.

ದಿ ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್
THE GRAIN MERCHANTS CO-OPERATIVE BANK LTD., Estd:1927
ಪ್ರಧಾನ ಕಚೇರಿ: ನಂ. 2, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560 018
ದೂ: 26677552, 26679041, 42047786, 7411414285
E-mail: gmc@gmcbank.net, Website: www.gmcbank.net
96ನೇ ವಾರ್ಷಿಕ ಸರ್ವಸದಸ್ಯರ ಸಭೆ ನೋಟೀಸು
ಬ್ಯಾಂಕಿನ 2024-25ನೇ ಸಾಲಿನ 96ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ದಿನಾಂಕ 07.09.2025ನೇ ಭಾನುವಾರ ಬೆಳಗ್ಗೆ 10.30ಕ್ಕೆ ಬ್ಯಾಂಕಿನ ಪ್ರಧಾನ ಕಛೇರಿ ಆವರಣದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ.ಆರ್.ಆನಂದಬಾಬುರವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದೆ. ಎಲ್ಲಾ ಸದಸ್ಯರುಗಳಿಗೂ ಈಗಾಗಲೇ ಸೂಚನಾ ಪತ್ರವನ್ನು ಅಂಚೆ ಮೂಲಕ ಕಳುಹಿಸಲಾಗಿದೆ, ತಲುಪದಿರುವಂತಹ ಸದಸ್ಯರುಗಳು ಇದನ್ನೇ ಆಹ್ವಾನ ಪತ್ರಿಕೆ ಎಂದು ತಿಳಿದು ಸಭೆಯಲ್ಲಿ ಭಾಗವಹಿಸಲು ಕೋರಲಾಗಿದೆ.
ಬೆಳಿಗ್ಗೆ 9.00 ಕ್ಕೆ "ಪ್ರತಿಭಾ ಪುರಸ್ಕಾರ"
ಸ್ಥಳ: ಬೆಂಗಳೂರು
ದಿ.30.07.2025
ಆಡಳಿತ ಮಂಡಳಿ ಅಪ್ಪಣೆ ಮೇರೆಗೆ ಉಮಾ ಆರ್. ಪ್ರಭಾರ ಕಾರ್ಯದರ್ಶಿ
ಸರ್ವಸದಸ್ಯರ ಸಭೆಗೆ ಬ್ಯಾಂಕಿನ ಗುರುತಿನ ಚೀಟಿ ಕಡ್ಡಾಯ
ಸೂಚನೆ: ವಾರ್ಷಿಕ ಸರ್ವಸದಸ್ಯರ ಸಭೆಗೆ ಹಾಜರಾಗುವ ಸದಸ್ಯರುಗಳ ಖಾತೆಗೆ ಓಡಾಟದ ವೆಚ್ಚವಾಗಿ ರೂ.500/-ಗಳನ್ನು ವರ್ಗಾಯಿಸಲಾಗುವುದು.

BUSINESS

Business to Business

Business

COLLATERALS/ JOINT VENTURES/ Finance for big Projects/ Take Overs/ Buying/ Selling/ Any Other Good Projects. Vamshadhara Projects And Services. Dr.Swamy Naidu:- 9342247637.

Business Offers

Finance

MSME LOANS Available for Any Startup Companies,Any Existing Companies NOTE:Also one Approved Loan Available Contact-7204995189

REAL ESTATE SELLING

Sites

Anjanapura

BDA SITE 20'X30' for sale in Anjanapura 5th 'G' Block, Immediate registration Only, 65Lakhs,Owner:9008716584

PERSONAL

Change of Name

I, SUJATHA, residing at Bengalur-69 have changed my name as SUJATHA TATTEKERE GOVIND, vide affidavit dated 3/9/2025 before Notary K.S. Bammappanavar, Bengaluru

I, SHIVA KUMAR T.N. R/a#61, 6th A cross, 2nd main, Srinivasanagar, Sunkadakatte, Bengaluru -560091 Have Changed My minor son's Name from S. RAHUL GOWDA To ROHAN GOWDA .S Vide Affidavit Dated 30/08/2025 before Notary L.Shankaranarayana Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಕರಡು ಅಧಿಸೂಚನೆ ಜಾರಿ

ಬೆಂಗಳೂರು ಮೆಟ್ರೊ ಪಾಲಿಟನ್ ವಲಯದ ರಾಜಕಾಲುವೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಮೆಟ್ರೊ ಪಾಲಿಟನ್ ವಲಯದಲ್ಲಿರುವ ಎಲ್ಲ ಯೋಜನಾ ಪ್ರಾಧಿಕಾರಗಳಲ್ಲಿ ರಾಜಕಾಲುವೆಗಳ ಬಫರ್ ವಲಯವನ್ನು ಅರ್ಧದಷ್ಟು ಕಡಿಮೆ ಮಾಡಲು ನಿರ್ಧರಿಸಿ, ನಗರಾಭಿವೃದ್ಧಿ ಇಲಾಖೆ ಕರಡು ಅಧಿಸೂಚನೆ ಹೊರಡಿಸಿದೆ.

ರಾಜಕಾಲುವೆ ಬಫರ್ ವಲಯ (ಮೀಟರ್‌ಗಳಲ್ಲಿ)		
ರಾಜಕಾಲುವೆ	ಪ್ರಸ್ತುತ	ಕರಡು ಪ್ರಕಾರ
ಪ್ರಾಥಮಿಕ	30	15
ದ್ವಿತೀಯ	15	10
ತೃತೀಯ	10	5

ಬಫರ್ ವಲಯ ಇಳಿಕೆ

ಕೆರೆಗಳು ಹಾಗೂ ರಾಜಕಾಲುವೆಗಳ ಬಫರ್ ವಲಯವನ್ನು ಅಭಿವೃದ್ಧಿ ಕಾರ್ಯಗಳಿಗೆ ಒಪ್ಪಿಗೆ ನೀಡುವಾಗ ಪರಿಗಣಿಸಬೇಕಾಗಿದೆ. ಇದಕ್ಕಾಗಿ, ಮಾಸ್ಟರ್ ಪ್ಲಾನ್‌ನಲ್ಲಿರುವ ಬಫರ್ ವಲಯ ವ್ಯಾಪ್ತಿಯನ್ನು ಬದಲಾಯಿಸಿ ವಲಯ ನಿಯಮಗಳಿಗೆ ತಿದ್ದುಪಡಿ ತರಲು ನಿರ್ಧರಿಸಲಾಗಿದೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ಕೆಟಿಸಿಪಿ) ಕಾಯ್ದೆ 1961ರ ಸೆಕ್ಷನ್ 13–ಇಗೆ ತಿದ್ದುಪಡಿ ತಂದು, ಬೆಂಗಳೂರಿನ ಸ್ಥಳೀಯ ಯೋಜನಾ ಪ್ರಾಧಿಕಾರದ ಪರಿಷ್ಕೃತ ಮಾಸ್ಟರ್ ಪ್ಲಾನ್–2015, ಬೆಂಗಳೂರು - ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನೆ ಪ್ರಾಧಿಕಾರದ ಮಾಸ್ಟರ್ ಪ್ಲಾನ್ ಹಾಗೂ ಬೆಂಗಳೂರು ಮೆಟ್ರೊಪಾಲಿಟನ್ ವಲಯದ ಎಲ್ಲ ಸ್ಥಳೀಯ ಯೋಜನಾ ಪ್ರದೇಶಗಳಲ್ಲಿ ವಲಯ ನಿಯಮಗಳಿಗೆ ತಿದ್ದುಪಡಿ ತರಲಾಗುತ್ತದೆ ಎಂದು ಸೆ.2ರಂದು ಹೊರಡಿಸಿರುವ ಕರಡು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಕೆರೆಗಳ ಬಫರ್ ವಲಯವನ್ನು ಕಂದಾಯ ಇಲಾಖೆಯ ದಾಖಲೆಯಂತೆ ನಿರ್ವಹಣೆ ಮಾಡಬೇಕು. ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆಯಲ್ಲಿ ಕೆರೆಗಳ ಬಫರ್ ವಲಯ ನಿಗದಿಯಾಗಿದೆ. ಕೆರೆಗಳ ಬಫರ್ ವಲಯವನ್ನು 'ಮೀಸಲು ಉದ್ಯಾನ'ವನ್ನಾಗಿ ಪರಿಗಣಿಸಿ ನಕ್ಷೆ ಅನುಮೋದನೆ ನೀಡಬಹುದು ಎಂದು ಹೇಳಲಾಗಿದೆ.

ರಾಜಕಾಲುವೆಗಳಿಗೆ ಹೊಸ ವ್ಯಾಖ್ಯಾನ ನೀಡಿ, ಕಂದಾಯ ಇಲಾಖೆಯಲ್ಲಿ ನೈಸರ್ಗಿಕ ಕಾಲುವೆ/ನಾಲಾಗಳಾಗಿದ್ದು, ಕೆರೆಯಿಂದ ಕೆರೆಗೆ ಅಥವಾ ಕೆರೆಯಿಂದ ನದಿಗೆ ಮಳೆನೀರು ಹರಿಸುವ ಕಾಲುವೆಗಳನ್ನು ಪ್ರಾಥಮಿಕ ರಾಜಕಾಲುವೆ ಎಂದು ಹೆಸರಿಸಲಾಗಿದೆ. ದ್ವಿತೀಯ ರಾಜಕಾಲುವೆ ಎಂದರೆ, ಕಂದಾಯ ಇಲಾಖೆಯಲ್ಲಿ ನೈಸರ್ಗಿಕ ಕಾಲುವೆ/ ನಾಲಾಗಳಾಗಿದ್ದು, ಕೆರೆಗಳಿಗೆ ಅಥವಾ ಪ್ರಾಥಮಿಕ ರಾಜಕಾಲುವೆಗೆ ಮಳೆ ನೀರನ್ನು ಹರಿಸುವ ಕಾಲುವೆಗಳು ಎಂದು ಹೇಳಲಾಗಿದೆ. ಕಂದಾಯ ಇಲಾಖೆಯಲ್ಲಿ ನೈಸರ್ಗಿಕ ಕಾಲುವೆ/ನಾಲಾಗಳಾಗಿದ್ದು, ದ್ವಿತೀಯ ಹಂತದ ರಾಜಕಾಲುವೆಗೆ ಮಳೆ ನೀರು ಹರಿಸುವ ಕಾಲುವೆಗಳನ್ನು ತೃತೀಯ ರಾಜಕಾಲುವೆಗಳು ಎಂದು ವಿವರಿಸಲಾಗಿದೆ.

ಕೆರೆ ಹಾಗೂ ರಾಜಕಾಲುವೆಗಳ ಬಫರ್ ವಲಯ ಕಡಿಮೆ ಮಾಡಲು ಮುಖ್ಯ ಕಾರ್ಯದರ್ಶಿ ನೇತೃತ್ವದ ಅಧಿಕಾರಿಗಳ ಸಮಿತಿ ಸರ್ಕಾರಕ್ಕೆ ವರದಿ ಸಲ್ಲಿಸಿತ್ತು. ಅದರಂತೆ, ಕೆಟಿಸಿಡಿಎ ಕಾಯ್ದೆಗೆ ತಿದ್ದುಪಡಿ ತರುವ ಮಸೂದೆಯನ್ನು ವಿಧಾನಮಂಡಲದಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ. ರಾಜಕಾಲುವೆ ಬಫರ್ ವಲಯ ಕೆಟಿಸಿಡಿಎ ವ್ಯಾಪ್ತಿಗೆ ಬಾರದಿರುವುದರಿಂದ, ಸಮಿತಿಯ ತೀರ್ಮಾನದಂತೆ ಅಧಿಸೂಚನೆ ಹೊರಡಿಸಿ, ಕಡಿತಗೊಳಿಸಲು ನಿರ್ಧರಿಸಲಾಗಿದೆ.



ಕೆರೆಗಳ ಬಫರ್ ವಲಯ (ಮಸೂದೆಯಂತೆ)	
ಕೆರೆ ವಿಸ್ತೀರ್ಣ	ಬಫರ್ ವಲಯ
0 - 10 ಗುಂಟೆ	0
10 ಗುಂಟೆಯಿಂದ 1 ಎಕರೆ	3 ಮೀಟರ್
1 ಎಕರೆಯಿಂದ 10 ಎಕರೆ	6 ಮೀಟರ್
10 ಎಕರೆಯಿಂದ 25 ಎಕರೆ	12 ಮೀಟರ್
25 ಎಕರೆಯಿಂದ 100 ಎಕರೆ	24 ಮೀಟರ್
100 ಎಕರೆಗೂ ಹೆಚ್ಚು	30 ಮೀಟರ್

* ಪ್ರಸ್ತುತ ಎಲ್ಲ ಕೆರೆಗಳಿಗೂ 30 ಮೀಟರ್ ಬಫರ್ ವಲಯ ಇದೆ

ಒಪ್ಪಿಗೆ ನೀಡದಂತೆ ಮನವಿ

'ಕೆರೆಗಳ ಬಫರ್ ವಲಯ ಕಡಿಮೆ ಮಾಡುವುದರಿಂದ ಜೀವವೈವಿಧ್ಯತೆಗೆ ಕಂಟಕವಾಗುವುದರ ಜೊತೆಗೆ, ಪರಿಸರ ಹಾಳಾಗುತ್ತದೆ. ಬಫರ್ ವಲಯದಲ್ಲಿ ಅಭಿವೃದ್ಧಿ ಚಟುವಟಿಕೆಗಳು ನಡೆಯುವುದರಿಂದ, ಒತ್ತುವರಿಯನ್ನು ತೆರವುಗೊಳಿಸದೆ ಅದನ್ನು ಸಕ್ರಮಗೊಳಿಸಲಾಗುತ್ತದೆ. ಕೆರೆಗಳ ಪುನರುಜ್ಜೀವನಕ್ಕೆ ಕೋಟ್ಯಂತರ ರೂಪಾಯಿ ವೆಚ್ಚ ಮಾಡಿರುವುದು ವ್ಯರ್ಥವಾಗುತ್ತದೆ. ಜಲಮೂಲಗಳಾದ ಕೆರೆಗಳಿಂದ ಅಂತರ್ಜಲ ಮಟ್ಟ ವೃದ್ಧಿಆಗುತ್ತದೆ. ಬಫರ್ ವಲಯ ಕಡಿಮೆಯಾದರೆ, ಕೆರೆ ಅಂಗಳದ ಒತ್ತುವರಿ ಹೆಚ್ಚಾಗುತ್ತದೆ. ಹೀಗಾಗಿ ಕೆರೆಗಳ ಬಫರ್ ವಲಯ ಕಡಿತದ ಮಸೂದೆಗೆ ಸಮ್ಮತಿ ನೀಡಬಾರದು' ಎಂದು ವೈಜ್ಞಾನಿಕ ಅಧ್ಯಯನಗಳ ವರದಿಯೊಂದಿಗೆ 'ಬೆಂಗಳೂರು ಟೌನ್‌ಹಾಲ್' ಸದಸ್ಯರು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಆಡಳಿತಾತ್ಮಕ ವೆಚ್ಚ, ವೇತನ, ನಿವೃತ್ತಿ ಸೌಲಭ್ಯಗಳಿಗೆ ಅನುದಾನ: ಡಿಸಿಎಂ

ಐದು ನಗರ ಪಾಲಿಕೆಗಳಿಗೆ ₹300 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಐದು ನಗರ ಪಾಲಿಕೆಗಳ ಆಡಳಿತಾತ್ಮಕ ವೆಚ್ಚ, ವೇತನ ಹಾಗೂ ನಿವೃತ್ತಿ ಸೌಲಭ್ಯಗಳನ್ನು ನೀಡಲು, ಬಿಬಿಎಂಪಿಯ ಖಾತೆಗಳಿಂದ ಸುಮಾರು ₹300 ಕೋಟಿ ಹಣವನ್ನು ಬಿಡುಗಡೆ ಮಾಡಲಾಗುವುದು' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

'ಗ್ರೇಟರ್ ಬೆಂಗಳೂರು ಪ್ರಾಧಿಕಾರ' ಕಚೇರಿಯ ನಾಮಫಲಕವನ್ನು ಬುಧವಾರ ಅನಾವರಣಗೊಳಿಸಿದ ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ಪ್ರತಿ ನಗರ ಪಾಲಿಕೆ ವ್ಯಾಪ್ತಿಯಲ್ಲಿ ರಸ್ತೆಗಳ ಸುಧಾರಣೆ ಹಾಗೂ ಆಡಳಿತಾತ್ಮಕ ದೃಷ್ಟಿಯಿಂದ 500 ಮಂದಿ ಎಂಜಿನಿಯರ್‌ಗಳ ನೇಮಕಕ್ಕೆ ಅನುಮೋದನೆ ನೀಡಲಾಗಿದೆ. ಈ ಹಿಂದೆ 198 ವಾರ್ಡ್‌ಗಳಿದ್ದವು. ಈಗ 500 ವಾರ್ಡ್ ರಚಿಸಲು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ. ಪ್ರತಿ ಪಾಲಿಕೆಯಲ್ಲಿ ಇಬ್ಬರು ಐಎಎಸ್ ಅಧಿಕಾರಿಗಳು, ಒಬ್ಬರು ಕೆಎಎಸ್, ಇಬ್ಬರು ಮುಖ್ಯ ಎಂಜಿನಿಯರ್‌ಗಳು ಕೆಲಸ ಮಾಡಲಿದ್ದಾರೆ. ಬೆಂಗಳೂರು ನಗರಕ್ಕೆ ಉತ್ತಮವಾದ ಆಡಳಿತ ಹಾಗೂ ಜನರ ಬಾಗಿಲಿಗೆ ಸರ್ಕಾರವನ್ನು ತೆಗೆದುಕೊಂಡು ಹೋಗಬೇಕು ಎಂದು ನಿರ್ಣಯಗಳನ್ನು ತೆಗೆದುಕೊಂಡು ಪಾಲಿಕೆಗಳು ಕೆಲಸ ಮಾಡಲಿವೆ' ಎಂದರು.

'ಐದು ನಗರ ಪಾಲಿಕೆಗಳ ನೂತನ ಕಚೇರಿಗಳ ಕಟ್ಟಡ ನಿರ್ಮಾಣಕ್ಕೆ ನವೆಂಬರ್ 1ರಂದು ಭೂಮಿಪೂಜೆ ಮಾಡಲಾಗುತ್ತದೆ. ಎಲ್ಲಾ ಪಾಲಿಕೆಗಳ ಗಡಿ ಭಾಗಗಳಲ್ಲಿ ಗಡಿ ಗೋಪುರಗಳನ್ನು ನಿರ್ಮಾಣ ಮಾಡಲಾಗುವುದು. ಕಚೇರಿ ವಿನ್ಯಾಸಗಳನ್ನು ನಾಗರಿಕರು ಕಳುಹಿಸಬಹುದು. ಆಯ್ಕೆಯಾದವರಿಗೆ ₹5 ಲಕ್ಷ ಬಹುಮಾನ ನೀಡಲಾಗುತ್ತದೆ' ಎಂದು ತಿಳಿಸಿದರು

'ಹೊಸ ಪ್ರದೇಶಗಳನ್ನು ಐದು ನಗರ ಪಾಲಿಕೆಗಳ ವ್ಯಾಪ್ತಿಗೆ ಸೇರಿಸಿಕೊಳ್ಳಲಾಗುತ್ತದೆಯೇ' ಎಂಬ ಪ್ರಶ್ನೆಗೆ ಉತ್ತರಿಸಿದ ಶಿವಕುಮಾರ್, 'ಬೆಂಗಳೂರು ನಗರಕ್ಕೆ ಹೊಂದಿಕೊಂಡಿರುವ ಸ್ಥಳೀಯ ಸಂಸ್ಥೆಗಳನ್ನು ಜಿಬಿಎ ವ್ಯಾಪ್ತಿಗೆ ಈಗಲೇ ಸೇರಿಸಿದರೆ ಪ್ರಸ್ತುತ ಪ್ರತಿನಿಧಿಗಳಾಗಿರುವವರನ್ನೂ ಪಾಲಿಕೆ ಸದಸ್ಯರು ಎಂದು ಪರಿಗಣಿಸಬೇಕಾಗುತ್ತದೆ. ಈಗ ರಚನೆಯಾಗಿರುವ ಪಾಲಿಕೆಗಳಿಗೆ ಚುನಾವಣೆ ನಡೆದ ನಂತರ ಇತರೇ ಪ್ರದೇಶಗಳ ವಿಲೀನದ ಬಗ್ಗೆ ಭವಿಷ್ಯದಲ್ಲಿ ಯೋಚಿಸಲಾಗವುದು' ಎಂದರು.

ಜಿಬಿಎ ನಾಮಫಲಕ ಅನಾವರಣ ಸಂದರ್ಭದಲ್ಲಿ ಡಿ.ಕೆ. ಶಿವಕುಮಾರ್ ಅವರು ಭುವನೇಶ್ವರಿ ಚಿತ್ರಕ್ಕೆ ಪೂಜೆ ಸಲ್ಲಿಸಿದರು

'17–18 ಗಂಟೆ ಕೆಲಸ ನಿರೀಕ್ಷೆ'

'ಐದು ನಗರ ಪಾಲಿಕೆಗಳ ಆಯುಕ್ತರು ದಿನಕ್ಕೆ 17 ರಿಂದ 18 ಗಂಟೆ ಕೆಲಸ ಮಾಡಬೇಕಾಗುತ್ತದೆ. ಅದಕ್ಕಾಗಿಯೇ ಹಿರಿಯ ಅಧಿಕಾರಿಗಳ ಜೊತೆ ಯುವ ಅಧಿಕಾರಿಗಳನ್ನು ನೇಮಿಸಲಾಗಿದೆ. ಜಿಬಿಎ ಆಯುಕ್ತರು ಪಾದಚಾರಿ ರಸ್ತೆ, ನೀರು, ರಸ್ತೆ ಸೇರಿದಂತೆ ಇತರೆ ಕೆಲಸಗಳ ಬಗ್ಗೆ ಬೆಳಿಗ್ಗೆ ವಾಯುವಿಹಾರದ ಸಂದರ್ಭದಲ್ಲಿ ಪರಿಶೀಲನೆ ಮಾಡುತ್ತಾರೆ. ಹಾಗೆಯೇ ಪಾಲಿಕೆಗಳ ಆಯುಕ್ತರು ರಸ್ತೆಗಿಳಿದು ಕೆಲಸ ಮಾಡಬೇಕು' ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವ ಡಿ.ಕೆ. ಶಿವಕುಮಾರ್ ಹೇಳಿದರು.

'ಸಮಸ್ಯೆಗಳು ದಿನ ಬೆಳಗಾಗುವುದರಲ್ಲಿ ಬಗೆಹರಿಯುವುದಿಲ್ಲ. ಕುಡಿಯುವ ನೀರು, ರಸ್ತೆ ಗುಂಡಿ, ಸಂಚಾರ ದಟ್ಟಣೆ ವಿಚಾರದಲ್ಲಿ ಉತ್ತಮವಾಗಿ ಕೆಲಸ ಮಾಡಲಾಗುವುದು' ಎಂದರು.

'ಪದ ಸೂಚಿಸಿದರೆ 'ಗ್ರೇಟರ್' ಬದಲು'

'ಗ್ರೇಟರ್ ಬೆಂಗಳೂರು ಪ್ರಾಧಿಕಾರದಲ್ಲಿನ 'ಗ್ರೇಟರ್' ಇಂಗ್ಲಿಷ್ ಪದಕ್ಕೆ ಉತ್ತಮ ಕನ್ನಡ ಪದ ಸೂಚಿಸಿದರೆ ಬದಲಾವಣೆ ಮಾಡಬಹುದು. ಮುಂಬೈ ಸೇರಿದಂತೆ ಬೇರೆ ಕಡೆಯೂ ಇದೇ ಪರಿಸ್ಥಿತಿ ಬಂದಿತ್ತು. ಮಾತೃಭಾಷೆಯನ್ನು ಕಡೆಗಣಿಸುವುದಿಲ್ಲ' ಎಂದು ಜಿಬಿಎ ಉಪಾಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

'ಇಂಗ್ಲಿಷ್ ಹೆಸರಿಟ್ಟಿರುವ ಬಗ್ಗೆ ಶಾಸಕ ಅಶ್ವತ್ಥ ನಾರಾಯಣ ಆಕ್ಷೇಪಿಸಿದ್ದಾರೆ. ಯಾವ ಹೆಸರು ಇಡಬೇಕು ಎಂದು ಅವರ ಸಲಹೆ ಕೇಳುತ್ತೇನೆ' ಎಂದರು.

'ಜಿಬಿಎ ಕೇವಲ ಉಸ್ತುವಾರಿ ನೋಡಿಕೊಳ್ಳುತ್ತದೆ. ಮಿಕ್ಕ ಎಲ್ಲಾ ಸಂಗತಿಗಳು ನಗರ ಪಾಲಿಕೆಗಳ ವ್ಯಾಪ್ತಿಗೆ ಬರಲಿದೆ' ಎಂದು ತಿಳಿಸಿದರು.

'ಜಿಬಿಎಯಿಂದ ಬೆಂಗಳೂರು ಅಭಿವೃದ್ಧಿ ಸಾಧ್ಯ. ಸಾರ್ವಜನಿಕರೂ ಕೈ ಜೋಡಿಸಬೇಕು. ಆಗ ಮಾತ್ರ ಪಾರದರ್ಶಕ ಆಡಳಿತ ನಡೆಸಲು ಸಾಧ್ಯವಾಗುತ್ತದೆ. ಜನರು ಪ್ರಾಮಾಣಿಕವಾಗಿ ತಮ್ಮ ಆಸ್ತಿಗಳನ್ನು ಘೋಷಣೆ ಮಾಡಿ, ತೆರಿಗೆ ಪಾವತಿಸಬೇಕು' ಎಂದರು.

'ನಗರ ಪಾಲಿಕೆ ಕಾರ್ಯಾರಂಭಕ್ಕೆ ಸಮಯ ಬೇಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಐದು ನಗರ ಪಾಲಿಕೆಗಳು ಕಾರ್ಯಾರಂಭ ಮಾಡಲು ಸ್ವಲ್ಪ ಸಮಯ ಬೇಕಾಗುತ್ತದೆ. ಒಂದು ಸಂಸ್ಥೆ ಸ್ಥಗಿತಗೊಂಡ ಮರುದಿನವೇ ಮತ್ತೊಂದು ಸಂಸ್ಥೆ ಕಾರ್ಯಾರಂಭ ಮಾಡುವುದು ಕಷ್ಟ, ಒಂದಷ್ಟು ದಿನ ಬೇಕಾಗುತ್ತದೆ' ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದರು.

ಜಿಬಿಎ ಮುಖ್ಯ ಆಯುಕ್ತರಾಗಿ ಅಧಿಕೃತವಾಗಿ ಬುಧವಾರ ಅಧಿಕಾರ ಸ್ವೀಕರಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಮಹೇಶ್ವರ್ ರಾವ್, 'ಎಲ್ಲ ನಗರ ಪಾಲಿಕೆಗಳ ಗಡಿಗಳಲ್ಲಿ ನಾಮಫಲಕವನ್ನು ಹಾಕಲಾಗುತ್ತದೆ. ಎಲ್ಲೆಲ್ಲಿ ನಾಮಫಲಕ, ರಸ್ತೆ ಫಲಕಗಳಿವೆಯೋ ಅಲ್ಲಿ ನಗರ ಪಾಲಿಕೆಗಳ ಹೆಸರು ನಮೂದಿಸಲಾಗುತ್ತದೆ. ಕ್ಯೂಆರ್ ಕೋಡ್ ಅನ್ನೂ ಹಾಕಿ ನಗರ ಪಾಲಿಕೆ, ಸಿಬ್ಬಂದಿಯ ಸಂಪೂರ್ಣ ಮಾಹಿತಿಯನ್ನು ಒದಗಿಸಲಾಗುತ್ತದೆ' ಎಂದರು.

'ನಮ್ಮ ಪ್ರಥಮ ಆದ್ಯತೆ ವಾರ್ಡ್‌ಗಳ ಪುನರ್ ವಿಂಗಡಣೆ, ಅದನ್ನು ಗುರುವಾರದಿಂದ ಆರಂಭಿಸಲಾಗುತ್ತದೆ. ಚುನಾವಣೆಗೆ ಮತದಾರರ ಪಟ್ಟಿಯನ್ನು ಸಿದ್ಧಪಡಿಸಬೇಕಾಗಿದೆ' ಎಂದು ವಾರ್ಡ್ ಪುನರ್ ವಿಂಗಡಣೆ ಆಯೋಗದ ಆಧ್ಯಕ್ಷರೂ ಆದ ಮಹೇಶ್ವರ್ ರಾವ್ ತಿಳಿಸಿದರು.

'ನಗರ ಪಾಲಿಕೆಗಳಲ್ಲಿ ಐವರು ಆಯುಕ್ತರು ಬಂದಿದ್ದಾರೆ. ಅವರು ವೇಗವಾಗಿ ಕೆಲಸ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ. ನಗರ ಪಾಲಿಕೆಗಳು ಪೂರಕ ಬಜೆಟ್ ಅನ್ನು ಸಲ್ಲಿಸಬಹುದಾಗಿದೆ. ನೀರು ನಿಲ್ಲುವ ಕಡೆಯಲ್ಲಿ ರಸ್ತೆ ಗುಂಡಿಗಳನ್ನು ದುರಸ್ತಿ ಮಾಡಿದರೂ ಕಿತ್ತುಹೋಗುತ್ತದೆ. ನೀರು ನಿಲ್ಲದಂತೆ ನಾವು ಕ್ರಮ ಕೈಗೊಳ್ಳಬೇಕಾಗುತ್ತದೆ. ಹೀಗಾಗಿ ಗುಣಮಟ್ಟವನ್ನು ಅಳೆಯಲಾಗುವುದಿಲ್ಲ' ಎಂದು ಐದೂ ನಗರ ಪಾಲಿಕೆಗಳ ಆಡಳಿತಾಧಿಕಾರಿಯಾದ ಮಹೇಶ್ವರ್ ಮಾಹಿತಿ ನೀಡಿದರು.

'ಬನ್ನೇರುಘಟ್ಟ ರಸ್ತೆ, ಸಿಲ್ಕ್ ಬೋರ್ಡ್ ರಸ್ತೆಗಳಲ್ಲಿ ರಸ್ತೆ ಗುಂಡಿಗಳ ಸಮಸ್ಯೆ ಪದೇ ಪದೇ ಬರುತ್ತದೆ. ಜಲಮಂಡಳಿಯವರು ನೀರಿನ ಕೊಳವೆ ಮಾರ್ಗವನ್ನು ಅಳವಡಿಸುತ್ತಿದ್ದಾರೆ. ಕೂಡಲೇ ಅದನ್ನು ಮುಚ್ಚಿದರೆ ಹಳ್ಳವಾಗುತ್ತದೆ. ಹೀಗಾಗಿ, ಶಾಶ್ವತ ಪರಿಹಾರ ತಡವಾಗುತ್ತಿದೆ' ಎಂದರು.

'500 ಕಿ.ಮೀ ಉದ್ದದ ರಸ್ತೆಗೆ ವೈಟ್ ಟಾಪಿಂಗ್ ಮಾಡಲಾಗಿದೆ. ಇನ್ನೂ 500 ಕಿ.ಮೀ ಉದ್ದದ ರಸ್ತೆಗೆ ವೈಟ್ ಟಾಪಿಂಗ್ ಮಾಡಿದರೆ ರಸ್ತೆ ಗುಂಡಿ ನಿಯಂತ್ರಣವಾಗುತ್ತದೆ. ಎಲ್ಲೆಲ್ಲಿ ಹೆಚ್ಚು ವಾಹನಗಳು ಸಂಚರಿಸುತ್ತವೆಯೋ ಅಲ್ಲಿ ಹೈಡೆನ್ಸಿಟಿ ಕಾರಿಡಾರ್ ನಿರ್ಮಿಸಲಾಗುತ್ತದೆ. ಆಗ ಶಾಶ್ವತ ಪರಿಹಾರ ಸಿಗುತ್ತದೆ. ಅಲ್ಲಿಯವರೆಗೆ ತಾತ್ಕಾಲಿಕ ಪರಿಹಾರ ನೀಡಲಾಗುತ್ತದೆ. ಜನರು ಸ್ವಲ್ಪ ತಾಳ್ಮೆ ವಹಿಸಬೇಕು' ಎಂದರು.

ಆಯುಕ್ತರ ಅಧಿಕಾರ ಸ್ವೀಕಾರ

ಬೆಂಗಳೂರು ಪೂರ್ವ ನಗರ ಪಾಲಿಕೆ ಆಯುಕ್ತರಾಗಿ ಡಿ.ಎಸ್. ರಮೇಶ್, ಪಶ್ಚಿಮ ನಗರ ಪಾಲಿಕೆ ಆಯುಕ್ತರಾಗಿ ಕೆ.ವಿ. ರಾಜೇಂದ್ರ, ಉತ್ತರ ನಗರ ಪಾಲಿಕೆ ಆಯುಕ್ತರಾಗಿ ಪೊಮ್ಮುಲ ಸುನೀಲ್‌ಕುಮಾರ್, ದಕ್ಷಿಣ ನಗರ ಪಾಲಿಕೆ ಆಯುಕ್ತರಾಗಿ ಕೆ.ಎನ್. ರಮೇಶ್, ಕೇಂದ್ರ ನಗರ ಪಾಲಿಕೆ ಆಯುಕ್ತರಾಗಿ ಪಿ. ರಾಜೇಂದ್ರ ಚೋಳನ್ ಅವರು ಬುಧವಾರ ಅಧಿಕಾರ ಸ್ವೀಕರಿಸಿದರು.

ಐದು ನಗರ ಪಾಲಿಕೆಗಳಲ್ಲಿ ಶೇ 60ರಷ್ಟು ಸಿಬ್ಬಂದಿ ಹಾಜರಾಗಿದ್ದು, ಉಳಿದವರು ಅಧಿಕಾರ ಸ್ವೀಕರಿಸಬೇಕಾಗಿದೆ.

'ತಾತ್ಕಾಲಿಕ 'ವ್ಯಾಲಿ ಬ್ರಿಡ್ಜ್'ಗೆ ಚಿಂತನೆ'

'ಅತಿಹೆಚ್ಚು ವಾಹನ ದಟ್ಟಣೆ ಇರುವ ರಸ್ತೆಗಳಲ್ಲಿ ವೈಟ್ ಟಾಪಿಂಗ್, ಬ್ಲ್ಯಾಕ್ ಟಾಪಿಂಗ್ ಕಾಮಗಾರಿ ಮಾಡುವುದು ಸಮಸ್ಯೆಯಾಗುತ್ತಿದೆ. ಇಂತಹ ಸಂದರ್ಭದಲ್ಲಿ 'ವ್ಯಾಲಿ ಬ್ರಿಡ್ಜ್'ಗಳನ್ನು ತಾತ್ಕಾಲಿಕವಾಗಿ ಅಳವಡಿಸಲು ಚಿಂತಿಸಲಾಗುತ್ತಿದೆ' ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದರು.

'ಕೋಲ್ಕತ್ತದ ಕಂಪನಿಯೊಂದು ವ್ಯಾಲಿ ಬ್ರಿಡ್ಜ್ ಬಗ್ಗೆ ವಿವರ ನೀಡಿದ್ದು, ನಗರ ಪ್ರದೇಶಗಳಲ್ಲಿ ಸುಗಮವಾಗಿ ಕಾಮಗಾರಿಗಳನ್ನು ನಡೆಸಲು ಇದು ಸಹಾಯಕವಾಗಲಿದೆ. ತಾತ್ಕಾಲಿಕವಾಗಿ ಸೇತುವೆಯನ್ನು ನಿರ್ಮಿಸಿ, ಕೆಳಗೆ ರಸ್ತೆ ಕಾಮಗಾರಿಗಳನ್ನು ನಡೆಸಬಹುದು. 20 ಮೀಟರ್‌ನಿಂದ 30 ಮೀಟರ್ ಸೇತುವೆ ಮಾಡಿದರೆ, ಅನುಕೂಲ ಆಗುತ್ತದೆ ಎಂದು ಹೇಳಲಾಗಿದೆ. ಇದು ಎಷ್ಟರ ಮಟ್ಟಿಗೆ ಅನುಕೂಲವಾಗುತ್ತದೆ ಎಂಬುದನ್ನು ಪರಿಶೀಲಿಸಲಾಗುವುದು. ಇದಕ್ಕೆ ಸುಮಾರು ₹4 ಕೋಟಿಯಿಂದ ₹5 ಕೋಟಿ ವೆಚ್ಚವಾಗುತ್ತದೆ ಎನ್ನಲಾಗಿದೆ' ಎಂದು ಮಾಹಿತಿ ನೀಡಿದರು.

'ಈ ಸೇತುವೆಯನ್ನು ಅಳವಡಿಸಲು ಸುಮಾರು ಒಂದು ವಾರ ಸಮಯ ಬೇಕು. ಆ ಸಮಯದಲ್ಲಿ ಜನರಿಗೆ ತೊಂದರೆಯಾಗುತ್ತದೆ. ಇದೆಲ್ಲವನ್ನೂ ಪರಿಶೀಲಿಸಬೇಕಾಗಿದೆ. ಸಾಧಕ–ಬಾಧಕಗಳನ್ನು ನೋಡಿಕೊಂಡು ನಗರ ಪಾಲಿಕೆಗಳಲ್ಲೂ ಅಳವಡಿಸಲು ಚಿಂತಿಸಲಾಗಿದೆ. ಸ್ಥಳೀಯ ಸ್ಟಾರ್ಟ್ ಅಪ್‌ಗಳು ವಾಹನ ಸಂಚಾರಕ್ಕೆ ಧಕ್ಕೆಯಾಗದಂತೆ ಕಾಮಗಾರಿ ಸುಗಮವಾಗಿ ನಡೆಯಲು ಯಾವುದಾದರೂ ಪರಿಹಾರಗಳನ್ನು ಹೊಂದಿದ್ದರೆ ಜಿಬಿಎಯೊಂದಿಗೆ ಹಂಚಿಕೊಳ್ಳಬಹುದು' ಎಂದರು.

'ನಗರ ಪ್ರದೇಶಗಳಲ್ಲಿ ರಸ್ತೆ ಕಾಮಗಾರಿ ನಡೆಯುವಾಗ ಜನರಿಗೆ ತೊಂದರೆ ಆಗುತ್ತದೆ. ಅದನ್ನು ಕಡಿಮೆ ಮಾಡಲು ದೀರ್ಘಕಾಲದ ಪರಿಹಾರಗಳ ಬಗ್ಗೆ ಚಿಂತಿಸಲಾಗುತ್ತಿದೆ' ಎಂದು ತಿಳಿಸಿದರು.

ಮಹೇಶ್ವರ್ ರಾವ್

ಸಂಕ್ಷಿಪ್ತ ಸುದ್ದಿ

'ಬಿಎಂಐಸಿ ಯೋಜನೆ ಮುಟ್ಟುಗೋಲು ಇಲ್ಲ'

ಬೆಂಗಳೂರು: 'ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ (ಬಿಎಂಐಸಿ) ಯೋಜನೆಯಲ್ಲಿ ಅನೇಕ ನ್ಯೂನತೆಗಳಿವೆ. ಎಲ್ಲವನ್ನೂ ಬಗೆಹರಿಸಿ ಯೋಜನೆಯನ್ನು ಪೂರ್ಣಗೊಳಿಸಲು ಸರ್ಕಾರ ನಿರ್ಧರಿಸಿದೆ. ಈ ಯೋಜನೆ ಮುಟ್ಟುಗೋಲು ಹಾಕಿಕೊಳ್ಳುವ ಉದ್ದೇಶ ಇಲ್ಲ' ಎಂದು ಗೃಹ ಸಚಿವ ಜಿ. ಪರಮೇಶ್ವರ ಸ್ಪಷ್ಟಪಡಿಸಿದರು.

ಬಿಎಂಐಸಿ ಯೋಜನೆ ವಿಳಂಬ ಹಾಗೂ ಅಕ್ರಮಗಳ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲು ಪರಮೇಶ್ವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಉಪ ಸಮಿತಿ ರಚಿಸಲಾಗಿದೆ. ಈ ಸಮಿತಿಯ ಸಭೆ ಬುಧವಾರ ನಡೆಯಿತು.

ಸಭೆಯ ಬಳಿಕ ಮಾತನಾಡಿದ ಪರಮೇಶ್ವರ, 'ನೈಸ್ ಯೋಜನೆ ಮುಟ್ಟುಗೋಲು ಹಾಕಿಕೊಳ್ಳುವುದಿದ್ದರೆ ಸಮಿತಿಗಳನ್ನು ರಚಿಸಿ, ಚರ್ಚೆ ನಡೆಸುತ್ತಿರಲಿಲ್ಲ. ಸಮಸ್ಯೆಗಳನ್ನು ಬಗೆಹರಿಸಿ ಯೋಜನೆ ಪೂರ್ಣಗೊಳಿಸುವ ಉದ್ದೇಶಕ್ಕೆ ಸಂಪುಟ ಉಪ ಸಮಿತಿ ರಚಿಸಲಾಗಿದೆ' ಎಂದರು.

'ಜಕ್ಕೂರು ಏರೋಡ್ರೋಮ್ ಸ್ಥಳ ಬಳಕೆಗೆ ಚಿಂತನೆ'

ಬೆಂಗಳೂರು: 'ಜಕ್ಕೂರು ಏರೋಡ್ರೋಮ್ ರನ್‌ವೇ ವಿಸ್ತರಿಸಲು ಮತ್ತು ಈ ಜಾಗವನ್ನು ಸಂಪೂರ್ಣವಾಗಿ ಸಾರ್ವಜನಿಕ ಉಪಯೋಗಕ್ಕೆ ಬಳಸಿಕೊಳ್ಳಲು ಏನೇನು ಮಾಡಬಹುದೆಂಬ ಬಗ್ಗೆ ಚಿಂತನೆ ನಡೆಸಲಾಗಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಜಕ್ಕೂರು ಸರ್ಕಾರಿ ವೈಮಾನಿಕ ತರಬೇತಿ ಶಾಲೆ ಮತ್ತು ಏರೋಡ್ರೋಮ್ ಅಭಿವೃದ್ಧಿಗೆ ಸಂಬಂಧಿಸಿದಂತೆ ಅಧಿಕಾರಿಗಳ ಜೊತೆ ಬುಧವಾರ ಅವರು ಚರ್ಚೆ ನಡೆಸಿದರು.

'ಇಲ್ಲಿನ ಜಾಗವನ್ನು ಬಳಸಿಕೊಳ್ಳುವ ವಿಚಾರದಲ್ಲಿ ಸರ್ಕಾರದ ಮುಂದೆ ಎರಡು ಯೋಜನೆಗಳಿವೆ. ಇಲ್ಲಿ ಮೇಲ್ಸೇತುವೆ ಬಂದ ಕಾರಣ ಸಮಸ್ಯೆ ಆಗಿದೆ. ಮೇಲ್ಸೇತುವೆ ಬರುವ ಬಗ್ಗೆ ಮೊದಲೇ ತಿಳಿದಿರಲಿಲ್ಲ. ಇಲ್ಲಿ 200 ಎಕರೆಗಿಂತಲೂ ಹೆಚ್ಚಿನ ಜಾಗವಿದೆ. ಜಕ್ಕೂರು ವೈಮಾನಿಕ ತರಬೇತಿ ಶಾಲೆಯ ಪಕ್ಕದಲ್ಲಿಯೇ ರನ್‌ವೇ ವಿಸ್ತರಣೆಗೆ ಮೂರು ಎಕರೆಗಿಂತ ಹೆಚ್ಚು ಜಮೀನಿನ ಅಗತ್ಯವಿದೆ. ಜಮೀನು ಕೊಡಲು ಭೂಮಾಲೀಕರು ತಯಾರಿಲ್ಲ. ಅಲ್ಲದೆ, ದುಬಾರಿ ಕೂಡಾ ಆಗಿದೆ' ಎಂದರು.

ಸಾಂಸ್ಕೃತಿಕ ಮುನ್ನೋಟ

7ಕ್ಕೆ 'ಬ್ರಹ್ಮ ಕಪಾಲ' ಯಕ್ಷಗಾನ

ಯಕ್ಷರಥ ಸರ್ವಸದಸ್ಯರು 'ಯಕ್ಷವಲ್ಲರಿ' ಶೀರ್ಷಿಕೆಯಡಿ ಮಹಿಳಾ ಮುಮ್ಮೇಳ ಕಲಾವಿದರು ಮತ್ತು ಅತಿಥಿ ಕಲಾವಿದರಿಂದ ಇದೇ 7ರಂದು ಸಂಜೆ 4 ಗಂಟೆಗೆ ನಂದಿನಿ ಬಡಾವಣೆಯ ಉತ್ತರ ಕನ್ನಡ ಸಂಘದಲ್ಲಿ 'ಬ್ರಹ್ಮ ಕಪಾಲ' ಯಕ್ಷಗಾನ ಪ್ರದರ್ಶನ ಹಮ್ಮಿಕೊಂಡಿದ್ದಾರೆ.

ಕಲಾವಿದೆ ಅರ್ಪಿತಾ ಹೆಗಡೆ ನೇತೃತ್ವದಲ್ಲಿ ಈ ಪ್ರದರ್ಶನ ನಡೆಯಲಿದೆ. ಹಿಮ್ಮೇಳದಲ್ಲಿ ಸರ್ವೇಶ್ವರ ಹೆಗಡೆ ಮೂರೂರು, ಸುಬ್ರಾಯ ಹೆಬ್ಬಾರ, ಅಕ್ಷಯ್ ಆಚಾರ್, ಶ್ರೀನಿವಾಸ ಪ್ರಭು ಭಾಗವಹಿಸಲಿದ್ದಾರೆ.

ಮುಮ್ಮೇಳದಲ್ಲಿ ಕಿರಣ ಪೈ, ಅರ್ಪಿತಾ ಹೆಗಡೆ, ಪ್ರಿಯಾಂಕ, ಸಿಂಧೂಶ್ರೀ ಹೆಬ್ಬಾರ್, ಸುಖದಾ ಭಟ್, ಶ್ರಾವ್ಯ ದೊಡ್ಡೇರಿ, ಗೀತಾ ಹೆಗಡೆ, ಅಶ್ವಿನಿ ಕೊಂಡದಕುಳಿ, ನಿಹಾರಿಕಾ ಭಟ್, ಚಿತ್ಕಲಾ ತುಂಗಾ ಹಾಗೂ ಶ್ರೇಯಾ ದೊಡ್ಡೇರಿ ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

6ಕ್ಕೆ ವಿಶೇಷ ಸಂಗೀತ ಕಛೇರಿ

ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್ 88ನೇ ಗಣೇಶೋತ್ಸವದ ಪ್ರಯುಕ್ತ ಇದೇ 6ರಂದು ಸಂಜೆ 6 ಗಂಟೆಗೆ ಚಾಮರಾಜಪೇಟೆಯಲ್ಲಿರುವ ತನ್ನ ಕೇಂದ್ರದ ಆವರಣದಲ್ಲಿ ವಿಶೇಷ ಸಂಗೀತ ಕಛೇರಿ ಹಮ್ಮಿಕೊಂಡಿದೆ.

ಎಸ್. ಐಶ್ವರ್ಯ ಮತ್ತು ಎಸ್. ಸೌಂದರ್ಯ ಅವರಿಂದ ಗಾಯನದ ಜುಗಲ್‌ಬಂದಿ ನಡೆಯಲಿದೆ. ಎಸ್. ಜನಾರ್ದನ್ (ಪಿಟೀಲು), ಫಣೀಂದ್ರ ಭಾಸ್ಕರ್ (ಮೃದಂಗ) ಹಾಗೂ ಸುಕನ್ಯಾ ರಾಮ್‌ಗೋಪಾಲ್ (ಘಟ) ಅವರು ಸಾಥ್ ನೀಡಲಿದ್ದಾರೆ. ರಾತ್ರಿ 8.30ಕ್ಕೆ ಮಹಾಮಂಗಳಾರತಿ ಮತ್ತು ಗಣಪತಿ ಮೂರ್ತಿ ವಿಸರ್ಜನೆ ನಡೆಯಲಿದೆ.

ಸಪ್ತಕದಿಂದ ಸಂಗೀತ ಸಂಭ್ರಮ

ಸಪ್ತಕ ಸಂಸ್ಥೆಯು ಇದೇ 7ರಂದು ಸಂಜೆ 5.30ಕ್ಕೆ ಮಲ್ಲೇಶ್ವರದ ಚೌಡಯ್ಯ ಸ್ಮಾರಕ ಭವನದಲ್ಲಿ 'ಸಂಗೀತ ಸಂಭ್ರಮ' ಕಾರ್ಯಕ್ರಮ ಹಮ್ಮಿಕೊಂಡಿದೆ.

ನವದೆಹಲಿಯ ಸಾಜನ್ ಮಿಶ್ರಾ ಮತ್ತು ಸ್ವರಾಂಶ ಮಿಶ್ರಾ ಅವರಿಂದ ಗಾಯನ ನಡೆಯಲಿದ್ದು, ರವೀಂದ್ರ ಯಾವಗಲ್ (ತಬಲಾ), ವ್ಯಾಸಮೂರ್ತಿ ಕಟ್ಟಿ (ಹಾರ್ಮೋನಿಯಂ) ಅವರು ಸಾಥ್ ನೀಡಲಿದ್ದಾರೆ. ಮುಂಬೈನ ನಯನ ಘೋಷ್ ಅವರಿಂದ ಸಿತಾರ್ ವಾದನ ನಡೆಯಲಿದ್ದು, ತಬಲಾದಲ್ಲಿ ಇಶಾನ್ ಘೋಷ್ ಸಾಥ್ ನೀಡಲಿದ್ದಾರೆ. ಈ ಕಾರ್ಯಕ್ರಮಕ್ಕೆ ಪ್ರವೇಶ ಉಚಿತ ಇರಲಿದೆ ಎಂದು ಸಂಸ್ಥೆ ತಿಳಿಸಿದೆ.

'ಮೂರನೇ ಕಿವಿ' ನಾಟಕ ಪ್ರದರ್ಶನ 6ಕ್ಕೆ

ಮೈಸೂರಿನ ಪರಿವರ್ತನ ರಂಗ ಸಮಾಜ ತಂಡವು ಸೆಪ್ಟೆಂಬರ್ 6ರಂದು ಜೆ.ಪಿ. ನಗರದ ರಂಗಶಂಕರದಲ್ಲಿ ಮಧ್ಯಾಹ್ನ 3.30ಕ್ಕೆ ಹಾಗೂ ಸಂಜೆ 7.30ಕ್ಕೆ 'ಮೂರನೇ ಕಿವಿ' ನಾಟಕ ಪ್ರದರ್ಶನ ಹಮ್ಮಿಕೊಂಡಿದೆ. ಎಸ್.ಆರ್. ರಮೇಶ್ ಅವರು ಈ ನಾಟಕದ ವಿನ್ಯಾಸ, ರಂಗಪಠ್ಯ ಹಾಗೂ ನಿರ್ದೇಶನ ಮಾಡಿದ್ದಾರೆ.

'ಫಡ್ನೀಸ್ 100' ವ್ಯಂಗ್ಯಚಿತ್ರ ಪ್ರದರ್ಶನ

ವ್ಯಂಗ್ಯಚಿತ್ರಕಾರ ಎಸ್.ಡಿ. ಫಡ್ನೀಸ್ ಅವರ ನೂರನೇ ಜನ್ಮದಿನದ ಪ್ರಯುಕ್ತ ಭಾರತೀಯ ವ್ಯಂಗ್ಯಚಿತ್ರಕಾರರ ಸಂಸ್ಥೆಯು 'ಫಡ್ನೀಸ್ 100' ಶೀರ್ಷಿಕೆಯಡಿ ಇದೇ 6ರಿಂದ ಎಂ.ಜಿ ರಸ್ತೆಯ ಮಿಡ್ ಫೋರ್ಡ್ ಹೌಸ್‌ನ ತನ್ನ ಗ್ಯಾಲರಿಯಲ್ಲಿ ವ್ಯಂಗ್ಯಚಿತ್ರ ಪ್ರದರ್ಶನ ಹಮ್ಮಿಕೊಂಡಿದೆ.

ಭಾನುವಾರ ಮತ್ತು ಸಾರ್ವಜನಿಕ ರಜಾ ದಿನ ಹೊರತುಪಡಿಸಿ, ಇದೇ 16ರವರೆಗೂ ಬೆಳಿಗ್ಗೆ 10ರಿಂದ ಸಂಜೆ 6 ಗಂಟೆವರೆಗೆ ಈ ಪ್ರದರ್ಶನ ನಡೆಯಲಿದೆ. ಈ ಪ್ರದರ್ಶನವನ್ನು ಲೋಕಸಭೆಯ ಮಾಜಿ ಸದಸ್ಯ ಜನಾರ್ದನ ಸ್ವಾಮಿ ಉದ್ಘಾಟಿಸುತ್ತಾರೆ ಎಂದು ಪ್ರಕಟಣೆ ತಿಳಿಸಿದೆ.

ಪ್ರತಿ ಗುರುವಾರ ಪ್ರಕಟವಾಗುವ 'ಸಾಂಸ್ಕೃತಿಕ ಮುನ್ನೋಟ' ಅಂಕಣದಲ್ಲಿ ಪ್ರಕಟಿಸಲು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಗಿನ ಇ–ಮೇಲ್‌ಗೆ (ಬುಧವಾರ ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

'ಬ್ಯಾರಕ್‌ನಿಂದ ಹೊರ ಬರಲೂ ದರ್ಶನ್‌ಗೆ ಅವಕಾಶ ನೀಡುತ್ತಿಲ್ಲ'

ಪ್ರಜಾವಾಣಿ ವಾರ್ತೆ

ದರ್ಶನ್

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಎರಡನೇ ಆರೋಪಿ, ನಟ ದರ್ಶನ್ ಅವರನ್ನು ಬಳ್ಳಾರಿ ಕೇಂದ್ರ ಕಾರಾಗೃಹಕ್ಕೆ ಸ್ಥಳಾಂತರಿಸುವ ಹಾಗೂ ಅವರಿಗೆ ಹೆಚ್ಚುವರಿ ದಿಂಬು, ಬೆಡ್‌ಶೀಟ್ ನೀಡುವಂತೆ ಕೋರಿ ಸಲ್ಲಿಸಲಾಗಿದ್ದ ಎರಡು ಪ್ರತ್ಯೇಕ ಅರ್ಜಿಗಳ ವಿಚಾರಣೆ ನಡೆಸಿದ ಸಿಸಿಎಚ್ 64ನೇ ನ್ಯಾಯಾಲಯವು ಆದೇಶವನ್ನು ಕಾಯ್ದಿರಿಸಿದೆ. ಸೆ.9ರಂದು ಆದೇಶ ಪ್ರಕಟಿಸುವುದಾಗಿ ಹೇಳಿದೆ.

ಬಳ್ಳಾರಿ ಜೈಲಿಗೆ ದರ್ಶನ್ ಅವರನ್ನು ಸ್ಥಳಾಂತರಿಸಲು ಅನುಮತಿ ನೀಡುವಂತೆ ಪ್ರಾಸಿಕ್ಯೂಷನ್ ಪರ ವಕೀಲರು ಮನವಿ ಸಲ್ಲಿಸಿದ್ದರು. ಬೆಡ್‌ಶೀಟ್ ಹಾಗೂ ದಿಂಬು ನೀಡುವಂತೆ ಕೋರಿ ದರ್ಶನ್ ಪರ ವಕೀಲರು ಅರ್ಜಿ ಸಲ್ಲಿಸಿದ್ದರು.

'ಜೈಲಿನ ಬ್ಯಾರಕ್‌ನಿಂದ ದರ್ಶನ್ ಅವರನ್ನು ಹೊರಕ್ಕೆ ಬರುವುದಕ್ಕೂ ಅವಕಾಶ ನೀಡುತ್ತಿಲ್ಲ. ಒಂದು ಕೊಠಡಿಯಲ್ಲಿ ಒಬ್ಬರೇ ಇರುವಂತೆ ಶಿಕ್ಷೆ ನೀಡಲಾಗುತ್ತಿದೆ. ಬೇರೆ ಕೈದಿಗಳಿಗೆ ಹಾಗೂ ಶಿಕ್ಷೆಯಾದವರಿಗೂ ಸೌಲಭ್ಯ ನೀಡಲಾಗುತ್ತಿದೆ. ಆದರೆ, ದರ್ಶನ್‌ಗೆ ಸೌಲಭ್ಯ ನೀಡುತ್ತಿಲ್ಲ' ಎಂದು ಅವರ ಪರ ವಕೀಲರು ನ್ಯಾಯಾಲಯದ ಗಮನಕ್ಕೆ ತಂದರು.

'ದರ್ಶನ್ ಕುಟುಂಬದ ಸದಸ್ಯರನ್ನೂ ಭೇಟಿ ಮಾಡಿಲ್ಲ. ಸುಪ್ರೀಂ ಕೋರ್ಟ್ ಜಾಮೀನು ರದ್ದು ಮಾಡಿದೆ ಎಂಬ ಕಾರಣಕ್ಕೆ ಯಾವುದೇ ಸೌಲಭ್ಯ ನೀಡುವಂತಿಲ್ಲ ಎಂಬುದಾಗಿ ಜೈಲಿನ ಸಿಬ್ಬಂದಿ ಹೇಳುತ್ತಿದ್ದಾರೆ. ದರ್ಶನ್ ಅವರನ್ನು ಬೇರೆ ಕಾರಾಗೃಹಕ್ಕೆ ಸ್ಥಳಾಂತರ ಮಾಡಬಾರದು. ಕನಿಷ್ಠ ಸೌಲಭ್ಯ ಕೊಡಬೇಕೆಂದು ಮನವಿ ಮಾಡುತ್ತೇನೆ' ಎಂದು ವಕೀಲರು ವಾದ ಮಂಡಿಸಿದರು.

'ಬಟ್ಟೆ, ಹಾಸಿಗೆ ಸೇರಿ ಅಗತ್ಯ ವಸ್ತುಗಳನ್ನು ಸ್ವಂತವಾಗಿ ಪಡೆಯಲು ಅವಕಾಶವಿದೆ. ವಿಚಾರಣಾಧೀನ ಕೈದಿ ಹಾಗೂ ಸಜಾ ಅಪರಾಧಿ ಸಹ ಕೆಲವು ಸೌಲಭ್ಯ ಪಡೆಯಬಹುದು. ಹೆಚ್ಚುವರಿ ಸೌಲಭ್ಯ ಕೇಳುತ್ತಿಲ್ಲ. ಜೈಲಿನ ನಿಯಮಗಳಿಗೆ ಒಳಪಟ್ಟು ಸೌಲಭ್ಯ ಕಲ್ಪಿಸಿ' ಎಂದು ಕೋರಿದರು.

'ಈ ರೀತಿಯ ತಾರತಮ್ಯಕ್ಕೆ ಈಗಿನ ಕಾರಾಗೃಹ ಹಾಗೂ ಸುಧಾರಣಾ ಇಲಾಖೆಯ ಮುಖ್ಯಸ್ಥ ಬಿ.ದಯಾನಂದ ಅವರೇ ಕಾರಣ' ಎಂದು ನ್ಯಾಯಾಲಯದ ಗಮನಕ್ಕೆ ತಂದರು.

ಮರಣ ದಂಡನೆ ನೀಡುವಂತೆ ಕೋರಿದ ವ್ಯಕ್ತಿ

ಅರ್ಜಿಗಳ ವಿಚಾರಣೆ ನಡೆಯುತ್ತಿದ್ದ ವೇಳೆ ನ್ಯಾಯಾಲಯದ ಹಾಲ್‌ಗೆ ನುಗ್ಗಿದ ವ್ಯಕ್ತಿಯೊಬ್ಬ ದರ್ಶನ್, ಪವಿತ್ರಾಗೌಡ ಸೇರಿ ಎಲ್ಲಾ ಆರೋಪಿಗಳಿಗೂ ಮರಣದಂಡನೆ ಶಿಕ್ಷೆ ನೀಡಬೇಕೆಂದು ಒತ್ತಾಯಿಸಿದ. ವ್ಯಕ್ತಿಯ ವರ್ತನೆಯಿಂದ ಕೋರ್ಟ್ ಹಾಲ್‌ನಲ್ಲಿ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ಅರ್ಜಿ ಹಿಡಿದು ಬಂದ ವ್ಯಕ್ತಿಯನ್ನು ನ್ಯಾಯಾಧೀಶರು ಪ್ರಶ್ನಿಸಿದಾಗ, 'ನಾನು ರವಿಬೆಳಗೆರೆ ಕಡೆಯವನು' ಎಂದು ಹೇಳಿದ್ದಾನೆ.

'ಈ ರೀತಿಯ ಅರ್ಜಿ ಹಿಡಿದು ಬಂದರೆ ಪಡೆಯಲು ಅವಕಾಶ ಇಲ್ಲ. ಎಲ್ಲವೂ ಕಾನೂನು ಪ್ರಕಾರವೇ ನಡೆಯಬೇಕು. ಸರ್ಕಾರದ ಮೂಲಕವೇ ಅರ್ಜಿ ಸಲ್ಲಿಸಿ' ಎಂದು ಸೂಚಿಸಿದರು. ಆಗ ನ್ಯಾಯಾಲಯದ ಸಿಬ್ಬಂದಿ ಆತನನ್ನು ಹೊರಕ್ಕೆ ಕಳುಹಿಸಿದರು.

'ಶೀಘ್ರ ರಾಜೀನಾಮೆ ಕೊಡುವೆ'

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನ ಬಳಸಿ ನನ್ನ ವಿರುದ್ಧ ಷಡ್ಯಂತ್ರ ರೂಪಿಸಲಾಗಿದೆ. ಮುಖ್ಯಮಂತ್ರಿ ಸೂಚನೆ ಅನುಸಾರ ಶೀಘ್ರ ಬೆಂಗಳೂರಿಗೆ ತೆರಳಿ ನನ್ನ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುವೆ' ಎಂದು ರಾಜ್ಯ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ರವಿಕುಮಾರ್ ತಿಳಿಸಿದರು.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಅವರು, 'ನಿಗಮದಲ್ಲಿ ಶಿಸ್ತು ಹಾಗೂ ಪಾರದರ್ಶಕತೆ ತಂದ ಕಾರಣಕ್ಕೆ ಷಡ್ಯಂತ್ರ ನಡೆದಿದೆ. ಆದರೆ, ಪಕ್ಷಕ್ಕೆ ಮುಜುಗರ ಆಗುವುದನ್ನು ತಡೆಯಲು ನೈತಿಕ ಹೊಣೆ ಹೊತ್ತು ರಾಜೀನಾಮೆ ಕೊಡಲು ವೈಯಕ್ತಿಕವಾಗಿ ನಿರ್ಧರಿಸಿದ್ದೇನೆ' ಎಂದರು.

'ವಿಡಿಯೊದಲ್ಲಿ ಇದ್ದಂತೆ ಯಾರ ಬಳಿ ಹಣ ಪಡೆದಿಲ್ಲ, ಯಾರಿಗೂ ಕೊಟ್ಟಿಲ್ಲ. ಕಮಿಷನ್ ವಿಚಾರ ಮಾತನಾಡಿಲ್ಲ. ಎಫ್‌ಎಸ್‌ಎಲ್ ಪರೀಕ್ಷೆಗೆ ವಿಡಿಯೊ ಕಳುಹಿಸಿದರೆ ವಸ್ತುಸ್ಥಿತಿ ಗೊತ್ತಾಗಲಿದೆ' ಎಂದರು.

ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಸೇರಿದಂತೆ ಯಾರಿಗೂ ಕಮಿಷನ್ ಕೊಟ್ಟಿಲ್ಲ. ಎಲ್ಲವೂ ಷಡ್ಯಂತ್ರ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

'ನಿಗಮದ ಕಚೇರಿಯಲ್ಲೇ ವಿಡಿಯೊ ಚಿತ್ರೀಕರಿದ್ದು, ಇದರಲ್ಲಿ ನಿಗಮದ ಅಧಿಕಾರಿಗಳ ಪಾತ್ರ ಇರಬಹುದು. ಗುರುವಾರ ಸಿ.ಎಂ ಹಾಗೂ ಡಿಸಿಎಂ ಭೇಟಿಯಾಗಿ ವಸ್ತುಸ್ಥಿತಿ ಮನವರಿಕೆ ಮಾಡಿಕೊಡಲಿದ್ದೇನೆ. ಇಡೀ ಪ್ರಕರಣದ ಸಮಗ್ರ ತನಿಖೆಗೆ ಒತ್ತಾಯಿಸಲಿದ್ದೇನೆ' ಎಂದರು.

'ಭೋವಿ ಸಮುದಾಯವು ನನ್ನ ಮೇಲೆ ಇಟ್ಟಿರುವ ವಿಶ್ವಾಸಕ್ಕೂ ಈ ಘಟನೆಯಿಂದ ಧಕ್ಕೆಯಾಗಿದೆ. ಹೀಗಾಗಿ ಸರ್ಕಾರ ಗಂಭೀರ ತನಿಖೆ ಮಾಡಬೇಕು' ಎಂದು ಒತ್ತಾಯಿಸಿದರು.

'ನಿಗಮದಲ್ಲಿ ಹಿಂದೆ ದೊಡ್ಡ ಹಗರಣ ನಡೆದಿದ್ದರಿಂದ ಮುಳ್ಳಿನ ಕುರ್ಚಿ ಎಂದೇ ಭಾವಿಸಿದ್ದೆ, ಭ್ರಷ್ಟಾಚಾರ ತಡೆಗೆ ಕ್ರಮ ವಹಿಸಿದ್ದೆ. ಅದನ್ನು ಸಹಿಸಲಾರದೇ ವಿಡಿಯೊ ತಿರುಚಲಾಗಿದೆ' ಎಂದರು.

ಎಫ್‌ಐಆರ್ ರದ್ದುಪಡಿಸುವಂತೆ ಕೋರಿ ಸಲ್ಲಿಕೆಯಾಗಿದ್ದ ಅರ್ಜಿ ವಿಚಾರಣೆ

ಯತ್ನಾಳ್‌ಗೆ ಬುದ್ಧಿ ಹೇಳಿ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಳವಾಯಿಯವರೇ ನಿಮ್ಮ ಕಕ್ಷಿದಾರರಿಗೆ ಬುದ್ಧಿ ಹೇಳಿ, ಸಾಮರಸ್ಯಕ್ಕೆ ಧಕ್ಕೆ ತರುವಂತಹ ಹೇಳಿಕೆ ನೀಡಬೇಡಿ ಎಂದು. ಎಲ್ಲಾ ಧರ್ಮಗಳಲ್ಲೂ ಒಳ್ಳೆಯ ವಿಚಾರಗಳಿರುತ್ತವೆ. ಸಾಮಾಜಿಕ ಸಹಬಾಳ್ವೆ ಅವಶ್ಯ. ಈ ವಿಷಯವನ್ನು ಅವರಿಗೆ ಮನನ ಮಾಡಿಸಿ...'

'ನನ್ನ ವಿರುದ್ಧ ಕೊಪ್ಪಳ ಟೌನ್ ಪೊಲೀಸ್ ಠಾಣೆಯಲ್ಲಿ ದಾಖಾಗಿರುವ ಎಫ್‌ಐಆರ್ ರದ್ದುಪಡಿಬೇಕು' ಎಂದು ಕೋರಿ ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ಬುಧವಾರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ಐ.ಅರುಣ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ಯತ್ನಾಳ್ ಪರ ವಕೀಲರಿಗೆ ಸಲಹೆ ನೀಡಿದ ಪರಿ ಇದು.

'ಭಾರತದಂತಹ ವೈವಿಧ್ಯಮಯ ದೇಶ ಸಿಂಧೂ ನಾಗರಿಕತೆಯಿಂದ ಈತನಕ 5 ಸಾವಿರ ವರ್ಷಗಳ ಇತಿಹಾಸ ಹೊಂದಿದೆ. ಕಲಹ ಮನುಷ್ಯನ ಸಹಜ ಸ್ವಭಾವ. ಒಂದೇ ಕುಟುಂಬದಲ್ಲಿನ ಸಹೋದರರೇ ಹೊಡೆದಾಡಿಕೊಳ್ಳುತ್ತಾರೆ. ಹೀಗಿರುವಾಗ, ಒಂದು ಸಮುದಾಯ ಮತ್ತೊಂದು ಸಮುದಾಯದ ವಿರುದ್ಧ ಹೋರಾಡುವ ಗುಣ ಹೊಸದೇನಲ್ಲ. ಏನೆಲ್ಲಾ ಅಪಸವ್ಯಗಳಿದ್ದರೂ ಅವುಗಳ ಜತೆಗೇ ಅವರು ಪರಸ್ಪರ ಪ್ರೀತಿಯನ್ನೂ ಹೊಂದಿರುತ್ತಾರೆ. ಜಾತಿ, ಧರ್ಮ, ಸಮುದಾಯಗಳ ಮಧ್ಯೆ ಹಲವು ವಿಚಾರಗಳಿಗೆ ಆಗಾಗ್ಗೆ ಅಡೆತಡೆಗಳು ಉದ್ಭವವಾಗುತ್ತಿರುತ್ತವೆ. ಅವುಗಳನ್ನೆಲ್ಲಾ ನಾವು ತೊಡೆದು ಹಾಕಬೇಕು. ಜನರು ಒಬ್ಬರಿಗೊಬ್ಬರು ಸಹಾಯ ಮಾಡುವ ಗುಣ ಹೊಂದಿರುತ್ತಾರೆ ಎಂಬುದನ್ನು ನಾವು ಯಾವತ್ತೂ ಮರೆಯಬಾರದು' ಎಂದು ನ್ಯಾಯಪೀಠ ಯತ್ನಾಳ್ ಅವರಿಗೆ ಕಿವಿಮಾತು ಹೇಳಿತು.

ಇದೇ ವೇಳೆ, 'ಮುಸ್ಲಿಂ ಯುವತಿಯರನ್ನು ಮದುವೆಯಾಗುವ ಹಿಂದೂ ಯುವಕರಿಗೆ ₹5 ಲಕ್ಷ ನೀಡುವುದಾಗಿ ಹೇಳಿಕೆ ನೀಡಿದ ಆರೋಪಕ್ಕೆ ಸಂಬಂಧಿಸಿದ ಈ ಪ್ರಕರಣದಲ್ಲಿ ಆರೋಪಿಯಾಗಿರುವ ಬಸನಗೌಡ ಪಾಟೀಲ ಯತ್ನಾಳ್ ವಿರುದ್ಧ ಯಾವುದೇ ಆತುರದ ಕ್ರಮ ಜರುಗಿಸಬಾರದು' ಎಂದು ಪ್ರಾಸಿಕ್ಯೂಷನ್‌ಗೆ ಆದೇಶಿಸಿ ಮಧ್ಯಂತರ ಆದೇಶ ನೀಡಿತು. ಅರ್ಜಿದಾರರು ತನಿಖೆಗೆ ಸಹಕರಿಸಬೇಕು ಎಂದು ನಿರ್ದೇಶಿಸಿ ವಿಚಾರಣೆ ಮುಂದೂಡಿತು.

ದೂರುದಾರರಾದ ಖಮರ್ ಜುನೈದ್ ಖುರೇಷಿ, ಮೈನುದ್ದೀನ್ ಬೀಳಗಿ ಹಾಗೂ ಅಬ್ದುಲ್ ಕಲಾಂ ಅವರಿಗೆ ತುರ್ತು ನೋಟಿಸ್ ಹಾಗೂ ಕೊಪ್ಪಳ ಟೌನ್ ಠಾಣೆ ಪೊಲೀಸರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಲಾಗಿದೆ.

ನ್ಯಾ.ಪ್ರಭಾಕರ ಶಾಸ್ತ್ರಿ ನೇಮಕ

ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯ (ಕೆಎಸ್‌ಎಟಿ) ನ್ಯಾಯಾಂಗ ಸದಸ್ಯರನ್ನಾಗಿ, ಕರ್ನಾಟಕ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಬಿ.ಪ್ರಭಾಕರ ಶಾಸ್ತ್ರಿ ಅವರನ್ನು ನೇಮಕ ಮಾಡಲಾಗಿದೆ.

'ಈ ನೇಮಕ ಅವರು ಅಧಿಕಾರ ವಹಿಸಿಕೊಳ್ಳುವ ದಿನದಿಂದ ನಾಲ್ಕು ವರ್ಷಗಳವರೆಗೆ ಇರುತ್ತದೆ' ಎಂದು ಕೇಂದ್ರ ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆ ಮತ್ತು ಪಿಂಚಣಿಗಳ ಸಚಿವಾಲಯ 2025ರ ಆಗಸ್ಟ್ 29ರಂದು ಹೊರಡಿಸಿರುವ ಆದೇಶದಲ್ಲಿ ತಿಳಿಸಿದೆ. ನಿವೃತ್ತಿ ವಯಸ್ಸು 67 ವರ್ಷ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಮನುಷ್ಯ ಸತ್ತ ಮೇಲೂ ಅವನು ಮಾಡಿದ ಕೆಟ್ಟದ್ದು ನಿಲ್ಲುತ್ತದೆ; ಒಳ್ಳೆಯದು ಮಾತ್ರ ಮರೆತು ಹೋಗುತ್ತದೆ.

–ವಿಲಿಯಂ ಷೇಕ್ಸ್‌ಪಿಯರ್

ಸಂಪಾದಕೀಯ

ಬೆಂಗಳೂರಿನಲ್ಲಿ ಜಿಬಿಎ ಯುಗಾರಂಭ ವಿಳಂಬ ಮಾಡದೆ ಚುನಾವಣೆ ನಡೆಸಿ

‘ಭಾರತದ ತಂತ್ರಜ್ಞಾನ ರಾಜಧಾನಿ’ ಎಂಬ ಹಿರಿಮೆಗೆ ಪಾತ್ರವಾಗಿರುವ ಬೆಂಗಳೂರಿನಲ್ಲಿ ಸ್ಥಳೀಯ ಆಡಳಿತ ವ್ಯವಸ್ಥೆಯು ಮಂಗಳವಾರದಿಂದ ಹೊಸದೊಂದು ಮಜಲನ್ನು ತಲುಪಿದೆ. ಹದಿನೆಂಟು ವರ್ಷಗಳಿಂದ ಅಸ್ತಿತ್ವದಲ್ಲಿದ್ದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು (ಬಿಬಿಎಂಪಿ) ಇತಿಹಾಸದ ಪುಟ ಸೇರಿದ್ದು, ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಯುಗಾರಂಭವಾಗಿದೆ. ಜಿಬಿಎ ಅಡಿಯಲ್ಲಿ ಐದು ನಗರ ಪಾಲಿಕೆಗಳು ಅಸ್ತಿತ್ವಕ್ಕೆ ಬಂದಿದ್ದು, ಇನ್ನು ಮುಂದೆ ಬೆಂಗಳೂರಿನ ಆಡಳಿತ ಯಂತ್ರವನ್ನು ಅವುಗಳು ನಿಭಾಯಿಸಲಿವೆ. ಹೊಸ ಆಡಳಿತ ವ್ಯವಸ್ಥೆಯು ರಾಜಧಾನಿಯ ನಾಗರಿಕರಿಗೆ ಸಮರ್ಥ ಮತ್ತು ಉತ್ತಮ ಸೇವೆ ಒದಗಿಸಲಿದೆ ಎಂಬ ಕನಸನ್ನು ತೇಲಿ ಬಿಡಲಾಗಿದೆ. ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ (ಬಿಎಂಪಿ) ಏಳು ನಗರಸಭೆ, ಒಂದು ಪುರಸಭೆ ಹಾಗೂ 110 ಹಳ್ಳಿಗಳನ್ನು ತಂದು, 2007ರಲ್ಲಿ ಬಿಬಿಎಂಪಿಯನ್ನು ರಚಿಸಲಾಗಿತ್ತು. ಕೇಂದ್ರೀಕೃತ ವ್ಯವಸ್ಥೆಯಿಂದ ಬೃಹತ್ ನಗರದ ಎಲ್ಲ ಸಮಸ್ಯೆಗಳಿಗೆ ಪರಿಹಾರ ಸಿಗಲಿದೆ ಎಂಬ ಕನಸನ್ನು ಆಗ ಬಿತ್ತಲಾಗಿತ್ತು. ಆದರೆ, ವಾಸ್ತವದಲ್ಲಿ ಏನಾಗಿದೆ ಎನ್ನುವುದು ಜನರ ಕಣ್ಣಮುಂದಿದೆ. ಬಿಬಿಎಂಪಿಯು ಅಸ್ತಿತ್ವದಲ್ಲಿದ್ದ ಹದಿನೆಂಟು ವರ್ಷಗಳಲ್ಲಿ ಚುನಾವಣೆ ನಡೆದಿದ್ದು 2010 ಮತ್ತು 2015ರಲ್ಲಿ ಮಾತ್ರ. ಚುನಾಯಿತ ಕೌನ್ಸಿಲ್‌ನ ಅವಧಿ 2020ರ ಸೆಪ್ಟೆಂಬರ್‌ನಲ್ಲೇ ಕೊನೆಗೊಂಡರೂ ಮತ್ತೆ ಚುನಾವಣೆ ನಡೆಯಲಿಲ್ಲ. ಅಧಿಕಾರಿಗಳೇ ಆಡಳಿತ ಯಂತ್ರವನ್ನು ಮುನ್ನಡೆಸಿದರು. ಆಡಳಿತದ ಪುನರ್‌ರಚನೆ, ವಾರ್ಡ್ ವಿಂಗಡಣೆಯ ನೆಪವೊಡ್ಡಿ ಇದುವರೆಗೆ ಅಧಿಕಾರದಲ್ಲಿದ್ದ ಸರ್ಕಾರಗಳು ಚುನಾವಣೆಯನ್ನು ಮುಂದೂಡುತ್ತಲೇ ಬಂದವು. ಈಗ ಜಿಬಿಎ ಅಸ್ತಿತ್ವಕ್ಕೆ ಬಂದಿದೆ. ಸಕಾಲದಲ್ಲಿ ಚುನಾವಣೆ ನಡೆಸದಿರುವ ಕಾರಣ ಸುಪ್ರೀಂ ಕೋರ್ಟ್‌ನಿಂದ ತಿವಿಸಿಕೊಂಡಿರುವ ರಾಜ್ಯ ಸರ್ಕಾರ, ಕಾಲಮಿತಿಯಲ್ಲಿ ಚುನಾವಣೆ ನಡೆಸುವುದಾಗಿ ಕೋರ್ಟ್‌ಗೆ ಪ್ರಮಾಣಪತ್ರವನ್ನು ಸಲ್ಲಿಸಿದೆ. ಸ್ಥಳೀಯ ಸಂಸ್ಥೆಗಳಿಗೆ ಸಕಾಲದಲ್ಲಿ ಚುನಾವಣೆ ನಡೆಸುವುದರ ಅಗತ್ಯವನ್ನು ತನ್ನ ತೀರ್ಪುಗಳಲ್ಲಿ ಢಾಳಾಗಿ ಎತ್ತಿತೋರಿರುವ ಕೋರ್ಟ್, ಚುನಾವಣೆ ನಡೆಸಲು ಯಾವ ನೆಪಗಳೂ ಅಡ್ಡಿಯಾಗುವಂತಿಲ್ಲ ಎಂದು ತಾಕೀತು ಮಾಡಿದೆ. ಬೆಂಗಳೂರಿನ ನಾಗರಿಕರಿಗೆ ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಅವಕಾಶವನ್ನು ಮುಂದಕ್ಕೆ ತಳ್ಳುತ್ತಾ ಬಂದಿರುವ ರಾಜ್ಯ ಸರ್ಕಾರವು ಅವರ ಹಕ್ಕುಗಳನ್ನು ಹತ್ತಿಕ್ಕುವ ಕೆಲಸ ಮಾಡಿದೆ.

ಬೆಂಗಳೂರಿನಲ್ಲೀಗ ಹೊಸ ಸ್ಥಳೀಯ ಆಡಳಿತ ವ್ಯವಸ್ಥೆ ಜಾರಿಗೆ ಬಂದಿದೆ. ನಗರದ ಐದೂ ಪಾಲಿಕೆಗಳಿಗೆ ಕಾಲಮಿತಿಯಲ್ಲಿ ಚುನಾವಣೆ ನಡೆಸುವ ಗುರುತರ ಹೊಣೆ ರಾಜ್ಯ ಸರ್ಕಾರದ ಮೇಲಿದೆ.

ಜಿಬಿಎಯ ಸ್ವರೂಪವು ಕಾಗದದಲ್ಲೇನೋ ಒಳ್ಳೆಯ ಲಕ್ಷಣಗಳನ್ನೇ ಹೊಂದಿದೆ. ಐದು ನಗರ ಪಾಲಿಕೆಗಳನ್ನಾಗಿ ವಿಭಜನೆ ಮಾಡಿದ್ದರಿಂದ ಆಡಳಿತದ ವಿಕೇಂದ್ರೀಕರಣಕ್ಕೆ ಅವಕಾಶವನ್ನು ಮಾಡಿಕೊಟ್ಟಂತಾಗಿದೆ. ರಾಜಧಾನಿಗೆ ಸೇವೆ ಒದಗಿಸುವ ಜಲಮಂಡಳಿ ಮತ್ತು ಬೆಸ್ಕಾಂ ಸಂಸ್ಥೆಗಳನ್ನು ಜಿಬಿಎ ಅಡಿಯಲ್ಲಿ ತಂದಿರುವುದು ಸಮನ್ವಯದಿಂದ ಕೆಲಸ ಮಾಡಲು ನೆರವಾಗುವಂತಹ ನಿರ್ಧಾರವಾಗಿದೆ. ಈ ವ್ಯವಸ್ಥೆಯಲ್ಲಿ ಕೆಲವು ಲೋಪಗಳೂ ಇವೆ. ಮುಖ್ಯಮಂತ್ರಿಯೇ ಛಾಯಾ ಮೇಯರ್ ಆಗಿರುವಂತಹ ವ್ಯವಸ್ಥೆಯನ್ನು ಜಿಬಿಎ ಹೊಂದಿದೆ. ಮುಖ್ಯಮಂತ್ರಿ ನೇತೃತ್ವದ ಕೇಂದ್ರೀಕೃತ ಪ್ರಾಧಿಕಾರದಿಂದಾಗಿ ಮೇಯರ್‌ಗಳು ಮತ್ತು ಪಾಲಿಕೆ ಸದಸ್ಯರು ಸ್ವತಂತ್ರವಾಗಿ ನಿರ್ಧಾರ ಕೈಗೊಳ್ಳಲಾಗದೆ ಅಲಂಕಾರಿಕ ವ್ಯಕ್ತಿಗಳಾಗಿ ಉಳಿಯುವ ಅಪಾಯ ಹೆಚ್ಚಾಗಿದೆ. ಸಂಸದರು ಮತ್ತು ಶಾಸಕರಿಗೆ ಸಂಸತ್ತು ಮತ್ತು ವಿಧಾನಮಂಡಲದಲ್ಲಿ ಅವರದೇ ಆದ ಜವಾಬ್ದಾರಿಗಳಿವೆ. ಅವರನ್ನು ಜಿಬಿಎಗೂ ಸದಸ್ಯರನ್ನಾಗಿ ಮಾಡಲಾಗಿದೆ. ಸ್ಥಳೀಯ ಆಡಳಿತದಲ್ಲಿ ಪಾಲಿಕೆ ಸದಸ್ಯರ ನಿರ್ಣಯಗಳು ಪ್ರಧಾನವಾಗಬೇಕೇ ಹೊರತು ಜಿಬಿಎಯಲ್ಲಿ ಸ್ಥಾನ ಪಡೆದಿರುವ ಸಂಸದರು ಮತ್ತು ಶಾಸಕರ ಒಲವು–ನಿಲುವುಗಳಲ್ಲ.

ಬಹುತೇಕ ಶಾಸಕರಿಗೆ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸುವುದೆಂದರೆ ಅಪಥ್ಯ ಎನ್ನುವುದು ಗುಟ್ಟಿನ ಸಂಗತಿ ಏನಲ್ಲ. ಚುನಾಯಿತ ಕೌನ್ಸಿಲ್ ಅಸ್ತಿತ್ವದಲ್ಲಿದ್ದರೆ ಅಭಿವೃದ್ಧಿ ಯೋಜನೆಗಳು ಹಾಗೂ ಕಾಮಗಾರಿಗಳಿಗೆ ಸಂಬಂಧಿಸಿದ ನಿರ್ಧಾರಗಳಲ್ಲಿ ಸಂಪೂರ್ಣ ನಿಯಂತ್ರಣ ಸಾಧಿಸಲು ಸಾಧ್ಯವಿಲ್ಲ ಎನ್ನುವುದು ಅವರಿಗೆ ಗೊತ್ತು. ಆದರೆ, ಪ್ರಜಾಪ್ರಭುತ್ವ ಎಂದರೆ ಅಧಿಕಾರ ಹಂಚಿಕೆಯೇ ಹೊರತು ಅದನ್ನು ಹಿಡಿದಿಟ್ಟುಕೊಳ್ಳುವುದಲ್ಲ. ಸ್ಥಳೀಯ ಆಡಳಿತವು ರಾಜಕೀಯ ಅನುಕೂಲತೆಯೊಂದಿಗೆ ವಿತರಿಸಬಹುದಾದ ಸವಲತ್ತು ಕೂಡ ಅಲ್ಲ. ಅದೊಂದು ಸಾಂವಿಧಾನಿಕ ಹಕ್ಕು ಮತ್ತು ಪ್ರಜಾಪ್ರಭುತ್ವದ ತಳಪಾಯವಾಗಿದೆ. ಬೆಂಗಳೂರಿನ ನಾಗರಿಕರಿಗೆ ಬೇಕಿರುವುದು ತಮ್ಮನ್ನು ಸಮರ್ಥವಾಗಿ ಪ್ರತಿನಿಧಿಸುವ ಪಾರದರ್ಶಕ, ಜವಾಬ್ದಾರಿಯಿಂದ ಕೂಡಿದ ಮತ್ತು ಉತ್ತರದಾಯಿತ್ವವನ್ನು ಹೊಂದಿದ ಚುನಾಯಿತ ಕೌನ್ಸಿಲ್ ಹೊರತು ಅಧಿಕಾರಿಗಳಿಂದ ನಡೆಸಲಾಗುತ್ತಿರುವ ಆಡಳಿತವಲ್ಲ. ರಾಜ್ಯ ಸರ್ಕಾರ ಸಾಧ್ಯವಾದಷ್ಟು ಬೇಗ ಬೆಂಗಳೂರಿನ ನಗರ ಪಾಲಿಕೆಗಳಿಗೆ ಚುನಾವಣೆಯನ್ನು ಘೋಷಿಸಬೇಕು ಮತ್ತು ಸಂವಿಧಾನದ ಆಶಯವನ್ನು ಗೌರವಿಸಬೇಕು. ಕೋರ್ಟ್‌ಗೆ ಸಲ್ಲಿಸಿರುವ ಪ್ರಮಾಣಪತ್ರವನ್ನೂ ಗಮನದಲ್ಲಿರಿಸಿಕೊಳ್ಳಬೇಕು. ಜಾಗತಿಕ ಮಟ್ಟದಲ್ಲಿ ದೊಡ್ಡದಾಗಿ ಬೆಳೆಯುವ ಹಂಬಲದ ಬೆಂಗಳೂರಿನಲ್ಲಿ ಬಹುಕಾಲದವರೆಗೆ ಪ್ರಜಾಪ್ರಭುತ್ವ ವ್ಯವಸ್ಥೆಯ ಅನುಪಸ್ಥಿತಿ ಒಳ್ಳೆಯದಲ್ಲ.

ಚುರುಮುರಿ

ಗುರುವಿಗೆ ಗೌರವ ಕ್ಷೀಣಿಸುತ್ತಿದೆಯೆ?

ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

> ಗೌರವಯುತ ಬದುಕು ಮತ್ತು ಪರಿಸರವನ್ನು ಅಧ್ಯಾಪಕರಿಗೆ ಒದಗಿಸದೆ ಅಧ್ಯಾಪನದಿಂದ ಅತ್ಯುತ್ತಮ ಫಲ ನಿರೀಕ್ಷಿಸಲಾಗದು. ಗೌರವವೂ ಇಲ್ಲದೆ, ಸೂಕ್ತ ಸಂಭಾವನೆಯೂ ಇಲ್ಲದೆ ದುಡಿಯುತ್ತಿರುವ ಅತಿಥಿ ಅಧ್ಯಾಪಕರು, ಈ ಹೊತ್ತಿನ ಶಿಕ್ಷಣ ಕ್ಷೇತ್ರದ ಸ್ಥಿತಿ ಹಾಗೂ ಶಿಕ್ಷಕರ ಬಗೆಗಿನ ಸಮಾಜದ ಮನಃಸ್ಥಿತಿಯನ್ನು ಸಂಕೇತಿಸುವಂತೆ ಇದ್ದಾರೆ.

ಶಿಕ್ಷಣ ಎಲ್ಲ ಜ್ಞಾನ ಶಾಖೆಗಳ ತಾಯಿ. ತಾಯಿಯೇ ದುರ್ಬಲಳಾದರೆ ಯಾವುದೂ ಸಶಕ್ತವಾಗಿ ಉಳಿಯಲು ಸಾಧ್ಯವಿಲ್ಲ. ಈ ಬಗ್ಗೆ ಸುಪ್ರೀಂ ಕೋರ್ಟ್ ಇತ್ತೀಚೆಗೆ ಹೀಗೆ ಹೇಳಿದೆ: ‘ಅಧ್ಯಾಪಕರನ್ನು ಗೌರವದಿಂದ ನಡೆಸಿಕೊಳ್ಳದೆ ಇದ್ದರೆ ಅಥವಾ ಗೌರವಯುತ ವೇತನ ನೀಡದಿದ್ದರೆ ಅದು ದೇಶವು ಜ್ಞಾನಕ್ಕೆ ನೀಡುವ ಮೌಲ್ಯವನ್ನು ಕಡಿಮೆಗೊಳಿಸಿದಂತೆ ಆಗುತ್ತದೆ; ಬೌದ್ಧಿಕ ಬಂಡವಾಳ ನಿರ್ಮಿಸುವ ಜವಾಬ್ದಾರಿ ಹೊಂದಿರುವವರ ಪ್ರೇರಣೆಯನ್ನೂ ಹಾಳುಗೆಡವುತ್ತದೆ’.

ಅಧ್ಯಾಪಕರ ಗೌರವದ ವಿಚಾರವನ್ನು ಪ್ರಸ್ತಾಪಿಸಿದ ತಕ್ಷಣ, ‘ಅಧ್ಯಾಪಕರು ಸರಿಯಿಲ್ಲ. ಅಧ್ಯಾಪಕರ ಲೈಂಗಿಕ ದೌರ್ಜನ್ಯ’ ಇತ್ಯಾದಿ ಆರೋಪಗಳು ಪ್ರತಿಕ್ರಿಯೆಯಾಗಿ ಬರುತ್ತವೆ. ಆರೋಪಗಳು ಅಧ್ಯಾಪಕರಿಗಷ್ಟೇ ಸೀಮಿತ ಅಲ್ಲ; ರಾಜಕಾರಣಿಗಳು, ಅಧಿಕಾರಿಗಳು, ಪತ್ರಕರ್ತರು ಸೇರಿದಂತೆ ಯಾವುದೇ ವೃತ್ತಿಗೆ ಸಂಬಂಧಿಸಿದವರ ಸಮಸ್ಯೆಯ ವಿಚಾರವನ್ನು ಪ್ರಸ್ತಾಪಿಸಿದ ತಕ್ಷಣ ವಿಚಾರದ ಬಗ್ಗೆ ಗಮನ ಕೊಡದೆ, ‘ಅವರು ಸರಿಯಿಲ್ಲ’ ಎನ್ನುವುದು ಸಮಾಜದ ಮಾನಸಿಕತೆಯಾಗಿದೆ. ‘ಸರಿ ಇಲ್ಲ’ ಎಂದು ಹೇಳಿಬಿಟ್ಟರೆ ಆಮೇಲೆ ಆ ಸಮಸ್ಯೆಗೆ ಸ್ಪಂದಿಸುವ ಅಗತ್ಯ ಇರುವುದಿಲ್ಲ. ಇದು ಮನೋವೈಜ್ಞಾನಿಕ ಪಲಾಯನ ವಾದ. ‘ಸರಿ ಇಲ್ಲ’ ಎಂದು ವಿಷಯವನ್ನು ನಿರಾಕರಿಸದೆ ಇದ್ದಲ್ಲಿ, ಆ ವಿಷಯಕ್ಕೆ ಸ್ಪಂದಿಸಿ ಯೋಚಿಸುವ ಅವಶ್ಯಕತೆಯಾದರೂ ಇರುತ್ತದೆ.

ಯಾವುದೇ ವೃತ್ತಿಯಲ್ಲಾದರೂ ‘ಸರಿ ಇಲ್ಲದವರು’ ಒಂದಷ್ಟು ಜನ ಸಾರ್ವಕಾಲಿಕವಾಗಿ ಇರುತ್ತಾರೆ. ‘ಸರಿ ಇಲ್ಲ’ ಎಂದು ಗೊತ್ತಾದ ಮೇಲೆ ಯಾಕೆ ಸುಮ್ಮನಿರುತ್ತಾರೆ, ಅಂಥವರನ್ನು ವಜಾಗೊಳಿಸಲು ಏನಾದರೂ ಚಾಲನೆ ಕೊಡಬೇಕಲ್ಲವೆ ಎನ್ನುವ ಪ್ರಶ್ನೆ ಇದ್ದೇ ಇದೆ. ಆ ಪ್ರಶ್ನೆಯನ್ನು ಬದಿಗಿರಿಸಿದಾಗಲೂ ‘ಸರಿ ಇಲ್ಲ’ದವರನ್ನು ಆಧರಿಸಿದ ಚಿಂತನೆಯನ್ನು ಸರಿ ಇರುವ ಎಲ್ಲರಿಗೂ ಅನ್ವಯಿಸುವುದು ವೈಯಕ್ತಿಕವಾಗಿ ಆತ್ಮವಂಚನೆಯೂ, ಸಾರ್ವತ್ರಿಕವಾಗಿ ಸರಿ ಇರುವವರ ಕುರಿತ ತಿರಸ್ಕಾರವೂ ಆಗಿರುತ್ತದೆ.

ಶೈಕ್ಷಣಿಕ ಪ್ರಕ್ರಿಯೆ ಚೆನ್ನಾಗಿ ನಡೆಯಬೇಕಾದರೆ ಅಧ್ಯಾಪಕರು ಗೌರವಯುತವಾದ ಸ್ಥಿತಿಯಲ್ಲಿ ಇರಬೇಕು ಎನ್ನುವುದು ಸಾಮಾನ್ಯ ಜ್ಞಾನಕ್ಕೆ ಅರ್ಥವಾಗುವ ವಿಷಯ. ಗೌರವಯುತವಾದ ಸ್ಥಿತಿ ಎಂದರೆ ಅಧ್ಯಾಪಕರ ಮಾತಿಗೆ ಗೌರವ ಕೊಡುವುದು ಎಂಬ ಸಂಕುಚಿತ ಅರ್ಥವಲ್ಲ. ಕುಟುಂಬವನ್ನು ತೃಪ್ತಿಕರವಾಗಿ ನಿರ್ವಹಿಸಲು ಬೇಕಾದಷ್ಟು ಆದಾಯ, ವೃತ್ತಿಯನ್ನು ಸಮರ್ಪಕವಾಗಿ ನಿರ್ವಹಿಸಲು ಬೇಕಾದ ಔದ್ಯೋಗಿಕ ಪರಿಸರ ದೊರೆತಾಗ ಅದು ಗೌರವಯುತ ಸ್ಥಿತಿಯಾಗುತ್ತದೆ. ಆದರೆ, ಒಟ್ಟಂದದಲ್ಲಿ ನಮ್ಮಲ್ಲಿ ಅಧ್ಯಾಪಕರ ಸ್ಥಿತಿಗತಿಗಳು ಹೇಗಿವೆ?

ಸರ್ಕಾರದ ಅಧೀನದಲ್ಲಿರುವ ಶಾಲಾ–ಕಾಲೇಜುಗಳಲ್ಲಿ ಕಾಯಂ ಸಿಬ್ಬಂದಿಯಾಗಿರುವ ಅಧ್ಯಾಪಕರಿಗೆ ಗೌರವಯುತ ವೇತನವೇ ಸಿಗುತ್ತಿದೆ. ಆದರೆ, ಸರ್ಕಾರಿ ಶಾಲಾ–ಕಾಲೇಜುಗಳಲ್ಲಿ ಕಾಯಂ ಸಿಬ್ಬಂದಿಯಾಗಿರುವ ಅಧ್ಯಾಪಕರ ಸಂಖ್ಯೆಗಿಂತ, ಸರ್ಕಾರಿ ಶಾಲಾ–ಕಾಲೇಜುಗಳಲ್ಲೆ ಅತಿಥಿ ಅಧ್ಯಾಪಕರು, ಹೊರಗುತ್ತಿಗೆ ಅಧ್ಯಾಪಕರಾಗಿರುವವರು ಮತ್ತು ಖಾಸಗಿ ಶಾಲಾ–ಕಾಲೇಜುಗಳಲ್ಲಿರುವ ಅಧ್ಯಾಪಕರ ಒಟ್ಟು ಸಂಖ್ಯೆ ಜಾಸ್ತಿ ಇದೆ. ಸರ್ಕಾರಿ ಸಂಸ್ಥೆಗಳು ಮುಚ್ಚುತ್ತಾ ಹೋದ ಹಾಗೆ, ಖಾಸಗಿ ಸಂಸ್ಥೆಗಳ ಪಾಲುದಾರಿಕೆ ಇನ್ನಷ್ಟು ಜಾಸ್ತಿಯಾಗಲಿದೆ. ಶಿಕ್ಷಣ ವ್ಯವಸ್ಥೆಯ ಬೃಹತ್ ಸಂಪನ್ಮೂಲವಾಗಿರುವ ಕಾಯಂ ಅಲ್ಲದ ಅಧ್ಯಾಪಕರ ವಿಷಯಗಳು ಸಾರ್ವಜನಿಕ ಮಹತ್ವವನ್ನು ಪಡೆದ ವಿಷಯಗಳೇ ಆಗಿವೆ ಎನ್ನುವುದನ್ನು ಒಪ್ಪಿಕೊಳ್ಳಲು ಮೊದಲು ಸಾಧ್ಯವಾಗಬೇಕು. ಕಾಯಂ ಅಲ್ಲದ ಸಿಬ್ಬಂದಿಯ ಸ್ಥಿತಿಗತಿಗಳ ಬಗ್ಗೆ ವ್ಯಾಪಕ ಅಧ್ಯಯನವೇನೂ ನಡೆದಿಲ್ಲ. ಈ ಅಧ್ಯಯನ ಇವತ್ತಿನ ತುರ್ತು ಅಗತ್ಯ.

ಕಾಯಂ ಅಲ್ಲದ ಸಿಬ್ಬಂದಿ ಸದಾ ಉದ್ಯೋಗವನ್ನು ಕಳೆದುಕೊಳ್ಳುವ ಭೀತಿಯಲ್ಲಿರುತ್ತಾರೆ. ಉದ್ಯೋಗ ಕಳೆದುಕೊಳ್ಳಲು ಅವರ ಅದಕ್ಷತೆ ಅಥವಾ ದುರ್ನಡತೆಗಳೇನೂ ಕಾರಣವಾಗಬೇಕಾಗಿಲ್ಲ. ಖಾಲಿ ಇರುವ ಹುದ್ದೆಯ ಸ್ಥಳಕ್ಕೆ ಒಬ್ಬ ಕಾಯಂ ಸಿಬ್ಬಂದಿ ವರ್ಗಾವಣೆಯಾಗಿ ಬಂದರೆ ಸಾಕು, ಅವರು ಎಂಥ ದಕ್ಷ ಅಧ್ಯಾಪಕರೇ ಆಗಿದ್ದರೂ ಉದ್ಯೋಗ ಕಳೆದುಕೊಳ್ಳುತ್ತಾರೆ. ಎರಡನೆಯದಾಗಿ, ಕಾಯಂ ಸಿಬ್ಬಂದಿ ಮತ್ತು ಕಾಯಂ ಅಲ್ಲದ ಸಿಬ್ಬಂದಿ ಒಟ್ಟೊಟ್ಟಿಗೇ ಕೆಲಸ ಮಾಡುವಾಗ ಅತೀ ಕಡಿಮೆ ವೇತನ ಪಡೆಯುವವರಿಗೆ ಹೆಚ್ಚು ಕೆಲಸದ ಹೊರೆಯನ್ನು ಕೊಡಲಾಗುತ್ತದೆ. ಏಕೆಂದರೆ ಅವರು ಕಾಯಂ ಅಲ್ಲ! ಹೇಳಿದ್ದನ್ನು ಮಾಡದಿದ್ದರೆ ಅವರನ್ನು ಕೆಲಸದಿಂದ ತೆಗೆಯಬಹುದು. ಇದು ಅಧ್ಯಾಪಕರನ್ನು ಗೌರವಯುತವಾಗಿ ನಡೆಸಿಕೊಳ್ಳುವ ವಿಧಾನವಲ್ಲ. ಕಾಯಂ ಸಿಬ್ಬಂದಿ ಮತ್ತು ಕಾಯಂ ಅಲ್ಲದ ಸಿಬ್ಬಂದಿ ಎನ್ನುವುದು ಅವರವರ ಆಡಳಿತಾತ್ಮಕ ಸ್ಥಿತಿಯನ್ನಷ್ಟೇ ಸೂಚಿಸುತ್ತದೆಯೇ ಹೊರತು ಅವರ ಸ್ಥಾನಮಾನದ ವ್ಯತ್ಯಾಸವನ್ನಲ್ಲ. ಏಕೆಂದರೆ ವೃತ್ತಿಯನ್ನು ಇಬ್ಬರೂ ಸಮಾನವಾಗಿಯೇ ನಿರ್ವಹಿಸಬೇಕು. ಸಮಾನ ವೃತ್ತಿಗೆ ಸಮಾನ ವೇತನವಿಲ್ಲ, ಸಮಾನ ಗೌರವವೂ ಇಲ್ಲ ಎನ್ನುವುದು ‘ಮೌಲ್ಯ’ಗಳನ್ನು ಪ್ರತಿನಿಧಿಸುವ ರೀತಿಯಲ್ಲಿ ಕಾಣಬೇಕಾದ ಶಿಕ್ಷಣ ವ್ಯವಸ್ಥೆಯಲ್ಲಿ ಅನಪೇಕ್ಷಣೀಯ ಸ್ಥಿತಿಯಾಗಿದೆ.

ಕೆಲವು ಖಾಸಗಿ ಶಾಲಾ–ಕಾಲೇಜುಗಳು ಅಧ್ಯಾಪಕರಿಗೆ ಒಳ್ಳೆಯ ವೇತನ ಕೊಡುತ್ತಿವೆ. ಕೆಲವೆಡೆಗಳಲ್ಲಿ ಆಯ್ದ ಕೆಲವು ಪಠ್ಯಗಳ ಬೋಧಕರಿಗೆ ಸರ್ಕಾರ ಕೊಡುವುದಕ್ಕಿಂತಲೂ ಹೆಚ್ಚಿನ ವೇತನ ಕೊಡುತ್ತಾರೆ. ಆದರೆ, ಇಂಥ ಖಾಸಗಿ ಸಂಸ್ಥೆಗಳು ಅತೀ ಕಡಿಮೆ. ಇನ್ನೂ ಕೆಲವು ಆಡಳಿತ ಮಂಡಳಿಗಳ ವಿಷಯಕ್ಕೆ ಬಂದರೆ, ಆಡಳಿತ ಮಂಡಳಿಯೇ ಹಣಕಾಸು ಬಿಕ್ಕಟ್ಟನ್ನು ಎದುರಿಸುತ್ತಾ ಶಾಲೆಗಳನ್ನು ನಿಭಾಯಿಸುತ್ತಿರುತ್ತವೆ. ಅಧ್ಯಾಪಕರಿಗೆ ಗೌರವಯುತವಾದ ವೇತನ ಕೊಡಲು ಅವುಗಳಿಗೇ ಸಾಧ್ಯವಾಗುವುದಿಲ್ಲ. ಆದರೆ, ಖಾಸಗಿ ಸಂಸ್ಥೆಗಳಲ್ಲಿ ಹೆಚ್ಚಿನ ಸಂಸ್ಥೆಗಳು ಸಮಾರಂಭ, ಕಟ್ಟಡಗಳಿಗೆಲ್ಲ ಖರ್ಚು ಮಾಡುತ್ತವೆ. ಅಧ್ಯಾಪಕರಿಗೆ ವೇತನ ಕೊಡುವ ವಿಷಯಕ್ಕೆ ಬಂದಾಗ ಜಿಪುಣತನ ತೋರಿಸುತ್ತವೆ.

ಈ ಎಲ್ಲ ಅಂಶಗಳ ಹಿನ್ನೆಲೆಯಲ್ಲಿ ಅಧ್ಯಾಪಕರಿಗೆ ತೃಪ್ತಿಕರವಾಗಿ ಕುಟುಂಬ ನಿರ್ವಹಣೆ ಮಾಡಲು ಸಾಧ್ಯವಾಗುವ ಮಟ್ಟಿನ ಸಾಮಾನ್ಯ ವೇತನ ಮಾನದಂಡವನ್ನು ಅನುಷ್ಠಾನಕ್ಕೆ ತರಬೇಕಾಗಿದೆ. ಕನಿಷ್ಠ ವೇತನದ ಮಾನದಂಡ ಇದ್ದರೆ ಸಾಲುವುದಿಲ್ಲ. ಅದು ಅನುಷ್ಠಾನಕ್ಕೆ ಬರಬೇಕಾದ್ದು ಮುಖ್ಯ. ಅಧ್ಯಾಪಕರದ್ದು ವೃತ್ತಿ ಆಗಿರುವುದರಿಂದ ಕಾರ್ಮಿಕ ಕಾಯ್ದೆ ಅನ್ವಯವಾಗುವುದಿಲ್ಲ. ಆದ್ದರಿಂದ ಕಾರ್ಮಿಕ ಕಾಯ್ದೆಯ ಅನುಸಾರ ವೇತನ ಕೊಡದೆ ಇರಲು ಅವಕಾಶವಿದೆ ಎಂಬ ವಿಚಿತ್ರ ತರ್ಕ ಇರುತ್ತದೆ. ಅಧ್ಯಾಪಕರಿಗೆ ಕಾರ್ಮಿಕ ಕಾಯ್ದೆ ಅನ್ವಯ ಆಗದೆ ಇರುವುದು ಸರಿ. ಆದರೆ, ಕಾರ್ಮಿಕರಿಗೆ ಅಂಗಿ, ಪ್ಯಾಂಟು, ಸೀರೆ, ರವಿಕೆ ಹೊಲಿದು ಕೊಡಲು ದರ್ಜಿ ತೆಗೆದುಕೊಳ್ಳುವ ಮೊತ್ತದಲ್ಲಿ ವ್ಯತ್ಯಾಸವಾಗುತ್ತದೆಯೇ? ಅವರಿಗೆ ಕುಟುಂಬ ನಿರ್ವಹಣೆಗೆ ತಕ್ಕಷ್ಟು ವೇತನ ಕೊಡಬೇಕು ಎನ್ನುವುದು ಸಾಮಾನ್ಯ ಜ್ಞಾನ.

ಖಾಸಗಿ ಶಾಲಾ–ಕಾಲೇಜುಗಳಿಗೆ ಅವುಗಳದೇ ಸಂಘಟನೆಗಳಿವೆ. ಆಡಳಿತ ಮಂಡಳಿಗಳ ಸಂಘಟನೆ ಸಾಮೂಹಿಕವಾಗಿ ಅಧ್ಯಾಪಕರಿಗೆ ಗೌರವಾನ್ವಿತ ವೇತನವನ್ನು ನಿರ್ಧರಿಸಿ ಅನುಷ್ಠಾನಗೊಳಿಸಬೇಕು. ಇದೇ ಕೆಲಸವನ್ನು ಸರ್ಕಾರ ಅತಿಥಿ ಅಧ್ಯಾಪಕರು, ಹೊರಗುತ್ತಿಗೆ ಅಧ್ಯಾಪಕರ ವಿಚಾರದಲ್ಲಿ ಮಾಡಬೇಕಾಗಿದೆ. ಖಾಸಗಿ ಆಡಳಿತ ಮಂಡಳಿಗಳೇ ಆರ್ಥಿಕವಾಗಿ ದುರ್ಬಲವಾಗಿದ್ದಾಗ ಅಂತಹ ಶಾಲೆಗಳನ್ನು ಖಾಸಗಿ ಆಡಳಿತ ಮಂಡಳಿಗಳ ಒಕ್ಕೂಟ ತನ್ನ ಮಧ್ಯಪ್ರವೇಶದ ಮೂಲಕ ನಿಭಾಯಿಸಲು ಸಾಧ್ಯವಾಗಬೇಕು. ಅಧ್ಯಾಪಕರಿಗೆ ಉದ್ಯೋಗದ ಭದ್ರತೆ ಒದಗಿಸಬೇಕು. ಅತಿಥಿ ಅಧ್ಯಾಪಕರನ್ನು, ಹೊರಗುತ್ತಿಗೆ ಅಧ್ಯಾಪಕರನ್ನು, ಖಾಸಗಿ ಸಂಸ್ಥೆಗಳಲ್ಲಿನ ಅಧ್ಯಾಪಕರನ್ನು ಸೂಕ್ತ ಕಾರಣವಿಲ್ಲದೆ ತೆಗೆಯುವ ಪದ್ಧತಿಯನ್ನು ನಿಲ್ಲಿಸಲು ಸೂಕ್ತ ಕಾನೂನು ರಚನೆ ಆಗಬೇಕಾಗಿದೆ.

ಅಧ್ಯಾಪಕರ ಗೌರವದ ಎರಡನೆಯ ಭಾಗದಲ್ಲಿ ಔದ್ಯೋಗಿಕ ಪರಿಸರ ಗೌರವಾನ್ವಿತವಾಗಿರುವ ಹಾಗೆ ನೋಡಿಕೊಳ್ಳುವುದು ಮುಖ್ಯವಾಗಿದೆ. ವಕೀಲರು ಮತ್ತು ವೈದ್ಯರ ಹಾಗೆ ಅಧ್ಯಾಪಕರದ್ದೂ ವೃತ್ತಿ ಎಂದ ಮೇಲೆ ಅಲ್ಲಿ ವೃತ್ತಿ ಪರಿಣತಿ ಇರುತ್ತದೆ. ಅಂದರೆ, ವಿದ್ಯಾರ್ಥಿಗೆ ಯಾವ ರೀತಿ ಬೋಧಿಸಬೇಕು, ಶೈಕ್ಷಣಿಕ ಕಾರ್ಯಕ್ರಮಗಳನ್ನು ಹೇಗೆ ರಚಿಸಬೇಕು, ಎಂಬಿತ್ಯಾದಿ ವಿಷಯಗಳನ್ನು ಸಂಬಂಧಪಟ್ಟ ಅಧ್ಯಾಪಕರೇ ನಿರ್ಧರಿಸಲು ಅವರಿಗೆ ಸ್ವಾತಂತ್ರ್ಯವಿರಬೇಕು. ಸರ್ಕಾರಿ ಶಾಲೆಗಳಿಗಾದರೆ, ಎಡೆಬಿಡದೆ ಅಧ್ಯಾಪಕರಿಗೆ ಪ್ರತಿಯೊಂದನ್ನೂ ಹೀಗೇ ಮಾಡಬೇಕು ಎಂದು ಆದೇಶ ಹೊರಡಿಸುತ್ತಾ ಇರುವುದು, ಖಾಸಗಿ ಶಾಲೆಗಳಾದರೆ ವಿದ್ಯಾರ್ಥಿಗಳ ನೋಟ್‌ಬುಕ್‌ಗಳನ್ನು ಕೂಡ ಹೀಗೆಯೇ ಪರಿಶೀಲಿಸಬೇಕು ಎನ್ನುವಷ್ಟು ಅತಿಯಾಗಿ ಕಲಿಕಾ ಪ್ರಕ್ರಿಯೆಯಲ್ಲಿ ಅಧ್ಯಾಪಕರ ಸ್ವಾತಂತ್ರ್ಯವನ್ನು ಆಡಳಿತ ಮಂಡಳಿಗಳು ತೊಡೆದು ಹಾಕುತ್ತಿರುವುದು ಕಾಣಿಸುತ್ತಿದೆ. ಇದರಿಂದ ಅಧ್ಯಾಪಕರ ಔದ್ಯೋಗಿಕ ಪರಿಸರವೇ ಅಗೌರವಯುತ ಪರಿಸರವಾಗಿ ಮಾರ್ಪಡುತ್ತದೆ. ಸರ್ಕಾರದ್ದಿರಲಿ, ಖಾಸಗಿ ಇರಲಿ, ಶೈಕ್ಷಣಿಕ ಆಡಳಿತವು ಅಧ್ಯಾಪಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ವರ್ತಿಸಬೇಕೇ ಹೊರತು ಜೀತಗಾರರ ಹಾಗೆ ನಡೆಸಿಕೊಳ್ಳಬಾರದು.

ಸೆಪ್ಟೆಂಬರ್ ಐದರ ಅಧ್ಯಾಪಕರ ದಿನಾಚರಣೆಯನ್ನು ಹೆಚ್ಚು ವ್ಯಾಪಕಗೊಳಿಸುವುದರಿಂದ ಅಥವಾ ಇನ್ನಷ್ಟು ಭವ್ಯವಾಗಿಸುವುದರಿಂದ ಇದೆಲ್ಲ ಸಾಧ್ಯವಾಗುವುದಿಲ್ಲ. ಶಿಕ್ಷಣ, ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ಬಗ್ಗೆ ಸಂವೇದನಾಶೀಲವಾಗಿ ಯೋಚಿಸುವ ಸಾಮರ್ಥ್ಯದಿಂದ ಸಾಧ್ಯವಾಗುವ ಬದಲಾವಣೆಯಿದು. ಗೋಚರ ಅದ್ದೂರಿಯ ಜಾಗಕ್ಕೆ ಅಗೋಚರ ವಿವೇಕದ ಪ್ರವೇಶ ಆಗಬೇಕಾಗಿದೆ.

ವಾಚಕರ ವಾಣಿ

ಸಂಪನ್ಮೂಲ ಸದ್ಬಳಕೆಗೆ ಜಾಣ್ಮೆ ಬೇಕು

ಕುದುರೆಮುಖ ಗಣಿಗಾರಿಕೆ ಸ್ಥಗಿತಗೊಂಡು ಎರಡು ದಶಕವಾಗಿದೆ. ಅಲ್ಲಿನ ಸುಸಜ್ಜಿತ ಟೌನ್‌ಶಿಪ್ ಅನ್ನು ಅರಣ್ಯ ಇಲಾಖೆಗೆ ಒಪ್ಪಿಸಲು ನಿರ್ಧರಿಸಿರುವ ಬಗ್ಗೆ ವರದಿಯಾಗಿದೆ. ನಮ್ಮಲ್ಲಿ ಸಂಪನ್ಮೂಲಗಳ ಕೊರತೆಗಿಂತಲೂ ಇರುವ ಸಂಪನ್ಮೂಲಗಳನ್ನು ಸರಿಯಾಗಿ ಬಳಸಿಕೊಳ್ಳಲು ಬೇಕಾದ ಜಾಣ್ಮೆ ಮತ್ತು ಇಚ್ಛಾಶಕ್ತಿ ಕೊರತೆಗೆ ಇದು ನಿದರ್ಶನವಷ್ಟೆ. ಈಗ ಟೌನ್‌ಶಿಪ್ ನಿರ್ಜೀವ ನಗರದಂತಿದೆ. ಈ ಹಿಂದೆಯೇ ಆ ಪ್ರದೇಶವನ್ನು ಸರ್ಕಾರ ತನ್ನ ಸುಪರ್ದಿಗೆ ಪಡೆದು ಒಂದು ವಿಶ್ವವಿದ್ಯಾಲಯವನ್ನೇ ಸ್ಥಾಪಿಸಬಹುದಿತ್ತು. ವಿ.ವಿ.ಗೆ ಬೇಕಾದ ಅಗತ್ಯ ಸೌಲಭ್ಯಗಳು ಅಲ್ಲಿದ್ದವು. ಈಗಲೂ ಇವೆ. ಅಲ್ಲಿನ ಕಟ್ಟಡಗಳು, ಕ್ರೀಡಾಂಗಣ, ಚಿತ್ರಮಂದಿರ ಇತ್ಯಾದಿಯನ್ನು ನವೀಕರಿಸಿ, ಪರಿಸರದ ಅಧ್ಯಯನಕ್ಕೆ ಮೀಸಲಾದ ಮತ್ತು ಪರಿಸರ ಸಂಬಂಧಿತ ಉನ್ನತ ಮಟ್ಟದ ಸಂಶೋಧನೆ ನಡೆಸುವ ಜಾಗತಿಕಮಟ್ಟದ ಶೈಕ್ಷಣಿಕ ಸಂಸ್ಥೆಯೊಂದನ್ನು ಅಲ್ಲಿ ಬೆಳೆಸಲು ಸರ್ಕಾರ ಚಿಂತನೆ ನಡೆಸಲಿ.

ವಿ.ಎಸ್. ಶ್ರೀಧರ, ಬೆಂಗಳೂರು

ವೇತನ ನೀಡದಿರುವುದು ಶೋಷಣೆ

ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ತಾತ್ಕಾಲಿಕವಾಗಿ ದುಡಿಯುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ಕಳೆದ 15 ತಿಂಗಳಿಂದ ವೇತನ ನೀಡಿಲ್ಲ ಎಂಬ ಸುದ್ದಿ ಓದಿ ದಿಗ್ಭ್ರಮೆಯಾಯಿತು. ಕನ್ನಡದ ಅಸ್ಮಿತೆಯ ಪ್ರತೀಕವಾಗಿರುವ ಈ ವಿಶ್ವವಿದ್ಯಾಲಯದಲ್ಲಿಯೇ ಇಂಥ ಪರಿಸ್ಥಿತಿ ಉಂಟಾಗಿರುವುದು ಶೋಚನೀಯ. ಸರ್ಕಾರದಿಂದ ಅನುದಾನ ಬಿಡುಗಡೆಯಾದರೆ ವೇತನ ನೀಡಲಾಗುವುದು ಎಂಬ ಕುಲಪತಿಯವರ ಉತ್ತರ ಸ್ವೀಕಾರಾರ್ಹವಲ್ಲ. ವೇತನ ಸಮಸ್ಯೆ ಬಗೆಹರಿಸುವುದು ವಿ.ವಿ. ಆಡಳಿತದ ಹೊಣೆಯಲ್ಲವೇ? ರಾಜ್ಯದ ಬಹುತೇಕ ವಿಶ್ವವಿದ್ಯಾಲಯಗಳಲ್ಲಿ ನಿವೃತ್ತ ಉದ್ಯೋಗಿಗಳಿಗೆ ಪಿಂಚಣಿ ಪಾವತಿಗೂ ಹಣ ಇಲ್ಲದಿರುವುದು ವರದಿಯಾಗಿದೆ. ಸರ್ಕಾರ ಈ ಸಮಸ್ಯೆಯನ್ನು ಪರಿಹರಿಸಲು ಮುಂದಾಗಬೇಕಿದೆ.

ಹರೀಶ್ ಕುಮಾರ್ ಕುಡ್ತಡ್ಕ, ಮಂಗಳೂರು

ಕನ್ನಡಮ್ಮ ಧನ್ಯೆ! ಕನ್ನಡಮ್ಮ ಮಾನ್ಯೆ!

‘ಮಹಾನಗರ ಪಾಲಿಕೆ’ ಎನ್ನುವುದನ್ನು ಇಂಗ್ಲಿಷ್‌ಗೆ ತರ್ಜುಮೆ ಮಾಡಿ ‘ಗ್ರೇಟರ್ ಬೆಂಗಳೂರು ಪ್ರಾಧಿಕಾರ’ ಎಂದು ಹೊಸ ಫಲಕ ಹಾಕಲಾಗಿದೆ. ಆ ಫಲಕದ ಕೆಳಗೆ ‘ಕನ್ನಡವೇ ಉಸಿರು ಕನ್ನಡವೇ ಹಸಿರು’ ಎಂಬ ಫಲಕವಿದೆ. ಇದು ಎಷ್ಟು ಹಾಸ್ಯಾಸ್ಪದ ಅಲ್ಲವೇ? ಕನ್ನಡದಲ್ಲಿ ಪದಗಳ ಕೊರತೆಯೇ? ಇಂಥವರನ್ನು ಹೆತ್ತ ಕನ್ನಡಮ್ಮ ಧನ್ಯೆ.

ಅ.ನಾ. ರಾವ್ ಜಾದವ್, ಬೆಂಗಳೂರು

ಸಾಲದ ಹೊರೆಗೆ ಯಾರು ಹೊಣೆ?

ದೇಶದ ಆರ್ಥಿಕತೆಯು ವೇಗವಾಗಿ ಬೆಳೆಯುತ್ತಿದೆ ಎಂಬುದು ಕೇಂದ್ರ ಸರ್ಕಾರದ ಹೇಳಿಕೆ. ಇಡೀ ದೇಶದಲ್ಲಿಯೇ ತಲಾ ಆದಾಯದಲ್ಲಿ ಕರ್ನಾಟಕ ಅಗ್ರಸ್ಥಾನದಲ್ಲಿದೆ ಎನ್ನುವುದು ರಾಜ್ಯ ಸರ್ಕಾರದ ಸಮರ್ಥನೆ. ಆದರೆ, ಪ್ರತಿವರ್ಷವೂ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಾಲದ ಪ್ರಮಾಣವೂ ರಾಕೆಟ್ ವೇಗದಲ್ಲಿ ಏರಿಕೆ ಆಗುತ್ತಿದೆ. ಆದರೆ, ಜನರ ಮುಂದೆ ಈ ಸತ್ಯ ಮುಂದಿಡುವ ಧೈರ್ಯವನ್ನು ಎರಡೂ ಸರ್ಕಾರಗಳು ತೋರುತ್ತಿಲ್ಲ. ಜನರಿಗೆ ದುಡಿದು ಹಣ ಸಂಪಾದಿಸುವ ಬಗ್ಗೆ ಶಾಶ್ವತ ಯೋಜನೆಗಳನ್ನು ರೂಪಿಸಲು ಮುಂದಾಗುತ್ತಿಲ್ಲ. ಇದರಿಂದ ಜನರು ಬಡತನ ರೇಖೆಯಿಂದ ಹೊರಬರುತ್ತಿಲ್ಲ. ಆದರೆ, ರಾಜಕಾರಣಿಗಳ ಸಂಪತ್ತು ಮಾತ್ರ ಪ್ರತಿವರ್ಷ ಏರಿಕೆಯ ಪಥದಲ್ಲಿಯೇ ಸಾಗುತ್ತಿದೆ.

ಎಸ್.ಎನ್. ರಮೇಶ್, ಸಾತನೂರು

ಮಹಿಳಾ ಭವನ ನಿರ್ಮಿಸಿ

ಗ್ರಾಮೀಣ ಪ್ರದೇಶದಲ್ಲಿ ಮಹಿಳಾ ಸಂಘಗಳು ಕೌಟುಂಬಿಕ ಆರ್ಥಿಕ ಸದೃಢತೆಗೆ ಆಧಾರವಾಗಿವೆ. ಬ್ಯಾಂಕ್‌ನಿಂದ ಸಾಲ ಪಡೆದ ಸಂಘದ ಮಹಿಳೆಯರು ಜೀವನೋಪಾಯಕ್ಕೆ ಪೂರಕವಾದ ಕಸುಬು ಆರಂಭಿಸಿ ಸಬಲರಾಗುತ್ತಿದ್ದಾರೆ. ಮಕ್ಕಳ ಶಿಕ್ಷಣದ ಜತೆಗೆ ಕುಟುಂಬದ ಗೌರವ ಹೆಚ್ಚಿಸಿ, ಉತ್ತಮ ಬದುಕನ್ನು ಕಟ್ಟಿಕೊಳ್ಳುವಲ್ಲಿ ಈ ಸಂಘಗಳು ಮಹಿಳೆಯರಿಗೆ ನೆರವಾಗುತ್ತಿವೆ.

ಪ್ರತಿ ಮನೆಯ ಮಹಿಳೆ ಒಂದಲ್ಲ ಒಂದು ಸಂಘದ ಸದಸ್ಯೆಯಾಗಿದ್ದಾಳೆ. ಅದರಿಂದ ಸಿಗುವ ಸಾಲದ ನೆರವನ್ನು ಇಡೀ ಕುಟುಂಬ ಪಡೆಯುತ್ತಿದೆ. ಆದರೆ, ಸಂಘಗಳ ಸದಸ್ಯೆಯರು ಪ್ರತಿ ವಾರ ಅಥವಾ ಮಾಸಿಕ ಸಭೆ ನಡೆಸಲು ಯಾವುದೇ ನಿಗದಿತ ಸ್ಥಳಗಳಿಲ್ಲ. ಮರದ ಕೆಳಗೆ ಅಥವಾ ಮನೆಯ ಹಜಾರದಲ್ಲಿ ಸಭೆ ನಡೆಸುವಂತಾಗಿದೆ. ಸರ್ಕಾರವು ಸಮುದಾಯ ಭವನ, ಮಂದಿರ, ಚಾವಡಿ ನಿರ್ಮಾಣಕ್ಕೆ ಅನುದಾನ ನೀಡುತ್ತಿದೆ. ಮಹಿಳಾ ಸಂಘಗಳ ಭವನ ನಿರ್ಮಾಣಕ್ಕೂ ಅನುದಾನ ನೀಡಬೇಕಿದೆ.

ಅನುಪಮ ಸುರೇಶ್, ಪರಸಯ್ಯನಹುಂಡಿ

ರೈತರ ಅಸಹಾಯಕತೆ ದುರ್ಬಳಕೆ ಬೇಡ

ಹಳ್ಳಿ ಎಂದರೆ ಮೂಗು ಮುರಿಯುತ್ತಿದ್ದ ಕಾಲ ಬದಲಾಗಿದೆ. ನಗರ ಜೀವನ ಸಾಕು ಎಂದು ವಿದ್ಯಾವಂತರು ಹಳ್ಳಿಗಳತ್ತ ಮುಖ ಮಾಡುತ್ತಿದ್ದಾರೆ. ನಗರ ವಿಸ್ತಾರವಾಗುವುದು ಅನಿವಾರ್ಯವಾದರೂ, ನಾಗರಿಕರಿಗೆ ಮೂಲಸೌಕರ್ಯ ಕಲ್ಪಿಸುವಲ್ಲಿ ಸೋಲುತ್ತಿದ್ದೇವೆ. ಅಭಿವೃದ್ಧಿ ಹೆಸರಿನಲ್ಲಿ ನಿಸರ್ಗವನ್ನು ನಾಶಪಡಿಸಿ ಆರೋಗ್ಯವನ್ನು ಹಾಳು ಮಾಡಿಕೊಂಡು ಸುಸಜ್ಜಿತ ಆಸ್ಪತ್ರೆಗಳ ಮೊರೆ ಹೋಗುವುದು ಪ್ರಗತಿಯ ಸಂಕೇತವಲ್ಲ. ನಗರೀಕರಣ ಹಾಗೂ ಕೈಗಾರಿಕೀಕರಣದ ಭರದಲ್ಲಿ ಸರ್ಕಾರ ಫಲವತ್ತಾದ ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಖಾಸಗಿ ಕಂಪನಿಗಳಿಗೆ ಮಾರಾಟ ಮಾಡುತ್ತಿದೆ. ಸಣ್ಣ ರೈತರು ಭೂಸ್ವಾಧೀನದ ವಿರುದ್ಧ ಹೋರಾಟ ಮಾಡಲು ಅಸಹಾಯಕರಾಗಿದ್ದಾರೆ. ಇದನ್ನು ಆಳುವ ವರ್ಗವು ಬಂಡವಾಳ ಮಾಡಿಕೊಳ್ಳುವುದು ಸರಿಯಲ್ಲ.

ಜಿ. ಬೈರೇಗೌಡ, ನೆಲಮಂಗಲ

ಜಾಲಡಾ

ಯಶಸ್ಸು ಮತ್ತು ನಿರಂತರ ಪ್ರಯತ್ನ

ಸುತ್ತಿಗೆಯ ಕೊನೆಯ ಹೊಡೆತವು ಕಲ್ಲನ್ನು ಒಡೆಯುತ್ತದೆ. ಇದರರ್ಥ ಮೊದಲ ಹೊಡೆತವು ನಿಷ್ಪ್ರಯೋಜಕವಾಗಿದೆ ಎಂದಲ್ಲ. ಯಶಸ್ಸು ನಿರಂತರ ಪ್ರಯತ್ನದ ಫಲವಾಗಿದೆ.

ಶ್ರೀರಾಮ್ ಮೂರ್ತಿ, ‘ಫೇಸ್‌ಬುಕ್’ನಿಂದ

ಕಿಡಿನುಡಿ

ರಾಜ್ಯ ಸರ್ಕಾರ ತರಾತುರಿಯಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸಲು ಮುಂದಾಗಿದೆ. ಜಾತಿ ನಿರ್ಮೂಲನೆಯನ್ನು ಪ್ರತಿಪಾದಿಸುವವರೇ ಹೊಸ ಜಾತಿಗಳನ್ನು ಸೃಷ್ಟಿಸಿ, ಸಮಾಜದಲ್ಲಿ ಗೊಂದಲ ಸೃಷ್ಟಿಸುವ ಹುನ್ನಾರ ನಡೆಸಿದ್ದಾರೆ.

ವಿಶ್ವೇಶ್ವರ ಹೆಗಡೆ ಕಾಗೇರಿ, ಸಂಸದ

ಚುರುಮುರಿ

ಕೆಂಪೇಗೌಡರು ಬಂದರು!

● ಗುರು ಪಿ.ಎಸ್.

‘ನಾಡಪ್ರಭುಗಳೇ ತಾವು!?’ ಅಚ್ಚರಿಯಿಂದ ಎದ್ದು ಕುಳಿತರು ಬಿಬಿಎಂಪಿ ಡೆಪ್ಯುಟಿ ಕಮಿಷನರ್.

‘ಹೌದು ನಾನೇ, ಈ ಬೆಂಗಳೂರು ನಗರ ನಿರ್ಮಾಣವಾಗಿದ್ದು ನನ್ನ ಅವಧಿಯಲ್ಲೇ’ ಕೆಂಪೇಗೌಡರು ಹೇಳಿದರು.

‘ಗೊತ್ತು ಸ್ವಾಮಿ, ನನ್ನ ಕನಸಿನಲ್ಲಿ ಬರಲು ಕಾರಣ?’

‘ಏನಿಲ್ಲ, ನೀನು ಸೂಟ್ ಮೇಲೆ ಸೂಟ್ ಖರೀದಿಸುತ್ತಿದ್ದುದನ್ನ ಗಮನಿಸ್ತಿದ್ದೆ. ಕುತೂಹಲವೆನಿಸಿತು. ನೇರವಾಗಿ ಮಾತನಾಡಿಕೊಂಡು ಹೋಗೋಣ ಎಂದು ಬಂದೆ’.

‘ನೀವು ಕಟ್ಟಿದ ಬೆಂಗಳೂರನ್ನ ಈಗ ಐದು ಭಾಗ ಮಾಡಿದ್ದಾರೆ. ಅಂದ್ರೆ ಐದು ಕಾರ್ಪೊರೇಷನ್‌ಗಳು ತಲೆ ಎತ್ತಲಿವೆ. ಈಗ ಇದು ಗ್ರೇಟರ್ ಬೆಂಗಳೂರು!’

‘ಅದಕ್ಕೆ, ನಿನಗೇಕೆ ಖುಷಿ?’

‘ನಾನು ಉಪ ಆಯುಕ್ತ ಬದಲು, ಆಯುಕ್ತ ಆಗ್ತೀನಿ. ಅದೇ ಖುಷಿ’.

‘ಅದು ಸರಿ, ಎಷ್ಟೋ ಜನ ತಮ್ಮ ಹೆಸರ ಮುಂದಿನ ‘ಉಪ’ ನಾಮ ತೆಗೆಸಿಕೊಳ್ಳಲು ಕಸರತ್ತನ್ನೇ ಮಾಡುತ್ತಿದ್ದಾರೆ, ನಿನಗೆ ಕುಳಿತಲ್ಲೇ ಆ ಅದೃಷ್ಟ ಒಲಿದಿದೆ’ ನಕ್ಕರು ಗೌಡರು.

‘ನಾಡಪ್ರಭುಗಳು ಬಳಲಿದಂತೆ ಕಾಣುತ್ತಿದ್ದೀರಲ್ಲ, ನಿಮ್ಮ ಕುದುರೆಗಳೆಲ್ಲಿ?’

‘ಮೂರ್ಖ, ಈಗಲೂ ಕುದುರೆ ಮೇಲೆ ಬರಲಾಗುತ್ತದೆಯೇ? ನಾನು ಬೈಕ್‌ನಲ್ಲಿ ಬಂದೆ’.

‘ಸ್ವರ್ಗದಿಂದ ಬರುವುದು ಕಷ್ಟವಾಯಿತೇನೋ?’

‘ಸ್ವರ್ಗದಿಂದ ಬರುವುದು ಕಷ್ಟವಾಗಲಿಲ್ಲ, ಆದರೆ, ನಿಮ್ಮ ಗ್ರೇಟರ್ ಬೆಂಗಳೂರು ಪ್ರವೇಶಿಸಿದ ತಕ್ಷಣ, ಆಳೆತ್ತರದ ಗುಂಡಿಯಲ್ಲಿ ನನ್ನ ಬೈಕ್ ಎದ್ದು, ಬಿದ್ದು ಬರುವುದರಲ್ಲೇ ಸುಸ್ತಾಗಿ ಹೋಯಿತು’.

‘ಪ್ರಭುಗಳೇ, ನೀವು ಬರುವುದು ಗೊತ್ತಿದ್ದರೆ ಅಲ್ಲಲ್ಲಿ ಪ್ಯಾಚ್ ಹಾಕಿಸಿ, ಜೀರೊ ಟ್ರಾಫಿಕ್ ಮಾಡಿಸುತ್ತಿದ್ದೆ’.

‘ನಿಮ್ಮ ಬೆಂಗಳೂರು ಟ್ರಾಫಿಕ್‌ಗೆ ಎಂಥ ಹೀರೊಗಳೂ ಜೀರೊಗಳಾಗುತ್ತಾರೆ ಬಿಡು’ ಎಂದ ಕೆಂಪೇಗೌಡರು, ‘ಐದು ಕಾರ್ಪೊರೇಷನ್ ಮಾಡೋದರಿಂದ ತಕ್ಷಣದ ಒಂದು ಅನುಕೂಲ ಹೇಳು ನೋಡೋಣ’ ಎಂದರು.

‘ಟೇಬಲ್‌ಗಳ ಸಂಖ್ಯೆ ಜಾಸ್ತಿ ಆಗುತ್ತೆ ಸಾರ್’ ಎಂದು ಅಧಿಕಾರಿ ಹೇಳುತ್ತಿದ್ದಂತೆ, ಮಾಯವಾದರು ನಾಡಪ್ರಭುಗಳು!

25 ವರ್ಷಗಳ ಹಿಂದೆ

ಸೋಮವಾರ, 4-9-2000

● **ಬಡತನ ನಿರ್ಮೂಲನೆಗೆ ಕಾರ್ಯತಂಡ**

ನವದೆಹಲಿ, ಸೆಪ್ಟೆಂಬರ್ 3– ಕರ್ನಾಟಕದಲ್ಲಿ ಬಡತನ ನಿರ್ಮೂಲನೆಗಾಗಿ ಕ್ರಿಯಾಯೋಜನೆ ರೂಪಿಸುವುದಕ್ಕಾಗಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು, ರಾಜ್ಯ ಯೋಜನಾ ಮಂಡಳಿಯ ಉಪಾಧ್ಯಕ್ಷ ಜೈರಾಂ ರಮೇಶ್ ಅವರ ನೇತೃತ್ವದಲ್ಲಿ ಕಾರ್ಯತಂಡವೊಂದನ್ನು ರಚಿಸಿದ್ದಾರೆ.

ಈ ತಂಡವು ಬಡತನ ನಿರ್ಮೂಲನೆಗಾಗಿ ನಾಲ್ಕು ಪ್ರಮುಖ ವಿಷಯಗಳ ಅಧ್ಯಯನ ಮಾಡಲಿದೆ. ಬಡತನಕ್ಕೆ ಸಂಬಂಧಿಸಿದಂತೆ ಅಂತರ ಜಿಲ್ಲಾ ವ್ಯತ್ಯಾಸ. ರಾಜ್ಯದೊಳಗಿನ ವಿವಿಧ ಜಿಲ್ಲೆಗಳಲ್ಲಿನ ಸಾರ್ವಜನಿಕ ವೆಚ್ಚ. ಈಗಾಗಲೇ, ಜಾರಿಯಲ್ಲಿರುವ ಬಡತನ ನಿರ್ಮೂಲನಾ ಕಾರ್ಯಕ್ರಮಗಳ ಪರಿಣಾಮದ ಅಧ್ಯಯನ ಮತ್ತು ಕೃಷಿ ಬಿಟ್ಟು ಇತರ ಗ್ರಾಮೀಣ ಉದ್ಯೋಗ ಸಮೀಕ್ಷೆ ಇವೇ ಆ ನಾಲ್ಕು ವಿಷಯಗಳು.

75 ವರ್ಷಗಳ ಹಿಂದೆ

ಸೋಮವಾರ, 4-9-1950

● **ಹಳಿ ತಪ್ಪಿದ ‘ಕಾಶ್ಮೀರ್ ಮೇಲ್’: 20 ಪ್ರಯಾಣಿಕರು ಸಾವು**

ನವದೆಹಲಿ, ಸೆಪ್ಟೆಂಬರ್ 3– ಪೂರ್ವ ಪಂಜಾಬ್ ರೈಲ್ವೆ ವಿಭಾಗಕ್ಕೆ ಸೇರಿದ ಗುರುದಾಸ್‌ಪುರದ ಬಳಿ ಇಂದು ಮಧ್ಯಾಹ್ನ ‘ಕಾಶ್ಮೀರ್ ಮೇಲ್’ ರೈಲು ಹಳಿ ತಪ್ಪಿದ್ದು, 20 ಪ್ರಯಾಣಿಕರು ಮೃತಪಟ್ಟಿದ್ದಾರೆ. 45 ಮಂದಿ ಗಾಯಗೊಂಡಿದ್ದಾರೆ.

ಈ ರೈಲು ಪಠಾಣ್‌ಕೋಟ್‌ನಿಂದ ದೆಹಲಿಗೆ ಬರುತ್ತಿತ್ತು. ಮಧ್ಯಾಹ್ನ 2.10ಗಂಟೆಗೆ ಹಳಿ ತಪ್ಪಿದೆ. ಮೂರು ಬೋಗಿಗಳಿಗೆ ಹಾನಿಯಾಗಿದೆ. ಪರಿಹಾರ ಕಾರ್ಯಾಚರಣೆ ಹಾಗೂ ವೈದ್ಯರ ತಂಡವು ಘಟನಾ ಸ್ಥಳಕ್ಕೆ ತೆರಳಿದ್ದು, ಗಾಯಾಳುಗಳಿಗೆ ಅಗತ್ಯ ನೆರವು, ಚಿಕಿತ್ಸೆ ನೀಡುವಲ್ಲಿ ನಿರತವಾಗಿದೆ.

ಸಂಗತ

ನ್ಯಾಯಾಂಗ ಮತ್ತು ಬಯಲ ರಾಜಕೀಯ

ನ್ಯಾಯಮೂರ್ತಿ ಆಗಿದ್ದವರು ನಿವೃತ್ತಿಯ ನಂತರ ಬಹಿರಂಗ ರಾಜಕಾರಣದ ಭಾಗವಾದಾಗ ಎದುರಾಗುವ ಟೀಕೆಗಳು ಉಂಟು ಮಾಡುವ ಹಾನಿ ಅಷ್ಟಿಷ್ಟಲ್ಲ.

● ಆರ್. ಲಕ್ಷ್ಮೀನಾರಾಯಣ

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನ್ಯಾಯಾಂಗಕ್ಕೆ ಅತ್ಯಂತ ಮಹತ್ವದ ಸ್ಥಾನ. ಅದು ಭ್ರಷ್ಟ ಆಗಬಾರದೆನ್ನುವುದು ಹಾಗೂ ರಾಜಕೀಯದಿಂದ ಮುಕ್ತ ಆಗಿರಬೇಕೆಂಬುದು ಪ್ರಜಾಪ್ರಭುತ್ವ ಪ್ರೇಮಿಗಳೆಲ್ಲರ ನಿರೀಕ್ಷೆ.

ಶಾಸಕಾಂಗ ಹಾಗೂ ಕಾರ್ಯಾಂಗದ ನೈತಿಕತೆಯನ್ನು ನ್ಯಾಯಾಂಗ ಆಗಾಗ ನಿಕಷಕ್ಕೆ ಒಡ್ಡುತ್ತಲೇ ಇರುತ್ತದೆ. ಉಳಿದೆರಡು ಅಂಗಗಳು ವಾಮಮಾರ್ಗದಲ್ಲಿ ನಡೆದಾಗ, ಸಾರ್ವಜನಿಕರಿಗೆ ಉಳಿಯುವ ಏಕೈಕ ಆಶಾಕಿರಣ ನ್ಯಾಯಾಂಗ. ಆ ಕಾರಣದಿಂದಲೇ ನ್ಯಾಯಾಂಗದ ಬಗ್ಗೆ ಜನಸಾಮಾನ್ಯರಿಗೆ ಇನ್ನಿಲ್ಲದ ವಿಶ್ವಾಸ.

ನಮ್ಮದು ಪ್ರಜಾಪ್ರಭುತ್ವ ದೇಶವಾದ್ದರಿಂದ ನ್ಯಾಯಾಧೀಶರನ್ನೂ ಒಳಗೊಂಡಂತೆ ಪ್ರತಿಯೊಬ್ಬರೂ ತಮ್ಮದೇ ಆದ ರಾಜಕೀಯ ಒಲವು ನಿಲುವುಗಳನ್ನು ಹೊಂದಿರಲು ಸ್ವತಂತ್ರರಾಗಿದ್ದಾರೆ ಮತ್ತು ಸ್ವತಂತ್ರ ಅಭಿಪ್ರಾಯಗಳನ್ನು ಹೊಂದಿರುತ್ತಾರೆ ಕೂಡ. ಆದರೆ, ಅವರ ಸ್ವಂತವಾದ ರಾಜಕೀಯ ಒಲವು ನಿಲುವುಗಳು ಅವರು ನೀಡುವ ತೀರ್ಪುಗಳ ಮೇಲೆ ಪ್ರಭಾವ ಬೀರಬಾರದು. ಯಾವುದೇ ಪ್ರಕರಣ, ಅದರಲ್ಲೂ ಸಂವಿಧಾನದ ಕಲಂಗಳನ್ನು ಅರ್ಥೈಸುವಾಗ, ವಿಶ್ಲೇಷಿಸುವಾಗ ಪೂರ್ವಗ್ರಹರಹಿತವಾದ ಮನಸ್ಸಿಗೆ ವಿಶೇಷ ಮಹತ್ವವಿದೆ.

ಅಧಿಕಾರದಲ್ಲಿ ಇರುವ ಯಾವುದೋ ಒಂದು ರಾಜಕೀಯ ಪಕ್ಷ, ದೇಶದ ಹಿತದೃಷ್ಟಿಯಿಂದ ಎಂದು ಹೇಳಿ ಸಂಸತ್ತಿನಲ್ಲಿ ಮಂಡಿಸಿದ ಮಸೂದೆ ಅಂಗೀಕಾರ ಆದಾಗ, ಅದನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲು ಅವಕಾಶವಿದೆ. ಇಂಥ ಸಂದರ್ಭದಲ್ಲಿ ವಿವಾದಾಸ್ಪದ ಕಾಯ್ದೆಯ ವಿಚಾರಣೆ ನಡೆಸಿ ತೀರ್ಪು ನೀಡಬೇಕಾದ ಗುರುತರ ಹೊಣೆಯನ್ನು ನಿರ್ವಹಿಸುವ ನ್ಯಾಯಾಧೀಶರ ತೀರ್ಪನ್ನು ಅವರ ವೈಯಕ್ತಿಕ ರಾಜಕೀಯ ಒಲವು ಪ್ರಭಾವಿಸಬಾರದು ಎನ್ನುವುದು ಸಂವಿಧಾನ ಕರ್ತೃಗಳ ಆಶಯ ಮತ್ತು ದೇಶದ ಜನತೆಯ ನಿರೀಕ್ಷೆ. ಬಹುತೇಕ ಈ ನಿರೀಕ್ಷೆಗೆ ತಕ್ಕಹಾಗೆಯೇ ದೇಶದ ನ್ಯಾಯಾಂಗ ಇಲ್ಲಿಯವರೆಗೆ ನಡೆದುಕೊಂಡಿದೆ.

ಸಾಮಾನ್ಯವಾಗಿ ನ್ಯಾಯಾಧೀಶರ ಹುದ್ದೆ ನಿರ್ವಹಿಸಿದವರು ನಿವೃತ್ತಿಯ ನಂತರದಲ್ಲಿ ತಮ್ಮ ವೈಯಕ್ತಿಕ ಒಲವಿನ ಪಕ್ಷದ ನಿಲುವನ್ನು ಸಮರ್ಥಿಸುವಂತಹ ಹೇಳಿಕೆಗಳನ್ನು ನೀಡುವುದಾಗಲೀ, ರಾಜಕೀಯಪ್ರೇರಿತ ವಿಚಾರಗಳನ್ನು ಒಳಗೊಂಡ ಭಾಷಣಗಳನ್ನು ಮಾಡುವುದಾಗಲೀ ಮಾಡುತ್ತಿರಲಿಲ್ಲ. ಅವರ ರಾಜಕೀಯ ಒಲವೇನಿದ್ದರೂ ಚುನಾವಣೆಯಲ್ಲಿ ಅವರು ನೀಡುವ ರಹಸ್ಯ ಮತದಾನಕ್ಕಷ್ಟೇ ಸೀಮಿತವಾಗಿರುತ್ತಿತ್ತು. ಆದರೆ, ಈಚಿನ ವರ್ಷಗಳಲ್ಲಿ ಹಾಗಾಗುತ್ತಿಲ್ಲ. ಒಂದು ಪಕ್ಷದ ವಕ್ತಾರರಂತೆ ಕೆಲವು ನಿವೃತ್ತ ನ್ಯಾಯಾಧೀಶರು ನಡೆದುಕೊಳ್ಳುತ್ತಿರುವುದನ್ನು ನೋಡುತ್ತಿದ್ದೇವೆ. ಇದು ಆತಂಕ ಹುಟ್ಟಿಸುವ ಸಂಗತಿ.

ನ್ಯಾಯಾಧೀಶರ ನಿಷ್ಪಕ್ಷಪಾತತನದಲ್ಲಿ ಜನತೆಗೆ ಸಂದೇಹ ಉಂಟಾಗಬಾರದು ಎನ್ನುವ ಕಾರಣಕ್ಕೆ, ನ್ಯಾಯಾಧೀಶರು ತಮ್ಮ ನಿವೃತ್ತಿಯ ನಂತರದಲ್ಲಿ ಆಡಳಿತದಲ್ಲಿರುವ ಪಕ್ಷದ ಸರ್ಕಾರ ಕೊಡಮಾಡುವ ಹುದ್ದೆಯನ್ನು, (ನ್ಯಾಯಾಂಗ ವಿಚಾರಣಾ ಆಯೋಗ ಹೊರತುಪಡಿಸಿ), ರಾಜ್ಯಸಭಾ ಸದಸ್ಯತ್ವವನ್ನೂ ಒಳಗೊಂಡಂತೆ, ಒಪ್ಪಿಕೊಳ್ಳಬಾರದು ಎನ್ನುವುದು ಒಂದು ಸದಾಶಯವಾಗಿದೆ ಮತ್ತು ಬಹುಮಟ್ಟಿಗೆ ಅದೊಂದು ಅಲಿಖಿತ ನಿಯಮದಂತೆ ಪಾಲನೆ ಆಗುತ್ತಿದೆ. ‘ಬಹುಮಟ್ಟಿಗೆ’ ಎಂಬುದರ ಅರ್ಥ, ಈ ಆಶಯವನ್ನು ಸರ್ಕಾರಗಳು ಮತ್ತು ನ್ಯಾಯಾಧೀಶರು ಪಾಲಿಸುತ್ತಿಲ್ಲ ಎನ್ನುವುದೇ ಆಗಿದೆ.

ನ್ಯಾಯಾಂಗದ ಪಾವಿತ್ರ್ಯದ ದೃಷ್ಟಿಯಿಂದ ಯಾವುದೋ ಒಂದು ಪಕ್ಷದ ಸದಸ್ಯರಾಗಿ ಇದ್ದವರನ್ನು ನ್ಯಾಯಾಧೀಶರನ್ನಾಗಿ ನೇಮಿಸಬಾರದು. ಹಾಗೆ ಸದಸ್ಯರಾಗಿ ಇದ್ದವರನ್ನು ಸರ್ಕಾರಿ ವಕೀಲರಾಗಿ ಅಥವಾ ಅಟಾರ್ನಿ ಜನರಲ್ ಆಗಿ ನೇಮಿಸುವುದು ಬೇರೆ, ನ್ಯಾಯಾಧೀಶರಾಗಿ ನೇಮಿಸುವುದು ಬೇರೆ. ಅಪವಾದಗಳು ಇಲ್ಲವೆಂದಲ್ಲ.

ನಿವೃತ್ತಿ ನಂತರದಲ್ಲಿ ನ್ಯಾಯಾಧೀಶರು ಚುನಾವಣಾ ರಾಜಕೀಯದಿಂದ ದೂರವೇ ಉಳಿಯಬೇಕು ಎನ್ನುವುದನ್ನು ಬಿಡಿಸಿ ಹೇಳಲೇಬೇಕಿಲ್ಲ. ರಾಷ್ಟ್ರಪತಿಯ ಚುನಾವಣೆಯೇ ಆದರೂ, ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳೆರಡೂ ಸರ್ವಾನುಮತದಿಂದ ರಾಷ್ಟ್ರಪತಿ ಸ್ಥಾನದ ಅಭ್ಯರ್ಥಿ ಆಗಬೇಕೆಂದು ಕೋರಿದ ಸಂದರ್ಭದಲ್ಲಿ ಒಪ್ಪಿಕೊಳ್ಳುವುದರಲ್ಲಿ ಯಾವ ತಪ್ಪೂ ಇಲ್ಲ. ಹಾಗಲ್ಲದೆ ಇದ್ದಾಗ, ಅವರು ಒಂದು ಪಕ್ಷದ ಅಭ್ಯರ್ಥಿಯಾದಾಗ, ಎದುರು ಪಕ್ಷಗಳ ರಾಜಕೀಯ ಮುಖಂಡರು ಅವರಿಗೆ ತೋಚಿದ ಅಂಶವನ್ನೆತ್ತಿ ಆಕ್ಷೇಪ, ಟೀಕೆಗಳನ್ನು ಮಾಡುತ್ತಾರೆ ಮತ್ತು ಆ ಟೀಕೆಗಳನ್ನು ಅವರು ಸಹಿಸಿಕೊಳ್ಳಬೇಕಾಗಿ ಬರುತ್ತದೆ. ಆ ಟೀಕೆ–ಟಿಪ್ಪಣಿಗಳು, ನ್ಯಾಯಾಧೀಶರಾಗಿ ಕಾರ್ಯ ನಿರ್ವಹಿಸಿದವರಿಗೆ ಮತ್ತು ಅವರನ್ನು ಅಭ್ಯರ್ಥಿಯನ್ನಾಗಿ ನಿಲ್ಲಿಸಿರುವ ಪಕ್ಷಕ್ಕೆ ಮುಜುಗರ ಉಂಟು ಮಾಡುವುದು ಸಹಜ. ಟೀಕೆಯ ಮಾತುಗಳು, ಸಾರ್ವಜನಿಕರಲ್ಲೂ ನ್ಯಾಯಾಂಗದಲ್ಲಿ ಕಾರ್ಯ ನಿರ್ವಹಿಸಿದ್ದವರ ಚಾರಿತ್ರ್ಯದ ಬಗ್ಗೆ ಅನುಮಾನ ಉಂಟು ಮಾಡಬಹುದು. ಪ್ರಸ್ತುತ ಅಂಥದೊಂದು ಸಂದರ್ಭ ಈಗ ಎದುರಾಗಿದೆ.

ಈಗಿನ ‘ಇಂಡಿಯಾ’ ಮೈತ್ರಿಕೂಟದ ಪ್ರತಿನಿಧಿಯಾಗಿ ಉಪರಾಷ್ಟ್ರಪತಿ ಸ್ಥಾನಕ್ಕೆ ಸ್ಪರ್ಧಿಸಿರುವ ಅಭ್ಯರ್ಥಿಯನ್ನು ಕೇಂದ್ರ ಗೃಹ ಸಚಿವರು ಟೀಕಿಸಿದ್ದಾರೆ. ಅವರು, ಹಿಂದೆ ನೀಡಿದ ತೀರ್ಪಿನಿಂದ ನಕ್ಸಲರನ್ನು ಹತ್ತಿಕ್ಕುವುದಕ್ಕೆ ಅಡ್ಡಿಯಾಯಿತೆನ್ನುವ ಅರ್ಥದಲ್ಲಿ ಗೃಹ ಸಚಿವರು ಆಕ್ಷೇಪಿಸಿದ್ದಾರೆ. ಈ ಆಕ್ಷೇಪದ ಮಾತುಗಳಿಗೆ ವಿರೋಧ ಮತ್ತು ಸಮರ್ಥನೆ ಎರಡೂ ನಿವೃತ್ತ ನ್ಯಾಯಮೂರ್ತಿಗಳಿಂದಲೇ ವ್ಯಕ್ತವಾಗಿದೆ. ‘ನ್ಯಾಯಾಂಗದ ಸ್ವಾತಂತ್ರ್ಯದ ಹೆಸರಲ್ಲಿ ನೀಡಿದ ರಾಜಕೀಯ ಪಕ್ಷಪಾತದ ಹೇಳಿಕೆ’ ಎಂದು ಕೆಲವರು ಆಕ್ಷೇಪಿಸಿದ್ದಾರೆ. ಇಂಥದೊಂದು ಸಂದರ್ಭ ಖಂಡಿತವಾಗಲೂ ವಿಷಾದಕರ. ಈ ಘಟನೆ, ನ್ಯಾಯಾಂಗದ ಬಗ್ಗೆ ಜನರ ಮನಸ್ಸಿನಲ್ಲಿನ ಗೌರವಕ್ಕೆ ಕುಂದುಂಟು ಮಾಡುವಂತಹದ್ದು ಎಂದು ಹೇಳದೆ ವಿಧಿಯಿಲ್ಲ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.



ಕ್ಯಾನ್ಸರ್ ತಡೆಗೆ ಗಮನ ಹರಿಸಿ ಐಸಿಎಂಆರ್ ವರದಿ

1 ಕೋಟಿ ಜಾಗತಿಕವಾಗಿ ಪ್ರತಿವರ್ಷ ಕ್ಯಾನ್ಸರ್‌ನಿಂದ ಸಾಯುತ್ತಿರುವವರು

2 ಕೋಟಿ 2022ರಲ್ಲಿ ವರದಿಯಾಗಿದ್ದ ಕ್ಯಾನ್ಸರ್ ಪ್ರಕರಣಗಳು

3.26 ಕೋಟಿ 2045ರ ಹೊತ್ತಿಗೆ ಸಂಭವನೀಯ ಕ್ಯಾನ್ಸರ್ ಪ್ರಕರಣಗಳ ಸಂಖ್ಯೆ

24 ಲಕ್ಷ ಆಗ್ನೇಯ ಏಷ್ಯಾದಲ್ಲಿ ಹೊಸದಾಗಿ ಕ್ಯಾನ್ಸರ್‌ನಿಂದ ಬಾಧಿತರಾದವರ ಅಂದಾಜು ಸಂಖ್ಯೆ

15 ಲಕ್ಷ ಆಗ್ನೇಯ ಏಷ್ಯಾದಲ್ಲಿ ಕ್ಯಾನ್ಸರ್‌ನಿಂದ ಮೃತಪಟ್ಟವರ ಸಂಖ್ಯೆ

ಪ್ರಾಸ್ಟೇಟ್ ಕ್ಯಾನ್ಸರ್ ಬಾಧಿತರು
(ಪ್ರತಿ ಲಕ್ಷ ಜನರಿಗೆ)

ಶ್ರೀನಗರ	12.7
ದೆಹಲಿ	12.7
ಗೌತಮ ಬುದ್ಧ ನಗರ	11.7
ತಿರುವನಂತಪುರ	11.1
ಆಲಪ್ಪುಳ	10.8
ಮುಂಬೈ	10.5
ಚಂಡೀಗಢ	10.4
ಕಾಮರೂಪ ನಗರ	10.2
ಪತ್ತಣಂತಿಟ್ಟ	10.1
ಬೆಂಗಳೂರು	9.8

ಪ್ರಜಾವಾಣಿ ವಾರ್ತೆ

ಬೆಂಗಳೂರಿನ ಮಹಿಳೆಯರು ದೇಶದಲ್ಲಿಯೇ ಅತಿ ಹೆಚ್ಚು ಪ್ರಮಾಣದಲ್ಲಿ ಕ್ಯಾನ್ಸರ್ ಬಾಧಿತರಾಗಿದ್ದು, ಸ್ತನ ಕ್ಯಾನ್ಸರ್ ಪ್ರಕರಣಗಳು ಅತಿ ಹೆಚ್ಚು ಇರುವ ದೇಶದ ಮೊದಲ ಮೂರು ನಗರಗಳಲ್ಲಿ ಕರ್ನಾಟಕದ ರಾಜಧಾನಿಯೂ ಒಂದಾಗಿದೆ ಎಂದು ಅಧ್ಯಯನ ವರದಿ ಹೇಳಿದೆ. ಸ್ತನ ಕ್ಯಾನ್ಸರ್ ಮಾತ್ರವಲ್ಲ, ಗರ್ಭಕಂಠ ಕ್ಯಾನ್ಸರ್ ಮತ್ತು ಬಾಯಿ ಕ್ಯಾನ್ಸರ್ ಪ್ರಕರಣಗಳಲ್ಲೂ ದೇಶದ ಮೊದಲ ಹತ್ತು ನಗರಗಳಲ್ಲಿ ಬೆಂಗಳೂರಿನ ಹೆಸರು ಇದೆ. ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯ (ಐಸಿಎಂಆರ್) ವಿಶ್ಲೇಷಣೆಯ ಪ್ರಕಾರ, ಮಹಿಳೆಯರಲ್ಲಿ ಕಂಡು ಬರುತ್ತಿರುವ ಕ್ಯಾನ್ಸರ್ ಪ್ರಕರಣಗಳಲ್ಲಿ ಮಿಜೋರಾಂ ರಾಜಧಾನಿ ಐಜ್ವಾಲ್ ಮೊದಲನೆಯದಾಗಿದ್ದರೆ, ಬೆಂಗಳೂರು ಆರನೆಯದ್ದಾಗಿದೆ. ಇದಕ್ಕೂ ಮೊದಲಿನ ಸ್ಥಾನದಲ್ಲಿ ಹೈದರಾಬಾದ್ ಇದೆ.

ಗರ್ಭಕಂಠ ಕ್ಯಾನ್ಸರ್, ಸ್ತನ ಕ್ಯಾನ್ಸರ್ ಹೆಚ್ಚಳ ಬೆಂಗಳೂರಿನ ಮಹಿಳೆಯರಿಗಷ್ಟೇ ಸೀಮಿತವಾಗಿಲ್ಲ. ಇಡೀ ದೇಶದಲ್ಲೇ ಈ ಪ್ರವೃತ್ತಿ ಕಂಡು ಬರುತ್ತಿದೆ ಎಂದು ಅಧ್ಯಯನದ ಅಂಕಿ ಅಂಶಗಳು ಹೇಳಿವೆ.

‘ಭಾರತದ 43 ಕ್ಯಾನ್ಸರ್ ನೋಂದಣಿ ಕೇಂದ್ರಗಳಲ್ಲಿ ಕ್ಯಾನ್ಸರ್ ಪ್ರಕರಣಗಳು ಮತ್ತು ಮರಣ’ ಎನ್ನುವ ಅಂತರ್ ಶಾಖಾ ಅಧ್ಯಯನ ವರದಿಯಲ್ಲಿ ಮಹಿಳಾ ಮತ್ತು ಪುರುಷ ಕ್ಯಾನ್ಸರ್ ಬಾಧಿತರ ಪ್ರಮಾಣದ ಬಗ್ಗೆ ವಿವರಿಸಲಾಗಿದೆ. ಐಸಿಎಂಆರ್‌ನ ನ್ಯಾಷನಲ್ ಕ್ಯಾನ್ಸರ್ ರಿಜಿಸ್ಟ್ರಿ ಪ್ರೋಗ್ರಾಮ್ ಇನ್‌ವೆಸ್ಟಿಗೇಟರ್ ಗ್ರೂಪ್ ದೇಶದ 43 ಜನಸಂಖ್ಯಾ ಆಧಾರಿತ ಕ್ಯಾನ್ಸರ್ ನೋಂದಣಿ ಕೇಂದ್ರಗಳ (ಪಿಬಿಸಿಆರ್) 2015 ಮತ್ತು 2019ರ ನಡುವಿನ ದತ್ತಾಂಶ ಆಧಾರದಲ್ಲಿ ಕ್ಯಾನ್ಸರ್ ಪ್ರಕರಣಗಳ ಪ್ರಮಾಣ ಮತ್ತು ಪ್ರವೃತ್ತಿಗಳನ್ನು ವಿಶ್ಲೇಷಿಸಿದೆ. ಕ್ಯಾನ್ಸರ್, ಜಾಗತಿಕ ಮಟ್ಟದ ಆರೋಗ್ಯ ಸಮಸ್ಯೆಯಾಗಿದ್ದು, ವಾರ್ಷಿಕ ಒಂದು ಕೋಟಿ ಮಂದಿ ಕ್ಯಾನ್ಸರ್‌ನಿಂದ ಸಾಯುತ್ತಿದ್ದಾರೆ. 2045ರ ಹೊತ್ತಿಗೆ ಜಗತ್ತಿನಲ್ಲಿ ಕ್ಯಾನ್ಸರ್‌ಪೀಡಿತರ ಸಂಖ್ಯೆ 3.26 ಕೋಟಿಗೆ ಏರಲಿದೆ. ಕ್ಯಾನ್ಸರ್‌ಪೀಡಿತರ ಪ್ರಮಾಣದಲ್ಲಿ ಭಾರತವು ಜಾಗತಿಕ ಮಟ್ಟದಲ್ಲಿ ಮೂರನೆಯದಾಗಿದ್ದರೆ, ಏಷ್ಯಾದಲ್ಲಿ ಎರಡನೆಯದ್ದಾಗಿದೆ. ರೋಗದ ಪ್ರಭಾವ ಅಳೆಯುವ ಮತ್ತು ಅದರ ನಿಯಂತ್ರಣಕ್ಕೆ ಪರಿಣಾಮಕಾರಿ ಕ್ರಮಗಳನ್ನು ಕಂಡುಕೊಳ್ಳುವ ದೃಷ್ಟಿಯಿಂದ ದೇಶದಲ್ಲಿ ಕ್ಯಾನ್ಸರ್‌ಗೆ ಸಂಬಂಧಿಸಿದ ಅಂಕಿಅಂಶವನ್ನು ದಾಖಲಿಸುವುದು, ಅದನ್ನು ನಿಯಮಿತವಾಗಿ ಪರಾಮರ್ಶಿಸುವುದು ಮುಖ್ಯವಾಗಿದೆ ಎಂದು ವರದಿ ಉಲ್ಲೇಖಿಸಿದೆ.

> ಬೆಂಗಳೂರಿನಲ್ಲಿ ಪ್ರತಿ ಲಕ್ಷ ಮಹಿಳೆಯರಲ್ಲಿ ಸುಮಾರು 150 ಮಂದಿ ಕ್ಯಾನ್ಸರ್‌ನಿಂದ ಬಳಲುತ್ತಿದ್ದಾರೆ. ಲಕ್ಷ ಪುರುಷರಲ್ಲಿ 125ರಷ್ಟು ಜನ ಈ ಕಾಯಿಲೆಗೆ ತುತ್ತಾಗುತ್ತಿದ್ದಾರೆ

ಕ್ಯಾನ್ಸರ್ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿಯೂ ದೇಶಕ್ಕೆ ಹೊರೆಯಾಗಿದ್ದು, ಅದನ್ನು ತಪ್ಪಿಸಬಹುದಾಗಿದೆ. ಈ ಮಹಾಮಾರಿಗೆ ಕಾರಣವಾಗಬಹುದಾದ ಧೂಮಪಾನ, ಸ್ಥೂಲಕಾಯ, ಬೊಜ್ಜು ಮತ್ತು ಸೋಂಕು ಮುಂತಾದ ಆರೋಗ್ಯ ಸಮಸ್ಯೆಗಳ ಬಗ್ಗೆ ಗಮನ ಹರಿಸಿ, ಅವುಗಳ ನಿಯಂತ್ರಣಕ್ಕೆ ಒತ್ತು ನೀಡಬೇಕು. ಈ ಮೂಲಕ ಕ್ಯಾನ್ಸರ್‌ನಿಂದ ಸಂಭವಿಸುವ ಲಕ್ಷಾಂತರ ಸಾವುಗಳನ್ನು ತಡೆಯಬಹುದು ಎಂದು ವರದಿ ವಿಶ್ಲೇಷಿಸಿದೆ.

ಬೆಂಗಳೂರಿನಲ್ಲಿ ಇತರ ಕ್ಯಾನ್ಸರ್ ಬಾಧಿತರು (ಪ್ರತಿ ಲಕ್ಷ ಜನರಿಗೆ)

	ಮಹಿಳೆಯರು	ಪುರುಷರು
ಶ್ವಾಸಕೋಶ ಕ್ಯಾನ್ಸರ್	6.2	13.1
ಬಾಯಿ ಕ್ಯಾನ್ಸರ್	7.8	11.6
ಹೊಟ್ಟೆ ಕ್ಯಾನ್ಸರ್	4.9	8.6
ಗರ್ಭಕಂಠ ಕ್ಯಾನ್ಸರ್	13.8	

ಸ್ತನ ಕ್ಯಾನ್ಸರ್ ಬಾಧಿತರು: ಎಲ್ಲಿ, ಎಷ್ಟು?
(ಪ್ರತಿ ಲಕ್ಷ ಜನರಿಗೆ)

ಹೈದರಾಬಾದ್	54.0
ಬೆಂಗಳೂರು	46.7
ಚೆನ್ನೈ	45.4
ಗೌತಮ ಬುದ್ಧ ನಗರ (ಉತ್ತರ ಪ್ರದೇಶ)	44.1
ಆಲಪ್ಪುಳ	42.2
ತಿರುವನಂತಪುರ	40.7
ಪತ್ತಣಂತಿಟ್ಟ	36.7
ಕೊಲ್ಲಂ	36.3
ದೆಹಲಿ	35.6
ಐಜ್ವಾಲ್	35.6



ಬಾಯಿ ಕ್ಯಾನ್ಸರ್ ಬಾಧಿತ ಮಹಿಳೆಯರು

ಪೂರ್ವ ಖಾಶಿ ಹಿಲ್ಸ್	13.6
ಕಛಾರ್	13
ಶಿಲ್ಲಾಂಗ್	12.7
ಕಾಮರೂಪ ನಗರ	10.5
ಭೋಪಾಲ್	10.3
ಅಹಮದಾಬಾದ್	8.3
ಹೈದರಾಬಾದ್	7.9
ಬೆಂಗಳೂರು	7.8
ನಾಗ್ಪುರ	7.6
ಕರೀಂಗಂಜ್ ಜಿಲ್ಲೆ	6.9

ದಕ್ಷಿಣದ ನಗರಗಳಲ್ಲಿ...

ಬೆಂಗಳೂರು ಮಾತ್ರವಲ್ಲದೇ, ಹೈದರಾಬಾದ್, ಚೆನ್ನೈ ಹಾಗೂ ಕೇರಳದ ತಿರುವನಂತಪುರ, ಕೊಲ್ಲಂ, ಆಲಪ್ಪುಳ, ಕಾಸರಗೋಡು ಸೇರಿದಂತೆ ದಕ್ಷಿಣ ಭಾರತದ ಹಲವು ನಗರಗಳಲ್ಲಿ ವಿವಿಧ ರೀತಿಯ ಕ್ಯಾನ್ಸರ್ ಪ್ರಕರಣಗಳು ಹೆಚ್ಚು ವರದಿಯಾಗುತ್ತಿರುವುದನ್ನು ವರದಿ ಉಲ್ಲೇಖಿಸಿದೆ. ಬೆಂಗಳೂರು, ಚೆನ್ನೈ, ವಿಶಾಖಪಟ್ಟಣ, ತಿರುವನಂತಪುರದಂತಹ ಮಹಾನಗರಗಳ ಪುರುಷರಲ್ಲಿ ಶ್ವಾಸಕೋಶ ಕ್ಯಾನ್ಸರ್ ಹೆಚ್ಚು ಪತ್ತೆಯಾಗುತ್ತಿದೆ. ದೆಹಲಿಯಲ್ಲೂ ಈ ಕ್ಯಾನ್ಸರ್ ಪುರುಷರಲ್ಲಿ ಹೆಚ್ಚು ಕಂಡುಬರುತ್ತಿದೆ.

ಪ್ರದೇಶವಾರು ವ್ಯತ್ಯಾಸ

ಭಾರತದಲ್ಲಿ ಕ್ಯಾನ್ಸರ್ ಬಾಧಿತರ ಸಂಖ್ಯೆ ಪುರುಷ ಮತ್ತು ಮಹಿಳೆ ಇಬ್ಬರಲ್ಲೂ ಹೆಚ್ಚಾಗುತ್ತಿದೆ. ಅದಕ್ಕೆ ತಕ್ಕಂತೆ ಕ್ಯಾನ್ಸರ್ ಸಂಬಂಧಿ ಸಾವುಗಳೂ ಹೆಚ್ಚುತ್ತಿವೆ. ಪುರುಷರಲ್ಲಿ ಬಾಯಿ, ಶ್ವಾಸಕೋಶ ಮತ್ತು ಪ್ರಾಸ್ಟೇಟ್ ಕ್ಯಾನ್ಸರ್ ಹೆಚ್ಚುತ್ತಿದ್ದರೆ, ಮಹಿಳೆಯರಲ್ಲಿ ಸ್ತನ, ಗರ್ಭಕಂಠ ಮತ್ತು ಅಂಡಾಶಯದ ಕ್ಯಾನ್ಸರ್ ವ್ಯಾಪಕವಾಗಿವೆ. ಇವು ದೇಶದಲ್ಲಿ ಕ್ಯಾನ್ಸರ್ ತಡೆಗೆ ಪರಿಣಾಮಕಾರಿ ಕ್ರಮಗಳ ಅಗತ್ಯವನ್ನು ಒತ್ತಿಹೇಳುತ್ತಿವೆ. ಕ್ಯಾನ್ಸರ್ ಪ್ರಕರಣಗಳು ಮತ್ತು ಸಾವುಗಳು ದೇಶದ ಕೆಲವು ಪ್ರದೇಶಗಳಲ್ಲಿ ಹೆಚ್ಚಾಗಿದ್ದರೆ, ಕೆಲವು ಪ್ರದೇಶಗಳಲ್ಲಿ ಕಡಿಮೆ ಇವೆ. ಜತೆಗೆ, ಮಹಾನಗರಗಳಲ್ಲಿ ಹೆಚ್ಚು ಪ್ರಕರಣಗಳು ಪತ್ತೆಯಾಗುತ್ತಿವೆ.

ಭಾರತದಲ್ಲಿ ಕ್ಯಾನ್ಸರ್: ಒಂದು ನೋಟ

3 ಹೆಚ್ಚು ಕ್ಯಾನ್ಸರ್ ಪ್ರಕರಣಗಳು ವರದಿಯಾಗುತ್ತಿರುವ ಜಗತ್ತಿನ ಮೂರನೇ ರಾಷ್ಟ್ರ

2 ಏಷ್ಯಾ ಖಂಡದ ಎರಡನೇ ದೇಶ

11% ದೇಶದಲ್ಲಿ ಜನರು ಕ್ಯಾನ್ಸರ್‌ಗೆ ತುತ್ತಾಗುವ ಅಪಾಯದ ಪ್ರಮಾಣ

2024ರಲ್ಲಿ ದೇಶದಲ್ಲಿ ವರದಿಯಾದ ಕ್ಯಾನ್ಸರ್ ಪ್ರಕರಣಗಳ ಅಂದಾಜು ಸಂಖ್ಯೆ	15.62 ಲಕ್ಷ
2022ರಲ್ಲಿ ವರದಿಯಾಗಿದ್ದ ಪ್ರಕರಣಗಳು	14.6 ಲಕ್ಷ

8.74 ಲಕ್ಷ 2024ರಲ್ಲಿ ಕ್ಯಾನ್ಸರ್‌ನಿಂದಾಗಿ ಮೃತಪಟ್ಟವರು

24.6 ಲಕ್ಷ | 2045ರ ಹೊತ್ತಿಗೆ ದೇಶದಲ್ಲಿರಬಹುದಾದ ಕ್ಯಾನ್ಸರ್‌ನ ಅಂದಾಜು ಪ್ರಕರಣಗಳು

ICMR INDIAN COUNCIL OF MEDICAL RESEARCH Serving the nation since 1911

ರಾಷ್ಟ್ರೀಯ

ಕಾಸರಗೋಡು, ವಯನಾಡ್‌ಗೆ ತಲಾ 50 ಎಂಬಿಬಿಎಸ್ ಸೀಟು

ಪ್ರಜಾವಾಣಿ ವಾರ್ತೆ

ತಿರುವನಂತಪುರ: ರಾಷ್ಟ್ರೀಯ ವೈದ್ಯಕೀಯ ಆಯೋಗವು (ಎನ್‌ಎಂಸಿ) ಕಾಸರಗೋಡು ಮತ್ತು ವಯನಾಡ್ ಜಿಲ್ಲೆಗಳಿಗೆ ತಲಾ 50 ಎಂಬಿಬಿಎಸ್ ಸೀಟುಗಳನ್ನು ಮಂಜೂರುಗೊಳಿಸಿದ್ದು, ವೈದ್ಯಕೀಯ ಕ್ಷೇತ್ರದಲ್ಲಿ ಹಿಂದುಳಿದಿರುವ ಉಭಯ ಜಿಲ್ಲೆಗಳ ಜನರಲ್ಲಿ ಹೊಸ ಭರವಸೆ ಮೂಡಿದೆ.

‘ವಯನಾಡ್‌ನಲ್ಲಿ ವೈದ್ಯಕೀಯ ಕಾಲೇಜು ನಿರ್ಮಿಸುವ ಕನಸು ನಿಜವಾಗುತ್ತಿರುವುದು ಖುಷಿ ನೀಡಿದೆ. ಲಕ್ಷಾಂತರ ಜನರ ಬೇಡಿಕೆ ಹಾಗೂ ರಾಹುಲ್ ಗಾಂಧಿ ಮತ್ತು ನಮ್ಮ ಪ್ರಯತ್ನ ಇಂದು ಫಲ ನೀಡಿದೆ’ ಎಂದು ವಯನಾಡ್ ಸಂಸದೆ ಪ್ರಿಯಾಂಕಾ ಗಾಂಧಿ ಅವರು ಹೇಳಿದ್ದಾರೆ.

ವೈದ್ಯಕೀಯ ಕಾಲೇಜು ಶೀಘ್ರದಲ್ಲಿ ಕಾರ್ಯಾರಂಭಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಕೇರಳ ಸರ್ಕಾರವನ್ನು ಪ್ರಿಯಾಂಕಾ ಒತ್ತಾಯಿಸಿದ್ದಾರೆ. ತಜ್ಞ ವೈದ್ಯರ ಕೊರತೆಯಿಂದಾಗಿ ಕಾಸರಗೋಡಿನಲ್ಲಿರುವ ಎಂಡೋ ಸಲ್ಫಾನ್ ಪೀಡಿತರು ಸೇರಿದಂತೆ ಬಹುತೇಕರು ವೈದ್ಯಕೀಯ ಸೇವೆಗಳಿಗಾಗಿ ಮಂಗಳೂರಿಗೆ ತೆರಳಬೇಕಾದ ಅನಿವಾರ್ಯ ಇದೆ. ಅದೇ ರೀತಿ ವನ್ಯಜೀವಿ ಸಂಘರ್ಷ ಮತ್ತು ಪ್ರಾಕೃತಿಕ ವಿಕೋಪಗಳಿಗೆ ಪದೇ ಪದೇ ತುತ್ತಾಗುತ್ತಿರುವ ವಯನಾಡ್‌ನಲ್ಲಿಯೂ ವೈದ್ಯಕೀಯ ಮೂಲಸೌಕರ್ಯಗಳ ಕೊರತೆಯಿದೆ.

ಸ್ಕ್ರೈಬ್: ನಿಯಮ ಇನ್ನಷ್ಟು ಬಿಗಿ

ನವದೆಹಲಿ (ಪಿಟಿಐ): ಅಂಗವಿಕಲ ಅಭ್ಯರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಸ್ಕ್ರೈಬ್‌ಗಳನ್ನು (ಪರೀಕ್ಷೆ ಬರೆಯಲು ಸಹಾಯಕರು) ಬಳಸುವುದಕ್ಕೆ ಸಂಬಂಧಿಸಿದ ನಿಯಮಗಳನ್ನು ಕೇಂದ್ರ ಸರ್ಕಾರ ಬಿಗಿಗೊಳಿಸಿದೆ.

ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸುವ ಏಜೆನ್ಸಿಗಳು ಎರಡು ವರ್ಷಗಳೊಳಗೆ ತಮ್ಮದೇ ಆದ ‘ಸ್ಕ್ರೈಬ್ ಪೂಲ್’ಗಳನ್ನು (ಸ್ಕ್ರೈಬ್‌ಗಳ ತಂಡ) ಸಿದ್ಧಪಡಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ಅಭ್ಯರ್ಥಿಗಳು ತಮ್ಮ ಸ್ವಂತ ಆಯ್ಕೆಯ ಸ್ಕ್ರೈಬ್‌ಗಳಿಂದ ಪರೀಕ್ಷೆ ಬರೆಸುವ ವ್ಯವಸ್ಥೆಯನ್ನು ಹಂತ ಹಂತವಾಗಿ ತೆಗೆದುಹಾಕಲು ನಿರ್ಧರಿಸಲಾಗಿದೆ.

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು ಹೊರಡಿಸಿದ ಪರಿಷ್ಕೃತ ಮಾರ್ಗ ಸೂಚಿಗಳು, ‘ಪರೀಕ್ಷೆಗಳಲ್ಲಿ ನ್ಯಾಯಯುತ ನಡವಳಿಕೆ, ಪಾರದರ್ಶಕತೆ ಮತ್ತು ಪ್ರಾಮಾಣಿಕತೆ’ಯನ್ನು ಖಚಿತಪಡಿಸುವ ಗುರಿಯನ್ನು ಹೊಂದಿವೆ.

ಸುಪ್ರೀಂ ಕೋರ್ಟ್ ನೀಡಿರುವ ನಿರ್ದೇಶನಗಳನ್ನು ಒಂದೂಗೂಡಿಸಿ, ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಕಾಯ್ದೆ-2016 ಮತ್ತು ಸಾರ್ವಜನಿಕ ಪರೀಕ್ಷೆ (ಅಕ್ರಮ ವಿಧಾನಗಳ ತಡೆಗಟ್ಟುವಿಕೆ) ಕಾಯ್ದೆ-2024ರಲ್ಲಿನ ಅಂಶಗಳನ್ನು ಸೇರಿಸಿಕೊಂಡು ಮಾರ್ಗಸೂಚಿ ರೂಪಿಸಲಾಗಿದೆ.

ಲ್ಯಾಪ್‌ಟಾಪ್, ಬ್ರೈಲ್, ರೆಕಾರ್ಡಿಂಗ್ ಸಾಧನಗಳು, ಜೆಎಡಬ್ಲ್ಯುಎಸ್ ಮತ್ತು ಎನ್‌ವಿಡಿಎಯಂತಹ ಸ್ಕ್ರೀನ್ ರೀಡರ್, ಸ್ಪೀಚ್ ಟು ಟೆಕ್ಸ್ಟ್ ಸಾಫ್ಟ್‌ವೇರ್ ತಂತ್ರಜ್ಞಾನಗಳ ನೆರವಿನಿಂದ ಸ್ವತಂತ್ರವಾಗಿ ಪರೀಕ್ಷೆ ಬರೆಯಲು ಪ್ರಯತ್ನಿಸುವಂತೆ ಅಭ್ಯರ್ಥಿಗಳನ್ನು ಪ್ರೋತ್ಸಾಹಿಸಬೇಕು ಎಂದು ಮಾರ್ಗಸೂಚಿ ಹೇಳಿದೆ.

ಯುಪಿಎಸ್‌ಸಿ, ಎಸ್‌ಎಸ್‌ಸಿ ಮತ್ತು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ ಸೇರಿದಂತೆ ಎಲ್ಲಾ ಸಂಸ್ಥೆಗಳು ಎರಡು ವರ್ಷಗಳೊಳಗೆ ತರಬೇತಿ ಪಡೆದ ಮತ್ತು ಸ್ವತಃ ಮೇಲ್ವಿಚಾರಣೆ ನಡೆಸಿದ ಸ್ಕ್ರೈಬ್‌ಗಳ ತಂಡಗಳನ್ನು ರಚಿಸಬೇಕು. ಅಲ್ಲಿಯವರೆಗೆ ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಅಭ್ಯರ್ಥಿಗಳಿಗೆ ತಮ್ಮ ಸ್ವಂತ ಸ್ಕ್ರೈಬ್‌ಗಳನ್ನು ಕರೆತರಲು ಅವಕಾಶವಿರುತ್ತದೆ ಎಂದು ಮಾರ್ಗಸೂಚಿ ತಿಳಿಸಿದೆ.

ಸ್ಕ್ರೈಬ್‌ಗಳ ಅರ್ಹತೆಯ ನಿಯಮವನ್ನೂ ಬಿಗಿಗೊಳಿಸಲಾಗಿದೆ.

ಎಂಎಲ್‌ಸಿ ಸ್ಥಾನಕ್ಕೆ ರಾಜೀನಾಮೆ: ಕವಿತಾ

ಹೈದರಾಬಾದ್ (ಪಿಟಿಐ): ‘ವಿಧಾನ ಪರಿಷತ್ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡುವೆ’ ಎಂದು ಬಿಆರ್‌ಎಸ್‌ನಿಂದ ಉಚ್ಚಾಟಿತರಾಗಿರುವ ಕೆ. ಕವಿತಾ ಬುಧವಾರ ತಿಳಿಸಿದ್ದಾರೆ.

ಕವಿತಾ

‘ರಾಜೀನಾಮೆ ಪತ್ರವನ್ನು ಸಭಾಧ್ಯಕ್ಷರಿಗೆ ಹಾಗೂ ಬಿಆರ್‌ಎಸ್‌ನ ಪ್ರಾಥಮಿಕ ಸದಸ್ಯತ್ವದ ರಾಜೀನಾಮೆಯನ್ನು ಕೆಸಿಆರ್‌ಗೆ ಕಳುಹಿಸುವೆ’ ಎಂದು ಹೇಳಿದ್ದಾರೆ.

‘ನನ್ನ ಮೇಲೆ ಕ್ರಮ ತೆಗೆದುಕೊಳ್ಳುವಂತೆ ತಂದೆಯವರ (ಕೆಸಿಆರ್) ಮೇಲೆ ಒತ್ತಡವಿದೆ’ ಎಂದಿದ್ದಾರೆ.

‘ಮುಖ್ಯಮಂತ್ರಿ ಎ. ರೇವಂತ ರೆಡ್ಡಿ ಜೊತೆ ಸಂಪರ್ಕದಲ್ಲಿರುವ ಮಾಜಿ ಸಚಿವ ಹರೀಶ್ ರಾವ್ ಅವರು ಕೆಸಿಆರ್ ಕುಟುಂಬದ ವಿರುದ್ಧ ಸಂಚು ರೂಪಿಸಿದ್ದಾರೆ. ನನ್ನ ಸಹೋದರ ಹಾಗೂ ಬಿಆರ್‌ಎಸ್ ಕಾರ್ಯಾಧ್ಯಕ್ಷ ಕೆ.ಟಿ. ರಾಮರಾವ್ ಈ ಬಗ್ಗೆ ಜಾಗರೂಕರಾಗಿರಬೇಕು’ ಎಂದು ಮಾಧ್ಯಮಗೋಷ್ಠಿಯಲ್ಲಿ ಸಲಹೆ ನೀಡಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಖೈಬರ್ ಫಖ್ತುಂಖ್ವಾ, ಪಂಜಾಬ್, ಸಿಂಧ್, ಬಲೂಚಿಸ್ತಾನ ಸೇರಿದಂತೆ ಪಾಕಿಸ್ತಾನದ ಹಲವು ಪ್ರದೇಶಗಳು ಪ್ರವಾಹಪೀಡಿತವಾಗಿದ್ದು, ಜನ ತತ್ತರಿಸಿಹೋಗಿದ್ದಾರೆ. ಇದಕ್ಕೆ ಸಂಬಂಧಿಸಿ, ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ‘ಪಾಕಿಸ್ತಾನ ಪ್ರವಾಹಕ್ಕೆ ಸಿಲುಕಿದ್ದು, ಅದಕ್ಕೆ ಕೇವಲ ಹವಾಮಾನವಾಗಲಿ ಅಥವಾ ಮಳೆಯಾಗಲಿ ಕಾರಣವಲ್ಲ. ಭಾರತವು ಕಾಶ್ಮೀರದಲ್ಲಿ ತನ್ನ ಅಣೆಕಟ್ಟುಗಳ ಬಾಗಿಲುಗಳನ್ನು ತೆಗೆದಿದ್ದೇ ಇದಕ್ಕೆಲ್ಲ ಕಾರಣ. ಇದು ಅನ್ಯಾಯ ಮತ್ತು ಅಪಾಯಕಾರಿ’ ಎಂದು ಅವರು ಹೇಳಿರುವುದಾಗಿ ವಿಡಿಯೊ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

ಇನ್‌ವಿಡ್ ಟೂಲ್ ಮೂಲಕ ವಿಡಿಯೊ ಕೀಫ್ರೇಮ್ ವಿಂಗಡಿಸಿ, ಅದನ್ನು ಗೂಗಲ್ ಲೆನ್ಸ್ ಮೂಲಕ ಪರಿಶೀಲಿಸಿದಾಗ, ಒಂದೇ ವಿಡಿಯೊ ಅನ್ನು ಹಲವರು ಹಂಚಿಕೊಂಡಿರುವುದು ಕಂಡಿತು. ನಿರ್ದಿಷ್ಟ ಪದದ ಮೂಲಕ ಗೂಗಲ್‌ನಲ್ಲಿ ಹುಡುಕಾಟ ನಡೆಸಿದಾಗ, ಯಾವ ಮಾಧ್ಯಮದಲ್ಲಿಯೂ ಅವರ ಹೇಳಿಕೆಯ ಬಗ್ಗೆ ವರದಿಗಳು ಕಾಣಲಿಲ್ಲ. ಬದಲಿಗೆ, ನೀರ್ಗಲ್ಲು ಕರಗಿದ್ದು ಮತ್ತು ಅರಣ್ಯನಾಶವೇ ಪಾಕಿಸ್ತಾನದಲ್ಲಿನ ಪ್ರವಾಹಕ್ಕೆ ಕಾರಣ ಎಂದು ವರದಿಗಳು ಪ್ರಕಟವಾಗಿರುವುದು ಕಂಡಿತು. ಎಐ ಪತ್ತೆ ಸಾಧನವಾದ ಹೈವ್ ಮಾಡರೇಷನ್ ಮೂಲಕ ಪರಿಶೀಲಿಸಿದಾಗ, ಅದು ಡೀಪ್‌ಫೇಕ್ ವಿಡಿಯೊ ಎನ್ನುವುದು ಖಚಿತವಾಯಿತು ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಸ್ವಾತಂತ್ರ್ಯ ಹೋರಾಟ ಕೂಲಿ ಕೆಲಸವಲ್ಲ

ನುಡಿ ಬೆಳಗು



ಪಿ.ಚಂದ್ರಿಕಾ

ಈ ದೇಶಕ್ಕೆ ಸ್ವಾತಂತ್ರ್ಯ ಒಬ್ಬರಿಂದ ಬರಲಿಲ್ಲ. ಗಾಂಧಿ ಎನ್ನುವ ಮಾಂತ್ರಿಕ ತನ್ನ ವಿಚಾರದಿಂದ ಇಡೀ ದೇಶವನ್ನೇ ಸೆಳೆದುಕೊಂಡು ಸಂಗ್ರಾಮವನ್ನು ದೇಶದ ಮೂಲೆ ಮೂಲೆಗೂ ತಲುಪಿಸಿದರು. ಹಲವರ ಬಲಿದಾನದಿಂದ ಬಂದ ಇತಿಹಾಸವನ್ನು ಯಾರೂ ಸಮಗ್ರವಾಗಿ ಬರೆದಿಟ್ಟಿಲ್ಲ. ತಮ್ಮ ಕೆಲಸವನ್ನು ಸಮರ್ಥವಾಗಿ ನಿರ್ವಹಿಸಿ ತೆರೆಮರೆಯಲ್ಲೇ ಉಳಿದ ಎಲ್ಲ ಮಹನೀಯರನ್ನೂ ನಾವು ನೆನೆಯಬೇಕಿದೆ. ಕರ್ನಾಟಕದಲ್ಲೂ ಇಂಥ ಪ್ರಾತಃಸ್ಮರಣೀಯರು ಹಲವರಿದ್ದಾರೆ. ಸಂಗ್ರಾಮದ ಬಹುಮುಖ್ಯ ಭಾಗವಾಗಿ ಬ್ರಿಟಿಷ್ ಸರ್ಕಾರಿ ಕಚೇರಿಯ ಮೇಲೆ ತಿರಂಗದ ಬಾವುಟ ಹಾರಿಸುವ ಕರೆ ದೇಶದಾದ್ಯಂತ ಹಬ್ಬುತ್ತದೆ. ಬೆಳಗಾವಿ ಜಿಲ್ಲೆ ಗೋಕಾಕದ ಪಾರವ್ವ ಎನ್ನುವ ದೇವದಾಸಿ ಮಹಿಳೆಯ ಮನೋಜ್ಞ ಕಥೆ ನನ್ನನ್ನು ಅವತ್ತಿನಿಂದಲೂ ಕಾಡುತ್ತಲೇ ಇದೆ. ಅದನ್ನು ನನಗೆ ಹೇಳಿದವರು ಸ್ವತಃ ಸ್ವಾತಂತ್ರ್ಯ ಸಂಗ್ರಾಮ, ಗಾಂಧೀಜಿಯವರನ್ನು ಕಂಡ ಬೆಳಗೆರೆ ಕೃಷ್ಣಶಾಸ್ತ್ರಿಗಳು.

ಹೀಗೊಬ್ಬ ಸ್ವಾತಂತ್ರ್ಯ ಹೋರಾಟಗಾರ್ತಿ ಸವದತ್ತಿಯಲ್ಲಿದ್ದಾರೆಂದು ತಿಳಿದು ಪರ್ಯಟನಾಪ್ರಿಯರಾದ ಶಾಸ್ತ್ರಿಗಳು ಅಲ್ಲಿಗೆ ಹೋಗುತ್ತಾರೆ. ಅವರು ಭೇಟಿಯಾಗುವ ಹೊತ್ತಿಗೆ ಪಾರವ್ವ ಹಣ್ಣುಹಣ್ಣು ಮುದುಕಿ. ಆಕೆಯನ್ನು ಮಾತಾಡಿಸಿ ಸಂಗ್ರಾಮದಲ್ಲಿ ಅವರ ಹೋರಾಟದ ಕಥೆಯನ್ನು ಹೇಳುವಂತೆ ಒತ್ತಾಯಿಸುವವರೆಗೂ ಆಕೆ ಅದನ್ನು ಹೇಳಲೂ ಇಲ್ಲ. ‘ನೀವು ಜೈಲಿಗೆ ಹೋಗಿದ್ದಿರಲ್ಲಾ’ ಎಂದು ಲೋಕಾಭಿರಾಮವಾಗಿ ಮಾತಾಡಲು ಆರಂಭಿಸಿದಾಗ ಆಕೆ ತನ್ನ ಬಗ್ಗೆ ಹೇಳಿಕೊಳ್ಳಲು ಆರಂಭಿಸುತ್ತಾರೆ. ‘ಹೌದಾ! ಜೈಲಿಗೆ ಹೋಗಿದ್ದಾಕಿ ನಾ. ಆಗ ಗಾಂಧೀ ಮಂದಿ ನಮ್ಮ ಗೋಕಾಕಕ್ಕ ಬಂದು ಈ ದೇಶ ನಮ್ಮ ಸ್ವತ್ತು, ಇಲ್ಲಿ ಬ್ರಿಟಿಷರ ಬಾವುಟ ಅಲ್ಲ; ನಮ್ಮ ತಿರಂಗ ಹಾರಿಸಬೇಕು ಅಂತ ಯೋಚನೆ ಮಾಡ್ಲಿಕ್ಕ ಹತ್ತಿದ್ರು. ಆ ಸಮಯಕ್ಕ ಯಾಂವ ಮೀಸೆ ಹೊತ್ತ ಗಂಡಸೂ ಮುಂದ ಬರಲಿಲ್ಲ. ನಾ ಮುಂದ ಹೋಗಿ ಗಾಂಧೀ ಮಂದಿ ಕೈಲ್ಲಿದ್ದ ಬಾವುಟ ತಗೊಂಡು ಕಚೇರಿ ಹತ್ತಿ ಹಾರಿಸಿಯೇಬಿಟ್ಟೆ... ನಾನೇನೋ ಬಾವುಟ ಹಾರಿಸಿಬಿಟ್ಟೆ, ಕೆಳಗಿಳಿದು ಬಂದ್ರೆ ಪೊಲೀಸರು ಕಾದಿದ್ರು. ‘ನೀ ಅರೆಸ್ಟಾಗಿದ್ದೀಯ ನಡೀ ಜೈಲಿಗೆ’ ಅಂದ್ರು. ನಾ ಅಂಜುವಾಕೀನಾ ಹೊಂಟೇಬಿಟ್ಟೆ. ಜೈಲು ಶಿಕ್ಷೆ ಕಾಯಂ ಆಯ್ತು’ ಎಂದು ನೆನಪುಗಳನ್ನು ಕೆದಕಿ ಕುಳಿತರಂತೆ. ಮುಪ್ಪಿನ ವಯಸ್ಸು, ದೇವದಾಸಿಯಾದ್ದರಿಂದ ನೋಡಲಿಕ್ಕೆ ಮಕ್ಕಳು ಮರಿ ಇರಲಿಲ್ಲ. ಜೀವನ ನಡೆಸುವುದೂ ಹರಸಾಹಸವಾಗಿದ್ದರೂ ಆಕೆ ಸರ್ಕಾರದಿಂದ ಪಿಂಚಣಿ ತೆಗೆದುಕೊಳ್ಳಲು ನಿರಾಕರಿಸಿದ್ದರೆಂದು ಕೇಳಿದ್ದ ಶಾಸ್ತ್ರಿಗಳು ಅದು ಯಾಕೆನ್ನುವ ಕುತೂಹಲದೊಂದಿಗೆ, ‘ಸರ್ಕಾರ ಸ್ವಾತಂತ್ರ್ಯ ಹೋರಾಟಗಾರರಿಗೆ ಪಿಂಚಣಿ ಕೊಡ್ತಾರೆ, ನೀವ್ಯಾಕೆ ಅರ್ಜಿ ಹಾಕಲಿಲ್ಲ. ಆ ಸೌಲಭ್ಯ ಪಡೆದಿದ್ದರೆ ನಿಮಗೆ ಜೀವನಕ್ಕೆ ಅನುಕೂಲವಾಗುತ್ತಿಲ್ಲವೇ’ ಎನ್ನುತ್ತಾರೆ. ಬೇಸರ, ತಿರಸ್ಕಾರ, ಸಿಟ್ಟು ಬೆರೆತ ಧ್ವನಿಯಲ್ಲಿ ಪಾರವ್ವ, ‘ಸರ್ಕಾರದಿಂದ ಹಣ ಕೇಳಲಿಕ್ಕೆ ಆ ದಿನ ನಾನು ಕೂಲಿಗೆ ಹೋಗಿದ್ನೇನು? ಜೀವನ ಹೇಗೂ ನಡೆಯುತ್ತೆ. ನೋಡಿಕೊಳ್ಳಲು ಯಾರೂ ಇಲ್ಲ ನಿಜ, ಹಾಗಂತ ಪೆನ್ಶನ್ ಯಾಕೆ ತಗೊಳ್ಳಲಿ? ಪೆನ್ಶನ್ ಬರೋದು ಸರ್ಕಾರಿ ಸೇವೆ ಮಾಡಿದವರಿಗೆ. ನಾನು ಮಾಡಿದ್ದು ದೇಶಸೇವೆ’ ಎನ್ನುತ್ತಾರೆ. ಆಕೆಯ ದಿಟ್ಟತನ, ಧೀಮಂತ ನಿಲುವು, ಸ್ವಾಭಿಮಾನ ಎಲ್ಲವೂ ಬೆಳಗೆರೆ ಕೃಷ್ಣಶಾಸ್ತ್ರಿಗಳಲ್ಲಿ ಬೆರಗು ಮೂಡಿಸುತ್ತದೆ. ತಾನು ಮಾಡಿದ್ದು ದೇಶಸೇವೆ ಅದಕ್ಕೆ ಹಣ ತೆಗೆದುಕೊಳ್ಳುವುದು ಸರಿಯಲ್ಲ ಎಂದು ಭಾವಿಸಿದ ಪಾರವ್ವನಂಥವರ ಎದುರು ಸುಮ್ಮನೆ ಮೂರು ತಲೆಮಾರಿಗಾಗುವಷ್ಟು ಇದ್ದರೂ ಸುಳ್ಳು ಹೇಳಿ ಸ್ವಾತಂತ್ರ್ಯ ಹೋರಾಟದಲ್ಲಿದ್ದೆವು ಎಂದು ಮಾಶಾಸನ ತೆಗೆದುಕೊಳ್ಳುವ ದೊಡ್ಡ ದೊಡ್ಡವರನ್ನು ನೆನೆಸಿಕೊಳ್ಳುತ್ತಾ, ಪಾರಜ್ಜಿ ಎಂಥಾ ದೊಡ್ಡವ್ಯಕ್ತಿಯಾಗಿ ಕಂಡರೆಂದು ಅವರು ಭಾವಪೂರ್ಣವಾಗಿ ಹೇಳಿದ್ದರು.

ದೇಶ ಪ್ರೇಮ ಎನ್ನುವುದು ಖಂಡಿತಾ ತೋರುಗಾಣಿಕೆಯ ಸಂಗತಿಯಲ್ಲ. ತಾವೊಂದು ದೊಡ್ಡ ಕೆಲಸದಲ್ಲಿ ಭಾಗಿಗಳು ಎಂದು ಭಾವಿಸಿದ ಇಂಥಾ ಪಾರವ್ವಗಳು ನಮ್ಮ ಮಧ್ಯೆ ಬಹಳಷ್ಟು ಜನರಿದ್ದಾರೆ. ಇವರೆಲ್ಲರ ಶ್ರಮದಿಂದ ಬಂದ ಸ್ವಾತಂತ್ರ್ಯದ ಫಲಾನುಭವಿಗಳಾದ ನಾವು ಸ್ವಾರ್ಥಿಗಳಾಗಿ ಸೇವೆಯ ಹೆಸರಲ್ಲಿ ಹಣ ಆಸ್ತಿಯ ಲಾಲಸೆಯಲ್ಲಿ ಮುಳುಗಿದ್ದೇವೆ ಎನ್ನುವುದೇ ವಿಪರ್ಯಾಸ.

ಗುಂಡಣ್ಣ



ಪದಬಂಧ 6154

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಯೋಗವಿದ್ದರೆ ಮಾತ್ರ ಅಗಲುವಿಕೆ! (3)
3.ಸಣ್ಣ ಸಣ್ಣ ಗೆಜ್ಜೆಗಳುಳ್ಳ ಕಾಲಿನ ಕಡಗ (3)
6.ಮಣಿ ಧರಿಸಿರುವ ಚಲುವೆ (3)
7.ಇಬ್ಬಂದಿಯೇನಿಲ್ಲ! ಕಚೇರಿಯ ನೌಕರ ವರ್ಗವಿದು (3)
8.ಕರದಲ್ಲಿರುವುದು ನೀರು ತುಂಬುವ ಕಲಶ (3)
9.ಚಿತೆಯೊಳಗೆ ಶೂನ್ಯವಿದ್ದರೆ ಮಾತ್ರ ಈ ಯೋಚನೆ! (2)
10.ಆ ದಿವಸ ನೋಡಿದ ಜೈನ ದೇವಾಲಯ (3)
12.ತೀರ ದೂರವಿರುವ ದಡ! (2)
16.ಬಿನ್ನಹ ಹೀಗೆ ಬಂದಿದೆ (3)
17.ಬಳೆಗಳನ್ನು ಖರೀದಿಸುತ್ತಿರುವ ಗುಂಪು! (3)
18.ಕನಸಲ್ಲ! ಇದು ಸತ್ಯ! (3)
19.ಕುಂಬಾರನ ಚಕ್ರವಿದು (3)
20.ತಟಕ್ಕನೆ ನೋಡಿದಾಗ ಕಾಣಿಸಿದ ಕೆರೆ (3)

ಮೇಲಿಂದ ಕೆಳಕ್ಕೆ

1.ನಡುವಿರುವ ಲೋಕವನ್ನು ನೋಡುವಿಕೆ (4)
2.ಸರಾಗವಾಗಿ ಮರವನ್ನು ಕತ್ತರಿಸುವ ಉಪಕರಣ (4)
3.ಗಣಿ ಧಣಿ ಕಲಿಸಿದ ಲೆಕ್ಕ ಶಾಸ್ತ್ರ (3)
4.ವಿಲಾಸಪ್ರಿಯತೆಯಿದು (4)
5.ಮುಪ್ಪು ಹೀಗೆ ಬಂದಿದೆ (4)
9.ಹರುಕು ಬಟ್ಟೆ ಇಲ್ಲಿದೆ (2)
10.ಬಡವರ ನಾಡಿನಲ್ಲಿ ಆವರಿಸಿದ ಕ್ಷಾಮ (2)
11.ಉರಿಯಲ್ಲಿ ಬರೀ ಗೋಜು! (4)
12.ಚುರುಕಾದ ಗಮನ (4)
13.ಸೂರ್ಯನ ಮಗ (4)
14.ಅಳತೆಗೆ ಮೀರಿದ ಸ್ಥಿತಿ (4)
15.ನರಿ ಹತ್ತಿರವಿರುವ ಹೆಣ್ಣು ಮಂಗ (3)



6153ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಕಾಡತೂಸು 3.ಕರಜಾತ
5.ಮರವೆ 8.ಮನವಿ
10.ರಿಕಾಪು 11.ದಯಾಮರಣ
12.ವಿರಳ 13.ಯಯಾತಿ
15.ಕವಡೆ 17.ಕಲಾವಿದ
18.ನಳಪಾಕ

ಮೇಲಿಂದ ಕೆಳಕ್ಕೆ:
1.ಕಾವ್ಯನಾಮ 2.ಸುಮ
3.ಕವೆ 4.ತಲೆಗಾಪು
6.ರಜತಮಹೋತ್ಸವ 7.ಪರಿಣಯ
9.ವಿದಳನ 12.ವಿದೂಷಕ
14.ತಿಲೋದಕ 15.ಕದ 16.ಡೆನ

ಸುಡೊಕು 6538

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

8		2		4		1		5
			8		9		6	
9		6			7	2		4
			1	6			2	
	2			7	3	8		6
				8				
		8		9	2	5		1
1	9	5	7				4	
2		3		5	1	9		8

6537 ಸುಡೊಕು

2	8	3	5	7	9	1	4	6
5	1	4	6	2	8	7	3	9
7	6	9	4	1	3	8	5	2
3	2	8	1	9	4	6	7	5
6	5	1	7	3	2	9	8	4
4	9	7	8	5	6	3	2	1
9	4	2	3	6	7	5	1	8
1	3	6	2	8	5	4	9	7
8	7	5	9	4	1	2	6	3

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

04 ಸೆಪ್ಟೆಂಬರ್ 2025 ಗುರುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ದ್ವಾದಶಿ ಗಂ. 28-09 **ನಕ್ಷತ್ರ:** ಉತ್ತರಾಷಾಢ ಗಂ. 23-44 **ಯೋಗ:** ಸೌಭಾಗ್ಯ ಗಂ. 15-22 **ಕರಣ:** ಬವ ಗಂ. 16-21 ಸಿಂಹ ಮಾಸದ 18 ನೇ ದಿನ. **ಮಳೆ ನಕ್ಷತ್ರ:** ಹುಬ್ಬಾ 2 ನೇ ಪಾದ. **ರಾಹುಕಾಲ:** ಮಧ್ಯಾಹ್ನ 01-30 03-00, **ಸೂರ್ಯೋದಯ:** 06-23 **ಸೂರ್ಯಾಸ್ತ:** 06-36, **ಮುಸ್ಲಿಂ ದಿನಾಂಕ:** 11 ರಬಿಉಲ್ಲಾವಲ್, **ದಿನ ವಿಶೇಷ:** ಮೊದಲ ಓಣಂ ದಿನ, ವಾಮನ ಜಯಂತಿ, ಸಕ್ರೋತ್ಥಾನ, **ಅದೃಷ್ಟ ಸಂಖ್ಯೆ:** 4, 12

ಮೇಷ: ಜೀವನದ ಮುಖ್ಯ ಮಜಲನ್ನು ತಲುಪುವಿರಿ. ಸಂಜೆ ವೇಳೆ ಆರೋಗ್ಯದ ಸಮಸ್ಯೆಗಳು ಸ್ವಲ್ಪ ಮಟ್ಟಿಗೆ ಕಾಣಿಸಿಕೊಳ್ಳಬಹುದು. ಮಗಳ ಭವಿಷ್ಯದ ಬಗ್ಗೆ ಕಾಳಜಿ ಹುಟ್ಟುವುದು.

ವೃಷಭ: ಊಟದ ಸಮಯ ಪದೇಪದೇ ಬದಲಾಯಿಸುವುದರಿಂದಾಗಿ ಅಜೀರ್ಣಾದಿ ಸಮಸ್ಯೆಗಳನ್ನು ಎದುರಿಸುವಂತಾಗುತ್ತದೆ. ಪ್ರಾಣಿ ಸಾಕಾಣಿಕೆ ನಡೆಸುವವರಿಗೆ ಲಾಭದಾಯಕ ದಿನ.

ಮಿಥುನ: ಹೊಸ ವಸ್ತ್ರ ಖರೀದಿಗೆ ಪ್ರಶಸ್ತವಾದ ದಿನ. ವಾರ್ಷಿಕವಾದ ಖರ್ಚು ವೆಚ್ಚಗಳು ವ್ಯತ್ಯಾಸಗೊಳ್ಳುತ್ತಿರುವುದು ಗಮನಕ್ಕೆ ಬರಲಿದೆ. ಸಾರ್ವಜನಿಕವಾಗಿ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸುವಿರಿ.

ಕರ್ಕಾಟಕ: ಕೂತು ತಿನ್ನುವವನಿಗೆ ಕುಡಿಕೆ ಹಣ ಸಾಲದು ಎನ್ನುವ ಪರಿಸ್ಥಿತಿ ಎದುರಿಸುವ ಸಾಧ್ಯತೆ ಇದೆ. ಶಾಲಾ ಕಾಲೇಜುಗಳಲ್ಲಿ ಕೆಲಸ ನಡೆಸುವವರು ವಿದ್ಯಾರ್ಥಿಗಳಿಗೆ ಭಯ ಪಡಬೇಕಾಗುವುದು. ಪ್ರತಿಷ್ಠೆ ಹೆಚ್ಚಿಸಿಕೊಳ್ಳುವಿರಿ.

ಸಿಂಹ: ದೊಡ್ಡ ಕಾರ್ಯಕ್ರಮವನ್ನು ಸಮರ್ಥವಾಗಿ ನಿರ್ವಹಿಸಿದ ತೃಪ್ತಿ ಹೊಂದುವಿರಿ. ಕಾರಣವಿಲ್ಲದೆ ದುಃಖವಾಗುವುದು ಆಶ್ಚರ್ಯವನ್ನು ತರಲಿದೆ. ಚರ್ಮದ ಬಗ್ಗೆ ಕಾಳಜಿ ಬೇಕಾಗುವುದು.

ಕನ್ಯಾ: ಕೆಲಸಗಳಿಗೆ ವಾತಾವರಣವು ಸಹಕರಿಸದೆ ಇರಬಹುದು. ಕಳೆದು ಹೋದ ವಸ್ತುವಿನ ಲಭ್ಯತೆ ಸಾಧ್ಯವಿದೆ. ಪುಸ್ತಕ ಮಾರಾಟಗಾರರು ಹಾಗೂ ಸ್ಟೇಷನರಿ ವಸ್ತುಗಳ ಮಾರಾಟಗಾರರು ಲಾಭ ಹೊಂದುವಿರಿ.

ತುಲಾ: ಅರ್ಥವತ್ತಾದ ಪರಿಪಕ್ವವಾದ ಮಾತು ಎದುರಾಳಿಯನ್ನು ಮಾತಿಗೆ ಒಪ್ಪುವಂತೆ ಮಾಡುವುದು. ಅಂದುಕೊಂಡ ಕೆಲಸ ಕಾರ್ಯಗಳು ಸರಿಯಾದ ಸಮಯಕ್ಕೆ ಮುಗಿಯಲಿವೆ.

ವೃಶ್ಚಿಕ: ತರುಣ-ತರುಣಿಯರಿಗೆ ಮೋಜು ಮಸ್ತಿಯಲ್ಲಿಯೇ ಹೆಚ್ಚಿನ ಮನಸ್ಸು ಉಂಟಾಗುವುದು. ಆದರೆ ಅದರಿಂದ ಹೊರಬರಲು ಪ್ರಯತ್ನಿಸಿ. ಎಲ್ಲಾ ಕಷ್ಟಗಳಿಗೂ ಆತ್ಮಸ್ಥೈರ್ಯ ಜೊತೆಯಾಗುವುದು.

ಧನು: ಅಕ್ಕನ ಮನೆಯ ವಿಶೇಷವಾದ ದಿನದಲ್ಲಿ ಭಾಗವಹಿಸುವಿರಿ. ಉತ್ಸವಾದಿಗಳಲ್ಲಿ ಪರಿಚಯವಾದ ವ್ಯಕ್ತಿಯನ್ನು ಬಾಳಸಂಗಾತಿಯಾಗಿ ಆರಿಸಿಕೊಳ್ಳಬಹುದು. ಶೀತ ಉಂಟುಮಾಡುವ ವಸ್ತುಗಳಿಂದ ಅಂತರ ಕಾಯ್ದುಕೊಳ್ಳಿರಿ.

ಮಕರ: ಮುಂದಿನ ತಲೆಮಾರಿಗೆ ಆಸ್ತಿಯನ್ನು ಮಾಡಿ ಇಡುವ ವಿಚಾರವಾಗಿ ಬಹಳ ಯೋಚನೆಯನ್ನು ಮಾಡುವಿರಿ. ಅನಿವಾರ್ಯದ ಕಾರಣದಿಂದ ಚಿನ್ನ ಖರೀದಿ ಮಾಡಬಹುದು. ಅಜ್ಜನ ಮನೆಗೆ ಭೇಟಿ ನೀಡುವ ಅವಕಾಶವಿದೆ.

ಕುಂಭ: ಆರೋಗ್ಯದಲ್ಲಿ ಸಣ್ಣ ಪುಟ್ಟ ಏರುಪೇರುಗಳಿದ್ದರೂ ಕೆಲಸಗಳಿಗೆ ಅದು ಅಡ್ಡಿಯಾಗುವುದಿಲ್ಲ. ಜೀವನದಲ್ಲಿ ಕಷ್ಟಗಳನ್ನು ಎದುರಿಸಲು ಹೆಚ್ಚಿನ ಸಾಮರ್ಥ್ಯವನ್ನು ನೀಡು ಎಂದು ದೇವರಲ್ಲಿ ಪ್ರಾರ್ಥಿಸಿ.

ಮೀನ: ಕೆಲಸಗಳನ್ನು ನಾಳೆಗೆ ಮುಂದೂಡುವುದು ಇಂದಿಗೆ ಸುಲಭವೆಂದು ಕಂಡರೂ ಹಾಗೆ ಮಾಡದಿರಲು ಯತ್ನಿಸಿ. ಮನೆಯ ವ್ಯಕ್ತಿಗಳಿಗಿಂತ ಸಾಮಾಜಿಕ ಜಾಲತಾಣದ ವ್ಯಕ್ತಿಗಳೇ ಪ್ರಯೋಜನಕ್ಕೆ ಬರುವರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 24,579
ಇಂದಿನ ಅಂತ್ಯ: 24,715
ದಿನದ ಗರಿಷ್ಠ: 24,737
135

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು: 100 ಕ್ಕೆ ₹560; 12 ಕ್ಕೆ ₹75; ಮೈಸೂರು: 100 ಕ್ಕೆ ₹565

ರಾಮನಗರ ರೇಷ್ಮೆಗೂಡು: ಮಿಶ್ರತಳಿ (ಸಿ.ಬಿ) ₹433-668; ದ್ವಿತಳಿ (ಬಿ.ವಿ) ₹500-855

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ): ಆರ್‌ಎಸ್‌ಎಸ್-4 ₹189; ಆರ್‌ಎಸ್‌ಎಸ್-5 ₹184; ಗುಡ್ ಲಾಟ್ ₹169

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಹಿಂದಿನ ವಹಿವಾಟಿನ ದರ) (10 ಕೆ.ಜಿಗೆ): ಶೇಂಗಾ (ರಿಫೈನ್ಡ್) ₹1375 (1370); ಸೋಯಾ (ರಿಫೈನ್ಡ್) ₹1290 (1290); ಸೂರ್ಯಕಾಂತಿ (ರಿಫೈನ್ಡ್) ₹1420 (1420); ವಾಮೋಲೀನ್ ₹1285 (1275)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ): ಅರಸೀಕೆರೆ ₹27000-27000; ದಾವಣಗೆರೆ ₹14000-15000; ತಿಪಟೂರು ₹16372-16372

ಅಡಿಕೆ ಧಾರಣೆ

ಕಾರ್ಕಳ		ಹೊಸನಗರ 35799-43739	ಚನ್ನಗಿರಿ 32419-49099
ಹೊಸತು	32500-49000	ಸಿದ್ದಾಪುರ	ಶಿರಸಿ
ಹಳೆಯದು	32500-53000	ಬಿಳೇಗೋಟು 24200-31909	ಚಿಪ್ಪು 26010-37919
ಕುಮಟಾ		ಚಾಲಿ 36509-42599	ಬಿಳೇಗೋಟು 25611-34709
ಚಾಲಿ	37021-43199	ಕೋಕ 17419-24699	ಚಾಲಿ 37069-44448
ಚಿಪ್ಪು	26569-31999	ಕೆಂಪುಗೋಟು 21019-23688	ಕೆಂಪುಗೋಟು 25109-28899
ಕೋಕ	7169-25899	ರಾಶಿ 45899-49699	ರಾಶಿ 44099-50299
ಫ್ಯಾಕ್ಟರಿ	4542-31269		

ಮಾರುತಿ ಸುಜುಕಿ ಕಂಪನಿಯು 'ವಿಕ್ಟೋರಿಸ್' ಎಸ್‌ಯುವಿ ವಾಹನ ಬಿಡುಗಡೆ ಮಾಡಿದೆ. ಈ ವೇಳೆ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಹಿಸಾಶಿ ತಕೆಯುಚಿ, ಕಂಪನಿಯ ಮಾರ್ಕೆಟಿಂಗ್ ಮತ್ತು ಮಾರಾಟ ವಿಭಾಗದ ಹಿರಿಯ ಕಾರ್ಯನಿರ್ವಾಹಕ ಅಧಿಕಾರಿ ಪಾರ್ಥೋ ಬ್ಯಾನರ್ಜಿ ಇದ್ದರು —ಪಿಟಿಐ ಚಿತ್ರ

'ವಿಕ್ಟೋರಿಸ್' ಅನಾವರಣ

ನವದೆಹಲಿ (ಪಿಟಿಐ): ವಾಹನ ತಯಾರಿಕಾ ಕಂಪನಿ ಮಾರುತಿ ಸುಜುಕಿ ಇಂಡಿಯಾ, ಹೊಸ 'ವಿಕ್ಟೋರಿಸ್' ಎಸ್‌ಯುವಿ ವಾಹನ ಅನಾವರಣ ಮಾಡಿದೆ.

ಕಂಪನಿಯು ಫ್ರಾಂಕ್ಸ್, ಬ್ರೆಜಾ, ಜಿಮ್ನಿ ಮತ್ತು ಗ್ರ್ಯಾಂಡ್ ವಿಟಾರಾ ಮಾದರಿಯ ಎಸ್‌ಯುವಿ ಶ್ರೇಣಿಯ ವಾಹನಗಳನ್ನು ದೇಶೀ ಮಾರುಕಟ್ಟೆಯಲ್ಲಿ ಈಗಾಗಲೇ ಮಾರಾಟ ಮಾಡುತ್ತಿದೆ.

'ವಿಕ್ಟೋರಿಸ್' ಎಲ್2 ಅಡ್ವಾನ್ಸ್ಡ್ ಡ್ರೈವಿಂಗ್ ಅಸಿಸ್ಟನ್ಸ್ ಸಿಸ್ಟಮ್ (ಎಡಿಎಎಸ್) ಹೊಂದಿದ ಮೊದಲ ಕಾರು ಆಗಿದೆ. ಸ್ವಯಂಚಾಲಿತ ತುರ್ತು ಬ್ರೇಕಿಂಗ್, ಬ್ಲೈಂಡ್ ಸ್ಪಾಟ್ ವಾರ್ನಿಂಗ್ ಸೇರಿದಂತೆ ಹಲವಾರು ವೈಶಿಷ್ಟ್ಯಗಳಿವೆ. ಇದು ಹೈಬ್ರೀಡ್ ಮತ್ತು ಸಿಎನ್‌ಜಿ ಆಯ್ಕೆ ಹೊಂದಿದೆ ಎಂದು ಕಂಪನಿ ಬುಧವಾರ ತಿಳಿಸಿದೆ.

'ವಿಕ್ಟೋರಿಸ್' ಬೆಲೆಯನ್ನು ಕಂಪನಿ ಬಹಿರಂಗಪಡಿಸಿಲ್ಲ. ಈ ಮಾದರಿಯ ವಾಹನಗಳನ್ನು ಹರಿಯಾಣದ ಖಾರ್ಖೋಡಾ ಘಟಕದಲ್ಲಿ ತಯಾರಿಸುತ್ತಿದೆ.

ಎಫ್‌ಡಿಐ: ಕರ್ನಾಟಕಕ್ಕೆ ಹೆಚ್ಚು

ವಿದೇಶಿ ಬಂಡವಾಳ ಸ್ವೀಕಾರದಲ್ಲಿ ಮಹಾರಾಷ್ಟ್ರ ಹಿಂದಿಕ್ಕಿದ ರಾಜ್ಯ

ನವದೆಹಲಿ (ಪಿಟಿಐ): ಜೂನ್ ತ್ರೈಮಾಸಿಕದಲ್ಲಿ ದೇಶದಲ್ಲಿನ ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ಪ್ರಮಾಣ ಶೇ 15ರಷ್ಟು ಹೆಚ್ಚಳವಾಗಿದೆ ಎಂದು ಕೇಂದ್ರ ಸರ್ಕಾರ ಬುಧವಾರ ತಿಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹1.42 ಲಕ್ಷ ಕೋಟಿ ವಿದೇಶಿ ನೇರ ಹೂಡಿಕೆ ಆಗಿತ್ತು. ಈ ಬಾರಿ ಇದು ₹1.63 ಲಕ್ಷ ಕೋಟಿ ಆಗಿದೆ. ಇದು ಮಾರ್ಚ್ ತ್ರೈಮಾಸಿಕದಲ್ಲಿ ₹82,210 ಕೋಟಿಯಷ್ಟಾಗಿತ್ತು.

ಈಕ್ವಿಟಿ ಒಳಹರಿವು, ಗಳಿಕೆಯ ಮರುಹೂಡಿಕೆ ಮತ್ತು ಇತರ ಬಂಡವಾಳ ಹೂಡಿಕೆಯು ಹೆಚ್ಚಳವಾಗಿದ್ದು, ಒಟ್ಟು ಹೂಡಿಕೆ ₹2.21 ಲಕ್ಷ ಕೋಟಿಯಾಗಿದೆ. ಕಳೆದ ಜೂನ್ ತ್ರೈಮಾಸಿಕದಲ್ಲಿ ₹1.98 ಲಕ್ಷ ಕೋಟಿಯಷ್ಟಾಗಿತ್ತು.

ಕರ್ನಾಟಕ ಮುಂಚೂಣಿ: ರಾಜ್ಯಗಳ ಸ್ವೀಕರಿಸಿದ ವಿದೇಶಿ ಬಂಡವಾಳ ಪಟ್ಟಿಯಲ್ಲಿ ಕರ್ನಾಟಕವು ಮೊದಲ ಸ್ಥಾನದಲ್ಲಿದ್ದು, ₹50,107 ಕೋಟಿ ಸ್ವೀಕರಿಸಿದೆ. ನಂತರದ ಸ್ಥಾನಗಳಲ್ಲಿ ಮಹಾರಾಷ್ಟ್ರ (₹47,188 ಕೋಟಿ), ತಮಿಳುನಾಡು (₹23,505 ಕೋಟಿ), ಹರಿಯಾಣ (₹11,444 ಕೋಟಿ), ಗುಜರಾತ್ (₹10,564 ಕೋಟಿ), ದೆಹಲಿ (₹8,803 ಕೋಟಿ) ಮತ್ತು ತೆಲಂಗಾಣ (₹3,477 ಕೋಟಿ) ಇವೆ.

ಇದೇ ಅವಧಿಯಲ್ಲಿ ಅಮೆರಿಕದ ಹೂಡಿಕೆಯ ಪ್ರಮಾಣದಲ್ಲಿ ಮೂರು ಪಟ್ಟು ಏರಿಕೆಯಾಗಿದೆ. ಭಾರತದಲ್ಲಿ ಅತಿ ಹೆಚ್ಚು ಹೂಡಿಕೆ ಮಾಡಿದ ದೇಶ ಅಮೆರಿಕ. ಒಟ್ಟು ₹49,379 ಕೋಟಿ ಹೂಡಿಕೆ ಈ ತ್ರೈಮಾಸಿಕದಲ್ಲಿ ಅಮೆರಿಕದಿಂದ ಆಗಿದೆ. ಕಳೆದ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ₹13,205 ಕೋಟಿ ಬಂಡವಾಳ ಒಳಹರಿವಾಗಿತ್ತು.

ಜೂನ್ ತ್ರೈಮಾಸಿಕದಲ್ಲಿ ಹೂಡಿಕೆ ಮಾಡಿದ ದೇಶಗಳ ಪೈಕಿ ಸಿಂಗಪುರ, ಮಾರಿಷಸ್, ಸ್ವಿಟ್ಸ್, ಯುಎಇ, ಕೇಮನ್ ಐಸ್‌ಲ್ಯಾಂಡ್ಸ್, ನೆದರ್ಲೆಂಡ್ಸ್, ಜಪಾನ್ ಮತ್ತು ಜರ್ಮನಿ ನಂತರದ ಸ್ಥಾನಗಳಲ್ಲಿ ಇವೆ.

2000ದ ಏಪ್ರಿಲ್‌ನಿಂದ 2025ರ ವರೆಗೆ ಅಮೆರಿಕ ₹6.71 ಲಕ್ಷ ಕೋಟಿ ಹೂಡಿಕೆ ಮಾಡಿದೆ. ಈ ಮೂಲಕ ಮೂರನೇ ಅತಿಹೆಚ್ಚು ಎಫ್‌ಡಿಐ ಹೂಡಿಕೆ ಮಾಡಿದ ದೇಶವಾಗಿದೆ. ಮಾರಿಷಸ್ ₹16.04 ಲಕ್ಷ ಕೋಟಿ ಹೂಡಿಕೆ ಮಾಡಿದ್ದು, ಅತಿ ಹೆಚ್ಚು ಹೂಡಿಕೆ ಮಾಡಿದ ದೇಶವಾಗಿದೆ. ಸಿಂಗಪುರ ಎರಡನೇ ಸ್ಥಾನದಲ್ಲಿದ್ದು, ₹15.80 ಲಕ್ಷ ಕೋಟಿಯಾಗಿದೆ.

ಕಂಪ್ಯೂಟರ್ ಯಂತ್ರಾಂಶ ಹಾಗೂ ತಂತ್ರಾಂಶ, ಸೇವೆಗಳು, ವ್ಯಾಪಾರ, ದೂರಸಂಪರ್ಕ, ವಾಹನೋದ್ಯಮ, ರಾಸಾಯನಿಕ ವಲಯಗಳು ಹೆಚ್ಚು ಹೂಡಿಕೆ ಸ್ವೀಕರಿಸಿವೆ ಎಂದು ತಿಳಿಸಿದೆ.

ಸೇವಾ ವಲಯದ ಪ್ರಗತಿ 15 ವರ್ಷದ ಗರಿಷ್ಠ

ದೇಶದ ಸೇವಾ ವಲಯದ ಬೆಳವಣಿಗೆ ಆಗಸ್ಟ್ ತಿಂಗಳಿನಲ್ಲಿ 15 ವರ್ಷದ ಗರಿಷ್ಠ ಮಟ್ಟಕ್ಕೆ ಏರಿಕೆ ದಾಖಲಿಸಿದೆ ಎಂದು ಮಾಸಿಕ ಸಮೀಕ್ಷೆಯೊಂದು ಬುಧವಾರ ತಿಳಿಸಿದೆ.

ಎಚ್‌ಎಸ್‌ಬಿಸಿ ಇಂಡಿಯಾ ಸರ್ವಿಸಸ್ ಪಿಎಂಐ ಬ್ಯುಸಿನೆಸ್ ಆ್ಯಕ್ಟಿವಿಟಿ ಸೂಚ್ಯಂಕವು ಜುಲೈನಲ್ಲಿ 60.5 ದಾಖಲಾಗಿತ್ತು. ಆಗಸ್ಟ್‌ನಲ್ಲಿ 62.9ಕ್ಕೆ ಹೆಚ್ಚಳ ಕಂಡಿದೆ. ಹೊಸ ಕಾರ್ಯಾದೇಶ ಮತ್ತು ಉತ್ಪಾದನೆಯಲ್ಲಿ ಹೆಚ್ಚಳವಾಗಿರುವುದೇ ಸೂಚ್ಯಂಕ ಏರಿಕೆಗೆ ಕಾರಣ ಎನ್ನಲಾಗಿದೆ.

ಪಿಎಂಐ ಮಾನದಂಡಗಳ ಪ್ರಕಾರ ಸೂಚ್ಯಂಕವು 50ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇದ್ದರೆ ಅದನ್ನು ಬೆಳವಣಿಗೆ ಎಂದು ಪರಿಗಣಿಸಲಾಗುತ್ತದೆ. 50ಕ್ಕಿಂತ ಕಡಿಮೆ ಇದ್ದರೆ ಅದನ್ನು ಕುಸಿತವೆಂದು ಕಾಣಲಾಗುತ್ತದೆ.

'ದತ್ತಾಂಶ ಹೆಚ್ಚಳಗೊಂಡಿದ್ದರಿಂದ ಒಟ್ಟಾರೆ ಮಾರಾಟ ಏರಿಕೆ ಕಂಡಿದೆ. ಏಷ್ಯಾ, ಯುರೋಪ್, ಪಶ್ಚಿಮ ಏಷ್ಯಾ ಮತ್ತು ಅಮೆರಿಕದಿಂದ ವಲಯಕ್ಕೆ ಹೆಚ್ಚಿನ ಬೇಡಿಕೆ ಉಂಟಾಗಿದೆ' ಎಂದು ಎಚ್‌ಎಸ್‌ಬಿಸಿಯ ಮುಖ್ಯ ಅರ್ಥಶಾಸ್ತ್ರಜ್ಞೆ ಪ್ರಾಂಜುಲ್ ಭಂಡಾರಿ ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹೆಚ್ಚಿದ ಮಾರಾಟದಿಂದ ದೇಶದ ಸೇವಾ ವಲಯದ ಕಂಪನಿಗಳು ಹೆಚ್ಚುವರಿ ಸಿಬ್ಬಂದಿ ನೇಮಿಸಿಕೊಳ್ಳಲು ಮುಂದಾದವು. ಇದರಿಂದ ಕಾರ್ಮಿಕರ ವೆಚ್ಚ ಹೆಚ್ಚಳವಾಯಿತು. ಪರಿಣಾಮವಾಗಿ ತಯಾರಿಕೆ ಮತ್ತು ಉತ್ಪಾದನಾ ದರ ಏರಿಕೆಯಾಯಿತು ಎಂದು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಲೋಹ ವಲಯದ ಷೇರು ಖರೀದಿ: ಸೂಚ್ಯಂಕ ಏರಿಕೆ

ಮುಂಬೈ/ನವದೆಹಲಿ (ಪಿಟಿಐ): ಲೋಹ ವಲಯದ ಷೇರುಗಳ ಖರೀದಿ ಹೆಚ್ಚಳದ ಕಾರಣದಿಂದಾಗಿ ದೇಶದ ಷೇರುಪೇಟೆ ಸೂಚ್ಯಂಕಗಳು ಬುಧವಾರದ ವಹಿವಾಟಿನಲ್ಲಿ ಏರಿಕೆ ಕಂಡಿವೆ.

ಜಿಎಸ್‌ಟಿ ಮಂಡಳಿ ಸಭೆಯ ನಿರ್ಧಾರದ ಬಗ್ಗೆ ಹೂಡಿಕೆದಾರರು ಆಶಾವಾದ ಹೊಂದಿದ್ದಾರೆ. ಇದು ಸಹ ಸೂಚ್ಯಂಕಗಳ ಏರಿಕೆಗೆ ನೆರವಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 409 ಅಂಶ ಹೆಚ್ಚಳವಾಗಿ, 80,567ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 135 ಅಂಶ ಏರಿಕೆಯಾಗಿ, 24,715ಕ್ಕೆ ಕೊನೆಗೊಂಡಿದೆ.

'ಲೋಹ ಉತ್ಪಾದನೆ ಮೇಲೆ ಚೀನಾ ನಿಯಂತ್ರಣ ಹೇರುವ ಕ್ರಮದಿಂದಾಗಿ ಹಾಗೂ ಡಾಲರ್ ದುರ್ಬಲಗೊಂಡಿದ್ದರಿಂದಾಗಿ ಟಾಟಾ ಸ್ಟೀಲ್, ಎಸ್‌ಎಐಎಲ್, ಜಿಂದಾಲ್ ಸ್ಟೀಲ್ ಮತ್ತು ಹಿಂದೂಸ್ತಾನ್ ಕಾಪರ್ ಕಂಪನಿಗಳ ಷೇರಿನ ಮೌಲ್ಯ ಏರಿಕೆಯಾಗಿದೆ' ಎಂದು ಲೆಮನ್ ಮಾರ್ಕೆಟ್ಸ್ ಡೆಸ್ಕ್‌ನ ಗೌರವ್ ಗರ್ಗ್ ಹೇಳಿದ್ದಾರೆ.

10 ಗ್ರಾಂ ಚಿನ್ನದ ದರ ₹1.07 ಲಕ್ಷ: ಜಾಗತಿಕ ಮಾರುಕಟ್ಟೆಯಲ್ಲಿ ಬುಧವಾರ ನಡೆದ ವಹಿವಾಟಿನಲ್ಲಿ ಚಿನ್ನದ ದರ ಏರಿಕೆಯಾಗಿದೆ. ಹೀಗಾಗಿ, ದೇಶದ ಚಿನಿವಾರ ಪೇಟೆಯಲ್ಲೂ ಬೆಲೆ ಹೆಚ್ಚಳವಾಗಿದ್ದು, ಹಳದಿ ಲೋಹದ ಧಾರಣೆ ಸಾರ್ವಕಾಲಿಕ ಗರಿಷ್ಠ ಮಟ್ಟ ಮುಟ್ಟಿದೆ.



10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹1 ಸಾವಿರ ಹೆಚ್ಚಳವಾಗಿ, ₹1,07,070ರಂತೆ ಮಾರಾಟವಾಗಿದೆ. ಅಪರಂಜಿ ಚಿನ್ನದ ದರ (ಶೇ 99.5 ಪರಿಶುದ್ಧತೆ) ಬೆಲೆ ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿ, ₹1,06,200 ಆಗಿದೆ. ಬೆಳ್ಳಿ ಧಾರಣೆ ಯಥಾಸ್ಥಿತಿಯಲ್ಲಿದ್ದು, ಕೆ.ಜಿ ಬೆಲೆ ₹1,26,100 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಭಾರತ–ಜರ್ಮನಿ ಸಹಕಾರ ವೃದ್ಧಿ ಅನಿವಾರ್ಯ: ಜೈಶಂಕರ್

ನವದೆಹಲಿ (ಪಿಟಿಐ): ಜಾಗತಿಕ ಆರ್ಥಿಕತೆ ಹಾಗೂ ಭೌಗೋಳಿಕ ರಾಜಕೀಯ ಸನ್ನಿವೇಶಗಳಲ್ಲಿನ ಅನಿರೀಕ್ಷಿತ ಬೆಳವಣಿಗೆಗಳು ಭಾರತ ಮತ್ತು ಜರ್ಮನಿಯು ತಮ್ಮ ಬಾಂಧವ್ಯವನ್ನು ಮತ್ತಷ್ಟು ಬಲಪಡಿಸಿಕೊಂಡು ಕಾರ್ಯಪ್ರವೃತ್ತವಾಗಬೇಕಾದ ಅನಿವಾರ್ಯವನ್ನು ಸೃಷ್ಟಿಸಿವೆ ಎಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ಹೇಳಿದ್ದಾರೆ.

ಜರ್ಮನಿ ವಿದೇಶಾಂಗ ಸಚಿವ ಜೋಹನ್ ವಡೆಫುಲ್ ಅವರೊಂದಿಗಿನ ಮಾತುಕತೆ ಬಳಿಕ ಜೈಶಂಕರ್ ಈ ಹೇಳಿಕೆ ನೀಡಿದ್ದಾರೆ.

'ವ್ಯಾಪಾರ, ರಕ್ಷಣೆ, ಸೆಮಿಕಂಡಕ್ಟರ್ ಉತ್ಪಾದನೆ, ತಂತ್ರಜ್ಞಾನ ಹಾಗೂ ಶಿಕ್ಷಣ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಉಭಯ ರಾಷ್ಟ್ರಗಳ ನಡುವಿನ ಸಹಕಾರ ವೃದ್ಧಿಗೆ ಸಂಬಂಧಿಸಿದ ವಿಚಾರಗಳ ಕುರಿತು ಚರ್ಚೆ ನಡೆಸಿದ್ದೇವೆ. ಶೀಘ್ರದಲ್ಲೇ ಈ ನಿಟ್ಟಿನಲ್ಲಿ ಮತ್ತೊಂದು ಸುತ್ತಿನ ಮಾತುಕತೆ ನಡೆದು ಅಂತಿಮ ನಿರ್ಣಯ ಕೈಗೊಳ್ಳಲಾಗುವುದು' ಎಂದು ಜೈಶಂಕರ್ ತಿಳಿಸಿದ್ದಾರೆ.

ಸಾವಿರಕ್ಕೂ ಹೆಚ್ಚು ಸಾವು; ಹಳ್ಳಿ ನಾಶ

ಸುಡಾನ್‌ನಲ್ಲಿ ಧಾರಾಕಾರ ಮಳೆ: ದಾರ್ಫೂರ್‌ನಲ್ಲಿ ಭೂಕುಸಿತ

ಕೈರೊ (ಎಪಿ): ಸುಡಾನ್‌ನ ವಿವಿಧೆಡೆ ಧಾರಾಕಾರ ಮಳೆಯಾಗುತ್ತಿದೆ. ದಾರ್ಫೂರ್ ಪ್ರದೇಶದಲ್ಲಿ ಸಂಭವಿಸಿದ ಭೂಕುಸಿತದಲ್ಲಿ ಒಂದು ಸಾವಿರಕ್ಕೂ ಹೆಚ್ಚು ಜನ ಮೃತಪಟ್ಟಿದ್ದಾರೆ ಎನ್ನಲಾಗಿದೆ.

ಮರ್ರಾ ಪರ್ವತ ಪ್ರದೇಶದಲ್ಲಿನ ತಾರಾಸಿನ್ ಗ್ರಾಮವು ಸಂಪೂರ್ಣ ನಾಶವಾಗಿದೆ. ಹಳ್ಳಿಯ ಜನರೆಲ್ಲರೂ ಭೂಕುಸಿತದಲ್ಲಿ ಸಿಲುಕಿ ಮೃತಪಟ್ಟಿದ್ದು, ಒಬ್ಬರು ಮಾತ್ರ ಬದುಕುಳಿದಿದ್ದಾರೆ ಎಂದು ಈ ಪ್ರದೇಶದ ಮೇಲೆ ನಿಯಂತ್ರಣ ಹೊಂದಿರುವ ಬಂಡುಕೋರರ ಗುಂಪು ಸುಡಾನ್ ಲಿಬರೇಷನ್ ಮೂವ್‌ಮೆಂಟ್ ಆರ್ಮಿ ತಿಳಿಸಿದೆ.

ಭೂಕುಸಿತದ ಮಣ್ಣಿನಡಿ ಸಿಲುಕಿರುವವರ ರಕ್ಷಣೆಗಾಗಿ ಶೋಧ ನಡೆದಿದೆ. ಮಂಗಳವಾರ ಸಂಜೆ ವೇಳೆಗೆ 100 ಮಂದಿಯ ಶವಗಳು ಸಿಕ್ಕಿವೆ ಎಂದು ಬಂಡುಕೋರರ ಗುಂಪಿನ ವಕ್ತಾರ ಮೊಹಮದ್ ಅಬ್ದುಲ್–ರಹಮಾನ್ ಅಲ್–ನಯರ್ ಹೇಳಿದ್ದಾರೆ.

ಭೂಕುಸಿತದಿಂದ ನಾಶವಾದ ತಾರಾಸಿನ್ ಗ್ರಾಮದ ದುರಂತ ಚಿತ್ರಣವನ್ನು ನೋಡಲು ಜನರು ಬಂದಿದ್ದರು ಎಎಫ್‌ಪಿ ಚಿತ್ರ

ಮರ್ರಾ ಪರ್ವತ ಶ್ರೇಣಿಯಲ್ಲಿ ತಾರಾಸಿನ್ ಗ್ರಾಮವಿದ್ದು, ದುರಂತದ ಸ್ಥಳಕ್ಕೆ ತೆರಳುವುದು ಕಷ್ಟವಾಗಿದೆ. ರಕ್ಷಣಾ ಕಾರ್ಯಾಚರಣೆಗೂ ಇದರಿಂದ ಅಡ್ಡಿಯಾಗಿದೆ ಎನ್ನಲಾಗಿದೆ.

ಮುನ್ನೂರರಿಂದ ಒಂದು ಸಾವಿರಕ್ಕೂ ಹೆಚ್ಚು ಜನರು ಭೂಕುಸಿತದ ದುರಂತದಲ್ಲಿ ತಮ್ಮ ಪ್ರಾಣ ಕಳೆದುಕೊಂಡಿರಬಹುದು ಎಂದು ಸುಡಾನ್‌ನಲ್ಲಿ ವಿಶ್ವಸಂಸ್ಥೆಯ ಮಾನವೀಯ ಸಂಯೋಜಕರಾದ ಲುಕಾ ರೆಂಡಾ ಸ್ಥಳೀಯ ಮೂಲಗಳನ್ನು ಉಲ್ಲೇಖಿಸಿ ಹೇಳಿದ್ದಾರೆ.

'ತಪ್ಪಾಗಿ ದೂರು ಕೊಟ್ಟೆ' ಎಂದ ಮಹಿಳೆ: ಆರೋಪಿ ಖುಲಾಸೆ

ಕೋಲ್ಕತ್ತ (ಪಿಟಿಐ): 'ತಪ್ಪು ಭಾವಿಸಿ ದೂರು ದಾಖಲಿಸಿದ್ದೇನೆ' ಎಂದು ದೂರುದಾರ ಮಹಿಳೆ ಹೇಳಿಕೆ ನೀಡಿದ ನಂತರ ಅತ್ಯಾಚಾರ ಪ್ರಕರಣವೊಂದರ ಆರೋಪಿಯನ್ನು ಕೋಲ್ಕತ್ತದ ಕೋರ್ಟ್ ಖುಲಾಸೆಗೊಳಿಸಿದೆ.

2020ರ ನವೆಂಬರ್ 24ರಂದು ಪ್ರಕರಣ ದಾಖಲಾದ ನಂತರ ವ್ಯಕ್ತಿಯನ್ನು ಬಂಧಿಸಲಾಗಿತ್ತು. ಕೋರ್ಟ್ ಜಾಮೀನು ನೀಡುವುದಕ್ಕೂ ಮೊದಲು ಅವರು 51 ದಿನ ಜೈಲಿನಲ್ಲಿ ಕಳೆದಿದ್ದರು.

ಮಹಿಳೆ ತನ್ನ ದೂರಿನಲ್ಲಿ, ತಾನು ಆ ವ್ಯಕ್ತಿಯೊಂದಿಗೆ 2017ರಿಂದ ಸಂಬಂಧ ಹೊಂದಿರುವುದಾಗಿ ಹೇಳಿದ್ದಾರೆ. ವ್ಯಕ್ತಿಯು ಮದುವೆಯಾಗುವುದಾಗಿ ಭರವಸೆ ನೀಡಿದ ಮೇರೆಗೆ ಸಾಲ್ಟ್ ಲೇಕ್‌ನ ಹೋಟೆಲ್‌ನಲ್ಲಿ ಅವ ರೊಂದಿಗೆ ರಾತ್ರಿ ಕಳೆದಿದ್ದಾಗಿ, ಅಲ್ಲಿ ದೈಹಿಕ ಸಂಬಂಧ ಬೆಳೆಸಿದ್ದಾಗಿ ಹೇಳಿದ್ದಾರೆ. ಮರುದಿನ ಬೆಳಿಗ್ಗೆ ವ್ಯಕ್ತಿ ಮದುವೆಯಾಗಲು ನಿರಾಕರಿಸಿ ಪರಾರಿಯಾಗಿದ್ದಾರೆ ಎಂದು ಮಹಿಳೆ ಆರೋಪಿಸಿದ್ದರು. ತಾನು ನಿರಪರಾಧಿ ಎಂದೇ ವ್ಯಕ್ತಿ ಹೇಳುತ್ತಾ ಬಂದಿದ್ದರು.

ಪ್ರಕರಣದ ವಿಚಾರಣೆ ವೇಳೆ, ತಪ್ಪು ತಿಳಿವಳಿಕೆಯಿಂದಾಗಿ ತಾನು ದೂರು ದಾಖಲಿಸಿದ್ದು, ತನಗೆ ಬೇರೆ ಏನೂ ನೆನಪಿಲ್ಲ ಎಂದು ಮಹಿಳೆ ಹೇಳಿದ್ದಾರೆ ಎಂದು ನ್ಯಾಯಾಲಯದ ದಾಖಲೆ ತಿಳಿಸಿವೆ. ದೂರನ್ನು ತನ್ನ ಸ್ನೇಹಿತ ಬರೆದಿದ್ದು, ಅದರ ವಿಷಯ ತಿಳಿಯದೆ ಸಹಿ ಮಾಡಿದ್ದಾಗಿಯೂ ಮಹಿಳೆ ಹೇಳಿದ್ದಾರೆ.

ಮುಂಬೈ ಧಾರಣೆ (ಶೇಂಗಾ)	
03-09-2025	
ಜಾವಾ 70/80(ಹೊಸ)	10600-10700
ಜಾವಾ 80/90(ಹೊಸ)	9900-10000
ದಪ್ಪ ಮಧ್ಯಪ್ರದೇಶ (ಹೊಸ)	7500-7600
ದಪ್ಪ ಗುಜರಾತ್ (ಹೊಸ)	8500-8600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1385 (1380)
ಒಂದು ವಾರದ ಡೆಲಿವರಿ	1380 (1375)
ಪಾಮ್ ವಾರದ ಡೆಲಿವರಿ	1283 (1273)
ಸೂರ್ಯಕಾಂತಿ ಎಣ್ಣೆ ಕಚ್ಚಾ	1350 (1350)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,05,800 (1,04,200)
ಬೆಳ್ಳಿ ಕೆ.ಜಿಗೆ	1,23,400 (1,22,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

'ವಿದೇಶಿ ವಿದ್ಯಾರ್ಥಿಗಳ ಮಾಹಿತಿ ನೀಡಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ಶಿಕ್ಷಣ ಸಂಸ್ಥೆಗಳು ವಿದೇಶಿ ವಿದ್ಯಾರ್ಥಿಗಳ ಹಾಗೂ ಸಾಗರೋತ್ತರ ಭಾರತೀಯ ನಾಗರಿಕ ಕಾರ್ಡ್‌ದಾರರ (ಒಸಿಐ) ಶೈಕ್ಷಣಿಕ ಸಾಧನೆಯ ವಿವರಗಳನ್ನು ಪ್ರತಿ ಸೆಮಿಸ್ಟರ್‌ಗೊಮ್ಮೆ ಒದಗಿಸಬೇಕು. ವರ್ಷಕ್ಕೆ ಎರಡು ಬಾರಿ ಹಾಜರಾತಿ ದಾಖಲೆ ನೀಡಬೇಕು ಎಂದು 'ವಲಸೆ ಮತ್ತು ವಿದೇಶಿಯರ ನಿಯಮಗಳು–2025' ಕಾಯ್ದೆಯಲ್ಲಿ ತಿಳಿಸಲಾಗಿದೆ.

ವಿದೇಶಿ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳುವ ಪ್ರತಿ ಶಿಕ್ಷಣ ಸಂಸ್ಥೆಯು ಪ್ರವೇಶದ 24 ಗಂಟೆಯೊಳಗಾಗಿ ನಮೂನೆ–2 ಅನ್ನು ಸಲ್ಲಿಸಬೇಕು ಎಂದು ಸೂಚಿಸಲಾಗಿದೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

ನಿರ್ಣಾಯಕ ಖನಿಜಗಳ ಪುನರ್ ಬಳಕೆಗೆ ₹1500 ಕೋಟಿ

ನವದೆಹಲಿ (ಪಿಟಿಐ): ದೇಶದಲ್ಲಿ ನಿರ್ಣಾಯಕ ಖನಿಜಗಳ ಮರು ಬಳಕೆಯನ್ನು ಉತ್ತೇಜಿಸುವ ಉದ್ದೇಶದಿಂದ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸಚಿವ ಸಂಪುಟವು ಬುಧವಾರ ₹1,500 ಕೋಟಿ ಮೊತ್ತದ ಪ್ರೋತ್ಸಾಹಕ ಯೋಜನೆಗೆ ಒಪ್ಪಿಗೆ ನೀಡಿದೆ.

ದ್ವಿತೀಯ ಮೂಲಗಳಿಂದ ನಿರ್ಣಾಯಕ ಖನಿಜಗಳ ಉತ್ಪಾದನೆ ಮತ್ತು ಪ್ರತ್ಯೇಕಗೊಳಿಸುವ ಮರು ಬಳಕೆಯ ಸಾಮರ್ಥ್ಯವನ್ನು ವೃದ್ಧಿ ಮಾಡುವ ಗುರಿಯನ್ನು ಈ ಯೋಜನೆಯು ಹೊಂದಿದೆ.

ಇ–ತ್ಯಾಜ್ಯ, ಲಿಥಿಯಂ ಇಯಾನ್ ಬ್ಯಾಟರಿ ತುಣುಕುಗಳು (ಎಲ್‌ಐಬಿ) ಮತ್ತು ಅವಧಿ ಮೀರಿದ ವಾಹನಗಳಲ್ಲಿನ ಕ್ಯಾಟಲಿಟಿಕ್ (ವೇಗವರ್ಧಕ/ಉತ್ಪ್ರೇರಕಗಳು) ತ್ಯಾಜ್ಯ ಸೇರಿ ವಿವಿಧ ಮೂಲಗಳಿಂದ ಮರು ಬಳಕೆ ಮಾಡುವ ಉದ್ದೇಶದ ಯೋಜನೆಗೆ ಸಂಪುಟ ಒಪ್ಪಿಗೆ ನೀಡಿದೆ ಎಂದು ಕೇಂದ್ರ ಗಣಿ ಸಚಿವಾಲಯ ತಿಳಿಸಿದೆ.

3ನೇ ವರ್ಷದ ಚಿರಸ್ಮರಣೆ

ಸಿವಿ ರಾಮಣ್ಣ

ಪ್ರೊಪ್ರೆಟರ್ ಟಿ.ಟಿ. ಶ್ರೀನಿವಾಸ ಎಲೆಕ್ಟ್ರಿಕಲ್ ಗುಪ್ತಾ ಲೇಔಟ್, ಲಕ್ಕಸಂದ್ರ.

ಮರಣ: 04.09.2022

ದುಃಖತಪ್ತರು : ಹೆಂಡತಿ, ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮತ್ತು ಮೊಮ್ಮಕ್ಕಳು

ಪ್ರಜಾವಾಣಿ ಕ್ಲಾಸಿಫೈಡ್ಸ್ ಮೈಸೂರು

ಉದ್ಯೋಗಾವಕಾಶ

Wanted

ಕರ್ನಾಟಕದಾದ್ಯಂತ ಕಂಪನಿಗಳಿಗೆ Work from Home ಕೆಲಸಕ್ಕೆ ಯುವಕರು, ಯುವತಿಯರು ಬೇಕಾಗಿದ್ದಾರೆ. 18000/- 25000/- 7th, 10th, AnyDegree. 9019427194

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ಪ್ರವಾಸ

Travel

ರಿಯಾಯಿತಿ ದರದಲ್ಲಿ ಪ್ರವಾಸಗಳು 7/11 ದಿನಗಳ ಸಿಂಗಾಪುರ್ ಮಲೇಶಿಯಾ,ಥೈಲ್ಯಾಂಡ್. 6 ದಿನಗಳ ಬಾಲಿ (ಇಂಡೋನೇಷ್ಯಾ) 9 ದಿನಗಳ ಗುಜರಾತ್ ಸ್ಪೆಷಲ್. 7 ದಿನಗಳ ನಾರ್ತ್ ಈಸ್ಟ್ 11 ದಿನಗಳ ವಿಯೆಟ್ನಾಂ, ಕಾಂಬೋಡಿಯ ಸಂಪರ್ಕಿಸಿ. ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್ 9900080793 9900099252

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

'ಸ್ಕೂಲ್ ಆಫ್ ಡ್ರೋನ್ ವಾರ್‌ಫೇರ್' ಲೋಕಾರ್ಪಣೆ

ನವದೆಹಲಿ (ಪಿಟಿಐ): ಆಧುನಿಕ ಯುದ್ಧ ಸ್ವರೂಪಗಳಿಗೆ ತಕ್ಕಂತೆ ಯೋಧರನ್ನು ಹುರಿಗೊಳಿಸಿ, ನೈಪುಣ್ಯ ಹೆಚ್ಚಿಸುವ ನಿಟ್ಟಿನಲ್ಲಿ ಭಾರತೀಯ ಗಡಿ ಭದ್ರತಾ ಪಡೆಯು (ಬಿಎಸ್‌ಎಫ್) 'ಸ್ಕೂಲ್ ಆಫ್ ಡ್ರೋನ್ ವಾರ್‌ಫೇರ್' ಎಂಬ ತರಬೇತಿ ಕೇಂದ್ರವನ್ನು ಸ್ಥಾಪಿಸಿದೆ.

ಬಿಎಸ್‌ಎಫ್‌ನ ಮಹಾನಿರ್ದೇಶಕರಾಗಿರುವ ದಲ್ಜಿತ್ ಸಿಂಗ್ ಚೌಧರಿ ಅವರು ಮಧ್ಯಪ್ರದೇಶದ ತೆಕಾನ್ಪುರದಲ್ಲಿನ ಆಫೀಸರ್ಸ್ ಟ್ರೈನಿಂಗ್ ಅಕಾಡೆಮಿಯಲ್ಲಿ ಈ ಕೇಂದ್ರವನ್ನು ಮಂಗಳವಾರ ಉದ್ಘಾಟಿಸಲಿದ್ದಾರೆ.

'ಡ್ರೋನ್ ಕಮಾಂಡೋಸ್' ಮತ್ತು 'ಡ್ರೋನ್ ವಾರಿಯರ್ಸ್' ಎಂಬ ವಿಶೇಷ ತಂಡಗಳಿಗೆ ಈ ಕೇಂದ್ರದಲ್ಲಿ ತರಬೇತಿ ನೀಡಿ, 'ಆಪರೇಷನ್ ಸಿಂಧೂರ' ರೀತಿಯ ಭವಿಷ್ಯದ ಕಾರ್ಯಾಚರಣೆಗಳಲ್ಲಿ ಈ ವಿಶೇಷ ಪಡೆಗಳನ್ನು ನಿಯೋಜಿಸಲು ಉದ್ದೇಶಿಸಲಾಗಿದೆ ಎಂದು ಬಿಎಸ್‌ಎಫ್ ವಕ್ತಾರರೊಬ್ಬರು ತಿಳಿಸಿದ್ದಾರೆ.

ಬಾಂಧವ್ಯ ಏಕಪಕ್ಷೀಯ: ಟ್ರಂಪ್

ಹಾರ್ಲೆ ಡೇವಿಡ್ಸನ್ ಬೈಕ್‌ನ ಉದಾಹರಣೆ ನೀಡಿದ ಅಧ್ಯಕ್ಷ

ಡೊನಾಲ್ಡ್ ಟ್ರಂಪ್

ನ್ಯೂಯಾರ್ಕ್/ವಾಷಿಂಗ್ಟನ್ (ಪಿಟಿಐ): 'ಭಾರತದೊಂದಿಗೆ ನಮ್ಮ ಬಾಂಧವ್ಯವು ಉತ್ತಮವಾಗಿದ್ದರೂ ಅದು ಏಕಪಕ್ಷೀಯವಾಗಿತ್ತು' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಂಗಳವಾರ ಹೇಳಿದ್ದಾರೆ.

'ಅಮೆರಿಕದ ಮೇಲೆ ಭಾರತವು ಹಲವು ವರ್ಷಗಳಿಂದ ಅಧಿಕ ಸುಂಕ ವಿಧಿಸುತ್ತಿದ್ದು, ಜಗತ್ತಿನಲ್ಲೇ ಅತ್ಯಧಿಕ ಸುಂಕ ಇದು' ಎಂದಿದ್ದಾರೆ.

ಭಾರತದ ಮೇಲೆ ಹೆಚ್ಚುವರಿಯಾಗಿ ಶೇ 50ರಷ್ಟು ಸುಂಕ ವಿಧಿಸಿರುವುದಕ್ಕೆ ಸಂಬಂಧಿಸಿದಂತೆ ಶ್ವೇತಭವನದಲ್ಲಿ ಪತ್ರಕರ್ತರು ಪ್ರಶ್ನಿಸಿದ್ದಕ್ಕೆ ತಮ್ಮ ನಿಲುವನ್ನು ಮತ್ತೊಮ್ಮೆ ಅವರು ಸಮರ್ಥಿಸಿಕೊಂಡಿದ್ದಾರೆ.

'ಭಾರತವು ನಮ್ಮ ಮೇಲೆ ಶೇ 100ರಷ್ಟು ಸುಂಕ ವಿಧಿಸಿದ್ದರಿಂದಲೇ ಅವರೊಟ್ಟಿಗೆ ನಾವು ಹೆಚ್ಚಿನ ವ್ಯಾಪಾರ ಮಾಡುತ್ತಿರಲಿಲ್ಲ. ಆದರೆ, ನಾವು ಹೆಚ್ಚಿನ ಸುಂಕ ವಿಧಿಸದಿದ್ದರಿಂದ ಅವರು ನಮ್ಮೊಟ್ಟಿಗೆ ಹೆಚ್ಚಿನ ವಹಿವಾಟು ನಡೆಸುತ್ತಿದ್ದರು' ಎಂದಿದ್ದಾರೆ.

ಇದಕ್ಕೆ ಸಂಬಂಧಿಸಿದಂತೆ ಹಾರ್ಲೆ ಡೇವಿಡ್ಸನ್ ಬೈಕ್ ವ್ಯಾಪಾರದ ಉದಾಹರಣೆಯನ್ನು ಅವರು ನೀಡಿದ್ದಾರೆ.

'ಭಾರತದಲ್ಲಿ ನಾವು ಹಾರ್ಲೆ ಡೇವಿಡ್ಸನ್ ಬೈಕ್‌ಗಳನ್ನು ಮಾರಾಟ ಮಾಡಲು ಸಾಧ್ಯವಾಗಲಿಲ್ಲ. ಏಕೆಂದರೆ, ಈ ದ್ವಿಚಕ್ರ ವಾಹನಗಳ ಮೇಲೆ ನವದೆಹಲಿಯು ಶೇ 200ರಷ್ಟು ತೆರಿಗೆ ವಿಧಿಸುತ್ತಿತ್ತು. ಇದರ ಪರಿಣಾಮ ಏನಾಯಿತೆಂದರೆ, ನಾವೇ ಭಾರತಕ್ಕೆ ಹೋಗಿ ಹಾರ್ಲೆ ಡೇವಿಡ್ಸನ್‌ನ ಘಟಕ ಆರಂಭಿಸಬೇಕಾಯಿತು' ಎಂದಿದ್ದಾರೆ.

'ಸಾಯುವಂತೆ ಮಾಡುತ್ತಿದೆ ಸುಂಕ'

'ಭಾರತ ವಿಧಿಸುತ್ತಿರುವ ಹೆಚ್ಚಿನ ಸುಂಕವು ಅಮೆರಿಕನ್ನರನ್ನು ಸಾಯುವಂತೆ ಮಾಡುತ್ತಿದೆ' ಎಂದು ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ವ್ಯಾಪಾರ ಮತ್ತು ಸುಂಕದ ಕುರಿತಂತೆ ತಮ್ಮ ಆಡಳಿತದ ನೀತಿಗಳು ಬಿಗಿಯಾಗುತ್ತಿದ್ದಂತೆ, 'ಅಮೆರಿಕದ ಸರಕುಗಳಿಗೆ ಸುಂಕವನ್ನೇ ವಿಧಿಸಲ್ಲ ಎಂದು ಭಾರತ ಹೇಳುತ್ತಿದೆ' ಎಂದಿದ್ದಾರೆ.

'ಭಾರತವಷ್ಟೇ ಅಲ್ಲ, ಚೀನಾ, ಬ್ರೆಜಿಲ್ ಸಹ ಅತಿ ಹೆಚ್ಚಿನ ಸುಂಕ ವಿಧಿಸುವುದರೊಂದಿಗೆ ಅಮೆರಿಕನ್ನರನ್ನು ಸಾಯುವಂತೆ ಮಾಡುತ್ತಿವೆ' ಎಂದು 'ಸ್ಕಾಟ್ ಜೆನ್ನಿಂಗ್ಸ್ ರೇಡಿಯೊ'ಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

'ಸುಂಕವನ್ನು ಇತರ ದೇಶಗಳಿಗಿಂತ ನಾನು ಚೆನ್ನಾಗಿ ಅರ್ಥೈಸಿಕೊಂಡಿರುವೆ' ಎಂದು ಹೇಳಿಕೊಂಡಿರುವ ಟ್ರಂಪ್, 'ನಾವು ಆರ್ಥಿಕವಾಗಿ ಮತ್ತಷ್ಟು ಸಮರ್ಥರಾಗಲಿದ್ದೇವೆ' ಎಂದಿದ್ದಾರೆ.

ತಲೆಮರೆಸಿಕೊಳ್ಳುವ ವಿದೇಶಿಯರ ವಿರುದ್ಧ ಕ್ರಮ

ನೀತಿ ರೂಪಿಸಲು ಕೇಂದ್ರಕ್ಕೆ ಸೂಚನೆ

ನವದೆಹಲಿ (ಪಿಟಿಐ): ಭಾರತದಲ್ಲಿ ಅಪರಾಧ ಎಸಗಿದ ವಿದೇಶಿ ಪ್ರಜೆಗಳು ಕಾನೂನಿನ ಕುಣಿಕೆಯಿಂದ ಪಾರಾಗದಂತೆ ನೋಡಿಕೊಳ್ಳಲು ಸೂಕ್ತ ನೀತಿಯೊಂದರ ಅಗತ್ಯವಿದೆ ಎಂಬುದನ್ನು ಸುಪ್ರೀಂ ಕೋರ್ಟ್ ಒತ್ತಿ ಹೇಳಿದೆ.

ವಂಚನೆ ಪ್ರಕರಣದ ಆರೋಪ ಎದುರಿಸುತ್ತಿರುವ ವಿದೇಶಿ ಪ್ರಜೆಯೊಬ್ಬರು ಜಾಮೀನಿನಲ್ಲಿ ಹೊರಬಂದು, ವಿಚಾರಣೆಗೆ ಹಾಜರಾಗದೆ ತಲೆಮರೆಸಿಕೊಂಡಿರುವುದು ತನ್ನ ಗಮನಕ್ಕೆ ಬಂದಾಗ ಸುಪ್ರೀಂ ಕೋರ್ಟ್ ಈ ಹೇಳಿಕೆ ನೀಡಿದೆ.

ಆರೋಪಿ, ನೈಜೀರಿಯಾದ ಪ್ರಜೆ ಅಲೆಕ್ಸ್ ಡೇವಿಡ್‌ಗೆ ಜಾಮೀನು ಮಂಜೂರು ಮಾಡಿ ಜಾರ್ಖಂಡ್ ಹೈಕೋರ್ಟ್ 2022ರ ಮೇನಲ್ಲಿ ಹೊರಡಿಸಿದ್ದ ಆದೇಶವನ್ನು ಸುಪ್ರೀಂ ಕೋರ್ಟ್ ಕಳೆದ ವರ್ಷ ಡಿಸೆಂಬರ್ 4ರಂದು ರದ್ದುಗೊಳಿಸಿತ್ತು.

ನ್ಯಾಯಮೂರ್ತಿಗಳಾದ ದೀಪಾಂಕರ್ ದತ್ತಾ ಮತ್ತು ಆಗಸ್ಟಿನ್ ಜಾರ್ಜ್ ಮಸೀಹ್ ಅವರ ಪೀಠ ಆಗಸ್ಟ್ 26ರಂದು ಈ ಪ್ರಕರಣದ ವಿಚಾರಣೆ ನಡೆಸಿದೆ. ಕ್ರಿಮಿನಲ್ ಪ್ರಕರಣಗಳನ್ನು ಎದುರಿಸುತ್ತಿರುವ ನೈಜೀರಿಯಾ ಪ್ರಜೆಯನ್ನು ಹಸ್ತಾಂತರಿಸುವ ಬಗ್ಗೆ ನೈಜೀರಿಯಾ ಮತ್ತು ಭಾರತದ ನಡುವೆ ಯಾವುದೇ ದ್ವಿಪಕ್ಷೀಯ ಒಪ್ಪಂದವಿಲ್ಲ ಎಂದು ಈ ವೇಳೆ ಪೀಠ ಹೇಳಿದೆ.

'ಜಾಮೀನು ರದ್ದು ಮಾಡಿದ ಆದೇಶವನ್ನು ದೃಢೀಕರಿಸಿ ರಜಾಕಾಲದ ವಿಶೇಷ ಅರ್ಜಿಯನ್ನು ವಿಲೇವಾರಿ ಮಾಡಲಾಗಿದೆ. ಆದರೆ, ವಿದೇಶಿ ಪ್ರಜೆಗಳು ಭಾರತದಲ್ಲಿ ಅಪರಾಧ ಎಸಗಿದ ನಂತರ ಕಾನೂನಿನ ಕುಣಿಕೆಯಿಂದ ತಪ್ಪಿಸಿಕೊಳ್ಳದಂತೆ ನೀತಿ ರೂಪಿಸುವ ಅಥವಾ ತನಗೆ ಸೂಕ್ತ ಎನಿಸುವ ಕ್ರಮ ಜರುಗಿಸುವ ಮುಕ್ತ ಅವಕಾಶವನ್ನು ಕೇಂದ್ರ ಸರ್ಕಾರಕ್ಕೆ ನೀಡುತ್ತಿದ್ದೇವೆ' ಎಂದು ಪೀಠ ಹೇಳಿದೆ.

ಡೇವಿಡ್ ವಿರುದ್ಧ ಮಾಹಿತಿ ತಂತ್ರಜ್ಞಾನ ಕಾಯ್ದೆ ಜೊತೆಗೆ ವಂಚನೆ ಸೇರಿದಂತೆ ವಿವಿಧ ಅಪರಾಧಗಳ ಸಂಬಂಧ ಪ್ರಕರಣ ದಾಖಲಿಸಲಾಗಿದೆ. ಹೈಕೋರ್ಟ್‌ನಿಂದ ಜಾಮೀನು ಪಡೆದ ನಂತರ ಡೇವಿಡ್ ತಲೆಮರೆಸಿಕೊಂಡಿರುವುದನ್ನು ಪೀಠದ ಗಮನಕ್ಕೆ ತರಲಾಯಿತು.

ಲೋಕೋಪಯೋಗಿ ಇಲಾಖೆ

ಕಾರ್ಯನಿರ್ವಾಹಕ ಇಂಜಿನೀಯರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ ಬಾಗಲಕೋಟ

ಸಂಖ್ಯೆ.ಲೋಇ:ಬಾವಿ:ಪಿಬಿ:ಕೆಡಬ್ಲ್ಯು:2025–26/1925 ದಿನಾಂಕ: 02.09.2025

ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999–2000ರ ಪ್ರಕಾರ ಆ್ಯಕ್ಟ 2000ರ ನಿಯಮದಂತೆ ಸ್ಟಾಂಡರ್ಡ ಬಿಡ್ ಡಾಕ್ಯುಮೆಂಟ ಕೆ/ಡಬ್ಲೂ–1,2,3 ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ KPPP ಪೋರ್ಟಲ್ ಮುಖಾಂತರ ಬಾಗಲಕೋಟ ವಿಭಾಗದ ಅಡಿಯಲ್ಲಿಯ ಈ ಕೆಳಕಾಣಿಸಿದ ಕಾಮಗಾರಿಯ ಟೆಂಡರ ಅಹ್ವಾನಿಸಲಾಗಿದೆ.

ವರ್ಕ ಇಂಡೆಂಟ್ ನಂ: ಸಾಮಾನ್ಯ: 25399, 25407, 25409, 25389, 25413, 25417, 25433, 25435, 25438, 25410, 25428, 25425, 27358, 26553, 27083, 27085, 27089, 27090, 26729, 27308, 26720, 26726, 27460, 26755, 26984, 26989, 26996, 26991, 26783, 26782 26223, 26228, 26233, 26235, 26413, 26414, 26415, 26416, 26417, 26421, 26424, 26425, 26426, 26427, 26428, 26429, 26430, 26431 27463, 27033, 27464, 27015, 27019, 27462, 27040, 27044, 27045, 27459

ಎಸ್.ಸಿ.: 25390, 25415, 25393, 26754, 26725, 26757, 26756, 26807, 26978, 26992, 26999, 26987, 26988, 26225, 26237, 26418, 26420, 26423, 27011

ಎಸ್.ಟಿ.: 25405, 27305, 27087, 26753, 26781, 26422, 27037

Cat-I: 25401, 25371, 27088, 27293, 26995

Cat-IIA: 25384, 25387, 27076, 27080, 27422, 26721, 26715, 26751, 27017, 26985, 26419, 27009, 27042, 27456, 27461.

ಈ ಎಲ್ಲ ಕಾಮಗಾರಿಗಳ ಗರಿಷ್ಠ ಟೆಂಡರಗಿಟ್ಟ ಮೊತ್ತ ರೂ. 80.00 ಲಕ್ಷ ಹಾಗೂ ಕನಿಷ್ಠ ಮೊತ್ತ ರೂ. 6.00 ಲಕ್ಷಗಳ ವರೆಗಿನ ಕಾಮಗಾರಿಗಳಿಗೆ ಈ ಕೆಳಕಾಣಿಸಿದ ದಿನಾಂಕಗಳಂತೆ ಟೆಂಡರ ಅಹ್ವಾನಿಸಲಾಗಿದೆ.

ಅ)	ಟೆಂಡರ ಆಕ್ಷೇಪಣೆಗಾಗಿ ನಿಗದಿಪಡಿಸಿದ ದಿನಾಂಕ	:	12–09–2025 ರಂದು ಸಂಜೆ 5–30 ಘಂಟೆಯವರೆಗೆ
ಬ)	ಟೆಂಡರ ಸ್ವೀಕರಿಸುವ ದಿನಾಂಕ	:	18–09–2025 ರಂದು ಸಂಜೆ 4–00 ಘಂಟೆಯವರೆಗೆ
ಕ)	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	:	19–09–2025 ರಂದು ಸಂಜೆ 4.30 ಘಂಟೆಯವರೆಗೆ
ಡ)	ಆರ್ಥಿಕ ಬಿಡ್ ತೆರೆಯುವ ದಿನಾಂಕ	:	20–09–2025 ರಂದು ಸಂಜೆ 4.30 ಘಂಟೆಯವರೆಗೆ

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಬಾಗಲಕೋಟೆ.

ಡಿಐಪಿಆರ್/ಬಾಗಲಕೋಟೆ/255/ಮಣಿಪಾಲ್/2025–26

ಜಿಎಸ್‌ಟಿ ಕಡಿತ: ದಸರಾ ಉಡುಗೊರೆ

ಒಂದನೇ ಪುಟದಿಂದ...

'ಪ್ರಸ್ತುತ ಶೇ 5, 12, 18 ಹಾಗೂ ಶೇ 28ರಂತೆ ತೆರಿಗೆ ಹಂತಗಳಿವೆ. ಇವುಗಳನ್ನು ಪರಿಷ್ಕರಿಸಿ, ಕೇವಲ ಶೇ 5 ಹಾಗೂ ಶೇ 18ರಂತೆ ಎರಡು ಹಂತಗಳ ಜಿಎಸ್‌ಟಿ ವ್ಯವಸ್ಥೆ ಜಾರಿಗೊಳಿಸಲಾಗುವುದು. ಹೈಎಂಡ್ ಕಾರುಗಳು, ತಂಬಾಕು ಹಾಗೂ ಸಿಗರೇಟ್‌ಗಳು ಸೇರಿ ಕೆಲ ಐಷಾರಾಮಿ ವಸ್ತುಗಳ ಮೇಲೆ ವಿಶೇಷ ಶೇ 40ರಷ್ಟು ಜಿಎಸ್‌ಟಿ ವಿಧಿಸಲು ಮಂಡಳಿ ಅನುಮೋದಿಸಿದೆ' ಎಂದು ವಿವರಿಸಿದರು.

'ಗುಟ್ಕಾ, ತಂಬಾಕು ಮತ್ತು ತಂಬಾಕು ಉತ್ಪನ್ನಗಳು ಹಾಗೂ ಸಿಗರೇಟ್ ಹೊರತುಪಡಿಸಿ, ಉಳಿದ ಎಲ್ಲ ವಸ್ತುಗಳ ಮೇಲಿನ ಹೊಸ ದರಗಳು ಸೆಪ್ಟೆಂಬರ್ 22ರಿಂದ ಜಾರಿಗೆ ಬರಲಿವೆ' ಎಂದು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದರು.

ಜಿಎಸ್‌ಟಿ ವ್ಯವಸ್ಥೆಯ ಸರಳೀಕರಣ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ಸ್ವಾತಂತ್ರ್ಯೋತ್ಸವ ಅಂಗವಾಗಿ ಮಾಡಿದ ಭಾಷಣದಲ್ಲಿ ಘೋಷಿಸಿದ್ದರು. ಅಲ್ಲದೇ, ಅಮೆರಿಕವು ಭಾರತದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಶೇ 50ರಷ್ಟು ಸುಂಕ ವಿಧಿಸಿರುವ ಸಂದರ್ಭದಲ್ಲಿಯೇ ಈ ಜಿಎಸ್‌ಟಿ ವ್ಯವಸ್ಥೆಯಲ್ಲಿ ಸುಧಾರಣೆ ತಂದಿರುವುದು ಗಮನಾರ್ಹ.

ಎರಡು ಹಂತದ ತೆರಿಗೆ ವ್ಯವಸ್ಥೆ

ಒಂದನೇ ಪುಟದಿಂದ...

- 1,200 ಸಿ.ಸಿಗಿಂತ ಅಧಿಕ ಸಾಮರ್ಥ್ಯದ ಹಾಗೂ 4 ಸಾವಿರ ಎಂ.ಎಂ ಉದ್ದದ ಎಲ್ಲ ಆಟೊಮೊಬೈಲ್‌ಗಳು, 350 ಸಿ.ಸಿಗಿಂತ ಹೆಚ್ಚು ಸಾಮರ್ಥ್ಯದ ಮೋಟರ್ ಸೈಕಲ್‌ಗಳು, ಯಾಚ್‌ಗಳು, ವೈಯಕ್ತಿಕ ಬಳಕೆಯ ಏರ್‌ಕ್ರಾಫ್ಟ್‌ಗಳು, ರೇಸಿಂಗ್ ಕಾರುಗಳ ಮೇಲೆ ಶೇ 40ರಷ್ಟು ತೆರಿಗೆ
- ಎಲ್ಲ ಇ.ವಿಗಳ ಮೇಲೆ ಈಗ ಇರುವ ಶೇ 5ರಷ್ಟು ಜಿಎಸ್‌ಟಿ ಮುಂದುವರಿಕೆ

ಭಯದಲ್ಲೇ ರಾತ್ರಿ ಕಳೆದ ಆಫ್ಗನ್ನರು

ದರ–ಇ–ನೂರ್, ಅಫ್ಗಾನಿಸ್ತಾನ (ಎಎಫ್‌ಪಿ): ಪೂರ್ವ ಅಫ್ಗಾನಿಸ್ತಾನದಲ್ಲಿ ಸಂಭವಿಸಿದ ಭೀಕರ ಭೂಕಂಪದಿಂದಾಗಿ ಹಲವು ಕುಟುಂಬದವರು ನಿರಾಶ್ರಿತರಾಗಿ ಹಸಿವಿನಿಂದ ಬಳಲುತ್ತಿದ್ದಾರೆ. ಮತ್ತೆ ಕುಸಿದೀತು ಎಂಬ ಆತಂಕದಲ್ಲಿ ಅಳಿದುಳಿದ ಕಟ್ಟಡಗಳಿಗೆ ಕಾಲಿಡಲೂ ಹಿಂಜರಿಯುವ ಸ್ಥಿತಿ ನಿರ್ಮಾಣವಾಗಿದೆ.

ಆರಂಭದಲ್ಲಿ 6.0 ತೀವ್ರತೆಯ ಭೂಕಂಪವು ಪಾಕಿಸ್ತಾನದ ಗಡಿ ಹಂಚಿಕೊಂಡಿರುವ ಪ್ರದೇಶಗಳಲ್ಲಿ ಸಂಭವಿಸಿದ್ದು, 1,400ಕ್ಕೂ ಹೆಚ್ಚು ಜನರು ಮೃತಪಟ್ಟರು. ನಂತರ ಆರು ಬಾರಿ ತೀವ್ರವಾಗಿ ಮತ್ತು ಲೆಕ್ಕವಿಲ್ಲದಷ್ಟು ಬಾರಿ ಸಣ್ಣದಾಗಿ ಭೂಮಿ ಕಂಪಿಸಿದೆ.

ಹಸಿರು ಪರ್ವತಗಳ ನಡುವಿನ ಹಲವು ಕೃಷಿ ಗ್ರಾಮಗಳು ನೆಲಸಮವಾಗಿದ್ದು, ಭೂಕಂಪವಾಗಿ ಹಲವು ದಿನಗಳು ಕಳೆದರೂ ಜನರು ಇನ್ನೂ ಅವಶೇಷಗಳ ಅಡಿಯಲ್ಲಿದ್ದಾರೆ. ಇತರೆಡೆ, ಕೆಲವು ಮನೆಗಳು ಕೇವಲ ಭಾಗಶಃ ಧ್ವಂಸಗೊಂಡಿದೆ.

ಭಾರತದಿಂದ 21 ಟನ್ ಪರಿಹಾರ ಸಾಮಗ್ರಿ

ನವದೆಹಲಿ (ಪಿಟಿಐ): ಅಫ್ಗಾನಿಸ್ತಾನದ ಭೂಕಂಪ ಪೀಡಿತ ಪ್ರದೇಶದ ಜನರ ನೆರವಿಗಾಗಿ ಭಾರತವು 21 ಟನ್‌ಗಳಷ್ಟು ಪರಿಹಾರ ಸಾಮಗ್ರಿಗಳನ್ನು ತಲುಪಿಸಿದೆ. ಪೂರ್ವ ಅಫ್ಗಾನಿಸ್ತಾನದಲ್ಲಿ ಭಾನುವಾರ ನಡೆದ ರಿಕ್ಟರ್ ಮಾಪಕದಲ್ಲಿ 6.0 ತೀವ್ರತೆಯ ಭೂಕಂಪನದಿಂದಾಗಿ ಸುಮಾರು 1,400 ಜನರು ಮೃತಪಟ್ಟಿದ್ದು, 2,500ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ.

'ಭಾರತದ ಭೂಕಂಪ ಪರಿಹಾರ ನೆರವು ವಿಮಾನದ ಮೂಲಕ ಕಾಬೂಲ್ ತಲುಪಿದೆ. ಭಾರತವು ಪರಿಸ್ಥಿತಿ ಮೇಲ್ವಿಚಾರಣೆ ಮಾಡುವುದನ್ನು ಮುಂದುವರಿಸಲಿದೆ ಮತ್ತು ಮುಂಬರುವ ದಿನಗಳಲ್ಲಿ ಹೆಚ್ಚಿನ ಮಾನವೀಯ ನೆರವು ಕಳುಹಿಸಲಿದೆ' ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಹೇಳಿದ್ದಾರೆ.

ಕಂಬಳಿಗಳು, ಡೇರೆಗಳು, ಸ್ವಚ್ಛತಾ ಸಾಮಗ್ರಿಗಳ ಕಿಟ್‌ಗಳು, ನೀರು ಸಂಗ್ರಹ ಟ್ಯಾಂಕ್‌ಗಳು, ಜನರೇಟರ್‌ಗಳು, ಅಡುಗೆ ಪಾತ್ರೆಗಳು, ನೀರು ಶುದ್ಧೀಕರಣ ಘಟಕಗಳು, ಸ್ಲೀಪಿಂಗ್ ಬ್ಯಾಗ್‌ಗಳು, ಅತ್ಯಗತ್ಯ ಔಷಧಗಳು, ವ್ಹೀಲ್‌ಚೇರ್‌ಗಳು, ಹ್ಯಾಂಡ್ ಸ್ಯಾನಿಟೈಸರ್‌ಗಳು, ವೈದ್ಯಕೀಯ ಉಪಕರಣಗಳು ಸೇರಿದಂತೆ 21 ಟನ್ ಪರಿಹಾರ ಸಾಮಗ್ರಿಗಳನ್ನು ಮಂಗಳವಾರ ಕಳುಹಿಸಲಾಗಿದೆ ಎಂದು ಸಚಿವ ಜೈಶಂಕರ್ ಹೇಳಿದ್ದಾರೆ.

‘ಉತ್ತಮ ಕಥೆಗಾಗಿ ಕಾಯುತ್ತಿರುವೆ’

‘ಪಾರು’ ಧಾರಾವಾಹಿ ಮೂಲಕ ಮನೆಮಾತಾದ ಮೋಕ್ಷಿತ ಪೈ ನಟನೆಯ ‘ಮಿಡಲ್‌ಕ್ಲಾಸ್ ರಾಮಾಯಣ’ ಚಿತ್ರ ಬಿಡುಗಡೆಗೆ ಸಿದ್ಧವಿದೆ. ಸಿನಿಮಾದಲ್ಲಿನ ನಾಯಕಿ ಎಂದರೆ ಗ್ಲಾಮರ್ ಪಾತ್ರಕ್ಕೆ ಮಾತ್ರ ಸೀಮಿತವಲ್ಲ ಎಂದು ನಂಬಿರುವ ಅವರು ತಮ್ಮ ಸಿನಿಪಯಣದ ಕುರಿತು ಮಾತನಾಡಿದ್ದಾರೆ.

‘ಮಿಡಲ್‌ಕ್ಲಾಸ್ ರಾಮಾಯಣ’ ಚಿತ್ರದಲ್ಲಿ ‘ಸೌಂದರ್ಯ’ ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿರುವೆ. ಇಡೀ ಸಿನಿಮಾವೇ ಮಿಡಲ್‌ಕ್ಲಾಸ್‌ನವರ ಕಥೆ. ನಮ್ಮ ಕುಟುಂಬ ಸ್ವಲ್ಪ ಅಪ್ಪರ್ ಮಿಡಲ್‌ಕ್ಲಾಸ್ ಆಗಿರುತ್ತದೆ. ನಾನು ಕೂಡ ಎಂಎನ್‌ಸಿ ಕಂಪನಿಯಲ್ಲಿ ಕೆಲಸ ಮಾಡುತ್ತಿರುತ್ತೇನೆ. ಚಿತ್ರದಲ್ಲಿ ಡಿಗ್ಲಾಮರ್ ಆಗಿ ಕಾಣಿಸಿಕೊಂಡಿದ್ದೇನೆ. ನನ್ನ ಮೈಬಣ್ಣದಿಂದ ನನಗೆ ಹುಡುಗ ಸಿಗುತ್ತಿರುವುದಿಲ್ಲ. ಇಂಥ ಸನ್ನಿವೇಶದಲ್ಲಿ ಕೊನೆಗೆ ನನಗೆ ಹೇಗೆ, ಎಂಥ ಹುಡುಗ ಸಿಗುತ್ತಾನೆ? ಮದುವೆಯಾದ ಬಳಿಕ ಏನೆಲ್ಲ ರಾಮಾಯಣ ನಡೆಯುತ್ತದೆ ಎನ್ನುವುದೇ ಚಿತ್ರದ ಒಟ್ಟಾರೆ ಕಥೆ’ ಎಂದು ಮಾತು ಪ್ರಾರಂಭಿಸಿದರು.

ಕೌಟುಂಬಿಕ ಕಥಾ ಹಂದರ ಹೊಂದಿರುವ ಚಿತ್ರ 2022ರಲ್ಲಿಯೇ ಸೆಟ್ಟೇರಿತ್ತು. ಬೆಂಗಳೂರು ಸುತ್ತಮುತ್ತ ಚಿತ್ರೀಕರಣಗೊಂಡಿರುವ ಸಿನಿಮಾ ಸೆಪ್ಟೆಂಬರ್ 12ರಂದು ತೆರೆಗೆ ಬರುತ್ತಿದೆ. ಇತ್ತೀಚೆಗಷ್ಟೇ ಚಿತ್ರದ ಟ್ರೇಲರ್ ಕೂಡ ಬಿಡುಗಡೆಗೊಂಡಿದೆ. ಧನುಶ್ ಗೌಡ ವಿ. ನಿರ್ದೇಶನವಿದ್ದು, ವಿನು ಗೌಡ ಚಿತ್ರದ ನಾಯಕ.

‘ಸಿನಿಮಾದಿಂದ ಜನಪ್ರಿಯತೆ ಸಿಗುತ್ತದೆ ಎಂಬ ಮಾತಿದೆ. ಆದರೆ ಕಿರುತೆರೆ ಕೂಡ ಅದಕ್ಕಿಂತ ಹೆಚ್ಚಿನ ಜನಪ್ರಿಯತೆ ನೀಡುತ್ತದೆ. ನನ್ನ ಮೊದಲ ಧಾರಾವಾಹಿ ‘ಪಾರು’ ನನಗೆ ಅತ್ಯಂತ ಜನಪ್ರಿಯತೆ ತಂದುಕೊಟ್ಟಿತು. ನಾನು ಇವತ್ತು ಈ ಸ್ಥಾನದಲ್ಲಿರಲು ಆ ಧಾರಾವಾಹಿಯೇ ಕಾರಣ. ಅದರಿಂದಾಗಿಯೇ ಬಿಗ್‌ಬಾಸ್‌ನಲ್ಲಿ ಅವಕಾಶ ಲಭಿಸಿತು’ ಎನ್ನುತ್ತಾರೆ.

ಬೆಂಗಳೂರಿನವರಾದ ಇವರು ಪದವಿ ಮುಗಿಯುತ್ತಿದ್ದಂತೆ ಕಿರುತೆರೆಗೆ ಕಾಲಿಟ್ಟರು. ‘ನನಗೆ ನಟನೆ ಬಗ್ಗೆ ಏನೂ ಗೊತ್ತಿರಲಿಲ್ಲ. ಆಸಕ್ತಿಯೂ ಇರಲಿಲ್ಲ. ಭಾವಚಿತ್ರಗಳನ್ನು ನೋಡಿ ಬಲವಂತವಾಗಿ ಕರೆತಂದು ಧಾರಾವಾಹಿಯಲ್ಲಿ ಅವಕಾಶ ಕೊಟ್ಟರು. ನಾನು ಕೊಟ್ಟ ಕೆಲಸವನ್ನು ಶ್ರದ್ಧೆಯಿಂದ ಮಾಡುತ್ತೇನೆ. ಅದೇ ಕಠಿಣ ಶ್ರಮವೇ ನನ್ನನ್ನು ಇಲ್ಲಿತನಕ ಕರೆತಂದಿದೆ. ನಟನೆ ಕೈಹಿಡಿಯಿತು. ಜನರ ಪ್ರೀತಿಯಿಂದ ‘ಪಾರು’ ದೊಡ್ಡ ಮಟ್ಟದಲ್ಲಿ ಯಶಸ್ಸಾಯಿತು’ ಎಂದರು.

‘ಧಾರಾವಾಹಿ, ಸಿನಿಮಾಗಳಲ್ಲಿ ಅವಕಾಶ ಅರಸಿ ಬರುತ್ತಿದೆ. ಸಿನಿಮಾಕ್ಕೆ ಮಾತ್ರ ಸೀಮಿತವಾಗಿಲ್ಲ. ಧಾರಾವಾಹಿಯಾದರೂ ಉತ್ತಮ ಪಾತ್ರ ಸಿಗಬೇಕು. ಯಾವುದೇ ಉತ್ತಮ ಪ್ರಾಜೆಕ್ಟ್ ಸಿಕ್ಕರೂ ಕೆಲಸ ಮಾಡುವೆ. ಸಿನಿಮಾ ನಾಯಕಿ ಎಂದರೆ ಗ್ಲಾಮರ್‌ಗೆ ಮಾತ್ರ ಸೀಮಿತವಲ್ಲ. ಮಾಡುವ ಪಾತ್ರ ನೆನಪಿನಲ್ಲಿ ಉಳಿಯಬೇಕು. ಅಂಥ ಕಥೆಗಳಿಗೆ ಎದುರು ನೋಡುತ್ತಿರುವೆ. ಎಲ್ಲ ವಾಹಿನಿಗಳಿಂದಲೂ ಧಾರಾವಾಹಿ ಅವಕಾಶಗಳು ಬರುತ್ತಿವೆ. ಆದರೆ ಯಾವುದನ್ನೂ ಒಪ್ಪಿಕೊಂಡಿಲ್ಲ. ನನಗೆ ಕಥೆ ಇಷ್ಟವಾಗಬೇಕು’ ಎನ್ನುತ್ತಾರೆ ಅವರು.

‘ಇನ್ನೊಂದು ಸಿನಿಮಾ ಒಪ್ಪಿಕೊಂಡಿರುವೆ. ನವೆಂಬರ್‌ನಿಂದ ಚಿತ್ರೀಕರಣ ಪ್ರಾರಂಭವಾಗಲಿದೆ. ಸದ್ಯಕ್ಕೆ ನಟನೆ ಬಿಟ್ಟು ಬೇರೇನೂ ಮಾಡುತ್ತಿಲ್ಲ. ಆದರೆ ಭವಿಷ್ಯದಲ್ಲಿ ಚಿತ್ರರಂಗಕ್ಕೆ ಸಂಬಂಧಿತ ಚಟುವಟಿಕೆಗಳನ್ನು ಪ್ರಾರಂಭಿಸುವ ಆಲೋಚನೆಯಿದೆ. ನಟಿ ಎಂದಾಕ್ಷಣ ಅಂದವಾಗಿ ಕಾಣಬೇಕಿಲ್ಲ, ನಟನೆಗೂ ಪ್ರಾಮುಖ್ಯತೆ ಇರಬೇಕು. ಈಗ ಸಿನಿಮಾ ಮತ್ತು ಧಾರಾವಾಹಿ ಎಂಬ ಬೇಧಭಾವವಿಲ್ಲ. ಎರಡೂ ಒಂದೇ ಎಂಬಂತೆ ಆಗಿವೆ. ಎಲ್ಲಾದರೂ ಕಂಟೆಂಟ್ ಉತ್ತಮವಾಗಿರಬೇಕಷ್ಟೆ ಎಂಬುದು ನನ್ನ ನಿಲುವು’ ಎಂದು ಮಾತಿಗೆ ವಿರಾಮವಿತ್ತರು.



ಡಾರ್ಲಿಂಗ್ ಕೃಷ್ಣ, ಮನಿಶಾ

ಕೋಟಿ ವೀಕ್ಷಣೆ ಕಂಡ ನಾನೇ ನೀನಂತೆ

‘ಕೌಸಲ್ಯ ಸುಪ್ರಜಾ ರಾಮ’ ಸಿನಿಮಾ ಬಳಿಕ ನಿರ್ದೇಶಕ ಶಶಾಂಕ್ ಹಾಗೂ ನಟ ಡಾರ್ಲಿಂಗ್ ಕೃಷ್ಣ ಕಾಂಬಿನೇಷನ್‌ನಲ್ಲಿ ಬರುತ್ತಿರುವ ಸಿನಿಮಾ ‘ಬ್ರ್ಯಾಟ್’. ಈ ಸಿನಿಮಾದ ‘ನಾನೇ ನೀನಂತೆ’ ಹಾಡು ಇದೀಗ ಯುಟ್ಯೂಬ್‌ನಲ್ಲಿ ಒಂದು ಕೋಟಿ ವೀಕ್ಷಣೆ ಪಡೆದಿದೆ.

ಡಾಲ್ಫಿನ್ ಎಂಟರ್‌ಟೇನ್ಮೆಂಟ್ ನಿರ್ಮಾಣದ ಈ ಸಿನಿಮಾ ಅಕ್ಟೋಬರ್ ಅಥವಾ ನವೆಂಬರ್‌ನಲ್ಲಿ ಬಿಡುಗಡೆಗೆ ಸಿದ್ಧವಾಗುತ್ತಿದೆ. ಸಿದ್ ಶ್ರೀರಾಮ್ ಮತ್ತು ಲಹರಿ ಮಹೇಶ್ ಹಾಡಿರುವ ಈ ಹಾಡಿಗೆ ಅರ್ಜುನ್ ಜನ್ಯ ಸಂಗೀತ ನೀಡಿದ್ದಾರೆ. ಕನ್ನಡ ಸೇರಿದಂತೆ ಐದು ಭಾಷೆಗಳಲ್ಲಿ ಈ ಹಾಡು ರಿಲೀಸ್ ಆಗಿತ್ತು. ಇನ್‌ಸ್ಟಾಗ್ರಾಂನಲ್ಲಿ ಈ ಹಾಡಿಗೆ ಒಂದು ತಿಂಗಳ ಅವಧಿಯಲ್ಲಿ ಎರಡೂವರೆ ಲಕ್ಷ ಜನರು ರೀಲ್ಸ್ ಮಾಡಿದ್ದಾರೆ ಎಂದಿದೆ ಚಿತ್ರತಂಡ.

ಈ ಚಿತ್ರವು ಕನ್ನಡ ಸೇರಿದಂತೆ ಐದು ಭಾಷೆಗಳಲ್ಲಿ ರಿಲೀಸ್ ಆಗಲಿದೆ. ಈ ಹಿಂದೆ ಶಶಾಂಕ್, ಅರ್ಜುನ್ ಜನ್ಯ ಹಾಗೂ ಸಿದ್ ಶ್ರೀರಾಮ್ ಅವರ ಕಾಂಬಿನೇಶನ್‌ನಲ್ಲಿ ‘ಲವ್ 360’ ಚಿತ್ರದ ‘ಜಗವೇ ನೀನು ಗೆಳತಿಯೇ’ ಹಾಡು ಇದೇ ರೀತಿ ಹಿಟ್ ಆಗಿತ್ತು. ‘ನನ್ನ ಸಿನಿಪಯಣದಲ್ಲಿ ಅತೀ ಹೆಚ್ಚು ವೆಚ್ಚದಲ್ಲಿ ಮೂಡಿಬಂದಿರುವ ಹಾಡಿದು. ಈ ಹಾಡಿನ ಟ್ಯೂನ್ ಅಂತಿಮಗೊಳಿಸಲು ಸುಮಾರು 6 ತಿಂಗಳ ಸಮಯ ಬೇಕಾಯಿತು. ಕನ್ನಡದಲ್ಲಿ ಈ ಹಾಡನ್ನು ನಾನೇ ಬರೆದಿದ್ದೇನೆ’ ಎಂದಿದ್ದಾರೆ ಶಶಾಂಕ್. ಚಿತ್ರದಲ್ಲಿ ಡಾರ್ಲಿಂಗ್ ಕೃಷ್ಣ ಅವರಿಗೆ ಜೋಡಿಯಾಗಿ ಮನಿಶಾ ಕಂದಕೂರ್ ನಟಿಸಿದ್ದು, ಮಧ್ಯಮ ವರ್ಗದ ಹುಡುಗಿಯಾಗಿ ಅವರು ಕಾಣಿಸಿಕೊಂಡಿದ್ದಾರೆ.

ಅನುಷ್ಕಾ ಶೆಟ್ಟಿ

‘ಘಾಟಿ’ಗೆ ಪುಷ್ಪ ಸಾಥ್

ಪೃಥ್ವಿ ಅಂಬಾರ್ ನಟನೆಯ ‘ಕೊತ್ತಲವಾಡಿ’ ಸಿನಿಮಾವನ್ನು ನಿರ್ಮಾಣ ಮಾಡುವ ಮೂಲಕ ಚಿತ್ರರಂಗಕ್ಕೆ ಹೆಜ್ಜೆ ಇಟ್ಟಿದ್ದ ನಟ ಯಶ್ ತಾಯಿ ಪುಷ್ಪ ಅರುಣ್‌ಕುಮಾರ್ ಇದೀಗ ಸಿನಿಮಾ ವಿತರಣೆಯ ವಲಯ ಪ್ರವೇಶಿಸಿದ್ದಾರೆ.

ನಟಿ ಅನುಷ್ಕಾ ಶೆಟ್ಟಿ ನಟನೆಯ ತೆಲುಗು ಸಿನಿಮಾ ‘ಘಾಟಿ’ಯನ್ನು ಪುಷ್ಪ ಅರುಣ್‌ಕುಮಾರ್ ಕರ್ನಾಟಕದಲ್ಲಿ ವಿತರಣೆ ಮಾಡಲಿದ್ದಾರೆ. ಈ ಸಿನಿಮಾವನ್ನು ಕ್ರಿಶ್ ಜಗರ್ಲಾಮುಡಿ ನಿರ್ದೇಶಿಸಿದ್ದು, ಯುವಿ ಕ್ರಿಯೇಷನ್ಸ್ ನಿರ್ಮಾಣ ಮಾಡಿದೆ. ತಮಿಳು, ತೆಲುಗಿನಲ್ಲಿ ಈ ಸಿನಿಮಾ ತೆರೆಕಾಣುತ್ತಿದೆ. ಪಿಎ ಪ್ರೊಡಕ್ಷನ್ಸ್ ಲಾಂಛನದಲ್ಲಿ ಶ್ರೀಧರ್ ಕೃಪ ಕಂಬೈನ್ಸ್ ಮೂಲಕ ಈ ಸಿನಿಮಾ ಸೆ.5ರಂದು ತೆರೆಕಾಣಲಿದೆ.

ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಪುಷ್ಪ, ‘ಅನುಷ್ಕಾ ನಮ್ಮ ಮನೆ ಮಗಳು ಇದ್ದ ಹಾಗೆ. ಮುಂದಿನ ದಿನಗಳಲ್ಲಿ ಒಳ್ಳೆಯ ಸಿನಿಮಾಗಳ ವಿತರಣೆಯನ್ನು ಮುಂದುವರಿಸಲಿದ್ದೇನೆ. ನೂರಕ್ಕೂ ಅಧಿಕ ಚಿತ್ರಮಂದಿರಗಳಲ್ಲಿ ‘ಘಾಟಿ’ ಸಿನಿಮಾ ತೆರೆಕಾಣಲಿದೆ. ನಾನೊಬ್ಬಳೇ ಈ ಸಿನಿಮಾದ ವಿತರಣೆಯ ಜವಾಬ್ದಾರಿ ವಹಿಸಿಕೊಂಡಿದ್ದೇನೆ. ಮೊದಲು ತೆಲುಗು ಭಾಷೆಯ ಸಿನಿಮಾವನ್ನು ವಿತರಣೆಗೆ ತೆಗೆದುಕೊಂಡಿದ್ದೇನೆ. ಇದರ ಯಶಸ್ಸಿನ ಆಧಾರದ ಮೇಲೆ ಕನ್ನಡದಲ್ಲಿ ಡಬ್ ಆದ ಸಿನಿಮಾವನ್ನು ತೆಗೆದುಕೊಳ್ಳುತ್ತೇವೆ. ‘ಕೊತ್ತಲವಾಡಿ’ ಸಿನಿಮಾಗೆ ಚಿತ್ರಮಂದಿರಗಳ ಸಮಸ್ಯೆ ನಮಗೆ ಆಯಿತು. ಆ ಸಂದರ್ಭದಲ್ಲೇ ಮುಂದಿನ ದಿನಗಳಲ್ಲಿ ನಾನೇ ವಿತರಣೆಯ ಜವಾಬ್ದಾರಿ ತೆಗೆದುಕೊಳ್ಳುತ್ತೇನೆ ಎಂದಿದ್ದೆ. ಹೀಗಾಗಿ ಈ ಹೆಜ್ಜೆ ಇಟ್ಟಿದ್ದೇನೆ. ಹೆಣ್ಣುಮಕ್ಕಳಿಗೆ ಪ್ರೋತ್ಸಾಹಕೊಟ್ಟು ಈ ರೀತಿ ಸಿನಿಮಾ ಮಾಡಿದ್ದಾರೆ. ಇದಕ್ಕೆ ಹೆಮ್ಮೆಪಡಬೇಕು’ ಎಂದರು.

ಪುಷ್ಪ ಅರುಣ್‌ಕುಮಾರ್

‘ಆಂಧ್ರ ಪ್ರದೇಶ ಮತ್ತು ಒರಿಸ್ಸಾದ ಗಡಿ ಪ್ರದೇಶದಲ್ಲಿ ನಡೆಯುವ ಕಥೆ ಇದು. ಅಲ್ಲಿನ ಘಟ್ಟದ ಪ್ರದೇಶದಲ್ಲಿ ವಾಸಿಸುತ್ತಿರುವವರಿಗೆ ‘ಘಾಟಿ’ ಎಂದು ಕರೆಯಲಾಗುತ್ತದೆ. ಅವರ ವಿಶೇಷತೆಯೆಂದರೆ, ಒಬ್ಬೊಬ್ಬ ಘಾಟಿ 120 ರಿಂದ 150 ಕೆ.ಜಿ. ತೂಕ ಎತ್ತಿಕೊಂಡು ಬೆಟ್ಟ ಹತ್ತುತ್ತಾರೆ. ಅವರನ್ನು ಗಾಂಜಾ ಸಾಗಿಸುವುದಕ್ಕೆ ಬಳಸಿಕೊಳ್ಳಲಾಗುತ್ತದೆ. ಅವರ ಕಥೆಯನ್ನು ಈ ಚಿತ್ರದ ಮೂಲಕ ಹೇಳುವ ಪ್ರಯತ್ನ ಮಾಡುತ್ತಿದ್ದೇವೆ. ಅನುಷ್ಕಾ ಇಲ್ಲಿ ‘ಶೀಲಾವತಿ’ ಎಂಬ ಪಾತ್ರ ಮಾಡಿದ್ದಾರೆ. ‘ದೇಸಿರಾಜು’ ಎಂಬ ಪಾತ್ರದಲ್ಲಿ ವಿಕ್ರಮ್ ಪ್ರಭು ನಟಿಸಿದ್ದಾರೆ’ ಎಂದರು ನಿರ್ದೇಶಕ ಕ್ರಿಶ್.

ಮರಾಠರಿಗೆ ಮೀಸಲಾತಿ ಒಬಿಸಿ ಸಮುದಾಯ ಕಿಡಿ

ಮುಂಬೈ/ಛತ್ರಪತಿ ಸಂಭಾಜಿನಗರ (ಪಿಟಿಐ): ಮರಾಠರಿಗೆ ಕುಣಬಿ ಜಾತಿ ಪ್ರಮಾಣಪತ್ರ ನೀಡಲು ಮಹಾರಾಷ್ಟ್ರ ಸರ್ಕಾರ ಒಪ್ಪಿಗೆ ನೀಡಿದ್ದಕ್ಕೆ ಹಿಂದುಳಿದ ವರ್ಗಗಳ (ಒಬಿಸಿ) ನಾಯಕರು ಅಸಮಾಧಾನಗೊಂಡಿದ್ದಾರೆ. ಜೊತೆಗೆ, ಒಬಿಸಿ ಸಂಘಟನೆಗಳು ಕೂಡ ಆಕ್ರೋಶ ಹೊರಹಾಕಿದ್ದು, ಸರ್ಕಾರದ ನಿರ್ಧಾರದ ವಿರುದ್ಧ ಬೀದಿಗಿಳಿಯುವುದಾಗಿ ಬುಧವಾರ ಎಚ್ಚರಿಕೆ ನೀಡಿವೆ.

‘ಮರಾಠರಿಗೆ ಇನ್ನುಮುಂದೆ ಮೀಸಲಾತಿ ದೊರೆಯಲಿದೆ’ ಎಂದು ಮರಾಠಾ ಮೀಸಲಾತಿ ಹೋರಾಟಗಾರ ಮನೋಜ್ ಜರಾಂಗೆ ಅವರು ಬುಧವಾರ ಹೇಳಿದರು. ಆದರೆ, ಇತ್ತ ಒಬಿಸಿ ಸಮುದಾಯದ ಪ್ರಮುಖ ನಾಯಕ ಮತ್ತು ರಾಜ್ಯ ಸಚಿವ ಛಗನ್ ಭುಜಬಲ್ ಅವರು ಸಂಪುಟ ಸಭೆಗೆ ಹಾಜರಾಗಲಿಲ್ಲ. ಸರ್ಕಾರದಲ್ಲಿ ಎಲ್ಲವೂ ಸರಿಯಿಲ್ಲ ಎನ್ನುವುದನ್ನು ಇದು ಸೂಚಿಸಿತು.

ಒಬಿಸಿ ಹೋರಾಟಗಾರ ಲಕ್ಷ್ಮಣ್ ಹಾಕೆ ಪ್ರತಿಕ್ರಿಯಿಸಿ, ‘ಕುಣಬಿ ಜಾತಿ ಪ್ರಮಾಣಪತ್ರವನ್ನು ಮರಾಠರಿಗೆ ನೀಡಬೇಕು ಎಂಬ ಬೇಡಿಕೆಯನ್ನು ಒಪ್ಪಿಕೊಳ್ಳಲು ಸರ್ಕಾರಕ್ಕೆ ಯಾವುದೇ ಹಕ್ಕು ಇಲ್ಲ. ಈ ನಿರ್ಧಾರದ ವಿರುದ್ಧ ಹಿಂದುಳಿದ ವರ್ಗದವರು ಬೀದಿಗೆ ಇಳಿಯುತ್ತಾರೆ. ಒಬಿಸಿ ಕೋಟಾ ವ್ಯವಸ್ಥೆಯನ್ನು ದುರ್ಬಲಗೊಳಿಸಿರುವ ಬಗ್ಗೆ ರಾಜಕೀಯ ನಾಯಕರು ವಿವರಣೆ ನೀಡಬೇಕು’ ಎಂದರು.

ಆರೋಗ್ಯ ಸ್ಥಿರ: ‘ಜರಾಂಗೆ ಅವರ ಆರೋಗ್ಯವು ಸ್ಥಿರವಾಗಿದೆ. ಅವರ ರಕ್ತದಲ್ಲಿನ ಸಕ್ಕರೆ ಪ್ರಮಾಣವು ಕಡಿಮೆಯಾಗಿದೆ. ಮೂತ್ರಪಿಂಡವೂ ಉತ್ತಮ ಸ್ಥಿತಿಯಲ್ಲಿದೆ’ ಎಂದು ವೈದ್ಯರು ತಿಳಿಸಿದರು.

- ಅಕ್ರಮವಾಗಿ ಪ್ರತಿಭಟಿಸಿದ್ದಕ್ಕಾಗಿ ಮೀಸಲಾತಿ ಹೋರಾಟಗಾರರ ಮೇಲೆ ಮುಂಬೈನ ವಿವಿಧ ಠಾಣೆಗಳಲ್ಲಿ ಒಟ್ಟು 9 ಪ್ರಕರಣಗಳು ದಾಖಲಾಗಿವೆ
- ಉಪವಾಸ ಸತ್ಯಾಗ್ರಹವನ್ನು ಅಂತ್ಯಗೊಳಿಸಲಾಗಿದೆ ಎಂದು ಜರಾಂಗೆ ಅವರು ಬಾಂಬೆ ಹೈಕೋರ್ಟ್‌ಗೆ ತಿಳಿಸಿದರು. ‘ಪ್ರತಿಭಟನೆ ಸಂಬಂಧ ಆಸ್ತಿ ಹಾನಿ ಸೇರಿ ಹಲವು ಆರೋಪಗಳಿವೆ. ಈ ಎಲ್ಲದಕ್ಕೂ ಪ್ರಮಾಣಪತ್ರ ಸಲ್ಲಿಸಬೇಕು. ಹಾನಿಗೆ ನಷ್ಟ ಯಾರು ತುಂಬುತ್ತಾರೆ’ ಎಂದು ಜರಾಂಗೆ ಅವರಿಗೆ ಹೈಕೋರ್ಟ್ ಸೂಚಿಸಿತು
- ಐದು ದಿನಗಳವರೆಗೆ ನಡೆದಿದ್ದ ಪ್ರತಿಭಟನೆ ವೇಳೆ ಆಜಾದ್ ಮೈದಾನ ಮತ್ತು ಅದರ ಸುತ್ತಮುತ್ತಲ ಪ್ರದೇಶದಲ್ಲಿ 125 ಮೆಟ್ರಿಕ್ ಟನ್‌ನಷ್ಟು ಕಸ ಸಂಗ್ರಹಿಸಲಾಗಿದೆ

‘ನಿರ್ಧಾರದ ಬಗ್ಗೆ ಸಂತೋಷವಿದೆ’

ಮರಾಠರು ಮತ್ತು ಒಬಿಸಿ ಸಮುದಾಯಗಳ ಮಧ್ಯೆ ಸಂಘರ್ಷ ಆರಂಭವಾಗದಂತೆ ನೋಡಿಕೊಳ್ಳಬೇಕು ಎಂಬುದು ಈ ಸರ್ಕಾರದ ನಿರ್ಧಾರವಾಗಿದೆ. ಹೈದರಾಬಾದ್ ಗೆಜೆಟೀರ್‌ನಲ್ಲಿ ಕುಣಬಿ ಜಾತಿ ಪಟ್ಟಿಯಲ್ಲಿ ಮರಾಠರ ಹಿರೀಕರ ಹೆಸರುಗಳಿದ್ದರೆ, ಅವರಿಗೆ ಜಾತಿ ಪ್ರಮಾಣಪತ್ರ ಮತ್ತು ಮೀಸಲಾತಿ ದೊರೆಯಲಿದೆ. ನಮ್ಮ ನಿರ್ಧಾರವು ಮರಾಠ ಸಮುದಾಯಕ್ಕೆ ದೊಡ್ಡ ಮಟ್ಟದಲ್ಲಿ ಅನುಕೂಲ ಮಾಡಿದೆ ಎನ್ನುವುದಕ್ಕೆ ನನಗೆ ಸಂತೋಷವಿದೆ

ದೇವೇಂದ್ರ ಫಡಣವೀಸ್, ಮಹಾರಾಷ್ಟ್ರ ಮುಖ್ಯಮಂತ್ರಿ

ಉತ್ತರ ಭಾರತ: ಅಪಾಯಮಟ್ಟದಲ್ಲಿ ನದಿಗಳು

ಉತ್ತರ ಭಾರತದ ಹಲವು ರಾಜ್ಯಗಳಲ್ಲಿ ಸುರಿಯುತ್ತಿರುವ ನಿರಂತರ ಮಳೆಯಿಂದಾಗಿ ಜನಜೀವನ ಅಸ್ತವ್ಯಸ್ತಗೊಂಡಿದೆ. ಜಮ್ಮು–ಕಾಶ್ಮೀರ, ಹಿಮಾಚಲ ಪ್ರದೇಶ, ಪಂಜಾಬ್ ಹಾಗೂ ದೆಹಲಿಯಲ್ಲಿ ನದಿಗಳು ಉಕ್ಕಿ ಹರಿಯುತ್ತಿವೆ. ಪಂಜಾಬ್‌ನಲ್ಲಿ ಪ್ರವಾಹ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿದ್ದರೆ, ದೆಹಲಿಯಲ್ಲಿ ಯಮುನಾ ನದಿ ನೀರಿನ ಮಟ್ಟ ಹೆಚ್ಚಾಗಿ ಪ್ರವಾಹದ ಆತಂಕ ಎದುರಾಗಿದೆ

ಯಮುನಾ ನದಿ ನೀರಿನ ಮಟ್ಟ ಹೆಚ್ಚಿರುವುದರಿಂದ ನವದೆಹಲಿಯಲ್ಲಿ ಜಲಾವೃತಗೊಂಡ ಪ್ರದೇಶದಲ್ಲಿ ಬುಧವಾರ ಜನರು ದೋಣಿಯಲ್ಲಿ ಸಾಗಿದರು – ಪಿಟಿಐ ಚಿತ್ರ

ಕುಸಿದ ಮನೆಗಳು: 5 ಸಾವು

ಶಿಮ್ಲಾ: ಹಿಮಾಚಲ ಪ್ರದೇಶದಲ್ಲಿ ಭಾರಿ ಮಳೆ ಮುಂದುವರಿದಿದ್ದು, ಮನೆ ಕುಸಿತದ ಪ್ರತ್ಯೇಕ ಘಟನೆಗಳಲ್ಲಿ ಐವರು ಮಂಗಳವಾರ ಮೃತಪಟ್ಟಿದ್ದಾರೆ. ಅನೇಕ ಮನೆಗಳು ಹಾನಿಗೊಂಡಿವೆ. ಹಠಾತ್ ಪ್ರವಾಹ ಮತ್ತು ಭೂಕುಸಿತದಿಂದಾಗಿ 4 ರಾಷ್ಟ್ರೀಯ ಹೆದ್ದಾರಿಗಳು ಸೇರಿದಂತೆ 1,337 ರಸ್ತೆಗಳನ್ನು ಬಂದ್ ಮಾಡಲಾಗಿದೆ. ಹವಾಮಾನ ಇಲಾಖೆಯು ಹಲವು ಜಿಲ್ಲೆಗಳಲ್ಲಿ ಮಳೆಯ ಎಚ್ಚರಿಕೆ ನೀಡಿದ್ದು, ಆರೆಂಜ್ ಅಲರ್ಟ್ ಘೋಷಿಸಿದೆ.

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ/ಶ್ರೀನಗರ: ದೆಹಲಿಯಲ್ಲಿ ಯಮುನಾ ನದಿ ನೀರಿನ ಮಟ್ಟವು ಬುಧವಾರ 206.83 ಮೀಟರ್ ದಾಖಲಾಗಿದ್ದು, ಪ್ರವಾಹದ ಭೀತಿ ಎದುರಾಗಿದೆ. ತಗ್ಗು ಪ್ರದೇಶಗಳಲ್ಲಿ ಹಾಗೂ ನದಿ ತಟದಲ್ಲಿ ವಾಸಿಸುವ ಜನರನ್ನು ಸ್ಥಳಾಂತರಿಸಲಾಗುತ್ತಿದೆ. ಕಳೆದ ಕೆಲ ದಿನಗಳಿಂದ ದೆಹಲಿಯಲ್ಲಿ ಭಾರಿ ಮಳೆ ಸುರಿಯುತ್ತಿದೆ.

‘ವಜೀರಾಬಾದ್ ಮತ್ತು ಹತ್ನಿಕುಂಡ್ ಬ್ಯಾರೇಜ್‌ಗಳಿಂದ ಹೆಚ್ಚಿನ ಪ್ರಮಾಣದ ನೀರನ್ನು ಬಿಡುಗಡೆ ಮಾಡಲಾಗುತ್ತಿದೆ. ಹೀಗಾಗಿ ನದಿ ನೀರಿನ ಮಟ್ಟ ಇನ್ನೂ ಹೆಚ್ಚಾಗುವ ಸಾಧ್ಯತೆ ಇದೆ’ ಎಂದು ಅಧಿಕಾರಿಗಳು ತಿಳಿಸಿದರು.

ಹತ್ನಿಕುಂಡ್ ಬ್ಯಾರೇಜ್‌ನಿಂದ 1.62 ಲಕ್ಷ ಕ್ಯೂಸೆಕ್ ಹಾಗೂ ವಜೀರಾಬಾದ್‌ನಿಂದ 1.38 ಲಕ್ಷ ಕ್ಯೂಸೆಕ್ ನೀರನ್ನು ಯಮುನಾ ನದಿಗೆ ಬುಧವಾರ ಮುಂಜಾನೆ 8 ಗಂಟೆ ವೇಳೆಗೆ ಬಿಡುಗಡೆ ಮಾಡಲಾಯಿತು.

ಪಂಜಾಬ್‌ನಲ್ಲಿ ಪ್ರವಾಹ: 30 ಮಂದಿ ಬಲಿ

ಚಂಡೀಗಢ: 1988ರ ಬಳಿಕ ಇದೀಗ ಮತ್ತೆ ಭೀಕರ ಪ್ರವಾಹಕ್ಕೆ ಒಳಗಾಗಿರುವ ಪಂಜಾಬ್‌ನಲ್ಲಿ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿದೆ. ಎಲ್ಲಾ 23 ಜಿಲ್ಲೆಗಳೂ ಪ್ರವಾಹದಿಂದ ಹಾನಿಗೊಳಗಾಗಿದ್ದು, ಈವರೆಗೆ 30 ಮಂದಿ ಮೃತಪಟ್ಟಿದ್ದಾರೆ.

ರಕ್ಷಣೆ ಮತ್ತು ಪರಿಹಾರ ಕಾರ್ಯ ಮುಂದುವರಿದಿದೆ. ರೂಪನಗರ ಮತ್ತು ಪಟಿಯಾಲ ಜಿಲ್ಲೆಗಳಲ್ಲಿರುವ ಜನರಿಗೆ ಮತ್ತಷ್ಟು ಮಳೆಯ ಎಚ್ಚರಿಕೆ ನೀಡಲಾಗಿದೆ. ಸೆ.7ರವರೆಗೆ ಎಲ್ಲಾ ಶಾಲಾ ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ.

ಜಮ್ಮು ಕಾಶ್ಮೀರ ಮತ್ತು ಹಿಮಾಚಲ ಪ್ರದೇಶದಲ್ಲಿ ಮಳೆ ಕಡಿಮೆಯಾಗದ ಕಾರಣ ಹಿಮಾಲಯದಲ್ಲಿ ಹುಟ್ಟುವ ಬಿಯಾಸ್, ರಾವಿ ಹಾಗೂ ಸತಲುಜ್ ನದಿಗಳು ಉಕ್ಕಿ ಹರಿಯುತ್ತಿವೆ.

ಪ್ರವಾಹದ ಆತಂಕ: ಜಮ್ಮು ಮತ್ತು ಕಾಶ್ಮೀರದಲ್ಲಿ ಸುರಿಯುತ್ತಿರುವ ನಿರಂತರ ಮಳೆಯಿಂದಾಗಿ ಚೆನಾಬ್ ಹಾಗೂ ಝೇಲಮ್ ನದಿಗಳು ಅಪಾಯದ ಮಟ್ಟ ತಲುಪಿವೆ. ಇದರಿಂದ ಪ್ರವಾಹ ಉಂಟಾಗುವ ಆತಂಕ ಸೃಷ್ಟಿಯಾಗಿದೆ.

ರಿಯಾಸಿ ಜಿಲ್ಲೆಯಲ್ಲಿರುವ ವೈಷ್ಣೋದೇವಿ ದೇವಸ್ಥಾನದ ಮಾರ್ಗದಲ್ಲಿ ಭೂಕುಸಿತ ಸಂಭವಿಸಿದ್ದು, ಯಾವುದೇ ಪ್ರಾಣಹಾನಿಯಾಗಿಲ್ಲ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

‘ಭೂಕುಸಿತದಿಂದಾಗಿ ದೇವಸ್ಥಾನ ಸಂಪರ್ಕಿಸುವ ಮಾರ್ಗವು ಸ್ಥಗಿತಗೊಂಡಿದೆ. ಘಟನೆ ವೇಳೆ ಸ್ಥಳದಲ್ಲಿ ಯಾತ್ರಿಕರಿಲ್ಲದ ಕಾರಣ ಯಾವುದೇ ಸಾವು– ನೋವು ಸಂಭವಿಸಿಲ್ಲ. ಅವಶೇಷಗಳನ್ನು ತೆರವುಗೊಳಿಸುವ ಕಾರ್ಯಾಚರಣೆ ನಡೆಸಲಾಗುತ್ತಿದೆ’ ಎಂದು ತಿಳಿಸಿದರು.

ಜಮ್ಮು ಮತ್ತು ಕಟ್ರಾ ನಿಲ್ದಾಣಗಳಿಗೆ ಬರುವ ಮತ್ತು ಇಲ್ಲಿಂದ ಹೊರಹೋಗುವ 68 ರೈಲುಗಳನ್ನು ಸೆ.30ರವರೆಗೆ ರದ್ದುಗೊಳಿಸಲಾಗಿದೆ ಎಂದು ರೈಲ್ವೆ ಇಲಾಖೆ ಘೋಷಿಸಿದೆ. ಅಲ್ಲದೇ 24 ರೈಲುಗಳ ಸಂಚಾರ ಪುನಾರಂಭಗೊಳಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

1910ರ ಬಳಿಕ ಜಮ್ಮುವಿನಲ್ಲಿ ದಾಖಲೆಯ 380 ಮಿ.ಮೀ. ಮಳೆ ಸುರಿದಿದೆ. ಮಳೆ ಮತ್ತು ಹಠಾತ್ ಪ್ರವಾಹದಿಂದ ಪಠಾಣ್‌ಕೋಟ್–ಜಮ್ಮು ವಿಭಾಗದ ಹಲವು ಸ್ಥಳಗಳಲ್ಲಿ ರೈಲು ಸಂಚಾರ ಸ್ಥಗಿತಗೊಂಡಿದೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ಆಗಸ್ಟ್ 13ರಿಂದ ಈವರೆಗೆ ಮಳೆ ಸಂಬಂಧಿತ ವಿವಿಧ ಅವಘಡಗಳಲ್ಲಿ 160 ಜನರು ಸಾವಿಗೀಡಾಗಿದ್ದಾರೆ.

ಜಮ್ಮುವಿನಲ್ಲಿ ಭಾರಿ ಮಳೆ ಸುರಿಯುತ್ತಿರುವುದರಿಂದ ಆ.26ರಿಂದ ರಸ್ತೆ ಮತ್ತು ರೈಲು ಸಂಚಾರದಲ್ಲಿ ವ್ಯತ್ಯಯ ಉಂಟಾಗಿರುವುದರಿಂದ ಹಲವು ಯಾತ್ರಿಕರು ಸಿಲುಕಿಕೊಂಡಿದ್ದರು. ಕಟ್ರಾದ ವೈಷ್ಣೋದೇವಿ ದೇಗುಲದ ಬಳಿ ಸಂಭವಿಸಿದ ಭೂಕುಸಿತದಲ್ಲಿ 34 ಜನರು ಮೃತಪಟ್ಟಿದ್ದಾರೆ.

ದೆಹಲಿಯಲ್ಲಿ ಮುಳುಗಡೆಯಾಗಿರುವ ರಸ್ತೆಯಲ್ಲಿ ಜನರು ಸಾಗಿದರು –ಎಎಫ್‌ಪಿ ಚಿತ್ರ

ಕರ್ನಾಟಕ ಸೇರಿದಂತೆ ಕೆಲವು ರಾಜ್ಯಗಳಿಂದ ‘ಸುಪ್ರೀಂ’ನಲ್ಲಿ ಪ್ರತಿಪಾದನೆ

‘ಸಂವಿಧಾನದ ಅಡಿಪಾಯ ನಾಶಕ್ಕೆ ಯತ್ನ’

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ‘ರಾಜ್ಯಗಳು ಅಂಗೀಕರಿಸಿದ ಮಸೂದೆಗಳಿಗೆ ರಾಜ್ಯಪಾಲರು ಹಾಗೂ ರಾಷ್ಟ್ರಪತಿ ಅವರು ಅಂಕಿತ ಹಾಕುವುದಕ್ಕೆ ಕಾಲಮಿತಿ ನಿಗದಿ ಮಾಡಿ ಏಪ್ರಿಲ್ 8ರಂದು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪನ್ನು ಕೇಂದ್ರ ಸರ್ಕಾರ ಪ್ರಶ್ನೆ ಮಾಡುತ್ತಿದೆ. ಈ ಮೂಲಕ ಅದು, ಸಂವಿಧಾನದ ಅಡಿಪಾಯವನ್ನೇ ನಾಶ ಮಾಡಲು ಹೊರಟಿದೆ’ ಎಂದು ವಿಪಕ್ಷಗಳ ಆಡಳಿತವಿರುವ ರಾಜ್ಯಗಳಾದ ಕರ್ನಾಟಕ, ಪಶ್ಚಿಮ ಬಂಗಾಳ ಹಾಗೂ ಹಿಮಾಚಲ ಪ್ರದೇಶ, ಸುಪ್ರೀಂ ಕೋರ್ಟ್‌ನಲ್ಲಿ ಬುಧವಾರ ಪ್ರತಿಪಾದಿಸಿವೆ.

‘ಸಂವಿಧಾನದ ಆಶಯದಂತೆ ಕಾರ್ಯನಿರ್ವಹಣೆ ಮಾಡುವುದಕ್ಕೆ ರಾಜ್ಯಪಾಲರು ಅಡ್ಡಿಯಾಗುವುದಕ್ಕೆ ಅವಕಾಶ ನೀಡಬಾರದು. ರಾಜ್ಯಪಾಲರು ಸಮಾನಾಂತರ ತೀರ್ಪುಗಾರರಂತೆ ಅಧಿಕಾರ ಚಲಾಯಿಸಬಾರದು’ ಎಂದು ಈ ರಾಜ್ಯ ಸರ್ಕಾರಗಳ ಪರ ಹಾಜರಿದ್ದ ವಕೀಲರು ಸುಪ್ರೀಂ ಕೋರ್ಟ್‌ಗೆ ಹೇಳಿದರು.

ವಿಧಾನಸಭೆಗಳು ಅಂಗೀಕರಿಸಿದ ಮಸೂದೆಗಳಿಗೆ ಅಂಕಿತ ಹಾಕುವುದಕ್ಕೆ ರಾಷ್ಟ್ರಪತಿ ಹಾಗೂ ರಾಜ್ಯಪಾಲರಿಗೆ ನ್ಯಾಯಾಲಯ ಗಡುವು ನಿಗದಿ ಮಾಡಬಹುದೇ ಎಂಬ ಕುರಿತು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಕೇಳಿರುವ ಸಲಹೆಗೆ ಸಂಬಂಧಿಸಿ ನಡೆದ ವಿಚಾರಣೆ ವೇಳೆ, ಕಾಂಗ್ರೆಸ್ ಹಾಗೂ ಟಿಎಂಸಿ ಆಡಳಿತವಿರುವ ರಾಜ್ಯಗಳು ಈ ಪ್ರತಿಪಾದನೆ ಮಾಡಿವೆ.

ಮುಖ್ಯನ್ಯಾಯಮೂರ್ತಿ ಬಿ.ಆರ್. ಗವಾಯಿ ನೇತೃತ್ವದ ಐವರು ಸದಸ್ಯರ ಸಂವಿಧಾನ ಪೀಠ ವಿಚಾರಣೆ ನಡೆಸಿತು. ನ್ಯಾಯಮೂರ್ತಿಗಳಾದ ಸೂರ್ಯಕಾಂತ, ವಿಕ್ರಮನಾಥ್, ಪಿ.ಎಸ್.ನರಸಿಂಹ ಹಾಗೂ ಎ.ಎಸ್. ಚಂದೂರ್ಕರ್ ಈ ಪೀಠದಲ್ಲಿ ಇದ್ದಾರೆ.

ಪಶ್ಚಿಮ ಬಂಗಾಳ ಪರ ಹಿರಿಯ ವಕೀಲ ಕಪಿಲ್ ಸಿಬಲ್, ಕರ್ನಾಟಕ ಪರ ಗೋಪಾಲ್ ಸುಬ್ರಮಣಿಯನ್ ಹಾಗೂ ಹಿಮಾಚಲ ಪ್ರದೇಶ ಪರ ಆನಂದ ಶರ್ಮಾ ಹಾಜರಿದ್ದರು. ವಾದ ಆಲಿಸಿದ ಪೀಠವು, ವಿಚಾರಣೆಯನ್ನು ಸೆಪ್ಟೆಂಬರ್ 9ಕ್ಕೆ ಮುಂದೂಡಿತು.

ಬಿಜೆಪಿಯೇತರ ಪಕ್ಷಗಳ ಆಡಳಿತವಿರುವ ರಾಜ್ಯಗಳ ವಾದ

- ಮಸೂದೆಗಳು ಜನರ ಆಶಯಗಳನ್ನು ಒಳಗೊಂಡಿರುತ್ತವೆ. ಹೀಗಾಗಿ, ಜನರ ಈ ಆಶಯಗಳ ಕುರಿತು ರಾಜ್ಯಪಾಲರು ಹಾಗೂ ರಾಷ್ಟ್ರಪತಿಯವರು ತಮ್ಮ ಮನಸಿಗೆ ಬಂದಂತೆ ನಿರ್ಣಯಿಸಬಾರದು
- ವಿಧಾನಸಭೆಗಳು ಅಂಗೀಕರಿಸುವ ಮಸೂದೆಗಳ ಕುರಿತು ನ್ಯಾಯಾಂಗ ಪರಿಶೀಲನೆ ನಡೆಸಬಹುದು. ಆದರೆ, ಈ ಮಸೂದೆಗಳ ಕುರಿತು ನಿರ್ಧಾರ ಕೈಗೊಳ್ಳುವ ಸಾರ್ವಭೌಮ ಅಧಿಕಾರವನ್ನು ರಾಜ್ಯಗಳು ಹೊಂದಿದ್ದು, ಇದನ್ನು ರಾಜ್ಯಪಾಲರು ಪ್ರಶ್ನೆ ಮಾಡುವಂತಿಲ್ಲ
- ಶಾಸನ ರೂಪಿಸುವ ಪ್ರಕ್ರಿಯೆಯಲ್ಲಿ ಕಾರ್ಯಾಂಗವು ಹಸ್ತಕ್ಷೇಪ ಮಾಡುವಂತಿಲ್ಲ. ವಿಧಾನಸಭೆಗಳಲ್ಲಿ ಅಂಗೀಕಾರಗೊಂಡ ಮಸೂದೆಗಳಿಗೆ ರಾಜ್ಯಪಾಲರು ತಕ್ಷಣವೇ ಅಂಕಿತ ಹಾಕಬೇಕು. ಇದಕ್ಕಾಗಿ 3 ಅಥವಾ 6 ತಿಂಗಳು ತೆಗೆದುಕೊಳ್ಳಬಾರದು
- ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ ನಂತರದಿಂದ ಈ ವರೆಗೆ, ಸಂಸತ್‌ನಲ್ಲಿ ಅಂಗೀಕಾರಗೊಂಡ ಮಸೂದೆಗೆ ರಾಷ್ಟ್ರಪತಿ ಅಂಕಿತ ಹಾಕದೇ ತಡೆಹಿಡಿದ ನಿದರ್ಶನಗಳು ವಿರಳ
- ಯಾವುದೇ ಒಂದು ಮಸೂದೆಯನ್ನು ಪ್ರಶ್ನಿಸಿ ನಾಗರಿಕರು ನ್ಯಾಯಾಲಯದ ಮೆಟ್ಟಿಲೇರಬಹುದು. ಅಪರೂಪದ ಸಂದರ್ಭದಲ್ಲಿ ಮಾತ್ರ ಮಸೂದೆಗೆ ಅಂಕಿತ ಹಾಕುವುದಿಲ್ಲ ಎಂದು ರಾಜ್ಯಪಾಲರು ಹೇಳಬಹುದು
- ರಾಜ್ಯಗಳನ್ನು ಮುನ್ಸಿಪಾಲಿಟಿಗಳಂತೆ ನಡೆಸಿಕೊಳ್ಳಬಾರದು. ರಾಷ್ಟ್ರಪತಿಗಳು ಮಸೂದೆಯನ್ನು ತಡೆಹಿಡಿಯುವಂತಿಲ್ಲ. ಟಿಪ್ಪಣಿಯೊಂದಿಗೆ ಅದನ್ನು ರಾಜ್ಯಗಳಿಗೆ ತಕ್ಷಣವೇ ವಾಪಸು ಕಳುಹಿಸಬೇಕು
- ಮಸೂದೆಗಳಿಗೆ ಅಂಕಿತ ಹಾಕಲು ಕಾಲಮಿತಿ ವಿಧಿಸುವುದಕ್ಕೆ ಸಂಬಂಧಿಸಿ ರಾಷ್ಟ್ರಪತಿಯವರು ಕೇಳಿರುವ 14 ಪ್ರಶ್ನೆಗಳು ‘ಕಾಲ್ಪನಿಕ’ವಾಗಿ ಇಲ್ಲವೇ ‘ವಾಸ್ತವ ಸಂಗತಿಗಳ ಕೊರತೆಯಿಂದ ಕೂಡಿವೆ’

ಪಾತಕಿ ‘ಡ್ಯಾಡಿ’ಗೆ 17 ವರ್ಷಗಳ ಬಳಿಕ ಜಾಮೀನು

ಅರುಣ್ ಗವಳಿ

ಮುಂಬೈ (ಪಿಟಿಐ): ಕೊಲೆ ಪ್ರಕರಣವೊಂದರಲ್ಲಿ ನಾಗ್ಪುರ ಕೇಂದ್ರ ಕಾರಾಗೃಹದಲ್ಲಿ 17 ವರ್ಷಗಳಿಂದ ಜೀವಾವಧಿ ಶಿಕ್ಷೆ ಎದುರಿಸುತ್ತಿದ್ದ ಪಾತಕಿ ಹಾಗೂ ರಾಜಕಾರಣಿ ಅರುಣ್ ಗವಳಿ (76) ಬುಧವಾರ ಜೈಲಿನಿಂದ ಬಿಡುಗಡೆ ಆಗಿದ್ದಾನೆ.

ಮುಂಬೈನ ಶಿವಸೇನಾ ಕಾರ್ಪೊರೇಟರ್ ಕಮಲಾಕರ್ ಜಾಮಸಾಂಡೇಕರ್ ಅವರ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಗವಳಿಗೆ ಸುಪ್ರೀಂ ಕೋರ್ಟ್ ಕಳೆದ ವಾರ ಜಾಮೀನು ಮಂಜೂರು ಮಾಡಿತ್ತು. 2007ರಲ್ಲಿ ನಡೆದಿದ್ದ ಪ್ರಕರಣ ಅದು.

ನ್ಯಾಯಮೂರ್ತಿಗಳಾದ ಎಂ.ಎಂ. ಸುಂದರೇಶ್ ಮತ್ತು ಎನ್. ಕೋಟೀಶ್ವರ್ ಸಿಂಗ್ ಅವರನ್ನೊಳಗೊಂಡ ಪೀಠವು ಜಾಮೀನು ನೀಡಿದೆ. ಜೈಲಿನ ಹೊರಗೆ ಗವಳಿಯ ಕುಟುಂಬದ ಸದಸ್ಯರು, ವಕೀಲರು ಸೇರಿದಂತೆ ಅಪಾರ ಸಂಖ್ಯೆಯಲ್ಲಿ ಬೆಂಬಲಿಗರು ಸೇರಿದ್ದರಿಂದ ಬಿಗಿ ಭದ್ರತೆ ಒದಗಿಸಲಾಗಿತ್ತು. ನಾಗ್ಪುರ ವಿಮಾನ ನಿಲ್ದಾಣದಿಂದ ಆತ ಮುಂಬೈಗೆ ಪ್ರಯಾಣಿಸಿದ್ದಾನೆ.

‘ಡ್ಯಾಡಿ’ ಎಂದೇ ಜನಪ್ರಿಯನಾಗಿದ್ದ ಗವಳಿ, ಅಖಿಲ ಭಾರತೀಯ ಸೇನಾ (ಎಬಿಎಸ್) ಸ್ಥಾಪಿಸಿದ್ದ. 2004ರಿಂದ 2009ರ ಅವಧಿಯಲ್ಲಿ ಮುಂಬೈನ ಚಿಂಚಪೋಕಲಿ ಕ್ಷೇತ್ರದ ಶಾಸಕನಾಗಿದ್ದ. 2012ರಲ್ಲಿ ಮುಂಬೈನ ಸೆಷನ್ಸ್ ಕೋರ್ಟ್ ಜೀವಾವಧಿ ಶಿಕ್ಷೆ, ₹17 ಲಕ್ಷ ದಂಡ ವಿಧಿಸಿತ್ತು.

10 ಕೊಲೆ ಪ್ರಕರಣ ಸೇರಿ ಆತನ ವಿರುದ್ಧ 46 ಪ್ರಕರಣಗಳು ದಾಖಲಾಗಿವೆ ಎಂದು ಮಹಾರಾಷ್ಟ್ರ ಸರ್ಕಾರ ವಾದಿಸಿತ್ತು. ಎಂಬತ್ತು, ತೊಂಬತ್ತರ ದಶಕದಲ್ಲಿ ಮುಂಬೈನಲ್ಲಿ ದಾವೂದ್ ಇಬ್ರಾಹಿಂ ಗ್ಯಾಂಗ್‌ಗೆ ಸಮಾಂತರವಾಗಿ ಅಪರಾಧಿಗಳ ತಂಡವೊಂದನ್ನು ಗವಳಿ ಕಟ್ಟಿದ್ದ.

ಸಂಕ್ಷಿಪ್ತ ಸುದ್ದಿ

ಇಲಿಗಳು ಕಚ್ಚಿದ್ದ ನವಜಾತ ಶಿಶು ಸಾವು

ಇಂದೋರ್ (ಪಿಟಿಐ): ನವಜಾತ ಶಿಶುವನ್ನು ಇಲಿಗಳು ಕಚ್ಚಿದ ಮತ್ತೊಂದು ಘಟನೆ ಇಲ್ಲಿನ ಮಹಾರಾಜ ಯಶವಂತರಾವ್ ಸರ್ಕಾರಿ ಆಸ್ಪತ್ರೆಯಲ್ಲಿ ನಡೆದಿದ್ದು, ಹೆಣ್ಣುಶಿಶುವೊಂದು ಬುಧವಾರ ಮೃತಪಟ್ಟಿದೆ. ‘ಸೆಪ್ಟಿಸೆಮಿಯಾದಿಂದ (ರಕ್ತದಲ್ಲಿ ವಿಷಕಾರಿ ಅಂಶ ಪತ್ತೆಯಾಗುವುದು) ಶಿಶು ಮೃತಪಟ್ಟಿದೆ’ ಎಂದು ಆಸ್ಪತ್ರೆ ಆಡಳಿತ ಮಂಡಳಿ ಹೇಳಿದೆ.

‘ಶಿಶುವು ಕೇವಲ 1.6 ಕೆ.ಜಿ. ತೂಕವಿತ್ತು. ಏಳು ದಿನಗಳ ಹಿಂದಷ್ಟೇ ಶಿಶುವಿಗೆ ಶಸ್ತ್ರಚಿಕಿತ್ಸೆ ಮಾಡಲಾಗಿತ್ತು. ಸೆಪ್ಟಿಸೆಮಿಯಾ ಕಾರಣದಿಂದ ಮಗುವಿನ ಆರೋಗ್ಯವು ತೀವ್ರ ಹದಗೆಟ್ಟಿತ್ತು. ಶಿಶುವಿಗೆ ಹುಟ್ಟಿದಾಗಲೇ ಹಲವು ಸಮಸ್ಯೆಗಳಿದ್ದವು. ಕರುಳಿನಲ್ಲಿಯೂ ಸಮಸ್ಯೆ ಇತ್ತು’ ಎಂದು ಆಸ್ಪತ್ರೆಯ ಉಪ ಸೂಪರಿಂಟೆಂಡೆಂಟ್ ಡಾ. ಜಿತೇಂದ್ರ ವರ್ಮಾ ಹೇಳಿದರು.

‘ಕುಟುಂಬಸ್ಥರ ಕೋರಿಕೆ ಮೇರೆಗೆ ಶಿಶುವಿನ ಮರಣೋತ್ತರ ಪರೀಕ್ಷೆ ನಡೆಸಲಿಲ್ಲ. ಮೃತದೇಹವನ್ನು ಹಾಗೆಯೇ ಹಸ್ತಾಂತರಿಸಲಾಯಿತು. ಶಿಶುವಿನ ಎಡಗೈನ ಎರಡು ಬೆರಳುಗಳನ್ನು ಇಲಿಗಳು ಕಚ್ಚಿದ್ದವು. ಇದರಿಂದ ಬೆರಳುಗಳಲ್ಲಿ ಸಣ್ಣಪುಟ್ಟ ಗಾಯಗಳಾಗಿದ್ದವು’ ಎಂದರು.

‘ಇಲಿಗಳು ಕಚ್ಚಿದ್ದ ಮತ್ತೊಂದು ನವಜಾತ ಶಿಶು ಮಂಗಳವಾರ ಮೃತಪಟ್ಟಿತ್ತು. ಈ ಮಗುವಿಗೂ ಹುಟ್ಟುವಾಗಲೇ ಹಲವು ಸಮಸ್ಯೆಗಳಿದ್ದವು. ನ್ಯುಮೋನಿಯಾ ಸೋಂಕಿನಿಂದ ಶಿಶು ಮೃತಪಟ್ಟಿತ್ತು’ ಎಂದು ಆಸ್ಪತ್ರೆಯ ಅಧಿಕಾರಿಗಳು ಹೇಳಿದರು.

ಒಂಬತ್ತು ಮಹಿಳೆಯರು ಸೇರಿ 20 ನಕ್ಸಲರ ಶರಣಾಗತಿ

ಸುಕ್ಮಾ (ಪಿಟಿಐ): 9 ಮಹಿಳೆಯರು ಸೇರಿ 20 ನಕ್ಸಲರು ಮಂಗಳವಾರ ಇಲ್ಲಿ ಶರಣಾದರು.

ಶರಣಾದವರಲ್ಲಿ ಹೆಚ್ಚಿನವರು ಪೀಪಲ್ಸ್ ಲಿಬರೇಷನ್ ಗೆರಿಲ್ಲಾ ಆರ್ಮಿ (ಪಿಎಲ್‌ಜಿಎ) ಬೆಟಾಲಿಯನ್ 1ರ ಸದಸ್ಯರು.

ಛತ್ತೀಸಗಢ ಸರ್ಕಾರವು ನಕ್ಸಲರ ಪುನರ್ವಸತಿಗಾಗಿ ಜಾರಿಗೊಳಿಸಿರುವ ‘ನಿಯಾದ್ ನೆಲ್ಲನಾರ್’ (ನಿಮ್ಮ ಮಾದರಿ ಗ್ರಾಮ) ಯೋಜನೆಯು ನಕ್ಸಲರ ಶರಣಾಗತಿ ಹಾದಿಯನ್ನು ಸುಗಮಗೊಳಿಸಿದೆ. ಶರಣಾದ 20 ಮಂದಿಯಲ್ಲಿ 11 ಜನರಿಗೆ ಒಟ್ಟು ₹33 ಲಕ್ಷದಷ್ಟು ನಗದು ಪರಿಹಾರ ಲಭಿಸಿದೆ.

ಖೇರಾ ಪತ್ನಿಯ ಬಳಿಯೂ ಎರಡು ಎಪಿಕ್: ಬಿಜೆಪಿ

ನವದೆಹಲಿ (ಪಿಟಿಐ): ‘ಕಾಂಗ್ರೆಸ್ ಮುಖಂಡ ಪವನ್ ಖೇರಾ ಅವರ ಪತ್ನಿಯ ಬಳಿಯೂ ಎರಡು ಮತದಾರರ ಗುರುತಿನ ಚೀಟಿಗಳಿವೆ’ ಎಂದು ಬಿಜೆಪಿ ಆರೋಪಿಸಿದೆ.

ಎರಡು ಕ್ಷೇತ್ರಗಳ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಣಿ ಮಾಡಿಸಿದ್ದಾರೆ ಎಂದು ಚುನಾವಣಾ ಆಯೋಗದ ಅಧಿಕಾರಿಗಳು ಪವನ್ ಖೇರಾ ಅವರಿಗೆ ನೋಟಿಸ್ ಜಾರಿಗೊಳಿಸಿದ ಬೆನ್ನಲ್ಲೇ, ಅವರ ಪತ್ನಿಯ ಬಳಿಯೂ ಎರಡು ಎಪಿಕ್‌ಗಳಿವೆ ಎಂದು ಬಿಜೆಪಿ ದೂರಿದೆ.

ಪ್ರೊ ಕಬಡ್ಡಿ ಲೀಗ್: ಮಿಂಚಿದ ಅಸ್ಲಂ, ಆದಿತ್ಯ ಶಿಂದೆ

ಪುಣೇರಿ ಪಲ್ಟನ್‌ಗೆ ಹ್ಯಾಟ್ರಿಕ್ ಜಯ

ವಿಶಾಖಪಟ್ಟಣ (ಪಿಟಿಐ): 2023ರ ಚಾಂಪಿಯನ್ ಪುಣೇರಿ ಪಲ್ಟನ್, ಪ್ರೊ ಕಬಡ್ಡಿ ಲೀಗ್ ಹಾಲಿ ಆವೃತ್ತಿಯಲ್ಲಿ ಉತ್ತಮ ಪ್ರದರ್ಶನ ಮುಂದುವರಿಸಿದ್ದು ಬುಧವಾರ 45–36 ರಿಂದ ಬೆಂಗಾಲ್ ವಾರಿಯರ್ಸ್ ತಂಡವನ್ನು 9 ಪಾಯಿಂಟ್‌ಗಳಿಂದ ಸೋಲಿಸಿತು. ಇದು ತಂಡಕ್ಕೆ ಸತತ ಮೂರನೇ ಗೆಲುವು.

ನಾಯಕ ಅಸ್ಲಂ ಇನಾಂದಾರ್ (11 ಅಂಕ) ಅವರ ಕೌಶಲದ ಆಟದ ಜೊತೆಗೆ ಆದಿತ್ಯ ಶಿಂದೆ (11 ಅಂಕ) ಸೂಪರ್ ಟೆನ್ ಮತ್ತು ವಿಶಾಲ್ ಭಾರದ್ವಾಜ್ (5 ಅಂಕ) ಅವರು ಹೈಫೈವ್‌ಗಳೊಂದಿಗೆ ಪುಣೇರಿ ಗೆಲುವಿನಲ್ಲಿ ಮಿಂಚಿದರು.

ವಾರಿಯರ್ಸ್ ಕ್ಯಾಪ್ಟನ್ ಹಾಗೂ ರೇಡರ್ ದೇವಾಂಕ್ ದಲಾಲ್ (17 ಅಂಕ) ಹೊನಲು ಬೆಳಕಿನಲ್ಲಿ ಮಿಂಚಿದರೂ, ಅವರಿಗೆ ಉಳಿದವರಿಂದ ಸಮರ್ಥ ಬೆಂಬಲ ದೊರೆಯಲಿಲ್ಲ.

ಶಿಂದೆ ಮತ್ತು ಅಸ್ಲಾಂ ಅವರ ಪರಿಣಾಮಕಾರಿ ರೇಡಿಂಗ್ ಬಲದಿಂದ ಪಲ್ಟನ್ ಆರಂಭದಿಂದಲೇ ಮುನ್ನಡೆ ಪಡೆಯಿತು. ಶಿಂಧೆ ಅವರಂತೂ ಒಂದರ ಮೇಲೊಂದರಂತೆ ಯಶಸ್ವಿ ರೇಡ್‌ಗಳನ್ನು ಮಾಡಿ ವಾರಿಯರ್ಸ್ ಪಾಳೆಯವನ್ನು ಒತ್ತಡಕ್ಕೆ ತಳ್ಳಿದರು. ಅಸ್ಲಂ ಇನ್ನೊಂದೆಡೆ ಸೂಪರ್ ರೇಡ್‌ನಲ್ಲಿ ವಾರಿಯರ್ಸ್ ಡಿಫೆಂಡರ್‌ಗಳಾದ ನಿತೇಶ್ ಮತ್ತು ಪ್ರತೀಕ್ ಅವರನ್ನು ಔಟ್ ಮಾಡಿ ತಮ್ಮ ತಂಡದ ಮುನ್ನಡೆ (13–9) ಹೆಚ್ಚಿಸಿದರು. ಆದರೆ ವಾರಿಯರ್ಸ್‌ನ ದೇವಾಂಕ್ ಅವರ ರೇಡಿಂಗ್ ಪಂದ್ಯ ಏಕಪಕ್ಷೀಯವಾಗುವುದನ್ನು ತಪ್ಪಿಸಿತು.

9ನೇ ನಿಮಿಷ ವಾರಿಯರ್ಸ್ ಮೊದಲು ಆಲೌಟ್ ಆಯಿತು. ಅಸ್ಲಂ ಅವರು ದೇವಾಂಕ್ ಅವರನ್ನು ಅಮೋಘವಾಗಿ ಟ್ಯಾಕಲ್ ಮಾಡಿ ಎದುರಾಳಿ ಅಂಕಣ ಬರಿದುಗೊಳಿಸಿದರು.

ಕೆಲಹೊತ್ತಿನಲ್ಲೇ ವಾರಿಯರ್ಸ್‌ನ ಮನ್‌ಪ್ರೀತ್ ಅವರ ಯಶಸ್ವಿ ರೇಡ್‌ನಲ್ಲಿ ಅಸ್ಲಂ, ಅಭಿನೇಶ್ ನಾದರಾಜನ್ ನಿರ್ಗಮಿಸಬೇಕಾಯಿತು. ಇದಾದ ಬಳಿಕ ಪಲ್ಟನ್ ಆಲೌಟ್ ಆಗಿ ವಾರಿಯರ್ಸ್ ಹಿನ್ನಡೆ ಕಡಿಮೆ ಮಾಡಿತು. ವಿರಾಮದ ವೇಳೆಗೆ ಸ್ಕೋರ್ 26–22.

ಮೂರನೇ ಕ್ವಾರ್ಟರ್‌ನಲ್ಲಿ ಪುಣೇರಿ ಪಲ್ಟನ್ ಮೇಲುಗೈ ಸಾಧಿಸಿತು. ದೇವಾಂಕ್ ಕೆಲವು ರೇಡ್‌ಗಳಲ್ಲಿ ಮಾತ್ರ ಯಶಸ್ಸು ಪಡೆದರೂ, ಆದಿತ್ಯ ಶಿಂಧೆ ಪಲ್ಟನ್ ತಂಡಕ್ಕೆ ಮುನ್ನಡೆ ಒದಗಿಸಿಕೊಟ್ಟರು. ವಿರಾಮದ ಬಳಿಕ 14ನೇ ನಿಮಿಷ ವಿಶಾಲ್, ಎದುರಾಳಿ ಆಟಗಾರ ಪ್ರತೀಕ್ ಅವರನ್ನು ಟ್ಯಾಕಲ್ ಮಾಡುವುದರೊಂದಿಗೆ ವಾರಿಯರ್ಸ್ ಎರಡನೇ ಸಲ ಆಲೌಟ್ ಆಯಿತು.



ಬೆಂಗಾಲ್ ವಾರಿಯರ್ಸ್ ರೇಡರ್‌ನನ್ನು ಹಿಡಿಯಲು ಯತ್ನಿಸಿದ ಪುಣೇರಿ ಪಲ್ಟನ್ ಡಿಫೆಂಡರ್‌ಗಳು 'ಎಕ್ಸ್' ಚಿತ್ರ

ಟೈಬ್ರೇಕರ್‌ನಲ್ಲಿ ಹರಿಯಾಣ ಸ್ಟೀಲರ್ಸ್‌ಗೆ ರೋಚಕ ಗೆಲುವು

ರೋಚಕವಾಗಿದ್ದ ದಿನದ ಎರಡನೇ ಪಂದ್ಯದಲ್ಲಿ ಹರಿಯಾಣ ಸ್ಟೀಲರ್ಸ್ ತಂಡವು ಟೈಬ್ರೇಕರ್‌ನಲ್ಲಿ 7–6ರಿಂದ ಯು ಮುಂಬಾ ತಂಡವನ್ನು ಮಣಿಸಿತು.

ಈ ಪಂದ್ಯದಲ್ಲಿ ನಿಗದಿತ ಅವಧಿಯ ಆಟ ಮುಗಿದಾಗ ಉಭಯ ತಂಡಗಳು ತಲಾ 36 ಪಾಯಿಂಟ್ಸ್ ಗಳಿಸಿದ್ದವು. ಇದು ಈ ಬಾರಿಯ ಲೀಗ್‌ನಲ್ಲಿ ಮೂರನೇ ಟೈಬ್ರೇಕರ್.

ಹರಿಯಾಣ ಪರ ನವೀನ್ ಕುಮಾರ್ ರೇಡಿಂಗ್‌ನಲ್ಲಿ 9 ಪಾಯಿಂಟ್ಸ್ ಗಳಿಸಿದರೆ, ವಿನಯ್ 8 ಹಾಗೂ ಶಿವಂ ಪಟಾರೆ 6 ಪಾಯಿಂಟ್ಸ್ ಸಂಪಾದಿಸಿದರು. ನೀರಜ್ ಕುಮಾರ್, ಜೈದೀಪ್ ದಹಿಯಾ, ರಾಹುಲ್ ಸೇತಪಾಲ್ ಹಾಗೂ ಕೆ. ರಾಹುಲ್ ತಲಾ ಎರಡು ಟ್ಯಾಕಲ್ ಪಾಯಿಂಟ್ಸ್ ಗಳಿಸಿದರು. ಮುಂಬಾ ಪರ ಅಜಿತ್ ಚೌಹಾನ್ 12 ರೇಡಿಂಗ್ ಪಾಯಿಂಟ್ಸ್ ಕಲೆಹಾಕಿದರು.

ಗುರುವಾರದ ಪಂದ್ಯಗಳು:
ಜೈಪುರ ಪಿಂಕ್ ಪ್ಯಾಂಥರ್ಸ್–ತೆಲುಗು ಟೈಟನ್ಸ್ (ರಾತ್ರಿ 8)
ಪುಣೇರಿ ಪಲ್ಟನ್–ದಬಾಂಗ್ ಡೆಲ್ಲಿ (ರಾತ್ರಿ 9)

ಭಾರತಕ್ಕೆ ತಪ್ಪಿದ ಸೋಲು

ಏಷ್ಯಾ ಕಪ್ ಹಾಕಿ: ಡ್ರಾ ಪಂದ್ಯದಲ್ಲಿ ಕೊರಿಯಾ • ಹಾರ್ದಿಕ್, ಮನದೀಪ್ ಮಿಂಚು

ರಾಜಗೀರ್ (ಬಿಹಾರ) (ಪಿಟಿಐ): ಆತಿಥೇಯ ಭಾರತ ತಂಡವು ಇಲ್ಲಿ ನಡೆಯುತ್ತಿರುವ ಏಷ್ಯಾ ಕಪ್ ಹಾಕಿ ಚಾಂಪಿಯನ್‌ಷಿಪ್‌ನಲ್ಲಿ ಅಜೇಯ ದಾಖಲೆಯನ್ನು ಕಾಪಾಡಿಕೊಂಡಿತು.

Hero ASIA CUP RAJGIR, BIHAR 2025

ಬುಧವಾರ ಇಲ್ಲಿ ನಡೆದ ಸೂಪರ್ ಫೋರ್ ಪಂದ್ಯದಲ್ಲಿ ಭಾರತ ತಂಡವು ದಕ್ಷಿಣ ಕೊರಿಯಾ ತಂಡದ ಎದುರು 2–2ರಿಂದ ಡ್ರಾ ಮಾಡಿಕೊಂಡಿತು. ಅದರೊಂದಿಗೆ ಸೋಲು ತಪ್ಪಿಸಿಕೊಳ್ಳುವಲ್ಲಿ ಹರ್ಮನ್‌ಪ್ರೀತ್ ಸಿಂಗ್ ಬಳಗ ಯಶಸ್ವಿಯಾಯಿತು.

ಹಾರ್ದಿಕ್ ಸಿಂಗ್ (8ನೇ ನಿಮಿಷ) ಅವರು ಮೊದಲ ಗೋಲು ಗಳಿಸುವ ಮೂಲಕ ಭಾರತಕ್ಕೆ ಮುನ್ನಡೆ ನೀಡಿದರು. ಆದರೆ ನಾಲ್ಕು ನಿಮಿಷಗಳ ನಂತರ ಕೊರಿಯಾದ ಯಾಂಗ್ ಜಿಹುನ್ (12ನೇ ನಿ) ಗೋಲು ಹೊಡೆದು ಸಮಬಲ ಸಾಧಿಸಿದರು. ಇದಾಗಿ ಇನ್ನೂ ಎರಡು ನಿಮಿಷ ಆಗಿತ್ತಷ್ಟೇ ಕೊರಿಯಾದ ಹೈನಹಾಂಗ್ ಕಿಮ್ (14ನೇ ನಿ) ಮತ್ತೊಂದು ಗೋಲು ಹೊಡೆದರು. ತಮ್ಮ ತಂಡಕ್ಕೆ ಮಹತ್ವದ ಮುನ್ನಡೆ ಒದಗಿಸಿಕೊಟ್ಟರು. ಇದಾದ ನಂತರ ಉಭಯ ತಂಡಗಳ ನಡುವೆ ರೋಚಕ ಹಣಾಹಣಿ ನಡೆಯಿತು.

ಕೊರಿಯಾ ಆಟಗಾರರು ತಮ್ಮ ಮುನ್ನಡೆಯನ್ನು ರಕ್ಷಿಸಿಕೊಳ್ಳಲು ಶತಾಯ ಗತಾಯ ಪ್ರಯತ್ನಿಸಿದರು. ಇನ್ನೊಂದೆಡೆ ಭಾರತ ತಂಡವು ತನ್ನ ಅಜೇಯ ಓಟವನ್ನು ಕಾಪಾಡಿಕೊಳ್ಳುವತ್ತ ಛಲದಿಂದ ಆಡಿತು. ಕೊನೆಗೂ ಭಾರತಕ್ಕೆ ಯಶಸ್ಸು ದಕ್ಕಿತು. ಅಂತಿಮ ಕ್ವಾರ್ಟರ್‌ನಲ್ಲಿ ಮನದೀಪ್ ಸಿಂಗ್ (52ನೇ ನಿಮಿಷ) ಗೋಲು ದಾಖಲಿಸಿದರು. ಅದರೊಂದಿಗೆ ಸಮಬಲ ಸಾಧಿಸಲು ನೆರವಾದರು.

ಪಂದ್ಯದ ಇನ್ನುಳಿದ ಸಮಯದಲ್ಲಿ ಕೊರಿಯಾ ಆಟಗಾರರು ಹೆಚ್ಚು ಆಕ್ರಮಣಕಾರಿ ಶೈಲಿಯಲ್ಲಿ ಆಡಿದರು. ಅವರನ್ನು ಸಮರ್ಥವಾಗಿ ಎದುರಿಸಿದ ಆತಿಥೇಯರೂ ಗೋಲು ಗಳಿಸುವ ಪ್ರಯತ್ನ ಮಾಡಿದರು. ಆದರೆ ಉಭಯ ತಂಡಗಳಿಗೂ ಗೋಲು ದಕ್ಕಲಿಲ್ಲ. ಪಂದ್ಯ ಸಮಬಲವಾಯಿತು. ಭಾರತ ತಂಡವು ಎ ಗುಂಪಿನಲ್ಲಿ ಎಲ್ಲ ಪಂದ್ಯಗಳನ್ನೂ ಜಯಿಸಿತ್ತು. ಚೀನಾ, ಜಪಾನ್ ಮತ್ತು ಕಜಾಕಸ್ತಾನ ತಂಡಗಳನ್ನು ಸೋಲಿಸಿತ್ತು.

ದಿನದ ಇನ್ನೊಂದು ಪಂದ್ಯದಲ್ಲಿ ಮಲೇಷ್ಯಾ ತಂಡವು 2–0ಯಿಂದ ಚೀನಾ ವಿರುದ್ಧ ಜಯಿಸಿತು. ಮತ್ತೊಂದು ಪಂದ್ಯದಲ್ಲಿ ಜಪಾನ್ ತಂಡವು 2–0ಯಿಂದ ಚೀನಾ ತೈಪೆಯ ವಿರುದ್ಧ ಗೆಲುವು ಸಾಧಿಸಿತು.

ಭಾರತದ ಹಾರ್ದಿಕ್ ಸಿಂಗ್ (8) ಅವರು ಗೋಲು ಹೊಡೆದ ನಂತರ ಸಹ ಆಟಗಾರರೊಂದಿಗೆ ಸಂಭ್ರಮಿಸಿದರು ಪಿಟಿಐ ಚಿತ್ರ

ಸಂಕ್ಷಿಪ್ತ ಸುದ್ದಿ

ಐಒಎಗೆ ಅನುದಾನ ಐಒಸಿ ನಿರ್ಧಾರ

ನವದೆಹಲಿ (ಪಿಟಿಐ): 'ಒಲಿಂಪಿಕ್ ಐಕಮತ್ಯ ಕಾರ್ಯಕ್ರಮ'ದಡಿ ಭಾರತ ಒಲಿಂಪಿಕ್ ಸಂಸ್ಥೆಗೆ ನೆರವು ನೀಡುವುದನ್ನು ಪುನರಾರಂಭಿಸಲು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (ಐಒಸಿ) ನಿರ್ಧರಿಸಿದೆ.

ಭಾರತ ಒಲಿಂಪಿಕ್ ಸಂಸ್ಥೆಯು ತನ್ನ ಒಳಜಗಳ ಮತ್ತು ಆಡಳಿತಾತ್ಮಕ ಸಮಸ್ಯೆಗಳನ್ನು ಇತ್ಯರ್ಥಪಡಿಸಲು ಕ್ರಮಗಳನ್ನು ಕೈಗೊಂಡ ಕಾರಣ ಸುಮಾರು ಒಂದು ವರ್ಷದ ನಂತರ ನೆರವು ನೀಡುವುದನ್ನು ಮುಂದುವರಿಸಲು ಐಒಸಿ ತೀರ್ಮಾನಿಸಿದೆ.

ಐಒಎ ಸಿಇಒ ರಘುರಾಮ ಅಯ್ಯರ್ ಅವರಿಗೆ ನಿಗದಿಪಡಿಸಿದ ಭಾರಿ ವೇತನ ವಿರೋಧಿಸಿ ಅವರ ನೇಮಕಕ್ಕೆ ಒಪ್ಪಿಗೆ ನೀಡಲು 12 ಮಂದಿ ಕಾರ್ಯಕಾರಿ ಸಮಿತಿ ಸದಸ್ಯರು ನಿರಾಕರಿಸಿದ್ದರು. ಹೀಗಾಗಿ ಸಂಸ್ಥೆಯಲ್ಲಿ ಬಿಕ್ಕಟ್ಟು ತಲೆದೋರಿತ್ತು.

ಅಫ್ಗಾನ್ ಎದುರು ಭಾರತಕ್ಕೆ ಅಗ್ನಿಪರೀಕ್ಷೆ

ಹಿಸೊರ್ (ತಾಜಿಕಿಸ್ತಾನ) (ಪಿಟಿಐ): ಭಾರತ ಫುಟ್‌ಬಾಲ್ ತಂಡವು ಕಾಫಾ ನೇಷನ್ಸ್ ಕಪ್ ಟೂರ್ನಿಯ ಗುಂಪು ಹಂತದ ಅಂತಿಮ ಪಂದ್ಯದಲ್ಲಿ ಅಫ್ಗಾನಿಸ್ತಾನ ಎದುರು ಗುರುವಾರ ಸೆಣಸಲಿದೆ. ಕಳೆದ ವರ್ಷ ಫಿಫಾ ವಿಶ್ವಕಪ್ ಅರ್ಹತಾ ಸುತ್ತಿನಲ್ಲಿ ಅಫ್ಗಾನ್ ಎದುರು ಆಘಾತಕಾರಿ ಸೋಲು ಕಂಡಿದ್ದ ಭಾರತ, ಈಗ ಗೆಲುವಿನೊಂದಿಗೆ ಮುಯ್ಯಿ ತೀರಿಸಿಕೊಳ್ಳುವ ವಿಶ್ವಾಸದಲ್ಲಿದೆ.

ಆದರೆ, ಪ್ರಮುಖ ರಕ್ಷಣಾ ಆಟಗಾರ ಸಂದೇಶ್ ಜಿಂಗಾನ್ ಅವರು ಗಾಯಗೊಂಡಿದ್ದು, ಭಾರತಕ್ಕೆ ಕೊಂಚ ಹಿನ್ನಡೆ ಉಂಟುಮಾಡಿದೆ.

ಬಿ ಗುಂಪಿನಲ್ಲಿರುವ ಭಾರತ ತಂಡವು ಮೊದಲ ಪಂದ್ಯದಲ್ಲಿ ಆತಿಥೇಯ ತಾಜಿಕಿಸ್ತಾನ ವಿರುದ್ಧ ಗೆಲುವು ಸಾಧಿಸಿದ್ದು, ಮೂರು ಪಾಯಿಂಟ್ಸ್‌ಗಳೊಂದಿಗೆ ಎರಡನೇ ಸ್ಥಾನದಲ್ಲಿದೆ. ತಾಜಿಕಿಸ್ತಾನವೂ ಮೂರು ಅಂಕಗಳನ್ನು ಹೊಂದಿದ್ದು, ಮೂರನೇ ಸ್ಥಾನದಲ್ಲಿದೆ. ಇರಾನ್ (6) ಅಗ್ರಸ್ಥಾನದಲ್ಲಿದೆ.

ನಿಧನ ವಾರ್ತೆ

ಮಹೇಂದ್ರನ್

ಬೆಂಗಳೂರು: ಕರ್ನಾಟಕ ಫುಟ್‌ಬಾಲ್ ತಂಡದ ಮಾಜಿ ಆಟಗಾರ ಮಹೇಂದ್ರನ್ (48) ಅವರು ಬುಧವಾರ ಇಲ್ಲಿ ನಿಧನರಾದರು.

ಬೆಂಗಳೂರು ಮಾರ್ಸ್ ಫುಟ್‌ಬಾಲ್ ಕ್ಲಬ್ ಹಾಗೂ ಎಲ್‌ಆರ್‌ಡಿಇ ಫುಟ್‌ಬಾಲ್ ಕ್ಲಬ್‌ಗಳ ಪರ ಆಡಿದ್ದ ಅವರು, 1997–98ರ ಸಾಲಿನಲ್ಲಿ ದಕ್ಷಿಣ ವಲಯ 21 ವರ್ಷದೊಳಗಿನವರ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕ ತಂಡವನ್ನು ಪ್ರತಿನಿಧಿಸಿದ್ದರು.

1998–99ನೇ ಸಾಲಿನಲ್ಲಿ 21 ವರ್ಷದೊಳಗಿನವರ ಫುಟ್‌ಬಾಲ್ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿಯೂ ರಾಜ್ಯ ತಂಡದಲ್ಲಿ ಆಡಿದ್ದರು.

ಅವರು ಪತ್ನಿ ರೀನಾ ಹಾಗೂ ಪುತ್ರಿಯರನ್ನು ಅಗಲಿದ್ದಾರೆ.

ಶಾಂತಿನಗರದ ಕ್ರಿಶ್ಚಿಯನ್ ಸ್ಮಶಾನದಲ್ಲಿ ಗುರುವಾರ ಬೆಳಿಗ್ಗೆ 11ಕ್ಕೆ ಅಂತ್ಯಕ್ರಿಯೆ ನೆರವೇರಲಿದೆ.

ಅಮೆರಿಕ ಓಪನ್ ಟೆನಿಸ್: ಸೆಮಿಫೈನಲ್‌ಗೆ ಸಬಲೆಂಕಾ

ಜೊಕೊವಿಚ್– ಅಲ್ಕರಾಜ್ ಹಣಾಹಣಿಗೆ ವೇದಿಕೆ ಸಜ್ಜು

ನ್ಯೂಯಾರ್ಕ್ (ಎಎಫ್‌ಪಿ): ಎಂಟರ ಘಟ್ಟದ ಪಂದ್ಯವನ್ನು ನಾಲ್ಕು ಸೆಟ್‌ಗಳಲ್ಲಿ ಗೆದ್ದ ಹಳೆಹುಲಿ ನೊವಾಕ್ ಜೊಕೊವಿಚ್, ಯುವ ತಾರೆ ಕಾರ್ಲೋಸ್ ಅಲ್ಕರಾಜ್ ಜೊತೆ ಬ್ಲಾಕ್‌ಬಸ್ಟರ್ ಸೆಣಸಾಟಕ್ಕೆ ವೇದಿಕೆ ಸಜ್ಜುಗೊಳಿಸಿದರು. ಅಗ್ರ ಶ್ರೇಯಾಂಕದ ಅರಿನಾ ಸಬಲೆಂಕಾ ಅಮೆರಿಕ ಓಪನ್ ಟೆನಿಸ್ ಟೂರ್ನಿಯಲ್ಲಿ 'ರ್‍ಯಾಕೆಟ್ ಬಳಸದೇ' ಸೆಮಿಫೈನಲ್‌ಗೆ ಜಿಗಿದರು.

38 ವರ್ಷ ವಯಸ್ಸಿನ ಸರ್ಬಿಯಾದ ಆಟಗಾರ ಆರ್ಥರ್ ಆ್ಯಷ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಕ್ವಾರ್ಟರ್‌ಫೈನಲ್‌ನಲ್ಲಿ 6–3, 7–5, 3–6, 6–4 ರಿಂದ ನಾಲ್ಕನೇ ಶ್ರೇಯಾಂಕದ ಟೇಲರ್ ಫ್ರಿಟ್ಜ್ ಅವರನ್ನು ಮಣಿಸಿದರು. ಆ ಮೂಲಕ 2003ರ ನಂತರ ಇಲ್ಲಿ ಪ್ರಶಸ್ತಿ ಗೆದ್ದ ಅಮೆರಿಕದ ಮೊದಲ ಆಟಗಾರನಾಗುವ ಟೇಲರ್ ಕನಸನ್ನು ನುಚ್ಚುನೂರುಗೊಳಿಸಿದರು.

ಇದರೊಂದಿಗೆ ಏಳನೇ ಶ್ರೇಯಾಂಕದ ಜೊಕೊವಿಚ್ ಮತ್ತು ಎರಡನೇ ಶ್ರೇಯಾಂಕದ ಕಾರ್ಲೋಸ್ ಅಲ್ಕರಾಜ್ ನಡುವಣ ಕುತೂಹಲಕಾರಿ ಮುಖಾಮುಖಿಗೆ ವೇದಿಕೆ ಅಣಿಯಾಗಿದೆ.

27 ವರ್ಷ ವಯಸ್ಸಿನ ಟೇಲರ್, ನಾಲ್ಕನೇ ಸೆಟ್‌ನ ಹತ್ತನೇ ಗೇಮ್‌ನಲ್ಲಿ ಡಬಲ್‌ಫಾಲ್ಟ್ ಎಸಗಿದಾಗ ಜೊಕೊ ಗೆಲುವಿನ ಪಾಯಿಂಟ್ ಪಡೆದು ಸಂಭ್ರಮಿಸಿದರು.

ಮೂರು ಗಂಟೆ 24 ನಿಮಿಷ ನಡೆದ ಈ ಪಂದ್ಯದ ನಿರ್ಣಾಯಕ ಸಂದರ್ಭಗಳಲ್ಲಿ ಫ್ರಿಟ್ಜ್ ಎಡವಿದರು. ಮೊದಲ ಸೆಟ್‌ನಲ್ಲಿ ಅವರು ಐದುಬಾರಿ ಬ್ರೇಕ್ ಪಾಯಿಂಟ್ ಪಡೆಯುವ ಅವಕಾಶ ಕೈಚೆಲ್ಲಿದರು. ಅವುಗಳನ್ನು ಪರಿವರ್ತಿಸಿದಲ್ಲಿ ಅವರು 5–4 ಮಹತ್ವದ ಮುನ್ನಡೆ ಪಡೆಯಬಹುದಾಗಿತ್ತು.

ಇನ್ನೊಂದು ಕ್ವಾರ್ಟರ್‌ಫೈನಲ್‌ನಲ್ಲಿ ಎರಡನೇ ಕ್ರಮಾಂಕದ ಅಲ್ಕರಾಜ್ 6–4, 6–2, 6–4 ರಿಂದ 20ನೇ ಶ್ರೇಯಾಂಕದ ಝೆಕ್ ರಿಪಬ್ಲಿಕ್ ಆಟಗಾರ ಯೀರಿ ಲೆಹೆಸ್ಕಾ ಅವರನ್ನು ಮಣಿಸಲು ಹೆಚ್ಚೇನೂ ಕಷ್ಟಪಡಲಿಲ್ಲ. 22 ವರ್ಷ ವಯಸ್ಸಿನ ಆಟಗಾರ ಸೆಮಿಫೈನಲ್‌ವರೆಗಿನ ಪಯಣದಲ್ಲಿ ಎದುರಾಳಿಗಳಿಗೆ ಒಂದೂ ಸೆಟ್ ಬಿಟ್ಟುಕೊಟ್ಟಿಲ್ಲ.

ಮೇ ತಿಂಗಳ ನಂತರ ಆಡಿರುವ 36 ಪಂದ್ಯಗಳಲ್ಲಿ 35 ಅನ್ನು ಗೆದ್ದುಕೊಂಡಿರುವ ಸ್ಪೇನ್‌ನ ಆಟಗಾರ ಅತ್ಯಮೋಘಲಯದಲ್ಲಿದ್ದಾರೆ.

ಸಬಲೆಂಕಾಗೆ ವಾಕ್‌ಓವರ್: ಮಹಿಳೆಯರ ಸಿಂಗಲ್ಸ್‌ನಲ್ಲಿ ಹಾಲಿ ಚಾಂಪಿಯನ್ ಅರಿನಾ ಸಬಲೆಂಕಾ ಅವರಿಗೆ ಬೆವರಿಳಿಸುವ ಪ್ರಮೇಯವೇ ಒದಗಲಿಲ್ಲ. ಅವರ ಎದುರಾಳಿ, ಝೆಕ್ ರಿಪಬ್ಲಿಕ್‌ನ ಮರ್ಕೆತಾ ವಂದ್ರುಸೋವಾ ಅವರು ಮೊಣಕಾಲು ನೋವಿನಿಂದಾಗಿ ಕ್ವಾರ್ಟರ್‌ಫೈನಲ್ ಪಂದ್ಯದಿಂದ ಹಿಂದೆಸರಿದರು.

2014ರಲ್ಲಿ ಅಮೆರಿಕದ ಸೆರೆನಾ ವಿಲಿಯಮ್ಸ್ ಸತತ ಮೂರು ಬಾರಿ ಗೆದ್ದ ನಂತರ ಯಾರೂ ಫ್ಲಷಿಂಗ್ ಮೆಡೊದಲ್ಲಿ ಸತತವಾಗಿ ಪ್ರಶಸ್ತಿ ಗೆದ್ದಿಲ್ಲ.

ಬೆಲಾರಸ್‌ನ ಆಟಗಾರ್ತಿ ಸೆಮಿಫೈನಲ್‌ನಲ್ಲಿ ಅಮೆರಿಕದ ಜೆಸಿಕಾ ಪೆಗುಲಾ ಅವರನ್ನು ಎದುರಿಸಲಿದ್ದಾರೆ. ಕಳೆದ ಬಾರಿ ಈ ಇಬ್ಬರು ಫೈನಲ್‌ನಲ್ಲಿ ಮುಖಾಮುಖಿ ಆಗಿದ್ದರು.

ನಾಲ್ಕನೇ ಶ್ರೇಯಾಂಕದ ಪೆಗುಲಾ ಮೊದಲ ಕ್ವಾರ್ಟರ್‌ಫೈನಲ್‌ನಲ್ಲಿ 6–3, 6–3ರಿಂದ ಶ್ರೇಯಾಂಕ ರಹಿತ ಝೆಕ್ ಆಟಗಾರ್ತಿ ಬಾರ್ಬರಾ ಕ್ರಾಚಿಕೋವಾ ಅವರನ್ನು 1 ಗಂಟೆ 26 ನಿ. ಪಂದ್ಯದಲ್ಲಿ ಹಿಮ್ಮೆಟ್ಟಿಸಿದರು.



ನೊವಾಕ್ ಜೊಕೊವಿಚ್ ಸಂಭ್ರಮ

ಯೀರಿ ಲೆಹೆಸ್ಕಾ ವಿರುದ್ಧ ಎಂಟರ ಘಟ್ಟದ ಪಂದ್ಯದ ವೇಳೆ ಚೆಂಡನ್ನು ರಿಟರ್ನ್ ಮಾಡಲು ಕಾರ್ಲೋಸ್ ಅಲ್ಕರಾಜ್ ಪ್ರಯತ್ನಿಸಿದ್ದು ಹೀಗೆ... ಎಎಫ್‌ಪಿ ಚಿತ್ರಗಳು

ಎಂಟರ ಘಟ್ಟ ತಲುಪಿದ ಯುಕಿ ಭಾಂಬ್ರಿ



ನ್ಯೂಯಾರ್ಕ್ (ಪಿಟಿಐ): ಭಾರತ ಯುಕಿ ಭಾಂಬ್ರಿ ಅವರು ನ್ಯೂಝಿಲೆಂಡ್‌ನ ಮೈಕೆಲ್ ವೀನಸ್ ಜೊತೆಗೂಡಿ ಅಮೆರಿಕ ಓಪನ್ ಪುರುಷರ ಡಬಲ್ಸ್ ಎಂಟರ ಘಟ್ಟ ತಲುಪಿದರು. ಭಾಂಬ್ರಿ ಅವರು ಗ್ರ್ಯಾನ್‌ಸ್ಲಾಮ್ ಟೂರ್ನಿಯೊಂದರ ಡಬಲ್ಸ್ ತಲುಪಿದ್ದು ಇದೇ ಮೊದಲ ಬಾರಿ.

14ನೇ ಶ್ರೇಯಾಂಕದ ಭಾರತ– ನ್ಯೂಜಿಲೆಂಡ್ ಆಟಗಾರರ ಜೋಡಿ 6–4, 6–4 ರಿಂದ ಜರ್ಮನಿಯ ಕೆವಿನ್ ಕ್ರಾವಿಟ್ಜ್– ಟಿಮ್ ಪುಯೆಟ್ಜ್ ಜೋಡಿಯನ್ನು 1 ಗಂಟೆ 23 ನಿಮಿಷ ನಡೆದ ಪಂದ್ಯದಲ್ಲಿ ಸೋಲಿಸಿತು. ಜರ್ಮನಿಯ ಆಟಗಾರರು ನಾಲ್ಕನೇ ಶ್ರೇಯಾಂಕ ಪಡೆದಿದ್ದರು.

ಗ್ರ್ಯಾನ್‌ಸ್ಲಾಮ್‌ನಲ್ಲಿ ಯುಕಿ ಎಂದೂ ಮೊದಲ ಸುತ್ತು ದಾಟಿಲ್ಲ. ಆದರೆ ಡಬಲ್ಸ್‌ನಲ್ಲಿ ಸುಧಾರಿತ ಆಟವಾಡಿದ್ದಾರೆ. ಈ ವರ್ಷ ಫ್ರೆಂಚ್ ಓಪನ್– ವಿಂಬಲ್ಡನ್ ಮೂರನೇ ಸುತ್ತು ತಲುಪಿದ್ದಾರೆ.

ಮಾಯಾ ನಿರ್ಗಮನ: ಇದೇ ವೇಳೆ ಭಾರತದ ಭರವಸೆಯ ಆಟಗಾರ್ತಿ ಮಾಯಾ ರಾಜೇಶ್ವರನ್ ರೇವತಿ, ಬಾಲಕಿಯರ ಸಿಂಗಲ್ಸ್ ಎರಡನೇ ಸುತ್ತಿನಲ್ಲಿ ಎರಡನೇ ಶ್ರೇಯಾಂಕದ ಹನ್ನಾ ಕ್ಲುಗ್ಮನ್ ಅವರಿಗೆ ಸೋಲು ಮೊದಲು ತೀವ್ರ ಪೈಪೋಟಿ ನೀಡಿದರು. ಅಂತಿಮವಾಗಿ ಹನ್ನಾ ಎರಡು ಗಂಟೆ ಎರಡು ನಿಮಿಷಗಳ ಸೆಣಸಾಟದಲ್ಲಿ 7–6 (1), 4–6, 6–3ರಲ್ಲಿ ಜಯಗಳಿಸಿದರು.

ತಿಂಗಳಾಂತ್ಯದಲ್ಲಿ ಬಿಸಿಸಿಐ ಎಜಿಎಂ ಅಧ್ಯಕ್ಷರ ಆಯ್ಕೆಯ ಸುತ್ತ ಕುತೂಹಲ

ನವದೆಹಲಿ (ಪಿಟಿಐ): ಇದೇ ತಿಂಗಳ ಅಂತ್ಯದಲ್ಲಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ವಾರ್ಷಿಕ ಸರ್ವಸದಸ್ಯರ ಸಭೆ ನಡೆಯಲಿದೆ.

ಮಂಡಳಿಯ ಅಧ್ಯಕ್ಷ ಮತ್ತು ಐಪಿಎಲ್ ಆಡಳಿತ ಸಮಿತಿಯ ಮುಖ್ಯಸ್ಥರು ಸೇರಿದಂತೆ ಪ್ರಮುಖ ಹುದ್ದೆಗಳಿಗೆ ಪದಾಧಿಕಾರಿಗಳ ಆಯ್ಕೆ ಈ ಸಭೆಯಲ್ಲಿ ನಡೆಯಲಿದೆ. ಆದ್ದರಿಂದ ಈ ಸಭೆಯು ಅಪಾರ ಕುತೂಹಲ ಕೆರಳಿಸಿದೆ.

ರಾಜೀವ್ ಶುಕ್ಲಾ

ಅಧ್ಯಕ್ಷರಾಗಿದ್ದ ರೋಜರ್ ಬಿನ್ನಿ ಅವರು ಜುಲೈನಲ್ಲಿ ತಮ್ಮ 70ನೇ ಜನ್ಮದಿನ ಆಚರಿಸಿಕೊಂಡಿದ್ದರು. ಸದ್ಯದ ನಿಯಮಾವಳಿಯ ಪ್ರಕಾರ 70 ವರ್ಷ ಮೇಲ್ಪಟ್ಟವರು ಪದಾಧಿಕಾರಿಯಾಗಿ ಮುಂದುವರಿಯುವಂತಿಲ್ಲ. ಅದರಿಂದಾಗಿ ತೆರವಾಗಿರುವ ಅಧ್ಯಕ್ಷ ಸ್ಥಾನಕ್ಕೆ ಈಗ ಯಾರು ಸ್ಪರ್ಧಿಸಲಿದ್ದಾರೆಂಬ ಕುತೂಹಲ ಮೂಡಿದೆ.

'ಕಳೆದ ಕೆಲವು ವರ್ಷಗಳಿಂದ ಬಿಸಿಸಿಐ ಅಧ್ಯಕ್ಷ ಸ್ಥಾನಕ್ಕೆ ಖ್ಯಾತನಾಮ ಕ್ರಿಕೆಟಿಗರನ್ನು ಆಯ್ಕೆ ಮಾಡಲಾಗುತ್ತಿದೆ. ಸೌರವ್ ಗಂಗೂಲಿ ಅವರ ನಂತರ 1983ರ ವಿಶ್ವಕಪ್ ವಿಜೇತ ಭಾರತ ತಂಡದ ಆಲ್‌ರೌಂಡರ್ ರೋಜರ್ ಬಿನ್ನಿ ನೇಮಕವಾಗಿದ್ದರು. ಅದೇ ವಾಡಿಕೆಯನ್ನು ಮುಂದುವರಿಸುವ ಸಾಧ್ಯತೆಯೇನೋ ಇದೆ. ಆದರೆ, ಪ್ರಸಕ್ತ ಕಾಲಘಟ್ಟದಲ್ಲಿ ಅಧ್ಯಕ್ಷ ಹುದ್ದೆಯನ್ನು (ಗೌರವಪೂರ್ವಕ) ವಹಿಸಿಕೊಳ್ಳುವಂತಹ ದಿಗ್ಗಜರು ಇದ್ದಾರೆಯೇ ಎಂಬುದೇ ಈಗ ಪ್ರಶ್ನೆ' ಎಂದು ಹೆಸರು ಗೋಪ್ಯವಾಗಿಡುವ ಕರಾರಿನ ಮೇಲೆ ಬಿಸಿಸಿಐ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಪ್ರಸ್ತುತ ಐಪಿಎಲ್ ಮುಖ್ಯಸ್ಥರಾಗಿರುವ ಅರುಣ್ ಧುಮಾಲ್ ಅವರು ಪದಾಧಿಕಾರಿಯಾಗಿ ಒಟ್ಟು ಆರು ವರ್ಷಗಳನ್ನು ಪೂರೈಸಿದ್ದಾರೆ. ಆದ್ದರಿಂದ ಅವರು ಮುಂಬರುವ ಮೂರು ವರ್ಷಗಳ ಕಾಲ ಕಡ್ಡಾಯವಾಗಿ ಕೂಲಿಂಗ್ ಆಫ್ ನಿಯಮ ಪಾಲಿಸಬೇಕು. ಆದ್ದರಿಂದ ಅವರು ಯಾವುದೇ ಹುದ್ದೆಯನ್ನು ಪಡೆಯುವಂತಿಲ್ಲ. ಅದರಿಂದಾಗಿ ಅವರ ಉತ್ತರಾಧಿಕಾರಿಯನ್ನು ನೇಮಕ ಮಾಡುವ ಪ್ರಕ್ರಿಯೆ ನಡೆಯಲಿದೆ.

ಈ ಸ್ಥಾನಕ್ಕಾಗಿ ಮುಂಬೈ ಕ್ರಿಕೆಟ್ ಸಂಸ್ಥೆಯ ಕಾರ್ಯದರ್ಶಿ ಸಂಜಯ್ ನಾಯಕ ಮತ್ತು ಬಿಸಿಸಿಐ ಉಪಾಧ್ಯಕ್ಷ ರಾಜೀವ್ ಶುಕ್ಲಾ ಅವರ ಹೆಸರುಗಳು ಕೇಳಿಬರುತ್ತಿವೆ. ಕಾಂಗ್ರೆಸ್ ಪಕ್ಷದವರಾಗಿರುವ ಶುಕ್ಲಾ ಅವರು ಐಪಿಎಲ್ ಮುಖ್ಯಸ್ಥರಾಗಿ ನೇಮಕವಾದರೆ, ಬಿಸಿಸಿಐ ಉಪಾಧ್ಯಕ್ಷ ಸ್ಥಾನಕ್ಕೆ ಬಿಹಾರ ಕ್ರಿಕೆಟ್ ಸಂಸ್ಥೆ ಅಧ್ಯಕ್ಷ ಹಾಗೂ ಬಿಜೆಪಿ ಧುರೀಣ ರಾಕೇಶ್ ತಿವಾರಿ ಅವರು ಸ್ಪರ್ಧಿಸುವ ಸಾಧ್ಯತೆ ಇದೆ.

ದೇವಜೀತ್ ಸೈಕಿಯಾ ಅವರು ಪದಾಧಿಕಾರಿಯಾಗಿ ಒಟ್ಟು ಮೂರು ವರ್ಷ ಕಾರ್ಯನಿರ್ವಹಿಸಿದ್ದಾರೆ. ಅದರಲ್ಲಿ ಜಂಟಿ ಕಾರ್ಯದರ್ಶಿಯಾಗಿ 2 ವರ್ಷ, 3 ತಿಂಗಳು ಹಾಗೂ ಕಾರ್ಯದರ್ಶಿಯಾಗಿ ಕಳೆದ 9 ತಿಂಗಳುಗಳಿಂದ ಕಾರ್ಯನಿರ್ವಹಿಸಿದ್ದಾರೆ.

ಕಾಲ್ತುಳಿತ: ಮೌನ ಮುರಿದ ಕೊಹ್ಲಿ

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಐಪಿಎಲ್ ಟ್ರೋಫಿ ವಿಜಯೋತ್ಸವದ ಸಂದರ್ಭದಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತ ಪ್ರಕರಣ ನಡೆದು ಮೂರು ತಿಂಗಳು ಕಳೆದಿವೆ.

ಆ ಘಟನೆಯ ಕುರಿತು ಕೊನೆಗೂ ಮೌನ ಮುರಿದಿರುವ 'ಸೂಪರ್ ಸ್ಟಾರ್' ಬ್ಯಾಟರ್ ವಿರಾಟ್ ಕೊಹ್ಲಿ ಅವರು, 'ಜೂನ್ 4ರಂದು ನಡೆದಂತಹ ದುರಂತವನ್ನು ಎದುರಿಸಲು ಜೀವನವು ನಮ್ಮನ್ನು ಮುಂಗಡವಾಗಿ ಯಾವುದೇ ಸಿದ್ಧತೆ ಮಾಡಿಸಿರುವುದಿಲ್ಲ. ಆ ದಿನಾಂಕವು ನಮ್ಮ ಫ್ರ್ಯಾಂಚೈಸಿಯ ಇತಿಹಾಸದಲ್ಲಿಯೇ ಅತ್ಯಂತ ಸಂತಸದ ದಿನವಾಗಿ ದಾಖಲಾಗಬೇಕಿತ್ತು. ಆದರೆ ದುರಂತದ ದಿನವಾಯಿತು. ದುಃಖತಪ್ತ ಕುಟುಂಬಗಳ ಬಗ್ಗೆಯೇ ನನಗೆ ಯೋಚನೆಯಾಗಿದೆ. ನಾವು ಕಳೆದುಕೊಂಡ ಮತ್ತು ಗಾಯಗೊಂಡ ಅಭಿಮಾನಿಗಳಿಗಾಗಿ ಪ್ರಾರ್ಥಿಸುತ್ತೇವೆ. ನಿಮ್ಮ ನಷ್ಟವು ಸದಾಕಾಲ ನಮ್ಮ ಕಥೆಯ ಭಾಗವಾಗಿದೆ. ನಾವಿಬ್ಬರೂ ಜೊತೆಯಾಗಿ ಕಾಳಜಿ, ಗೌರವ ಮತ್ತು ಜವಾಬ್ದಾರಿಯುತವಾಗಿ ಮುಂದುವರಿಯೋಣ' ಎಂದು 'ಎಕ್ಸ್'ನಲ್ಲಿ ಬರೆದಿದ್ದಾರೆ.

ಜೂನ್ 3ರಂದು ಆರ್‌ಸಿಬಿಯು ಅಹಮದಾಬಾದಿನಲ್ಲಿ ನಡೆದಿದ್ದ ಐಪಿಎಲ್ ಫೈನಲ್‌ನಲ್ಲಿ ಜಯಿಸಿತ್ತು. ಟೂರ್ನಿಯ 18 ವರ್ಷಗಳ ಇತಿಹಾಸದಲ್ಲಿ ಆರ್‌ಸಿಬಿ ಚೊಚ್ಚಲ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತ್ತು. ಅದರ ಮರುದಿನವೇ ಬೆಂಗಳೂರಿನಲ್ಲಿ ಸಂಭ್ರಮಾಚರಣೆ ಆಯೋಜಿಸಲಾಗಿತ್ತು. ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸುಮಾರು 3 ಲಕ್ಷ ಅಭಿಮಾನಿಗಳು ಸೇರಿದ್ದರು. ಆಗ ಕಾಲ್ತುಳಿತ ಸಂಭವಿಸಿ 11 ಜನರು ದುರ್ಮರಣ ಹೊಂದಿದ್ದರು.

ಕೊಹ್ಲಿ ಹಾಕಿರುವ ಸಂದೇಶಕ್ಕೆ ಮಿಶ್ರ ಪ್ರತಿಕ್ರಿಯೆಗಳು ವ್ಯಕ್ತವಾಗಿವೆ.

ಮೈಸೂರು ರೇಸ್

ಇಂಡಿಯನ್ ಬ್ರೋಕೇಡ್ ಗೆಲ್ಲುವ ನಿರೀಕ್ಷೆ

ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಮೆಮೋರಿಯಲ್ ಮಲ್ಟಿ ಮಿಲಿಯನ್ ಗುರುವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಈ ರೇಸ್‌ನಲ್ಲಿ ಇಂಡಿಯನ್ ಬ್ರೋಕೇಡ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಆರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಆಬ್ಸೊಲ್ಯೂಟ್ ಕ್ಯಾಟ್ರಿನ 4, ಟರ್ಕೊಮ್ಯಾನ್ 3, ದಿ ಅಡ್ಮಿರಲ್ 9
2ನೇ ರೇಸ್: ಅನುಶ್ಟುಭ 5, ಎಲಿವಾಡೊ 3, ನೋಬಲ್ ಪರ್ಶ್ಯೂಟ್ 7
3ನೇ ರೇಸ್: ಅಗೆರ 9, ಆಬ್ಸೊಲ್ಯೂಟ್ ಕಾಂಕ್ವರರ್ 12, ಮ್ಯಾಂಡೊಲಿನ್ 4
4ನೇ ರೇಸ್: ಆಲ್ಡ್‌ಗೇಟ್ 1, ಕ್ಸಾರ್ 2
5ನೇ ರೇಸ್: ಇಂಡಿಯನ್ ಬ್ರೋಕೇಡ್ 1, ಟುರಿಯಾ 7, ಎಫಿಕೆಸಿ 4
6ನೇ ರೇಸ್: ಪ್ರೆಟ್ಟಿ ಮೂವ್ 9, ದಿ ಗೋಲ್ಡನ್ ಸನ್‌ರೈಸ್ 3, ಮಿಸ್ಟಿಕ್ ಡಿವೈನ್ 2
7ನೇ ರೇಸ್: ಬ್ಯೂಟಿಫುಲ್ ಬ್ಲೂಮ್ 5, ಇಂಡಿಯನ್ ಗ್ಲೋರಿ 1, ಓಷನ್ 3

ಉತ್ತಮ ಬೆಟ್: ಪ್ರೆಟ್ಟಿ ಮೂವ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ದುಲೀಪ್ ಟ್ರೋಫಿ ಸೆಮಿಫೈನಲ್ ಪಂದ್ಯಗಳು ಇಂದಿನಿಂದ

ದೇವದತ್ತ, ಅಯ್ಯರ್ ಮೇಲೆ ಚಿತ್ತ

• ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಣ್ಮನ ಸೆಳೆಯುವ ಹಸಿರು ತುಂಬಿರುವ ಆ ಮೈದಾನಗಳಲ್ಲಿ ಗುರುವಾರದಿಂದ ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿಯ ನಾಲ್ಕರ ಘಟ್ಟದ ಪಂದ್ಯಗಳ ಸೊಬಗು ಅರಳಲಿದೆ.

ಈ ಕಾರಣಕ್ಕಾಗಿಯೇ ನಗರದ ಹೊರವಲಯದಲ್ಲಿ ಸಿಂಗಹಳ್ಳಿಯಲ್ಲಿರುವ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಶ್ರೇಷ್ಠತಾ ಕೇಂದ್ರದ (ಬಿಸಿಸಿಐ–ಸಿಒಇ) ಕ್ರೀಡಾಂಗಣದತ್ತ ಕ್ರಿಕೆಟ್‌ಪ್ರಿಯರ ಚಿತ್ತ ನೆಟ್ಟಿದೆ. ಇಲ್ಲಿರುವ ಎರಡು ಮೈದಾನಗಳಲ್ಲಿ ಈಚೆಗಷ್ಟೇ ಇಲ್ಲಿ ದುಲೀಪ್ ಟ್ರೋಫಿಯ ಎರಡು ಕ್ವಾರ್ಟರ್ ಫೈನಲ್ ಪಂದ್ಯಗಳು ನಡೆದಿದ್ದವು. ಇದೀಗ ಸೆಮಿಫೈನಲ್ ಪಂದ್ಯಗಳೂ (ದಕ್ಷಿಣ ವಲಯ–ಉತ್ತರ ವಲಯ ಹಾಗೂ ಕೇಂದ್ರ ವಲಯ–ಪಶ್ಚಿಮ ವಲಯ) ಇಲ್ಲಿ ಗುರುವಾರ ಆರಂಭವಾಗಲಿವೆ.

ಭಾರತ ತಂಡದಲ್ಲಿ ಆಡಿರುವ, ಸ್ಥಾನಕ್ಕಾಗಿ ಕಾದಿರುವ ಮತ್ತು ಆಯ್ಕೆಗಾರರ 'ನೋಟ'ದಿಂದ ವಂಚಿತರಾಗಿರುವ ಕ್ರಿಕೆಟಿಗರು ಈ ಪಂದ್ಯಗಳಲ್ಲಿ ಕಣಕ್ಕಿಳಿಯಲಿದ್ದಾರೆ.

ಅದರಲ್ಲೂ ಪ್ರಮುಖವಾಗಿ ಮುಂಬೈನ ಶ್ರೇಯಸ್ ಅಯ್ಯರ್ ಮತ್ತು ಬೆಂಗಳೂರಿನ ದೇವದತ್ತ ಪಡಿಕ್ಕಲ್ ಅವರ ಮೇಲೆ ಈಗ ಎಲ್ಲರ ಗಮನವಿದೆ. ಮುಂದಿನ ವಾರ ಯುಎಇಯಲ್ಲಿ ಆರಂಭವಾಗಲಿರುವ ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಭಾರತ ತಂಡವನ್ನು ಈಗಾಗಲೇ ಪ್ರಕಟಿಸಲಾಗಿದೆ. ಆದರೆ, ಕಳೆದ ಐಪಿಎಲ್ ಮತ್ತು ಏಕದಿನ ವಿಶ್ವಕಪ್ ಟೂರ್ನಿಗಳಲ್ಲಿ ಅಮೋಘವಾಗಿ ಆಡಿದ್ದ ಶ್ರೇಯಸ್ ಅಯ್ಯರ್ ಅವರನ್ನು ಆಯ್ಕೆ ಮಾಡಿಲ್ಲ. ಇದು ಕ್ರಿಕೆಟ್ ವಲಯದಲ್ಲಿ ಬಹಳಷ್ಟು ಚರ್ಚೆಗೆ ಕಾರಣವಾಗಿದೆ.

ಅನುಭವಿ ಮಧ್ಯಮ ಕ್ರಮಾಂಕದ ಬ್ಯಾಟರ್ ಆಗಿರುವ ಶ್ರೇಯಸ್ ಅವರಷ್ಟೇ ಅಲ್ಲ; ಕರ್ನಾಟಕದ ಎಡಗೈ ಬ್ಯಾಟರ್ ದೇವದತ್ತ ಪಡಿಕ್ಕಲ್ ಅವರಿಗೂ ಆದ್ಯತೆ ನೀಡಲಾಗಿಲ್ಲ. ದಕ್ಷಿಣ ವಲಯವನ್ನು ಪ್ರತಿನಿಧಿಸುತ್ತಿರುವ ಅವರು ತಮ್ಮ ಪ್ರತಿಭಾ ಪ್ರದರ್ಶನಕ್ಕೆ ಸನ್ನದ್ಧರಾಗಿದ್ದಾರೆ. 2024ರ ಮಾರ್ಚ್‌ನಲ್ಲಿ ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಪಂದ್ಯದಲ್ಲಿ ದೇವದತ್ತ ಪದಾರ್ಪಣೆ ಮಾಡಿದ್ದರು. ದೇಶಿ ಟೂರ್ನಿ ಮತ್ತು ಐಪಿಎಲ್‌ಗಳಲ್ಲಿಯೂ ಉತ್ತಮವಾಗಿ ಆಡಿದ್ದಾರೆ. ಆದರೆ ಹೋದ ನವೆಂಬರ್‌ನಲ್ಲಿ ಪರ್ತ್‌ನಲ್ಲಿ ನಡೆದಿದ್ದ ಆಸ್ಟ್ರೇಲಿಯಾ ವಿರುದ್ಧದ ಟೆಸ್ಟ್ ಪಂದ್ಯದಲ್ಲಿ ಅವರು ಆಡಿದ್ದು ಕೊನೆ. ನಂತರ ಅವರಿಗೆ ಅವಕಾಶಗಳು ಸಿಕ್ಕಿಲ್ಲ. ಭಾರತ ತಂಡದಲ್ಲಿ ಪ್ರತಿಭಾವಂತ ಆಟಗಾರರ ಪೈಪೋಟಿ ಅಪಾರವಾಗಿರುವುದೇ ಇದಕ್ಕೆ ಕಾರಣ. ಅದರಿಂದಾಗಿ ದೇಶಿ ಋತುವನ್ನು ಭರ್ಜರಿಯಾಗಿ ಆರಂಭಿಸಿ ಮತ್ತೆ ರಾಷ್ಟ್ರೀಯ ತಂಡದ ಮರುಪ್ರವೇಶದ ಟಿಕೆಟ್ ಗಿಟ್ಟಿಸುವ ಛಲ 25 ವರ್ಷದ ದೇವದತ್ತ ಅವರದ್ದು.

ಶ್ರೇಯಸ್ ಅಯ್ಯರ್

ಈ ವರ್ಷ ಭಾರತವು ಇನ್ನೂ ನಾಲ್ಕು ಟೆಸ್ಟ್ ಪಂದ್ಯಗಳನ್ನು ಆಡಬೇಕಿದೆ. ಅದರಲ್ಲಿ ಅವಕಾಶ ಪಡೆಯುವತ್ತ ದೇವದತ್ತ ಮತ್ತು ಶ್ರೇಯಸ್ ಅವರು ಗುರಿ ಇಟ್ಟಿದ್ದಾರೆ. ಅವರಷ್ಟೇ ಅಲ್ಲ. 'ಐಪಿಎಲ್ ಚಾಂಪಿಯನ್' ಆರ್‌ಸಿಬಿ ತಂಡದ ನಾಯಕ ರಜತ್ ಪಾಟೀದಾರ್, ದೀಪಕ್ ಚಾಹರ್ (ಕೇಂದ್ರ ವಲಯ), ಮುಂಬೈನ ಸರ್ಫರಾಜ್ ಖಾನ್, ಆಲ್‌ರೌಂಡರ್ ಶಾರ್ದೂಲ್ ಠಾಕೂರ್ (ಇಬ್ಬರೂ ಪಶ್ಚಿಮ ವಲಯ ತಂಡ) ಅವರೂ ಆಯ್ಕೆಗಾರರ ಗಮನ ಸೆಳೆಯುವ ಛಲದಲ್ಲಿದ್ದಾರೆ.

ಈ ನಡುವೆ, ವೇಗಿ ವೈಶಾಖ ವಿಜಯಕುಮಾರ್ ಮತ್ತು ಆಲ್‌ರೌಂಡರ್ ಆರ್. ಸಾಯಿಕಿಶೋರ್ ಅವರು ಗಾಯಗೊಂಡಿದ್ದು ಇಲ್ಲಿ ಕಣಕ್ಕಿಳಿಯುತ್ತಿಲ್ಲ. ದಕ್ಷಿಣ ವಲಯದ ನಾಯಕತ್ವ ವಹಿಸಿದ್ದ ತಿಲಕ್ ವರ್ಮಾ ಅವರು ಭಾರತ ತಂಡಕ್ಕೆ ಆಯ್ಕೆಯಾಗಿದ್ದಾರೆ. ಆದ್ದರಿಂದ ಅವರ ಬದಲಿಗೆ ಕೇರಳದ ಮೊಹಮ್ಮದ್ ಅಜರುದ್ದೀನ್ ತಂಡವನ್ನು ಮುನ್ನಡೆಸುವರು.

ಮಳೆ ಆಟ: ರಾಜ್ಯದಲ್ಲಿ ಮಳೆಯ ಆರ್ಭಟ ಜೋರಾಗಿದೆ. ಇನ್ನು ಕೆಲದಿನಗಳ ಕಾಲ ಇದೇ ರೀತಿಯ ವಾತಾವರಣ ಇರುವ ಮುನ್ಸೂಚನೆಗಳೂ ಇವೆ. ಆದ್ದರಿಂದ ಪಂದ್ಯಗಳಲ್ಲಿ ಮಳೆಯಿಂದಾಗಿ ಹೆಚ್ಚು ಸಮಯ ನಷ್ಟವಾಗುವ ಸಾಧ್ಯತೆಗಳನ್ನು ಅಲ್ಲಗಳೆಯಲಾಗದು. ಆದ್ದರಿಂದ ಮೊದಲ ಇನಿಂಗ್ಸ್ ಮುನ್ನಡೆಯನ್ನು ಗಳಿಸುವುದು ಯಾವುದೇ ತಂಡಕ್ಕೂ ಮಹತ್ವದ್ದಾಗಲಿದೆ.

ಪಂದ್ಯ ಆರಂಭ: ಬೆಳಿಗ್ಗೆ 9.30ರಿಂದ